रजिस्ट्री सं॰ डी॰ एल॰—(एन)04/0007/2003—16 REGISTERED NO. DL—(N)04/0007/2003—16

# भारत का राजपत्र
# The Gazette of India

असाधारण
EXTRAORDINARY
भाग II — खण्ड 1
PART II — Section 1
प्राधिकार से प्रकाशित
PUBLISHED BY AUTHORITY

सं॰ 2] नई दिल्ली, शुक्रवार, जनवरी 1, 2016/पौष 11, 1937 (शक)
No. 2] NEW DELHI, FRIDAY, JANUARY 1, 2016/PAUSHA 11, 1937 (SAKA)

इस भाग में भिन्न पृष्ठ संख्या दी जाती है जिससे कि यह अलग संकलन के रूप में रखा जा सके।
Separate paging is given to this Part in order that it may be filed as a separate compilation.

## MINISTRY OF LAW AND JUSTICE
(Legislative Department)

*New Delhi, the 1st January,* 2016/*Pausha* 11, 1937 (*Saka*)

The following Act of Parliament received the assent of the President on the 31st December, 2015, and is hereby published for general information:—

# ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ 2015

ಕನ್ನಡಾನುವಾದ
**ಎನ್.ವಿ.ವಾಸುದೇವ ಶರ್ಮಾ**
**ಜಿ.ಸಿ.ಸತೀಶ್**

*ಗಮನಿಸಿ:* **ಈ ಅನುವಾದ ಕಾಯಿದೆಯನ್ನು ಅರ್ಥಮಾಡಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ. ನ್ಯಾಯಾಲಯದಲ್ಲಿ ಉಲ್ಲೇಖಿಸಲು ಮೂಲ ಕಾಯಿದೆಯನ್ನೇ ಬಳಸಬೇಕು.**

# THE JUVENILE JUSTICE (CARE AND PROTECTION OF CHILDREN) ACT, 2015
# ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ 2015

## Index / ಪರಿವಿಡಿ


| Cha | Sec | | |
|---|---|---|---|
| | | **Introduction, objectives** | **ಪರಿಚಯ ಮತ್ತು ಉದ್ದೇಶಗಳು** |
| | | | |
| **I** | | **Preliminary** | **ಆರಂಭ** |
| | **1** | Short title, extent, commencement and application. | ಸಂಕ್ಷಿಪ್ತ ಶೀರ್ಷಿಕೆ, ವ್ಯಾಪ್ತಿ, ಆರಂಭ ಮತ್ತು ಜಾರಿ |
| | | | |
| | **2** | **Definition (*1-61)*** | ಅರ್ಥ ಮತ್ತು ವಿವರಣೆ |
| | | | |
| **II** | | **General Principles of Care and Protection of Children** | **ಮಕ್ಕಳ ಪೋಷಣೆ ಮತ್ತು ರಕ್ಷಣೆಯ ಸಾಮಾನ್ಯ ನಿಯಮಗಳು** |
| | **3** | General principles to be followed in administration of Act (*i-xvi*) | **ಈ ಕಾಯಿದೆಯ ಜಾರಿಯಲ್ಲಿ ಅನುಸರಿಸಬೇಕಾದ ಸಾಮಾನ್ಯ ನಿಯಮಗಳು** |
| | | | |
| **III** | | **Juvenile Justice Board – JJB** | **ಮಕ್ಕಳ ನ್ಯಾಯ ಮಂಡಳಿ** |
| | **4** | Juvenile Justice Board (*1-7)* | ಮಕ್ಕಳ ನ್ಯಾಯ ಮಂಡಳಿ |
| | **5** | Placement of person, who cease to be a child during process of inquiry. | ತನಿಖೆಯ ಅವಧಿಯಲ್ಲಿ 'ಬಾಲ್ಯಾವಸ್ಥೆ'ಯನ್ನು ದಾಟುವ ವ್ಯಕ್ತಿಗಳನ್ನು ಇರಿಸುವುದು |
| | **6** | Placement of persons, who committed an offence, when person was below the age of eighteen years (*1-3)* | 18 ವರ್ಷದೊಳಗಿನ ವ್ಯಕ್ತಿಗಳು ಆಪರಾಧಿಕ ಕೃತ್ಯ ಮಾಡಿದರೆ, ಅಂತಹವರನ್ನು ಇರಿಸಲು ವ್ಯವಸ್ಥೆ |
| | **7** | Procedure in relation to Board | ಮಂಡಲಿಯ ಪ್ರಕ್ರಿಯೆ |
| | **8** | Powers functions and responsibilities of the Board. | ಮಕ್ಕಳ ನ್ಯಾಯ ಮಂಡಲಿಯ ಕಾರ್ಯನಿರ್ವಹಣೆ, ಜವಾಬ್ದಾರಿಗಳು ಮತ್ತು ಅಧಿಕಾರಗಳು |
| | **9** | Procedure to be followed by a Magistrate who has not been empowered under this Act. | ಈ ಕಾಯಿದೆಯಡಿ ಅಧಿಕಾರ ಹೊಂದಿಲ್ಲದ ನ್ಯಾಯಾಧೀಶರುಗಳು ಕೈಗೊಳ್ಳಬೇಕಾದ ಪ್ರಕ್ರಿಯೆಗಳು |
| | | | |
| **IV** | | **Procedures in relation to children in conflict with law** | **ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು ಕರಿತು ಪ್ರಕ್ರಿಯೆಗಳು** |
| | **10** | Apprehension of child alleged to be in conflict with law. | ಕಾನೂನಿನೊಡನೆ ಸಂಘರ್ಷದಲ್ಲಿರುವರೆಂದು ಆಪಾದಿಸಲಾದ ಮಕ್ಕಳನ್ನು ವಶಕ್ಕೆ ತೆಗೆದುಕೊಳ್ಳುವುದು |
| | **11** | Role of person in whose charge child in conflict with law is placed. | ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳ ಸುಪರ್ದಿ ಹೊಂದಿರುವ ವ್ಯಕ್ತಿಗಳ ಪಾತ್ರ |
| | **12** | Bail to a person who is apparently a child alleged to be in conflict with law. | ಕಾನೂನಿನೊಡನೆ ಸಂಘರ್ಷದಲ್ಲಿರುವರೆಂದು ಆಪಾದಿಸಲಾದ ವ್ಯಕ್ತಿಗಳಿಗೆ ಜಾಮೀನು |
| | **13** | Information to parents, guardian or probation officer. | ಮಕ್ಕಳ ಮಾಹಿತಿಯನ್ನು ತಾಯಿ/ತಂದೆ, ಪೋಷಕರು ಅಥವಾ ಪರಿವೀಕ್ಷಣಾಧಿಕಾರಿಗಳಿಗೆ ನೀಡುವುದು |
| | **14** | Inquiry by Board regarding child in conflict with law. | ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವನ್ನು ಕುರಿತು ಮಂಡಲಿಯಿಂದ ವಿಚಾರಣೆ |
| | **15** | Preliminary assessment into heinous offences by Board. | ಘೋರ ಆಪರಾಧಿಕ ಕೃತ್ಯಗಳನ್ನು ಕುರಿತು ಮಂಡಳಿಯಿಂದ ಪ್ರಾಥಮಿಕ ಮೌಲ್ಯಮಾಪನ |

| | | | |
|---|---|---|---|
| | **16** | Review of pendency of inquiry. | ತನಿಖೆ ಪೂರ್ಣಗೊಂಡಿಲ್ಲದವುಗಳ ವಿಶ್ಲೇಷಣೆ |
| | **17** | Orders regarding a child not found to be in conflict with law. | ಕಾನೂನಿನೊಡನೆ ಸಂಘರ್ಷದಲ್ಲಿ ಇಲ್ಲ ಎಂದು ಕಂಡುಬಂದ ಮಕ್ಕಳನ್ನು ಕುರಿತು ಆದೇಶಗಳು |
| | **18** | Orders regarding child found to be in conflict with law. | ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು ಕುರಿತು ಆದೇಶಗಳು |
| | **19** | Powers of Children's Court. | ಮಕ್ಕಳ ನ್ಯಾಯಾಲಯಗಳ ಅಧಿಕಾರ |
| | **20** | Child attained age of twenty-one years and yet to complete prescribed term of stay in place of safety. | 21 ವರ್ಷ ಪೂರೈಸಿದ್ದರೂ, ಸುರಕ್ಷಿತ ಸ್ಥಳದಲ್ಲಿಯೇ ನಿರ್ದೇಶಿಸಲ್ಪಟ್ಟ ಅವಧಿಯನ್ನು ಪೂರೈಸುವುದು |
| | **21** | Order that may not be passed against a child in conflict with law. | ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳ ವಿರುದ್ಧ ಮಂಡಲಿ ಹೊರಡಿಸಬಾರದಾದ ಆದೇಶಗಳು |
| | **22** | Proceeding under Chapter VIII of the Code of Criminal Procedure not to apply against child. | ಅಪರಾಧ ಪ್ರಕ್ರಿಯಾ ಸಂಹಿತೆ **(CrPC)** 1973ರ ಅಧ್ಯಾಯ VIII ರಂತೆ ಮಕ್ಕಳನ್ನು ಕುರಿತು ನಡೆಸಬಾರದ ಪ್ರಕ್ರಿಯೆಗಳು |
| | **23** | No joint proceedings of child in conflict with law and person not a child. | ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು ಮಕ್ಕಳಲ್ಲದವರೊಡನೆ ಸೇರಿಸಿ ವಿಚಾರಣೆಮಾಡಬಾರದು. |
| | **24** | Removal of disqualification on the findings of an offence. | ಆಪರಾಧಿಕ ಕೃತ್ಯ ಕುರಿತು ಕಂಡುಬಂದಿರುವ ವಿಚಾರಗಳಲ್ಲಿ ಅನರ್ಹತೆಗಳನ್ನು ತೆಗೆದುಬಿಡುವುದು |
| | **25** | Special provision in respect of pending cases. | ಇನ್ನೂ ಬಗೆಹರಿಯದಿದ್ದ ಪ್ರಕರಣಗಳನ್ನು ಕುರಿತು ವಿಶೇಷ ನಿಬಂಧನೆಗಳು |
| | **26** | Provision with respect of runaway child in conflict with law. | ಕಾನೂನಿನೊಡನೆ ಸಂಘರ್ಷದಲ್ಲಿದ್ದು ಪರಾರಿಯಾದ/ಓಡಿಹೋದ ಮಕ್ಕಳನ್ನು ಕುರಿತು ಕ್ರಮಗಳು |
| | | | |
| **V** | | **Child Welfare Committee – CWC** | **ಮಕ್ಕಳ ಕಲ್ಯಾಣ ಸಮಿತಿ** |
| | **27** | Child Welfare Committee. | ಮಕ್ಕಳ ಕಲ್ಯಾಣ ಸಮಿತಿ |
| | **28** | Procedure in relation to Committee. | ಮಕ್ಕಳ ಕಲ್ಯಾಣ ಸಮಿತಿಯ ಪ್ರಕ್ರಿಯೆಗಳು |
| | **29** | Powers of Committee. | ಮಕ್ಕಳ ಕಲ್ಯಾಣ ಸಮಿತಿಯ ಅಧಿಕಾರ |
| | **30** | Functions and responsibilities of Committee. | ಸಮಿತಿಯ ಕಾರ್ಯಕಲಾಪ ಮತ್ತು ಜವಾಬ್ದಾರಿಗಳು |
| | | | |
| **VI** | | **Procedure in relationship to Children in need of care and protection** | **ಪೋಷಣೆ ಮತ್ತು ರಕ್ಷಣೆಯ ಆವಶ್ಯಕತೆಯಿರುವ ಮಕ್ಕಳನ್ನು ಕುರಿತು ಪ್ರಕ್ರಿಯೆಗಳು** |
| | **31** | Production before Committee. | ಸಮಿತಿಯೆದುರು ಹಾಜರು ಪಡಿಸುವುದು |
| | **32** | Mandatory reporting regarding a child found separated from guardian. | ಪೋಷಕರಿಂದ ಪ್ರತ್ಯೇಕವಾದ ಮಕ್ಕಳು ಕಂಡುಬಂದಾಗ ಕಡ್ಡಾಯವಾಗಿ ವರದಿ ಮಾಡಲೇಬೇಕು |
| | **33** | Offence of non-reporting | ವರದಿ ಮಾಡದಿದ್ದರೆ ಆಪರಾಧಿಕ ಕೃತ್ಯ |
| | **34** | Penalty for non-reporting. | ವರದಿ ಮಾಡದಿದ್ದಲ್ಲಿ ದಂಡ |
| | **35** | Surrender of children. | ಮಕ್ಕಳನ್ನು ಒಪ್ಪಿಸುವುದು |
| | **36** | Inquiry. | ತನಿಖೆ |
| | **37** | Orders passed regarding a child in need of care and protection. | ಪೋಷಣೆ ಮತ್ತು ರಕ್ಷಣೆ ಆವಶ್ಯಕತೆಯಿರುವ ಮಕ್ಕಳನ್ನು ಕುರಿತು ಆದೇಶಗಳು |
| | **38** | Procedure for declaring a child legally free for adoption. | ಮಗು ಕಾನೂನಿನಂತೆ ದತ್ತು ಹೋಗಲು ಅರ್ಹ ಎಂದು ಘೋಷಿಸುವ ಪ್ರಕ್ರಿಯೆ |
| | | | |
| **VII** | | **Rehabilitation and Social re integration** | **ಪುನರ್ವಸತಿ ಮತ್ತು ಸಮಾಜದಲ್ಲಿ ಪುನಸ್ಥಾಪನೆ** |
| | **39** | Process of rehabilitation and social reintegration. | ಪುನರ್ವಸತಿ ಮತ್ತು ಸಾಮಾಜಿಕ ಪುನಸ್ಥಾಪನೆಗೆ ಪ್ರಕ್ರಿಯೆಗಳು |

| | | | |
|---|---|---|---|
| | 40 | Restoration of child in need of care and protection. | ಪೋಷಣೆ ಮತ್ತು ರಕ್ಷಣೆಯ ಆವಶ್ಯಕತೆ ಇರುವ ಮಗುವಿನ ಪುನಃಸ್ಥಾಪನೆ |
| | 41 | Registration of child care institutions. | ಮಕ್ಕಳ ಅನುಪಾಲನಾ ಸಂಸ್ಥೆಗಳ ದಾಖಲೆ |
| | 42 | Penalty for non-registration of child care institutions. | ಮಕ್ಕಳ ಅನುಪಾಲನಾ ಸಂಸ್ಥೆಗಳು ದಾಖಲೆಗೊಳ್ಳದಿದ್ದಲ್ಲಿ ದಂಡ |
| | 43 | Open shelter. | ತೆರೆದ ತಂಗುದಾಣ |
| | 44 | Foster care. | ಫಾಸ್ಟರ್ ಕೇರ್ (ಮಕ್ಕಳನ್ನು ಸಾಕಿಕೊಳ್ಳುವುದು) |
| | 45 | Sponsorship. | ಪ್ರಾಯೋಜನೆ |
| | 46 | After care of children leaving child care institution | ಮಕ್ಕಳ ಅನುಪಾಲನ ಸಂಸ್ಥೆಗಳಿಂದ ಹೊರಬಂದ ಮಕ್ಕಳ ಪೋಷಣೆ |
| | 47 | Observation homes. | ಪರಿವೀಕ್ಷಣಾಲಯಗಳು (Observation homes) |
| | 48 | Special homes. | ವಿಶೇಷ ನಿಲಯಗಳು (Special homes) |
| | 49 | Place of safety. | ಸುರಕ್ಷಿತ ಸ್ಥಳ |
| | 50 | Children's Home. | ಮಕ್ಕಳ ಗೃಹ/ನಿಲಯಗಳು |
| | 51 | Fit facility. | ಅರ್ಹ / ಸೂಕ್ತ ಸೌಲಭ್ಯ |
| | 52 | Fit person. | ಅರ್ಹ ವ್ಯಕ್ತಿ |
| | 53 | Rehabilitation and reintegration services in institutions registered under this Act and Management thereof. | ಈ ಕಾಯಿದೆಯಡಿ ನೋಂದಾಯಿತವಾದ ಸಂಸ್ಥೆಗಳಲ್ಲಿ ನೀಡುವ ಪುನರ್ವಸತಿ ಮತ್ತು ಪುನಃಸ್ಥಾಪನೆ ಸೇವೆಗಳು ಮತ್ತು ಅವುಗಳ ನಿರ್ವಹಣೆ |
| | 54 | Inspection of institutions registered under this Act. | ಈ ಕಾಯಿದೆಯಡಿ ನೋಂದಾಯಿತವಾದ ಸಂಸ್ಥೆಗಳ ಪರಿವೀಕ್ಷಣೆ |
| | 55 | Evaluation of functioning of structures. | ವ್ಯವಸ್ಥೆಗಳ ಕಾರ್ಯನಿರ್ವಹಣೆ ಕುರಿತು ಮೌಲ್ಯಮಾಪನ |
| | | | |
| **VIII** | | **Adoption** | **ದತ್ತು** |
| | 56 | Adoption. | ದತ್ತು |
| | 57 | Eligibility of prospective adoptive parents. | ಭಾವೀ ದತ್ತು ಪೋಷಕರಾಗಲು ಅರ್ಹತೆಗಳು |
| | 58 | Procedure for adoption by Indian prospective adoptive parents living in India. | ಭಾರತದಲ್ಲಿ ನೆಲಸಿರುವ ಭಾರತೀಯ ಭಾವೀ ದತ್ತು ಪೋಷಕರಿಗೆ ದತ್ತು ಪಡೆಯಲು ಪ್ರಕ್ರಿಯೆಗಳು |
| | 59 | Procedure for inter-country adoption of an orphan or abandoned or surrendered child. | ಅನಾಥ ಅಥವಾ ತೊರೆಯಲ್ಪಟ್ಟ ಅಥವಾ ಒಪ್ಪಿಸಿದ ಮಕ್ಕಳನ್ನು ಅಂತಾರಾಷ್ಟ್ರೀಯ ದತ್ತುವಿಗೆ ಪ್ರಕ್ರಿಯೆಗಳು |
| | 60 | Procedure for inter-country relative adoption. | ಸಂಬಂಧಿಗಳ ನಡುವೆ ಅಂತಾರಾಷ್ಟ್ರೀಯ ದತ್ತು ಪ್ರಕ್ರಿಯೆ |
| | 61 | Court procedure and penalty against payment in consideration of adoption. | ದತ್ತು ನೀಡಲು/ಪಡೆಯಲು ಹಣ ಕೊಟ್ಟಿದ್ದಲ್ಲಿ ಅದರ ವಿರುದ್ಧ ನ್ಯಾಯಾಲಯ ಪ್ರಕ್ರಿಯೆ ಮತ್ತು ದಂಡ |
| | 62 | Additional procedural requirements and documentation. | ಹೆಚ್ಚಿನ ಪ್ರಕ್ರಿಯೆಗಳ ಆವಶ್ಯಕತೆ ಮತ್ತು ದಾಖಲೆಗಳು |
| | 63 | Effect of adoption. | ದತ್ತು ಪರಿಣಾಮಗಳು |
| | 64 | Reporting of adoption. | ದತ್ತು ಕುರಿತು ವರದಿ |
| | 65 | Specialised Adoption Agencies. | ವಿಶೇಷ ದತ್ತು ಸಂಸ್ಥೆಗಳು |
| | 66 | Adoption of children residing in institutions not registered as adoption agencies. | ದತ್ತು ಸಂಸ್ಥೆಗಳಾಗಿ ನೋಂದಾಯಿತವಾಗಿಲ್ಲದ ಸಂಸ್ಥೆಗಳಲ್ಲಿ ಇರುವ ಮಕ್ಕಳ ದತ್ತು |
| | 67 | State Adoption Resource Agency. | ರಾಜ್ಯ ದತ್ತು ಸಂಪನ್ಮೂಲ ಸಂಸ್ಥೆ |
| | 68 | Central Adoption Resource Authority. | ಕೇಂದ್ರ ದತ್ತು ಸಂಪನ್ಮೂಲ ಸಂಸ್ಥೆ |
| | 69 | Steering Committee of Authority. | ಪ್ರಾಧಿಕಾರದ ನಿರ್ವಹಣಾ ಸಮಿತಿ |
| | 70 | Powers of Authority. | ಪ್ರಾಧಿಕಾರದ ಅಧಿಕಾರಗಳು |

| | | | | |
|---|---|---|---|---|
| | 71 | Annual Report of Authority. | | ಪ್ರಾಧಿಕಾರದ ವಾರ್ಷಿಕ ವರದಿ |
| | 72 | Grants by Central Government. | | ಕೇಂದ್ರ ಸರ್ಕಾರದಿಂದ ಅನುದಾನ |
| | 73 | Accounts and audit of Authority. | | ಪ್ರಾಧಿಕಾರ ಲೆಕ್ಕಪತ್ರ ಮತ್ತು ಪರಿಶೀಲನೆ |
| | | | | |
| **IX** | | **Other offences against children** | | **ಮಕ್ಕಳ ವಿರುದ್ಧ ಇತರ ಅಪರಾಧಗಳು** |
| | 74 | Prohibition on disclosure of identity of children. | | ಮಕ್ಕಳ ಗುರುತು/ಪತ್ತೆ ಬಹಿರಂಗಪಡಿಸುವುದಕ್ಕೆ ನಿಷೇಧ |
| | 75 | Punishment for cruelty to child. | | ಮಕ್ಕಳ ಮೇಲೆ ಕ್ರೌರ್ಯ ತೋರಿದವರಿಗೆ ಶಿಕ್ಷೆ |
| | 76 | Employment of child for begging. | | ಮಕ್ಕಳನ್ನು ಭಿಕ್ಷೆಗಾಗಿ ಕೆಲಸಕ್ಕಿಟ್ಟುಕೊಳ್ಳುವುದು |
| | 77 | Penalty for giving intoxicating liquor or narcotic drug or psychotropic substance to a child. | | ಮಕ್ಕಳಿಗೆ ಅಮಲು ಬರಿಸುವ, ಮದ್ಯಸಾರ, ಮಾದಕ ವಸ್ತು ಅಥವಾ ಭ್ರಾಮಕಾರಕ ಮಾದಕ ದ್ರವ್ಯಗಳನ್ನು ನೀಡುವವರಿಗೆ ಶಿಕ್ಷೆ |
| | 78 | Using a child for vending, peddling, carrying, supplying or smuggling any intoxicating liquor, narcotic drug or psychotropic substance. | | ಅಮಲು ಬರಿಸುವ, ಭ್ರಾಮಕಾರಕ ಅಥವಾ ಮಾದಕ ವಸ್ತುಗಳ ಮಾರಾಟ, ಸಾಗಣೆ, ಸರಬರಾಜು ಅಥವಾ ಕಳ್ಳಸಾಗಾಣಿಕೆಯಲ್ಲಿ ಮಕ್ಕಳನ್ನು ಬಳಸುವುದು |
| | 79 | Exploitation of a child employee. | | ಮಕ್ಕಳನ್ನು ದುಡಿಯುವುದಕ್ಕಿಟ್ಟುಕೊಂಡು ಶೋಷಿಸುವುದು |
| | 80 | Punitive measures for adoption without following prescribed procedures. | | ನಿರ್ದಿಷ್ಟ ಪ್ರಕ್ರಿಯೆಗಳನ್ನು ಪಾಲಿಸದೆ ಮಕ್ಕಳನ್ನು ದತ್ತು ತೆಗೆದುಕೊಂಡವರಿಗೆ ಶಿಕ್ಷೆ |
| | 81 | Sale and procurement of children for any purpose. | | ಯಾವುದೇ ಉದ್ದೇಶಕ್ಕಾಗಿ ಮಕ್ಕಳನ್ನು ಮಾರುವುದು ಮತ್ತು ಪಡೆದುಕೊಳ್ಳುವುದು |
| | 82 | Corporal punishment. | | ದೈಹಿಕ ಶಿಕ್ಷೆ |
| | 83 | Use of child by militant groups or other adults. | | ಮಕ್ಕಳನ್ನು ಉಗ್ರಗಾಮಿ ಗುಂಪುಗಳು ಮತ್ತು ಇತರ ವಯಸ್ಕರು ಬಳಸಿಕೊಳ್ಳುವುದು |
| | 84 | Kidnapping and abduction of child. | | ಮಕ್ಕಳ ಅಪಹರಣ ಮತ್ತು ಹಿಡಿದಿಡುವುದು |
| | 85 | Offences committed on disabled children. | | ಅಂಗವಿಕಲತೆಯಿರುವ ಮಕ್ಕಳ ಮೇಲೆ ಆಗುವ ಆಪರಾಧಿಕ ಕೃತ್ಯಗಳು |
| | 86 | Classification of offences and designated court. | | ಆಪರಾಧಿಕ ಕೃತ್ಯಗಳ ವಿಂಗಡಣೆ ಮತ್ತು ಅವುಗಳನ್ನು ವಿಚಾರಣೆ ಮಾಡಲು ನಿರ್ದೇಶಿಸಿರುವ ನ್ಯಾಯಾಲಯಗಳು |
| | 87 | Abetment. | | ಪ್ರಚೋದನೆ (ಆಪರಾಧಿಕ ಕೃತ್ಯಕ್ಕೆ) |
| | 88 | Alternative punishment. | | ಪರ್ಯಾಯ ಶಿಕ್ಷೆಗಳು |
| | 89 | Offence committed by child under this Chapter. | | ಈ ವಿಭಾಗದಲ್ಲಿ ಸೂಚಿಸಿರುವ ಆಪರಾಧಿಕ ಕೃತ್ಯಗಳನ್ನು ಮಕ್ಕಳು ಮಾಡುವುದು |
| | | | | |
| **X** | | **Miscellaneous** | | **ಇತರೆ** |
| | 90 | Attendance of parent or guardian of child. | | ಮಗುವಿನ ತಾಯಿ–ತಂದೆ ಅಥವಾ ಪೋಷಕರ ಹಾಜರಿ |
| | 91 | Dispensing with attendance of child. | | ಮಗುವಿನ ಹಾಜರಿಗೆ ವಿನಾಯಿತಿ |
| | 92 | Placement of a child suffering from disease requiring prolonged medical treatment in an approved place. | | ತೀವ್ರ ಸ್ವರೂಪದ ಅನಾರೋಗ್ಯದಲ್ಲಿರುವ ಮಕ್ಕಳನ್ನು ಅಥವಾ ಮಕ್ಕಳನ್ನು ಚಿಕಿತ್ಸೆಗಾಗಿ ಸೂಕ್ತ ಸಂಸ್ಥೆಗೆ ಸೇರಿಸುವುದು |
| | 93 | Transfer of a child who is mentally ill or addicted to alcohol or other drugs. | | ಮಾನಸಿಕ ಅಸ್ವಸ್ಥತೆಯಿರುವ ಅಥವಾ ಮದ್ಯಸಾರ ಅಥವಾ ಇನ್ನಿತರ ಮಾದಕ ದ್ರವ್ಯಗಳಿಗೆ ದಾಸರಾಗಿರುವ ಮಕ್ಕಳ ವರ್ಗಾವಣೆ |
| | 94 | Presumption and determination of age. | | ಮಕ್ಕಳ ವಯಸ್ಸಿನ ಅಂದಾಜು ಮತ್ತು ನಿರ್ಧಾರ |
| | 95 | Transfer of a child to place of residence. | | ಮಕ್ಕಳನ್ನು ಅವರ ವಾಸಸ್ಥಳಕ್ಕೆ ವರ್ಗಾಯಿಸುವುದು |
| | 96 | Transfer of child between Children's Homes, or special homes or fit facility or fit person in different parts of India. | | ಮಕ್ಕಳನ್ನು ಭಾರತದ ವಿವಿಧ ಭಾಗಗಳಲ್ಲಿರುವ ಮಕ್ಕಳ ನಿಲಯ ಅಥವಾ ವಿಶೇಷ ಗೃಹ ಅಥವಾ ಅರ್ಹ ವ್ಯವಸ್ಥೆ ಅಥವಾ ಅರ್ಹ ವ್ಯಕ್ತಿಗಳಿಗೆ ವರ್ಗಾಯಿಸುವುದು |
| | 97 | Release of a child from an institution. | | ನಿಲಯದಿಂದ ಮಕ್ಕಳ ಬಿಡುಗಡೆ |

| | | |
|---|---|---|
| **98** | Leave of absence to a child placed in an institution. | ಸಂಸ್ಥೆಯಲ್ಲಿ ಸ್ಥಾಪಿಸಿದ/ಇರಿಸಿದ ಮಕ್ಕಳಿಗೆ ರಜೆ |
| **99** | Reports to be treated as confidential. | ವರದಿಗಳನ್ನು ಗೋಪ್ಯವೆಂದು ಪರಿಗಣಿಸುವುದು |
| **100** | Protection of action taken in good faith. | ಹಿತದೃಷ್ಟಿಯಿಂದ ತೆಗೆದುಕೊಂಡ ಕ್ರಮಗಳಿಗೆ ರಕ್ಷಣೆ |
| **101** | Appeals. | ಮೇಲ್ಮನವಿ |
| **102** | Revision. | ತಿದ್ದುಪಡಿ/ಪರಿಶೀಲನೆ |
| **103** | Procedure in inquiries, appeals and revision proceedings. | ವಿಚಾರಣೆ, ಮೇಲ್ಮನವಿ ಮತ್ತು ಪರಿಶೀಲನೆಗಳಿಗೆ ವಿಧಿವಿಧಾನಗಳು, |
| **104** | Power of the Committee or the Board to amend its own orders. | ಸಮಿತಿ ಮತ್ತು ಮಂಡಳಿಗೆ ತಾವೇ ಕೈಗೊಂಡ ಆದೇಶಗಳಿಗೆ ತಿದ್ದುಪಡಿ ಮಾಡುವ ಅಧಿಕಾರ |
| **105** | Juvenile justice fund. | ಮಕ್ಕಳ ನ್ಯಾಯ ನಿಧಿ |
| **106** | State Child Protection Society and District Child Protection Unit. | ರಾಜ್ಯ ಮಕ್ಕಳ ರಕ್ಷಣಾ ಸಂಸ್ಥೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕ |
| **107** | Child Welfare Police Officer and Special Juvenile Police Unit. | ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿ ಮತ್ತು ಮಕ್ಕಳ ವಿಶೇಷ ಪೋಲಿಸ್ ಘಟಕ |
| **108** | Public awareness on provisions of Act. | ಕಾಯಿದೆಯಲ್ಲಿರುವ ಅವಕಾಶಗಳನ್ನು ಕುರಿತು ಸಾರ್ವಜನಿಕ ಅರಿವು |
| **109** | Monitoring of implementation of Act. | ಕಾಯಿದೆಯ ಜಾರಿ ಉಸ್ತುವಾರಿ |
| **110** | Power to make rules. | ನಿಯಮಗಳ ರಚನೆಗೆ ಅಧಿಕಾರ |
| **111** | Repeal and savings. | ತೆಗೆದಿರುವುದು ಮತ್ತು ಉಳಿಸಿಕೊಳ್ಳುವುದು |
| **112** | Power to remove difficulties. | ತೊಂದರೆಗಳ ನಿವಾರಣೆಗೆ ಅಧಿಕಾರ |

# THE JUVENILE JUSTICE (CARE AND PROTECTION OF CHILDREN) ACT, 2015
# ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ 2015

| Introduction, objectives | ಪರಿಚಯ ಮತ್ತು ಉದ್ದೇಶಗಳು |
|---|---|
| An Act to consolidate and amend the law relating to children alleged and found to be in conflict with law and children in need of care and protection by catering to their basic needs through proper care, protection, development, treatment, social re-integration, by adopting a child-friendly approach in the adjudication and disposal of matters in the best interest of children and for their rehabilitation through processes provided, and institutions and bodies established, hereinunder and for matters connected therewith or incidental thereto. | ಕಾನೂನಿನೊಡನೆ ಸಂಘರ್ಷದಲ್ಲಿದ್ದಾರೆಂದು ಆಪಾದಿಸಲಾಗಿರುವ ಮಕ್ಕಳು ಮತ್ತು ಪೋಷಣೆ ಮತ್ತು ರಕ್ಷಣೆಯ ಆವಶ್ಯಕತೆ ಇರುವ ಮಕ್ಕಳನ್ನು ಕುರಿತು ಹಾಗೂ ಮಕ್ಕಳ ಆವಶ್ಯಕತೆಗಳಾದ ಸೂಕ್ತ ಪೋಷಣೆ ಮತ್ತು ರಕ್ಷಣೆ, ಅಭಿವೃದ್ಧಿ, ಚಿಕಿತ್ಸೆ, ಸಾಮಾಜಿಕ ಪುನಃಸ್ಥಾಪನೆಯನ್ನು ಒದಗಿಸಲು, ಮಕ್ಕಳ ಹಿತದೃಷ್ಟಿಯಿಂದ ಅವರ ಪುನರ್ವಸತಿಯ ಉದ್ದೇಶದಿಂದ ನ್ಯಾಯ ತೀರ್ಮಾನಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಮಕ್ಕಳ ಸ್ನೇಹೀ ವಿಧಾನಗಳನ್ನು ಅಳವಡಿಸಿ, ಅದಕ್ಕಾಗಿ ಸಂಸ್ಥೆಗಳು ಹಾಗೂ ಪ್ರಾಧಿಕಾರಗಳನ್ನು ರಚಿಸಿ, ಇವುಗಳಿಗೆ ಸಂಬಂಧಿಸಿದ ವಿಚಾರಗಳನ್ನು ಒಗ್ಗೂಡಿಸುವುದಕ್ಕಾಗಿ ಈಗ ಚಾಲ್ತಿಯಲ್ಲಿರುವ ಕಾಯಿದೆಯನ್ನು ತಿದ್ದುಪಡಿ ಮಾಡಲು ಈ ಹೊಸ ಕಾಯಿದೆಯನ್ನು ರಚಿಸಲಾಗಿದೆ. |
| WHEREAS, the provisions of the Constitution confer powers and impose duties, under clause (3) of article 15, clauses (*e*) and (*f*) of article 39, article 45 and article 47, on the State to ensure that all the needs of children are met and that their basic human rights are fully protected; | ಭಾರತ ಸಂವಿಧಾನವು ಪರಿಚ್ಛೇದ 15 (3); ಪರಿಚ್ಛೇದ 39 (ಇ), (ಎಫ್), ಪರಿಚ್ಛೇದ 45 ಮತ್ತು ಪರಿಚ್ಛೇದ 47ರಲ್ಲಿ ಮಕ್ಕಳನ್ನು ಕುರಿತು ಅದರಲ್ಲೂ ಮಕ್ಕಳ ಎಲ್ಲಾ ಆವಶ್ಯಕತೆಗಳನ್ನು ಪೂರೈಸುವ ಹಾಗೂ ಅವರ ಮೂಲ ಮಾನವ ಹಕ್ಕುಗಳನ್ನು ಸಂಪೂರ್ಣವಾಗಿ ರಕ್ಷಿಸುವ ಪ್ರಾಥಮಿಕ ಹೊಣೆಯನ್ನು ಸರ್ಕಾರಕ್ಕೆ ವಹಿಸಿದೆ. |
| AND WHEREAS, the Government of India has acceded on the 11th December, 1992 to the Convention on the Rights of the Child, adopted by the General Assembly of United Nations, which has prescribed a set of standards to be adhered to by all State parties in securing the best interest of the child; | ಮಕ್ಕಳ ಅತ್ಯುತ್ತಮ ಹಿತವನ್ನು ಎಲ್ಲ ದೇಶಗಳು ಕಾಪಾಡಲು ಬದ್ಧರಾಗಿರಬೇಕು ಎಂದು ಸಿದ್ಧ ಮಾಪಕಗಳನ್ನು ಮುಂದಿಟ್ಟಿರುವ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಒಪ್ಪಿಕೊಂಡು ಅಳವಡಿಸಲಾಗಿರುವ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ (20 ನವೆಂಬರ್ 1989) ಭಾರತ ಸರ್ಕಾರವು 11 ಡಿಸೆಂಬರ್ 1992ರಂದು ಒಪ್ಪಿಕೊಂಡಿದೆ. |
| AND WHEREAS, it is expedient to re-enact the Juvenile Justice (Care and Protection of Children) Act, 2000 to make comprehensive provisions for children alleged and found to be in conflict with law and children in need of care and protection, taking into consideration the standards prescribed in the Convention on the Rights of the Child, the United Nations Standard Minimum Rules for the Administration of Juvenile Justice, 1985 (the Beijing Rules), the United Nations Rules for the Protection of Juveniles Deprived of their Liberty (1990), The Hague Convention on Protection of Children and Co-operation in Respect of Inter country Adoption (1993), and other related international instruments. | ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯು ಶಿಫಾರಸು ಮಾಡಿರುವ ಮಾಪಕಗಳು; ವಿಶ್ವಸಂಸ್ಥೆಯ ಮಕ್ಕಳ ನ್ಯಾಯ ಜಾರಿ ಕುರಿತು ಕನಿಷ್ಠ ಮಾಪಕಗಳು (ಬೀಜಿಂಗ್ ನಿಯಮಗಳು 1985); ಸ್ವಾತಂತ್ರ ಕಳೆದುಕೊಂಡ ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು ರಕ್ಷಿಸುವ ವಿಶ್ವಸಂಸ್ಥೆಯ ನಿಯಮಗಳು (1990); ಮಕ್ಕಳ ರಕ್ಷಣೆ ಮತ್ತು ಅಂತಾರಾಷ್ಟ್ರೀಯ ದತ್ತು ಪ್ರಕ್ರಿಯೆಯಲ್ಲಿ ಸಹಕಾರಕ್ಕಾಗಿ ಹೇಗ್ ಒಡಂಬಡಿಕೆ(1993) ಮತ್ತಿತರ ಅಂತಾರಾಷ್ಟ್ರೀಯ ನಿಯಮಗಳಿಗೆ ಸರಿಹೊಂದುವಂತೆ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ 2000ವನ್ನು ಮರು ಜಾರಿ ಮಾಡಿ ಕಾನೂನಿನೊಡನೆ ಸಂಘರ್ಷದಲ್ಲಿದ್ದಾರೆಂದು ಆಪಾದಿಸಲ್ಪಟ್ಟ ಮತ್ತು ಸಂಘರ್ಷದಲ್ಲಿರುವ ಮಕ್ಕಳನ್ನು ಹಾಗೂ ಪೋಷಣೆ ಮತ್ತು ರಕ್ಷಣೆಯ ಆವಶ್ಯಕತೆಯಿರುವ ಮಕ್ಕಳೆಲ್ಲರನ್ನೂ ಒಳಗೊಂಡಂತೆ ಒಂದು ಸಮಗ್ರ ಕಾಯಿದೆಯನ್ನು ತರುವುದು ಸಮಯೋಚಿತವಾಗಿದೆ. |
| BE it enacted by Parliament in the Sixty-sixth Year of the Republic of India as follows:— | ಭಾರತ ಗಣತಂತ್ರದ 66ನೇ ವರ್ಷದಲ್ಲಿ ಈ ಮುಂದಿನಂತೆ ಕಾಯಿದೆಯನ್ನು ಜಾರಿಗೊಳಿಸಲಾಗಿದೆ. |

## Chapter I – Preliminary ಆರಂಭ

| Sec | | | | | |
|---|---|---|---|---|---|
| **1** | ***1*** | | **Short title, extent, commencement and application.** | | **ಸಂಕ್ಷಿಪ್ತ ಶೀರ್ಷಿಕೆ, ವ್ಯಾಪ್ತಿ, ಆರಂಭ ಮತ್ತು ಜಾರಿ** |
| | | | This Act may be called the Juvenile Justice (Care and Protection of Children) Act, 2015. | | ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ 2015 ಎಂದು ಈ ಕಾಯಿದೆಯನ್ನು ಹೆಸರಿಸಬಹುದು |
| | ***2*** | | **Extent** | | **ವ್ಯಾಪ್ತಿ** |
| | | | It extends to the whole of India except the State of Jammu and Kashmir. | | ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತು ಪಡಿಸಿ ಭಾರತದೆಲ್ಲೆಡೆ ಈ ಕಾಯಿದೆಯು ಅನ್ವಯಿಸುತ್ತದೆ. |
| | ***3*** | | **Commencement** | | **ಆರಂಭ** |
| | | | It shall come into force on such date as the Central Government may, by notification in the Official Gazette, appoint. | | ಕೇಂದ್ರ ಸರ್ಕಾರವು ತನ್ನ ಅಧಿಕೃತ ಪ್ರಪತ್ರದಲ್ಲಿ ಅಧಿಸೂಚನೆಯನ್ನು ಹೊರಡಿಸುವ ಮೂಲಕ ನಿಗದಿ ಪಡಿಸಿದ ದಿನಾಂಕದಿಂದ ಈ ಕಾಯಿದೆಯು ಜಾರಿಗೆ ಬರತಕ್ಕದ್ದು. |
| | ***4*** | | **Applies to Children in need of Care and Protection and Children in Conflict with law** | | **ಈ ಕಾಯಿದೆಯು ಪೋಷಣೆ ಮತ್ತು ರಕ್ಷಣೆಯ ಆವಶ್ಯಕತೆಯಿರುವ ಮಕ್ಕಳು ಮತ್ತು ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳೆಲ್ಲರಿಗೂ ಅನ್ವಯಿಸುತ್ತದೆ.** |
| | | | Notwithstanding anything contained in any other law for the time being in force, the provisions of this Act shall apply to all matters concerning children in need of care and protection and children in conflict with law, including : | | ಈಗ ಚಾಲ್ತಿಯಲ್ಲಿರುವ ಯಾವುದೇ ಕಾಯಿದೆಯಲ್ಲಿ ಏನೇ ಹೇಳಿದ್ದರು, ಈ ಕಾಯಿದೆಯು ಪೋಷಣೆ ಮತ್ತು ರಕ್ಷಣೆ ಆವಶ್ಯಕತೆಯಿರುವ ಮಕ್ಕಳು ಮತ್ತು ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳಿಗೆ ಈ ಮುಂದಿನವುಗಳನ್ನು ಸೇರಿದಂತೆ ಅನ್ವಯಿಸುತ್ತದೆ |
| | | (*i*) | apprehension, detention, prosecution, penalty or imprisonment, rehabilitation and social re-integration of children in conflict with law; | | ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು ವಶಕ್ಕೆ ತೆಗೆದುಕೊಳ್ಳುವುದು, ಉಳಿಸಿಕೊಳ್ಳುವುದು, ಕಾನೂನು ಕ್ರಮ ಕೈಗೊಂಡು, ದಂಡ ಅಥವಾ ಕಾರಾಗೃಹವಾಸ, ಪುನರ್ವಸತಿ ಮತ್ತು ಸಾಮಾಜಿಕ ಮರು ಸ್ಥಾಪನೆ |
| | | (*ii*) | procedures and decisions or orders relating to rehabilitation, adoption, re-integration, and restoration of children in need of care and protection. | | ಪೋಷಣೆ ಮತ್ತು ರಕ್ಷಣೆಯ ಆವಶ್ಯಕತೆಯಿರುವ ಮಕ್ಕಳ ಪುನರ್ವಸತಿ, ದತ್ತು, ಪುನಃಸ್ಥಾಪನೆ ಮತ್ತು ಕುಟುಂಬ, ಸ್ಥಳದಲ್ಲಿ ಮರು ಸೇರಿಸುವಿಕೆಯೇ ಮೊದಲಾದವುಗಳಿಗೆ ಸಂಬಂಧಿಸಿದಂತೆ ಪ್ರಕ್ರಿಯೆಗಳು, ನಿರ್ಧಾರಗಳು, ಆದೇಶಗಳು. |
| | | | | | |
| **Sec** | | | **Definition (*1-61)*** | | **ಅರ್ಥ ಮತ್ತು ವಿವರಣೆ** |
| **2** | (*1*) | | **"abandoned child"** means a child deserted *by his biological or adoptive parents* or guardians, who has been declared as abandoned by the Committee after due inquiry; | | **"ಪರಿತ್ಯಜಿಸಲ್ಪಟ್ಟ ಮಗು"** ಎಂದರೆ, ತನ್ನ ಜೈವಿಕ/ಸ್ವಂತ ಅಥವಾ ದತ್ತು ಪೋಷಕರಿಂದ ಅಥವಾ ಪೋಷಕರಿಂದ ತೊರೆಯಲ್ಪಟ್ಟ ಮಗು ಮತ್ತು ಸೂಕ್ತವಾದ ವಿಚಾರಣೆ / ಪರಿಶೀಲನೆ/ತನಿಖೆ ನಡೆಸಿದ ನಂತರ (ಮಕ್ಕಳ ಕಲ್ಯಾಣ) ಸಮಿತಿಯು ಪರಿತ್ಯಜಿಸಲ್ಪಟ್ಟ ಮಗು ಎಂದು ಘೋಷಿಸಲ್ಪಟ್ಟ ಮಗು. |
| | (2) | | **"adoption"** means the process through which the adopted child is permanently separated from his biological parents and becomes the *lawful child of his adoptive parents* with all the rights, privileges and responsibilities that are attached to a biological child; | | **'ದತ್ತು'** ಎಂದರೆ, ತನ್ನ ಜೈವಿಕ ತಾಯಿ ತಂದೆಯರಿಂದ ಶಾಶ್ವತವಾಗಿ ಬೇರ್ಪಟ್ಟು, ಕಾನೂನಿಗನುಗುಣವಾಗಿ ದತ್ತು ಪಡೆದ ಪೋಷಕರಿಗೆ ಜೈವಿಕ ಮಗುವಿಗಿರಬಹುದಾದ ಎಲ್ಲ ಹಕ್ಕು, ಅವಕಾಶಗಳು ಮತ್ತು ಜವಾಬ್ದಾರಿಗಳೊಂದಿಗಿನ ಸಂಬಂಧದೊಂದಿಗೆ ಮಗುವಾಗುವ ಪ್ರಕ್ರಿಯೆ |
| | (*3*) | | **"adoption regulations"** means the regulations framed by the Authority and notified by the Central Government in respect of adoption; | | **'ದತ್ತು ನಿಯಂತ್ರಣ'** ಎಂದರೆ, ದತ್ತು ಕುರಿತು ಪ್ರಾಧಿಕಾರವು ನಿರ್ಮಿಸಿದ ನೀತಿ ನಿಯಮಗಳಿರುವ ನಿಯಂತ್ರಣಗಳನ್ನು ಕೇಂದ್ರ ಸರ್ಕಾರವು ಹೊರಡಿಸಿರುವುದು |

| | | | |
|---|---|---|---|
| (4) | | **"administrator"** means any district official not below the rank of Deputy Secretary to the State, on whom magisterial powers have been conferred; | **'ಆಡಳಿತಾಧಿಕಾರಿ'** ಎಂದರೆ, ರಾಜ್ಯದ ಡೆಪ್ಯುಟಿ/ಉಪ ಕಾರ್ಯದರ್ಶಿಗಳ ಹುದ್ದೆಗಿಂತಾ ಕಡಿಮೆಯಲ್ಲದ ಮತ್ತು ಯಾರಿಗೆ ನ್ಯಾಯಾಧೀಶರ ಅಧಿಕಾರ ಇದೆಯೋ ಅಂತಹ ಜಿಲ್ಲಾ ಅಧಿಕಾರಿ. |
| (5) | | **"aftercare"** means making provision of support, financial or otherwise, to persons, who have *completed the age of eighteen years* but have not completed the age of twenty-one years, and have left any institutional care to join the mainstream of the society; | **'ಅನುಪಾಲನೆ'** ಎಂದರೆ, 18 ವರ್ಷ ದಾಟಿದ ಆದರೆ 21 ವರ್ಷ ಪೂರೈಸದ ಮತ್ತು ಸಂಸ್ಥೆಯಲ್ಲಿ ಅವಧಿಯನ್ನು ಪೂರೈಸಿ ಸಮಾಜದ ಮುಖ್ಯ ವಾಹಿನಿಗೆ ಸೇರಲು ಹೊರಟವರಿಗೆ ಬೇಕಾದ ಆರ್ಥಿಕ ಮತ್ತಿತರ ಬೆಂಬಲ ನೀಡುವ ವ್ಯವಸ್ಥೆ. |
| (6) | | **"authorised foreign adoption agency"** means a foreign social or child welfare agency that is authorised by the Central Adoption Resource Authority ***(CARA)*** on the recommendation of their Central Authority or Government department of that country for sponsoring the application of non-resident Indian or overseas citizen of India or persons of Indian origin or foreign prospective adoptive parents for adoption of a child from India; | **'ನಿಯೋಜಿಸಲ್ಪಟ್ಟ ವಿದೇಶೀ ದತ್ತು ಸಂಸ್ಥೆ'** ಎಂದರೆ, ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ (***CARA***)ವು, ಆಯಾ ದೇಶಗಳ ಕೇಂದ್ರ ಪ್ರಾಧಿಕಾರ ಅಥವಾ ಸರ್ಕಾರದ ನಿರ್ದಿಷ್ಟ ಇಲಾಖೆಯು ತಮ್ಮ ದೇಶದಲ್ಲಿರುವ (ವಿದೇಶದಲ್ಲಿರುವ) ಸಾಮಾಜಿಕ ಅಥವಾ ಮಕ್ಕಳ ಕಲ್ಯಾಣ ಸಂಸ್ಥೆಯನ್ನು ಭಾರತದ ಮಕ್ಕಳನ್ನು ದತ್ತು ಪಡೆಯಲು ಉದ್ದೇಶಿಸಿರುವ ಆಯಾ ದೇಶದಲ್ಲಿರುವ ಅನಿವಾಸಿ ಭಾರತೀಯರು ಅಥವಾ ವಿದೇಶಲ್ಲಿರುವ ಭಾರತೀಯರು ಅಥವಾ ಭಾರತೀಯ ಮೂಲದ ವ್ಯಕ್ತಿಗಳು ಅಥವಾ ವಿದೇಶೀಯರ ಅರ್ಜಿಗಳನ್ನು ವಿಲೇವಾರಿ ಮಾಡಲು ನಿಯೋಜಿಸಿರುವುದು. |
| (7) | | **"Authority"** means the Central Adoption Resource Authority constituted under section 68; | **'ಪ್ರಾಧಿಕಾರ'** ಎಂದರೆ, ಸೆಕ್ಷನ್ 68ರಂತೆ ನಿಯೋಜಿಸಲಾಗಿರುವ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ (***CARA***) |
| (8) | | **"begging"** means— | **'ಭಿಕ್ಷೆ'** ಎಂದರೆ |
| | (i) | soliciting or receiving alms in a public place or entering into any private premises for the purpose of soliciting or receiving alms, under any pretence; | ಸಾರ್ವಜನಿಕ ಸ್ಥಳದಲ್ಲಿ ಅಥವಾ ಖಾಸಗಿ ಆವರಣಗಳಿಗೆ ಪ್ರವೇಶಿಸಿ ವಿವಿಧ ರೀತಿಯ ಕಾರಣಗಳನ್ನೊಡ್ಡಿ ದಾನಕ್ಕಾಗಿ ಬೇಡುವುದು ಮತ್ತು ಅವರು ನೀಡುವ ದಾನವನ್ನು ಪಡೆಯುವುದು. |
| | (ii) | exposing or exhibiting with the object of obtaining or extorting alms, any sore, wound, injury, deformity or disease, whether of himself or of any other person or of an animal; | ತನ್ನ ಮೈಮೇಲೆ ಅಥವಾ ತನ್ನೊಡನಿರುವ ಇತರ ವ್ಯಕ್ತಿ/ವ್ಯಕ್ತಿಗಳು ಅಥವಾ ಪ್ರಾಣಿಗಳ ಮೇಲೆ ಆಗಿರಬಹುದಾದ ಗಾಯ, ಹುಣ್ಣು, ಹಾನಿ, ಅಂಗವಿಕಲತೆಯನ್ನು ಸಾರ್ವಜನಿಕವಾಗಿ ಪ್ರದರ್ಶಿಸಿ ಅದರ ಮೂಲಕ ಜನರಿಂದ ದಾನವನ್ನು ಪಡೆಯಲು ಪ್ರಯತ್ನಿಸುವ ಪ್ರಕ್ರಿಯೆ |
| (9) | | **"best interest of child"** means the basis for any decision taken regarding the child, to ensure fulfillment of his basic rights and needs, identity, social well-being and physical, emotional and intellectual development; | **'ಮಗುವಿನ ಹಿತದೃಷ್ಟಿಯಿಂದ'** ಎಂದರೆ, ನಿರ್ದಿಷ್ಟ ಮಗುವಿನ ಮೂಲ ಆವಶ್ಯಕತೆಗಳನ್ನು ಪೂರೈಸಲು, ಗುರುತನ್ನು ಉಳಿಸಲು, ಸಾಮಾಜಿಕ ನೆಮ್ಮದಿ, ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ನೆಮ್ಮದಿ ಮತ್ತು ಬೆಳವಣಿಗೆಗಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಇರುವ ಮೂಲ ವಿಚಾರ. |
| (10) | | **"Board"** means a Juvenile Justice Board ***(JJB)*** constituted under section 4; | **'ಮಂಡಳಿ'–** ಈ ಕಾಯಿದೆಯ ಸೆಕ್ಷನ್ 4 ರಂತೆ ರಚಿಸಲ್ಪಟ್ಟ ಮಕ್ಕಳ ನ್ಯಾಯ ಮಂಡಳಿ (***JJB***) |
| (11) | | **"Central Authority"** means the Government department recognised as such under the ***Hague Convention*** *on Protection of Children and Cooperation in Inter-country Adoption* (1993); | **'ಕೇಂದ್ರ ಪ್ರಾಧಿಕಾರ'** ಎಂದರೆ, **ಅಂತಾರಾಷ್ಟ್ರೀಯ ದತ್ತು ಪ್ರಕ್ರಿಯೆಯಲ್ಲಿ ಮಕ್ಕಳ ರಕ್ಷಣೆ ಮತ್ತು ಸಹಕಾರ ಕುರಿತು ಹೇಗ್ ಒಡಂಬಡಿಕೆ (1993)**ಯಂತೆ ನಿಯೋಜಿಸಲ್ಪಟ್ಟ ಸರ್ಕಾರದ ಇಲಾಖೆ. |
| (12) | | **"child"** means a person who has *not completed eighteen years* of age; | **'ಮಗು'** ಎಂದರೆ, 18 ವರ್ಷ ಪೂರೈಸದ ವ್ಯಕ್ತಿಗಳು |

| | | | | |
|---|---|---|---|---|
| *(13*) | | **"child in conflict with law" (CCL)** means a child who is alleged or found to have committed an offence and who has not completed eighteen years of age on the date of commission of such offence; | | **'ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗು'** ಎಂದರೆ, ಅಪರಾಧಿಕ ಕೃತ್ಯವನ್ನು ಎಸಗಿದ್ದಾರೆ ಎಂದು ಆಪಾದಿಸಲ್ಪಟ್ಟ ಅಥವಾ ಅಂತಹ ಕೃತ್ಯವನ್ನು ಎಸಗಿದ ದಿನದ ಸಂದರ್ಭದಲ್ಲಿ 18 ವರ್ಷ ಪೂರೈಸಿರದ ಮಗು. |
| *(14)* | | **"child in need of care and protection" (CNCP)** means a child— | | **ಪೋಷಣೆ ಮತ್ತು ರಕ್ಷಣೆಯ ಆವಶ್ಯಕತೆ ಇರುವ ಮಗು,** ಎಂದರೆ – |
| | (*i*) | who is found without any home or settled place of abode and without any ostensible means of subsistence; or | | ಯಾವ ಮಕ್ಕಳಿಗೆ ತಮ್ಮದೇ ಆದ ಮನೆಯಿಲ್ಲವೋ ಅಥವಾ ವ್ಯವಸ್ಥಿತವಾದ ವಾಸಸ್ಥಳವಿಲ್ಲವೋ ಅಥವಾ ಮೇಲು ನೋಟಕ್ಕೆ ಕಂಡುಬರುವಂತೆ ಜೀವನ ನಿರ್ವಹಣೆಗೆ ಸೂಕ್ತ ಮಾರ್ಗವಿಲ್ಲವೋ ಅಂತಹ ಮಕ್ಕಳು; ಅಥವಾ |
| | (*ii*) | who is found <u>*working*</u> in contravention of labour laws for the time being in force or is found <u>*begging*</u>, or <u>*living on the street*</u>; or | | ಚಾಲ್ತಿಯಲ್ಲಿರುವ ಕಾರ್ಮಿಕ ಕಾಯಿದೆಗಳಿಗೆ ವಿರುದ್ಧವಾಗಿ ದುಡಿಯುತ್ತಿರುವ ಅಥವಾ ಭಿಕ್ಷೆ ಬೇಡುತ್ತಿರುವ ಅಥವಾ ಬೀದಿಯ ಮೇಲೆ ಬದುಕುತ್ತಿರುವ ಮಗು; ಅಥವಾ |
| | (*iii*) | who resides with a person (whether a guardian of the child or not) and such person— | | ಯಾವ ಮಗುವಿಗೆ ತನ್ನ ಪೋಷಕರು ಆಗಿರಬಹುದಾದ ಅಥವಾ ಅಲ್ಲದ ಯಾವ ವ್ಯಕ್ತಿಯೊಡನೆ ಇರುವಾಗ ಅಂಥಹ ವ್ಯಕ್ತಿಯಿಂದ |
| | | a) has injured, exploited, abused or neglected the child or has violated any other law for the time being in force meant for the protection of child; or<br>b) has threatened to kill, injure, exploit or abuse the child and there is a reasonable likelihood of the threat being carried out; or<br>c) has killed, abused, neglected or exploited some other child or children and there is a reasonable likelihood of the child in question being killed, abused, exploited or neglected by that person; or | | a) ಯಾವ ಮಗುವಿನ ಮೇಲೆ ಹಲ್ಲೆಯಾಗಿದ್ದು ಗಾಯಗಳಾಗಿವೆಯೋ, ಶೋಷಣೆಗೆ, ದುರುಪಯೋಗಕ್ಕೆ ಒಳಪಟ್ಟಿದೆಯೋ ಅಥವಾ ಮಕ್ಕಳ ರಕ್ಷಣೆಗೆ ಈಗ ಚಾಲ್ತಿಯಲ್ಲಿರುವ ಯಾವುದೇ ಕಾಯಿದೆಯನ್ನು ಉಲ್ಲಂಘಿಸುತ್ತಿದ್ದಲ್ಲಿ; ಅಥವಾ<br>b) ಯಾವ ಮಗುವಿಗೆ ಕೊಲೆ ಬೆದರಿಕೆ ಅಥವಾ ದೈಹಿಕ ಹಲ್ಲೆ/ಗಾಯವಾಗಲಿದೆ ಎಂದು ನಂಬಲರ್ಹವಾದ ಸಾಧ್ಯತೆಗಳು ಇವೆಯೋ ಮತ್ತು ಅಂತಹ ಬೆದರಿಕೆ ಮುಂದುವರಿಯುವ ಸಾಧ್ಯತೆಗಳಿವೆಯೋ; ಅಥವಾ<br>c) ಅಲ್ಲಿರುವ ಇತರ ಮಕ್ಕಳು/ಮಗುವನ್ನು ಕೊಂದಿರುವ, ದುರುಪಯೋಗ, ನಿರ್ಲಕ್ಷ್ಯ ಮಾಡಿರುವ ಪ್ರಕರಣವಿದ್ದು, ಒಂದು ನಿರ್ದಿಷ್ಟ ಮಗು ಅಥವಾ ಮಕ್ಕಳಿಗೆ ಕೊಲೆ/ದುರುಪಯೋಗ ಅಥವಾ ನಿರ್ಲಕ್ಷ್ಯ ಉಂಟಾಗುವ ಸಾಧ್ಯತೆಗಳಿದ್ದಲ್ಲಿ; ಅಥವಾ |
| | (*iv*) | who is mentally ill or mentally or physically challenged or suffering from terminal or incurable disease, having no one to support or look after or <u>*having parents or guardians unfit to take care*</u>, if found so by the **Board or the Committee**; or | | ಮಾನಸಿಕ ಮತ್ತು/ಅಥವಾ ದೈಹಿಕ ಅಂಗವಿಕಲತೆಯಿಂದ ಬಳಲುತ್ತಿರುವ ಅಥವಾ ಅನಾರೋಗ್ಯದಿಂದಿರುವ ಅಥವಾ ಗುಣಪಡಿಸಲಾಗದಂತಹ ಮತ್ತು ಕ್ರಮೇಣ ಪ್ರಾಣಾಂತಕವಾದ ರೋಗದಿಂದ ಬಳಲುತ್ತಿದ್ದು ಯಾರೂ ಸಹ ಅಂತಹ ಮಕ್ಕಳನ್ನು ನೋಡಿಕೊಳ್ಳಲು ಇಲ್ಲವಾಗಿದ್ದಲ್ಲಿ, ಅಥವಾ ಆ ಮಗುವಿನ ಪೋಷಕರು ಅಥವಾ ತಂದೆ ತಾಯಿಯರು ಆ ಮಗುವನ್ನು ನೋಡಿಕೊಳ್ಳಲು ಅರ್ಹರಲ್ಲವೆಂದು ಮಂಡಳಿ ಅಥವಾ ಸಮಿತಿಯಿಂದ ನಿರ್ಧರಿತವಾಗಿದ್ದಲ್ಲಿ; ಅಥವಾ, |
| | (*v*) | who has a parent or guardian and such parent or guardian is <u>*found to be unfit or incapacitated*</u>, by the **Committee or the Board**, to care for and protect the safety and well-being of the child; or | | ಯಾವ ಮಕ್ಕಳಿಗೆ ಪೋಷಕರು ಅಥವಾ ಪಾಲಕರಿದ್ದೂ, ಅಂತಹ ಪೋಷಕರು/ಪಾಲಕರು ಮಕ್ಕಳನ್ನು ನೋಡಿಕೊಳ್ಳಲು ಪಾಲನೆ, ಪೋಷಣೆ ಮತ್ತು ಸುರಕ್ಷತೆಯನ್ನು ನಡೆಸಲು ಅನರ್ಹರೆಂದು ಸಮಿತಿ ಅಥವಾ ಮಂಡಳಿಯು ನಿರ್ಧರಿಸಿದ್ದಲ್ಲಿ; ಅಥವಾ |
| | (*vi*) | who does not have parents and no one is willing to take care of, or whose parents have abandoned or surrendered him; or | | ಯಾವ ಮಗುವಿಗೆ ಪೋಷಕರಿಲ್ಲವೋ ಅಥವಾ ಆ ಮಗುವಿನ ಪಾಲನೆಗೆ ಯಾರೂ ಮುಂದುಬರುವುದಿಲ್ಲವೋ ಅಥವಾ ಯಾವ ಮಗುವನ್ನು ಪೋಷಕರೆ ತ್ಯಜಿಸಿದ್ದಾರೋ ಅಥವಾ ಪರಿತ್ಯಜಿಸಿದ್ದಾರೋ; ಅಥವಾ |

| | | | | |
|---|---|---|---|---|
| | (*vii*) | who is **missing or run away child**, or whose parents cannot be found after making reasonable inquiry in such manner as may be prescribed; or | | ಸಾಕಷ್ಟು ವಿಚಾರಣೆ, ತಪಾಸಣೆ ಮಾಡಿದ ಮೇಲೂ ಯಾವ ಮಗುವಿನ –ತಪ್ಪಿಹೋಗಿರುವ /ಕಳೆದು ಹೋಗಿರುವ, ಓಡಿ ಬಂದಿರುವ /ಬಿಟ್ಟು ಹೋಗಿರುವ– ಪೋಷಕರ ಪತ್ತೆ ಆಗದಿದ್ದಲ್ಲಿ; ಅಥವಾ |
| | (*viii*) | who has been or is being or is likely to be *abused, tortured or exploited for the purpose of sexual abuse or illegal acts*; or | | ಯಾವುದೇ ರೀತಿಯ ಕಾನೂನು ಬಾಹಿರ ಅಥವಾ ಲೈಂಗಿಕವಾಗಿ ಮಗುವನ್ನು ಶೋಷಿಸುವ ಅಥವಾ ಅಂತಹ ಕಾನೂನು ವಿರೋಧೀ ಕೃತ್ಯಗಳಿಗೆ ಬಳಸುವ, ಹಿಂಸಿಸುವ ಮತ್ತು ದುರುಪಯೋಗಕ್ಕೆ ಗುರಿಯಾಗುವ ಸಾಧ್ಯತೆಯಿರುವ ಮಕ್ಕಳು, ಅಥವಾ |
| | (*ix*) | who is *found vulnerable* and is likely to be *inducted into drug abuse or trafficking*; or | | ಯಾವ ಮಗು ಮಾದಕ ದ್ರವ್ಯಗಳ ಬಳಕೆಗೆ ಅಥವಾ ಸಾಗಣೆ/ಮಾರಾಟಕ್ಕೆ ತೊಡಗಿಕೊಳ್ಳುವಂತೆ ಮಾಡುವ ಮೂಲಕ ದುರುಪಯೋಗಕ್ಕೆ ಗುರಿಯಾಗುವ ಸಾಧ್ಯತೆ ಇದೆಯೋ, ಅಥವಾ |
| | (*x*) | who is being or is *likely to be abused for* ***unconscionable gains***; or | | ಯಾವ ಮಗು/ಮಕ್ಕಳ ಎಳೆ ವಯಸ್ಸು, ಮನಸ್ಸು, ದೇಹಗಳನ್ನು ದುಡಿಸಿ, ದಣಿಸಿ, ಆರ್ಥಿಕ ಲಾಭಗಳಿಸುವ ಉದ್ದೇಶವನ್ನು ಹೊಂದಿದ್ದಾರೆಂದು ಪರಿಗಣಿತವಾಗಿದೆಯೋ, ಅಥವಾ |
| | (*xi*) | who is victim of or *affected by any armed conflict, civil unrest or natural calamity*; or | | ಯಾವ ಮಗು/ಮಕ್ಕಳು ಸಶಸ್ತ್ರ ಸಂಘರ್ಷಗಳು, ನಾಗರೀಕ ಕ್ಷೋಭೆಗಳು ಅಥವಾ ನೈಸರ್ಗಿಕ ವಿಪತ್ತುಗಳಿಗೆ ಗುರಿಯಾಗಿದೆಯೋ, ಅಥವಾ |
| | (*xii*) | who is at **imminent risk of marriage** before attaining the age of marriage and whose parents, family members, guardian and any other persons are likely to be responsible for solemnisation of such marriage; | | 18 ವರ್ಷ ಪೂರೈಸುವುದರೊಳಗೆ ಮದುವೆಗೆ ಗುರಿಯಾಗುವ ಆತಂಕವಿದ್ದು, ಆ ಮಗುವಿನ ಪೋಷಕರು, ಕುಟುಂಬದ ಸದಸ್ಯರು, ಪಾಲಕರು ಮತ್ತು ಯಾವುದೇ ಇತರ ವ್ಯಕ್ತಿಗಳಿಂದ ಅಂತಹ ಮದುವೆ ಆಗಿ ಬಿಡುವ ಸಾಧ್ಯತೆಯಿದೆಯೋ; |
| (*15*) | | "**child friendly"** means any behaviour, conduct, practice, process, attitude, environment or treatment that is humane, considerate and in the best interest of the child; | | **'ಮಕ್ಕಳ ಸ್ನೇಹಿ'** ಎಂದರೆ, ಮಕ್ಕಳ ಹಿತದೃಷ್ಟಿಯಿರುವ ಮಾನವೀಯತೆಯೊಳಗೊಂಡಿರುವ ಸ್ವಭಾವ, ನಡವಳಿಕೆ, ಕ್ರಮಗಳು, ಪ್ರಕ್ರಿಯೆಗಳು ಅಥವಾ ಪರಿಸರ. |
| (*16*) | | "**child legally free for adoption"** means a child declared as such by the Committee after making due inquiry under section 38; | | **'ಕಾನೂನಿನಂತೆ ದತ್ತು ಹೋಗಲು ಅರ್ಹ'** ಎಂದರೆ, ಸೆಕ್ಷನ್ 38ರಂತೆ ಸೂಕ್ತವಾದ ಪರಿಶೀಲನೆಗಳನ್ನು ನಡೆಸಿ, ಮಕ್ಕಳ ಕಲ್ಯಾಣ ಸಮಿತಿಯು ಮಗು ದತ್ತು ಹೋಗಲು ಅರ್ಹ ಎಂದು ಘೋಷಿಸಿರುವುದು |
| (*17*) | | **"Child Welfare Officer"(CWO)** means an officer attached to a Children's Home, for carrying out the directions given by the Committee or, as the case may be, the Board with such responsibility as may be prescribed; | | **'ಮಕ್ಕಳ ಕಲ್ಯಾಣಾಧಿಕಾರಿ (CWO)'** ಎಂದರೆ, ಮಕ್ಕಳ ಮಂದಿರಗಳಲ್ಲಿ ನಿಯೋಜಿತವಾಗಿರುವ ನಿರ್ದಿಷ್ಟ ಅಧಿಕಾರಿಯಾಗಿದ್ದು, ಅವರು ಸಮಿತಿ ಅಥವಾ ಮಂಡಳಿಯು ನೀಡುವ ನಿರ್ದೇಶನಗಳನ್ನು ಜಾರಿ ಮಾಡುವ ಜವಾಬ್ದಾರಿಗಳಿರುವವರು |
| (*18*) | | **"Child Welfare Police Officer" (CWPO)** means an officer designated as such under sub-section (*1*) of section 107; | | **'ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿ (CWPO)'** ಎಂದರೆ, ಸೆ. 107ರ ಉಪ ಸೆ. (1)ರಂತೆ ನಿಯೋಜಿತರಾಗಿರುವ ಅಧಿಕಾರಿಗಳು |
| (*19*) | | **"Children's Home"** means a Children's Home, established or maintained, in every district or group of districts, by the State Government, either by itself, or through a voluntary or non-governmental organisation, and is *registered* as such for the purposes specified in section 50; | | **'ಮಕ್ಕಳ ಮಂದಿರ'** ಎಂದರೆ, ಪ್ರತಿ ಜಿಲ್ಲೆಯಲ್ಲಿ ಅಥವಾ ಜಿಲ್ಲೆಗಳ ಗುಂಪುಗಳಿಗೆ ನಿರ್ದಿಷ್ಟಪಡಿಸಿ ರಾಜ್ಯ ಸರ್ಕಾರದಿಂದ ತಾನೇ ಅಥವಾ ಸ್ವಯಂಸೇವಾ ಅಥವಾ ಸರ್ಕಾರೇತರ ಸಂಘಟನೆಗಳಿಂದ ಸ್ಥಾಪಿಸಿ ನಡೆಸಲ್ಪಡುವ ಹಾಗೂ ಸೆ. 50ರಲ್ಲಿ ಸೂಚಿಸಿರುವಂತೆ ನೋಂದಾಯಿತವಾದ ಮಂದಿರಗಳು/ನಿಲಯಗಳು |

| | | | | |
|---|---|---|---|---|
| (*20*) | | **"Children's Court"** means a court established under the *Commissions for Protection of Child Rights Act (CPCR), 2005* or a Special Court under the *Protection of Children from Sexual Offences Act (POCSO), 2012*, wherever existing and where such courts have not been designated, the Court of Sessions having jurisdiction to try offences under the Act; | | **'ಮಕ್ಕಳ ನ್ಯಾಯಾಲಯ'** ಎಂದರೆ, ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಆಯೋಗಗಳು ಕಾಯಿದೆ 2005ರಡಿಯಲ್ಲಿ ಸ್ಥಾಪಿತವಾದ ನ್ಯಾಯಾಲಯಗಳು ಅಥವಾ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯಿದೆ 2012 ಅಡಿಯಲ್ಲಿ ಸ್ಥಾಪಿತವಾದ ವಿಶೇಷ ನ್ಯಾಯಾಲಯಗಳಾಗಿದ್ದು, ಇವು ಎಲ್ಲೆಲ್ಲಿ ಇವೆಯೋ ಅವು ಮತ್ತು ಎಲ್ಲಿ ಈ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿಲ್ಲವೋ ಅಂತಹ ಕಡೆಗಳಲ್ಲಿ ಈ ಕಾಯಿದೆಯಡಿ ನಿರ್ದಿಷ್ಟಪಡಿಸಲಾಗಿರುವ ಅಪರಾಧಗಳನ್ನು ವಿಚಾರಣೆ ಮಾಡುವ ವ್ಯಾಪ್ತಿ ಹೊಂದಿರುವ ಸತ್ರ ನ್ಯಾಯಾಲಯಗಳು |
| (*21*) | | **"child care institution" (CCI)** means Children Home, open shelter, observation home, special home, place of safety, Specialised Adoption Agency and a fit facility recognised under this Act for providing care and protection to children, who are in need of such services; | | **'ಮಕ್ಕಳ ಪೋಷಣೆ ಸಂಸ್ಥೆಗಳು' (CCI)** ಎಂದರೆ, ಮಕ್ಕಳ ಮಂದಿರ, ತೆರೆದ / ಮುಕ್ತ ತಾಣಗಳು, ಪರಿವೀಕ್ಷಣಾಲಯಗಳು, ವಿಶೇಷ ನಿಲಯಗಳು, ರಕ್ಷಣಾ ಸ್ಥಳ, ವಿಶೇಷ ದತ್ತು ಸಂಸ್ಥೆ ಮತ್ತು ಈ ಕಾಯಿದೆಯಡಿ ಮಕ್ಕಳ ಪೋಷಣೆ ಮತ್ತು ರಕ್ಷಣೆ ಆವಶ್ಯಕತೆಯಿರುವ ಮಕ್ಕಳಿಗೆ ಅಂತಹ ಸೇವೆ ಒದಗಿಸಲು ಗುರುತಿಸಲ್ಪಡುವ ಸೂಕ್ತ ಸೌಲಭ್ಯಗಳಿರುವ ವ್ಯವಸ್ಥೆಗಳು |
| (*22*) | | **"Committee"** means **Child Welfare Committee (CWC)** constituted under sec.27; | | **'ಸಮಿತಿ'** ಎಂದರೆ, ಸೆ. 27ರಡಿಯಲ್ಲಿ ಸ್ಥಾಪಿಸಲ್ಪಡುವ ಮಕ್ಕಳ ಕಲ್ಯಾಣ ಸಮಿತಿ **(CWC).** |
| *(23)* | | **"court"** means a civil court, which has jurisdiction in matters of adoption and guardianship and may include the District Court, Family Court and City Civil Courts; | | **'ನ್ಯಾಯಾಲಯ'** ಎಂದರೆ, ದತ್ತು ಮತ್ತು ಪೋಷಕತ್ವ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ವ್ಯಾಪ್ತಿಯಿರುವ ಸಿವಿಲ್ ನ್ಯಾಯಾಲಯವಾಗಿದ್ದು, ಜಿಲ್ಲಾ ನ್ಯಾಯಾಲಯಗಳು, ಕೌಟುಂಬಿಕ ಮತ್ತು ನಗರ ಸಿವಿಲ್ ನ್ಯಾಯಾಲಯಗಳೂ ಸೇರಬಹುದು. |
| (*24*) | | **"corporal punishment"** means the subjecting of a child by any person to physical punishment that involves the *deliberate infliction of pain as retribution for an offence, or for the purpose of disciplining or reforming the child*; | | **'ದೈಹಿಕ ದಂಡನೆ'** ಎಂದರೆ, ಮಗು ತಪ್ಪು ಮಾಡಿತೆಂದು ಅಥವಾ ಮಗುವನ್ನು ಶಿಸ್ತಿಗೆ ಒಳಪಡಿಸಲು ಅಥವಾ ಮಗುವನ್ನು ಸುಧಾರಣೆ ಮಾಡಲು ಯಾವುದೇ ವ್ಯಕ್ತಿಯು ಉದ್ದೇಶಪೂರ್ವಕವಾಗಿ ನೋವು ತರುವಂತಹ ದೈಹಿಕ ದಂಡನೆಗೆ ಮಕ್ಕಳನ್ನು ಒಳಪಡಿಸುವುದು |
| (*25*) | | **"ChildLine services"** means a twenty-four hours emergency outreach service for children in crisis which links them to emergency or long-term care and rehabilitation service ***(ChildLine 1098)***; | | **'ಚೈಲ್ಡ್‌ಲೈನ್ ಸೇವೆಗಳು'** ಎಂದರೆ, ತುರ್ತು ಅಥವ ತೊಂದರೆಯಲ್ಲಿರುವ ಮಕ್ಕಳನ್ನು ತುರ್ತು ಸೇವೆ ಅಥವಾ ದೀರ್ಘಾವದಿ ಪೋಷಣೆ, ರಕ್ಷಣೆ ಮತ್ತು ಪುನರ್ವಸತಿ ಸೇವೆಗಳಿಗೆ ***ಸಂಪರ್ಕಿಸುವ*** ದಿನದ ಇಪ್ಪತ್ನಾಲ್ಕು ಗಂಟೆಗಳು ಜಾಗೃತವಾಗಿರುವ ತುರ್ತು ಸೇವೆ **(ಚೈಲ್ಡ್‌ಲೈನ್ 1098)** |
| *26*) | | **"District Child Protection Unit" (DCPU)** means a Child Protection Unit for a District, established by the State Government under section 106, which is the focal point to ensure the implementation of this Act and other child protection measures in the district; | | **'ಜಿಲ್ಲಾ ಮಕ್ಕಳ ರಕ್ಷಣಾ ಘಟಕ' (DCPU)** ಎಂದರೆ, ಈ ಕಾಯಿದೆಯ ಜಾರಿಗಾಗಿ ಮತ್ತು ಜಿಲ್ಲೆಯಲ್ಲಿ ಮಕ್ಕಳ ರಕ್ಷಣೆಗಾಗಿ ಕ್ರಮಗಳನ್ನು ಕೈಗೊಳ್ಳಲು ನಿರ್ದಿಷ್ಟಪಡಿಸಲಾಗಿರುವ ಸೆ. 106ರಡಿಯಲ್ಲಿ ರಾಜ್ಯ ಸರ್ಕಾರವು ಪ್ರತಿ ಜಿಲ್ಲೆಗೆ ನಿರ್ದಿಷ್ಟಪಡಿಸಿ ಸ್ಥಾಪಿಸಿರುವ ಮಕ್ಕಳ ರಕ್ಷಣಾ ಘಟಕಗಳು. |
| (*27*) | | **"fit facility"** means a facility being run by a governmental organisation or a registered voluntary or non-governmental organisation, prepared to temporarily own the responsibility of a particular child for a specific purpose, and such facility is recognised as fit for the said purpose, by the Committee, as the case may be, or the Board, under sub-sec. (*1*) of sec.51; | | **'ಫಿಟ್/ಅರ್ಹ ಸೌಲಭ್ಯ'** ಎಂದರೆ, ನಿರ್ದಿಷ್ಟ ಉದ್ದೇಶಕ್ಕಾಗಿ ನಿರ್ದಿಷ್ಟ ಮಕ್ಕಳನ್ನು ತಾತ್ಕಾಲಿಕವಾಗಿ ಹೊಣೆ/ಜವಾಬ್ದಾರಿ ತೆಗೆದುಕೊಳ್ಳಲು ಸೌಲಭ್ಯಗಳೊಂದಿಗೆ ಸಿದ್ಧವಾಗಿರುವ ಮತ್ತು ಈ ವ್ಯವಸ್ಥೆಯನ್ನು ಇಂತಹ ಉದ್ದೇಶಗಳಿಗಾಗಿ ಸೆ.51ರ ಉಪ ಸೆ.(1)ರಡಿಯಲ್ಲಿ ಸಮಿತಿ ಅಥವಾ ಮಂಡಳಿಯಿಂದ ಅರ್ಹವೆಂದು ಗುರುತಿಸಲ್ಪಟ್ಟಿರುವ ಸರ್ಕಾರ ಅಥವಾ ನೋಂದಾಯಿತವಾದ ಸ್ವಯಂಸೇವಾ ಅಥವಾ ಸರ್ಕಾರೇತರ ಸಂಸ್ಥೆ. |

| | | | | |
|---|---|---|---|---|
| (*28*) | | **"fit person"** means any person, prepared to own the responsibility of a child, for a specific purpose, and such person is identified after inquiry made in this behalf and recognised as fit for the said purpose, by the Committee or, as the case may be, the Board, to receive and take care of the child; | | **'ಫಿಟ್/ಅರ್ಹ ವ್ಯಕ್ತಿ'** ಎಂದರೆ, ನಿರ್ದಿಷ್ಟ ಉದ್ದೇಶಕ್ಕಾಗಿ ನಿರ್ದಿಷ್ಟ ಮಕ್ಕಳನ್ನು ಹೊಣೆ/ಜವಾಬ್ದಾರಿ ತೆಗೆದುಕೊಳ್ಳಲು ಮತ್ತು ಅಂತಹ ವ್ಯಕ್ತಿಗಳನ್ನು ಕುರಿತು ಸೂಕ್ತ ವಿಚಾರಣೆಯನ್ನು ನಡೆಸಿ ಈ ಉದ್ದೇಶಗಳಿಗಾಗಿ ಸಮಿತಿ ಅಥವಾ ಮಂಡಳಿಯಿಂದ ಗುರುತಿಸಲ್ಪಟ್ಟು ಮಕ್ಕಳನ್ನು ಸ್ವೀಕರಿಸಿ ಪೋಷಿಸಲು ಮುಂದಾಗಿರುವ ವ್ಯಕ್ತಿ |
| (*29*) | | **"foster care"** means placement of a child, by the Committee for the purpose of alternate care in the domestic environment of a family, other than the child's biological family, that has been selected, qualified, approved and supervised for providing such care; | | **'ಫಾಸ್ಟರ್ ಕೇರ್/ಪೋಷಕತ್ವ'** ಎಂದರೆ, ಕೌಟುಂಬಿಕ ವಾತಾವರಣದಲ್ಲಿ ಪರ್ಯಾಯ ಪೋಷಣೆಗಾಗಿ ಮಕ್ಕಳನ್ನು ಇರಿಸಲು, ಮಗುವಿನ ಜೈವಿಕ ಕುಟುಂಬವಲ್ಲದ, ಬೇರೆ ಕುಟುಂಬವಾಗಿದ್ದು, ಈ ಉದ್ದೇಶಕ್ಕಾಗಿ ಆಯ್ಕೆ ಮಾಡಿರುವ, ಅರ್ಹತೆಗಳಿರುವ, ಒಪ್ಪಿರುವ ಮತ್ತು ಈ ಪೋಷಣೆಯನ್ನು ಮಗುವಿಗೆ ನೀಡುತ್ತಿರುವುದಕ್ಕೆ ಉಸ್ತುವಾರಿಯಲ್ಲಿರುವ ಕುಟುಂಬ |
| (*30*) | | **"foster family"** means a family found suitable by the District Child Protection Unit to keep children in foster care under section 44; | | **'ಫಾಸ್ಟರ್ / ಪೋಷಕ ಕುಟುಂಬ'** ಎಂದರೆ, ಸೆ. 44ರಂತೆ ಮಗುವಿನ ಪೋಷಣೆ ಮಾಡಲು ಸೂಕ್ತವೆಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಗುರುತಿಸಿದ ಕುಟುಂಬ. |
| (*31*) | | **"guardian"** in relation to a child, means his natural guardian or any other person having, in the opinion of the Committee or, as the case may be, the Board, the actual charge of the child, and recognised by the Committee or, as the case may be, the Board as a guardian in the course of proceedings; | | **'ಪೋಷಕರು / ಸಂರಕ್ಷಕರು'** ಎಂದರೆ,– ಮಗುವಿಗೆ ಸಂಬಂಧಿಸಿದಂತೆ ಸ್ವಾಭಾವಿಕ ಪೋಷಕರು ಅಥವಾ ಸಮಿತಿ ಅಥವಾ ಮಂಡಳಿಯ ಅನಿಸಿಕೆಯಂತೆ ಪ್ರಕರಣದ ಪ್ರಕ್ರಿಯೆ ನಡೆದಿರುವಾಗ ಮಕ್ಕಳನ್ನು ತಮ್ಮ ಸುಪರ್ದಿಯಲ್ಲಿಟ್ಟುಕೊಂಡಿರಲು ಸಮಿತಿ ಅಥವಾ ಮಂಡಳಿಯಿಂದ ಗುರುತಿಸಲ್ಪಟ್ಟವರು. |
| (*32*) | | **"group foster care"** means a family like care facility for children in need of care and protection who are without parental care, aiming on providing personalized care and fostering a sense of belonging and identity, through family like and community based solutions; | | **"ಗುಂಪು ಫಾಸ್ಟರ್ ಕೇರ್/ಪೋಷಕತ್ವ'** ಎಂದರೆ ಪೋಷಕರ ಪೋಷಣೆಯಿಲ್ಲದ ಮಕ್ಕಳಿಗೆ ವೈಯಕ್ತಿಕ ಪೋಷಣೆ ಮತ್ತು ಫಾಸ್ಟರ್ ವ್ಯವಸ್ಥೆಯಲ್ಲಿ ಕೌಟುಂಬಿಕ ಮತ್ತು ಸಮುದಾಯ ಆಧಾರಿತ ಪರಿಹಾರದ ಮೂಲಕ ಸ್ವಂತಿಕೆ ಮತ್ತು ಗುರುತುಗಳನ್ನು ಒದಗಿಸುವ ಉದ್ದೇಶದಿಂದ ಕೌಟುಂಬಿಕ ರೀತಿಯ ಪೋಷಣೆಯ ವ್ಯವಸ್ಥೆ. |
| (*33*) | | **"heinous offences"** includes the offences for which the minimum punishment under the *Indian Penal Code (IPC)* or any other law for the time being in force *is imprisonment for seven years or more;* | | **"ಹೀನ ಆಪರಾಧಿಕ ಕೃತ್ಯಗಳು"** ಭಾರತೀಯ ದಂಡ ಸಂಹಿತೆ (IPC) 1860ಯಡಿಯಲ್ಲಿ ಅಥವಾ ಕಾಲಕ್ಕೆ ತಕ್ಕ ಹಾಗೆ ಇತರೆ ಯಾವುದೇ ಕಾನೂನಿಯಡಿಯಲ್ಲಿ ಕನಿಷ್ಟ ಏಳು ವರ್ಷ ಅಥವಾ ಅದಕ್ಕಿಂತ ಹೆಚ್ಚು ಶಿಕ್ಷೆಯನ್ನು ನೀಡಬಹುದಾದ ಆಪರಾಧಿಕ ಕೃತ್ಯಗಳನ್ನು ಒಳಗೊಂಡಿರುತ್ತದೆ. |
| (*34*) | | **"inter-country adoption"** means adoption of a child from India by nonresident Indian or by a person of Indian origin or by a foreigner; | | **"ಅಂತಾರಾಷ್ಟ್ರೀಯ ದತ್ತು"** ಎಂದು ಭಾರತದ ಮಗುವನ್ನು ಅನಿವಾಸಿ ಭಾರತೀಯರಿಗೆ ಅಥವಾ ಭಾರತೀಯ ಮೂಲದ ಅಥವಾ ವಿದೇಶಿ ಮೂಲಕ ವ್ಯಕ್ತಿಗೆ ದತ್ತು ನೀಡುವುದು. |
| (*35*) | | **"juvenile"** means a *child below the age of eighteen years;* | | **"ಜುವೆನೈಲ್ / ಮಗು'** ಎಂದರೆ 18 ವರ್ಷದೊಳಗಿನ ಎಲ್ಲಾ ವ್ಯಕ್ತಿಗಳು |
| (*36*) | | **"narcotic drug"** and **"psychotropic substance"** shall have the meanings, respectively, assigned to them in the *Narcotic Drugs and Psychotropic Substances Act, 1985;* | | **'ಮಾದಕ ದ್ರವ್ಯಗಳು ಮತ್ತು ಭ್ರಾಮಕಾರಕ ವಸ್ತುಗಳು'** ಎಂದರೆ, ಮಾದಕ ದ್ರವ್ಯಗಳು ಮತ್ತು ಭ್ರಾಮಕಾರಕ ವಸ್ತುಗಳು ಕಾಯಿದೆ 1985 (1985ರ 61) ರಲ್ಲಿ ವಿವರಿಸಿರುವಂತಹ ಅರ್ಥವನ್ನು ಹೊಂದಿರುತ್ತದೆ |
| (*37*) | | **"no objection certificate" (NOC)** for inter-country adoption means a certificate issued by the Central Adoption Resource Authority (CARA) for the said purpose; | | **'ನಿರಾಪೇಕ್ಷಣ ಪ್ರಮಾಣ ಪತ್ರ'** ಎಂದರೆ ಅಂತಾರಾಷ್ಟ್ರೀಯ ದತ್ತುವಿಗಾಗಿ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ ನೀಡಿರುವ ಪ್ರಮಾಣ ಪತ್ರ. |
| (*38*) | | **"non-resident Indian" (NRI)** means a person who holds an Indian passport and is presently residing abroad for more than one year; | | **'ಅನಿವಾಸಿ ಭಾರತೀಯ'** ಎಂದರೆ ಯಾವುದೇ ವ್ಯಕ್ತಿ ಭಾರತದ ರಹದಾರಿ ಪರವಾನಗಿಯನ್ನು ಹೊಂದಿದ್ದು, ಪ್ರಸ್ತುತ ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲ ವಿದೇಶದಲ್ಲಿ ನೆಲೆಸಿರುವ ವ್ಯಕ್ತಿ. |

| | | | |
|---|---|---|---|
| (*39*) | | **"notification"** means the notification published in the Official Gazette of India, or as the case may be, in the Gazette of a State, and the expression "notify" shall be construed accordingly; | **'ಅಧಿಸೂಚನೆ'** ಎಂದರೆ ಭಾರತದ ಅಧಿಕೃತ ರಾಜಪತ್ರದಲ್ಲಿ ಅಥವಾ ಪ್ರಕರಣಕ್ಕೆ ತಕ್ಕ ಹಾಗೆ ರಾಜ್ಯದ ರಾಜಪತ್ರದಲ್ಲಿ ಪ್ರಕಟವಾದ ಅಧಿಸೂಚನೆಗಳು ನಿರ್ಬಂಧಿಸುವ ಅರ್ಥದ 'ಸೂಚನೆ'. |
| (*40*) | | **"observation home"** means an observation home established and maintained in every district or group of districts by a State Government, either by itself, or through a voluntary or non-governmental organisation, and is registered as such, for the purposes specified in sub-section (*1*) of section 47; | **'ಪರಿವೀಕ್ಷಣಾ ಗೃಹ'** ಎಂದರೆ ರಾಜ್ಯ ಸರ್ಕಾರವು ಸ್ವತಃ ಅಥವಾ ಇದೇ ಉದ್ದೇಶಕ್ಕಾಗಿ ಸೆಕ್ಷನ್ 47ರ ಉಪ ಸೆಕ್ಷನ್ (1)ರ ಅಡಿಯಲ್ಲಿ ನೋಂದಾಯಿಸಿಕೊಂಡ ಸ್ವಯಂಸೇವಾ ಅಥವಾ ಸರ್ಕಾರೇತರ ಸಂಸ್ಥೆಗಳು ಪ್ರತಿಯೊಂದು ಜಿಲ್ಲೆಯಲ್ಲೂ ಅಥವಾ ಜಿಲ್ಲಾ ಗುಂಪುಗಳಲ್ಲಿ ಸ್ಥಾಪಿಸಿರುವ ಮತ್ತು ನಿರ್ವಹಿಸುತ್ತಿರುವ ಗೃಹಗಳು. |
| (*41*) | | **"open shelter"** means a facility for children, established and maintained by the State Government, either by itself, or through a voluntary or non-governmental organisation under sub-section (*1*) of section 43, and registered as such, for the purposes specified in that section; | **'ಮುಕ್ತ ತಂಗುದಾಣ'** ಎಂದರೆ ರಾಜ್ಯ ಸರ್ಕಾರವು ಸ್ವತಃ ಅಥವಾ ಇದೇ ಉದ್ದೇಶಕ್ಕಾಗಿ ಸೆಕ್ಷನ್ 43ರ ಉಪ ಸೆಕ್ಷನ್ (1)ರ ಅಡಿಯಲ್ಲಿ ನೋಂದಾಯಿಸಿಕೊಂಡ ಸ್ವಯಂಸೇವಾ ಅಥವಾ ಸರ್ಕಾರೇತರ ಸಂಸ್ಥೆಗಳು ಆ ಸೆಕ್ಷನ್ ಅಡಿಯಲ್ಲಿ ಸೂಚಿಸಿರುವ ಉದ್ದೇಶಕ್ಕಾಗಿ ಮಕ್ಕಳಿಗೆ ಸೌಲಭ್ಯಗಳನ್ನು ಒದಗಿಸಲು ಸ್ಥಾಪಿಸಿರುವ ಮತ್ತು ನಿರ್ವಹಿಸುತ್ತಿರುವ ವ್ಯವಸ್ಥೆ. |
| (*42*) | | **"orphan"** means a child— | **'ಅನಾಥ'** ಎಂದರೆ, |
| | (*i*) | who is without biological or adoptive parents or legal guardian; or | ಯಾರಿಗೆ ಜೈವಿಕ ಅಥವಾ ದತ್ತು ಪಡೆದ ಪೋಷಕರು ಅಥವಾ ಶಾಸನಾತ್ಮಕ ಪಾಲಕರು ಇರುವುದಿಲ್ಲವೋ ಅಥವಾ |
| | (*ii*) | whose legal guardian is not willing to take, or capable of taking care of the child; | ಯಾವ ಶಾಸನಾತ್ಮಕ ಪೋಷಕರಿಗೆ ಮಗುವನ್ನು ಪಡೆದುಕೊಳ್ಳುವ ಇಚ್ಛೆ ಇರುವುದಿಲ್ಲವೋ ಅಥವಾ ಮಗುವನ್ನು ನೋಡಿಕೊಳ್ಳುವ ಸಾಮರ್ಥ್ಯ ಇಲ್ಲದಿದ್ದಲ್ಲಿ |
| (*43*) | | **"overseas citizen of India"** means a person registered as such under the Citizenship Act, 1955; | **'ಸಾಗರೋತ್ತರ ಭಾರತೀಯ'** ಎಂದರೆ ನಾಗರೀಕ ಕಾಯ್ದೆ 1955ರ ಅಡಿಯಲ್ಲಿ ನೋಂದಾಯಿಸಿಕೊಂಡ ವ್ಯಕ್ತಿ. |
| (*44*) | | **"person of Indian origin"** means a person, any of whose lineal ancestors is or was an Indian national, and who is presently holding a Person of Indian Origin Card issued by the Central Government; | **'ಭಾರತೀಯ ಮೂಲದ ವ್ಯಕ್ತಿ'** ಎಂದರೆ ಯಾವುದೇ ವ್ಯಕ್ತಿಯ ಕ್ರಮಾನುಗತ ಪೂರ್ವಜರು ಭಾರತೀಯರಾಗಿದ್ದಲ್ಲಿ ಅಥವಾ ಭಾರತ ವಾಸಿಗಳಾಗಿದ್ದಲ್ಲಿ ಮತ್ತು ಕೇಂದ್ರ ಸರ್ಕಾರವು ಒದಗಿಸಿದ ಭಾರತೀಯ ಮೂಲದ ವ್ಯಕ್ತಿಯ ಚೀಟಿಯನ್ನು ಹೊಂದಿದವರು. |
| (*45*) | | **"petty offences"** includes the offences for which the maximum punishment under the Indian Penal Code (IPC) or any other law for the time being in force *is imprisonment up to three years;* | **'ಸಣ್ಣ ಅಪರಾಧಿಕ ಕೃತ್ಯಗಳು'** ಎಂದರೆ ಭಾರತೀಯ ದಂಡ ಸಂಹಿತೆ (IPC) 1860ಯ ಅಥವಾ ಕಾಲಕ್ಕೆ ತಕ್ಕ ಹಾಗೆ ಪ್ರಚಲಿತದಲ್ಲಿರುವ ಇತರೆ ಯಾವುದೇ ಕಾನೂನಿಯಡಿಯಲ್ಲಿ ಗರಿಷ್ಟ ಮೂರು ವರ್ಷ ಕಾರಾಗೃಹ ಶಿಕ್ಷೆಯನ್ನು ನೀಡಬಹುದಾದ ಅಪರಾಧಿಕ ಕೃತ್ಯಗಳನ್ನು ಒಳಗೊಂಡಿರುತ್ತದೆ. |
| (*46*) | | **"place of safety"** means any place or institution, *not being a police lockup or jail,* established separately or attached to an observation home or a special home, as the case may be, the person in-charge of which is willing to receive and take care of the children alleged or found to be in conflict with law, by an order of the Board or the Children's Court, both during inquiry and ongoing rehabilitation after having been found guilty for a period and purpose as specified in the order; | **'ಸುರಕ್ಷಿತ ಸ್ಥಳ' ಎಂದರೆ,**ಪೊಲೀಸ್ ಠಾಣೆಯ ಬಂಧೀಖಾನೆ ಅಥವಾ ಜೈಲು ಅಲ್ಲದ, ಈ ನಿರ್ದಿಷ್ಟ ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ಸ್ಥಾಪಿಸಿದ ಅಥವಾ ಪರಿವೀಕ್ಷಣಾಲಯಕ್ಕೆ ಸೇರಿಸಿದ ಅಥವಾ ವಿಶೇಷ ಮಂದಿರ ಮತ್ತಿತರ ಸಂಸ್ಥೆಗಳು, ಹಾಗೂ ಅವುಗಳ ಮೇಲುಸ್ತುವಾರಿ ವಹಿಸಿಕೊಂಡಿರುವ ವ್ಯಕ್ತಿ ಕಾನೂನಿನೊಡನೆ ಸಂಘರ್ಷದಲ್ಲಿರುವರೆಂದು ಆಪಾದಿಸಲ್ಪಟ್ಟ ಅಥವಾ ಸಂಘರ್ಷದಲ್ಲಿರುವ ಮಕ್ಕಳನ್ನು ಮಕ್ಕಳ ನ್ಯಾಯ ಮಂಡಳಿ ಅಥವಾ ಮಕ್ಕಳ ನ್ಯಾಯಾಲಯದ ನಿರ್ದೇಶನದಂತೆ ತನಿಖೆ ಮತ್ತು ಅಪರಾಧಿಕ ಕೃತ್ಯ ಮಾಡಿರುವರೆಂದು ತೀರ್ಮಾನಿಸಲ್ಪಟ್ಟು, ಆದೇಶದಲ್ಲಿ ನಿರ್ದೇಶಿಸಿ ನಿರ್ದಿಷ್ಟ ಅವಧಿಗೆ ಮುಂದುವರೆದ ಪುನರ್ವಸತಿಗಾಗಿ ಪಡೆದು ನೋಡಿಕೊಳ್ಳಲು ಒಪ್ಪಿಕೊಂಡು ಇಟ್ಟುಕೊಳ್ಳುವ ಸ್ಥಳ. |

| | | | |
|---|---|---|---|
| (47) | | **"prescribed"** means prescribed by rules made under this Act; | **'ನಿಗದಿತ'** ಎಂದರೆ, ಈ ಕಾಯಿದೆಯಡಿ ಮಾಡಿರುವ ನಿಯಮಗಳಂತೆ ಗುರುತಿಸಲಾಗಿರುವುದು |
| (48) | | **"probation officer" (PO)** means an officer appointed by the State Government as a probation officer under the *Probation of Offenders Act, 1958* or *the Legal-cum-Probation Officer appointed by the State Government under District Child Protection Unit*; | **'ಪರಿವೀಕ್ಷಣಾಧಿಕಾರಿ' (PO)** ಎಂದರೆ, ತಪ್ಪಿತಸ್ಥರ ಪರಿವೀಕ್ಷಣೆ ಕಾಯಿದೆ 1958 (1958 ರ 20ನೇ ಕಲಮು)ರಂತೆ ಸರ್ಕಾರದಿಂದ ನೇಮಿಸಲ್ಪಟ್ಟ ಅಧಿಕಾರಿಗಳು ಅಥವಾ ರಾಜ್ಯ ಸರ್ಕಾರದಡಿಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಾನೂನು ಮತ್ತು ಪರಿವೀಕ್ಷಣಾಧಿಕಾರಿ |
| (49) | | **"prospective adoptive parents"** means a person or persons eligible to adopt a child as per the provisions of section 57; | **'ಸಂಭವನೀಯ/ಭಾವೀ ದತ್ತು ಪೋಷಕರು'** ಎಂದರೆ ಸೆಕ್ಷನ್ 57ರಲ್ಲಿ ಹೇಳಿರುವಂತೆ ಮಗುವನ್ನು ದತ್ತು ಪಡೆಯಲು ಅರ್ಹರಾದ ವ್ಯಕ್ತಿ ಅಥವಾ ವ್ಯಕ್ತಿಗಳು. |
| (50) | | **"public place"** shall have the same meaning assigned to it in the *Immoral Traffic (Prevention) Act (ITPA)*, 1956; | **'ಸಾರ್ವಜನಿಕ ಸ್ಥಳ'** ಎಂದರೆ, ಅನೈತಿಕ ಸಾಗಣೆ/ಮಾರಾಟ (ತಡೆ) ಕಾಯಿದೆ 1956 (1958ರ 104)ರಲ್ಲಿ *(ITPA)*, ನಿಗಧಿಪಡಿಸಲಾಗಿರುವ ಅರ್ಥ |
| (51) | | **"registered",** with reference to **child care institutions (CCI)** or agencies or facilities managed by the State Government, or a voluntary or non-governmental organisation, means *observation homes, special homes, place of safety, children's homes, open shelters or Specialised Adoption Agency or fit facility or any other institution that may come up in response to a particular need or agencies or facilities authorised and registered under section 41, for providing residential care to children, on a short-term or long-term basis;* | **'ನೋಂದಾಯಿತವಾದ'** ಎಂದರೆ, ಮಕ್ಕಳ ಪೋಷಣಾ ಸಂಸ್ಥೆಗಳಿಗೆ ಅನ್ವಯಿಸುವಂತೆ (CCI) ರಾಜ್ಯ ಸರ್ಕಾರಗಳು ಅಥವಾ ಸ್ವಯಂಸೇವಾ ಸಂಘಟನೆಗಳು ನಡೆಸುವ ಪರಿವೀಕ್ಷಣಾಲಯಗಳು, ವಿಶೇಷ ನಿಲಯಗಳು, ಸುರಕ್ಷಿತ ಸ್ಥಳಗಳು, ಬಾಲಕರ ಬಾಲಮಂದಿರಗಳು, ಮುಕ್ತ ತಂಗುದಾಣಗಳು ಅಥವಾ ವಿಶೇಷ ದತ್ತು ಸಂಸ್ಥೆಗಳು ಅಥವಾ ಅರ್ಹ ಸೌಲಭ್ಯಗಳು ಅಥವಾ ಇನ್ನಾವುದೇ ಮಕ್ಕಳ ಆವಶ್ಯಕತೆಗಳಿಗೆ ಪ್ರತಿಸ್ಪಂದಿಸುವ ಸಂಸ್ಥೆಗಳಾಗಿದ್ದು ಅಥವಾ ಕಾಯಿದೆಯ ಸೆ.41ರಂತೆ ದಾಖಲಾಗಿ ಅನುಮೋದನೆ ಪಡೆದು ಮಕ್ಕಳಿಗೆ ತಾತ್ಕಾಲಿಕವಾಗಿ ಅಥವಾ ದೀರ್ಘಾವಧಿಗಾಗಿ ವಸತಿ ಸಹಿತ ಸೌಲಭ್ಯ. |
| (52) | | **"relative",** in relation to a child for the purpose of adoption under this Act, means a paternal uncle or aunt, or a maternal uncle or aunt, or paternal grandparent or maternal grandparent; | **'ಬಂಧು'** – ಈ ಕಾಯ್ದೆಯಡಿಯಲ್ಲಿ ಮಗುವನ್ನು ದತ್ತು ಪಡೆಯುವ ಉದ್ದೇಶಕ್ಕಾಗಿ ಮಗುವಿನ ಸಂಬಂಧಿಕರು ಎಂದರೆ ಚಿಕ್ಕಪ್ಪ/ಮಾವ ಅಥವಾ ಚಿಕ್ಕಮ್ಮ/ಅತ್ತೆ ಅಥವಾ ತಂದೆಯ ಅಪ್ಪ–ಅಮ್ಮ ಅಥವಾ ತಾಯಿಯ ಅಪ್ಪ–ಅಮ್ಮ. |
| 53) | | **"State Agency"** means the **State Adoption Resource Agency (SARA)** set up by the State Government for dealing with adoption and related matters under section 67; | **'ರಾಜ್ಯ ಸಂಸ್ಥೆ'** ಎಂದರೆ ಸೆಕ್ಷನ್ 67ರ ಅಡಿಯಲ್ಲಿ ರಾಜ್ಯಸರ್ಕಾರವು ದತ್ತು ಮತ್ತು ಅದಕ್ಕೆ ಸಂಬಂಧಪಟ್ಟ ವಿಚಾರಗಳನ್ನು ನಿರ್ವಹಿಸಲು ಸ್ಥಾಪಿಸಿದ **ರಾಜ್ಯ ದತ್ತು ಸಂಪನ್ಮೂಲ ಕೇಂದ್ರ.** (SARA) |
| (54) | | **"serious offences"** includes the offences for which the punishment under the Indian Penal Code (IPC) or any other law for the time being in force, is *imprisonment between three to seven years;* | **"ಗುರುತರ ಆಪರಾಧಿಕ ಕೃತ್ಯಗಳು'** ಎಂದರೆ ಭಾರತೀಯ ದಂಡ ಸಂಹಿತೆ (IPC) 1860ಯಡಿಯಲ್ಲಿ ಅಥವಾ ಕಾಲಕ್ಕೆ ತಕ್ಕ ಹಾಗೆ ಪ್ರಚಲಿತದಲ್ಲಿರುವ ಇತರೆ ಯಾವುದೇ ಕಾನೂನಿಯಡಿಯಲ್ಲಿ ಮೂರರಿಂದ ಏಳು ವರ್ಷಗಳ ಕಾರಾಗೃಹ ಶಿಕ್ಷೆಯನ್ನು ವಿಧಿಸಬಹುದಾದ ಆಪರಾಧಿಕ ಕೃತ್ಯಗಳನ್ನೊಳಗೊಂಡಿರುತ್ತದೆ. |
| (55) | | **"special juvenile police unit" (SJPU)** means a unit of the police force of a district or city or, as the case may be, any other police unit like railway police, dealing with children and designated as such for handling children under section 107; | **'ಮಕ್ಕಳ ವಿಶೇಷ ಪೊಲೀಸ್ ಘಟಕ' (SJPU)** ಎಂದರೆ, ಸೆ. 107ರಲ್ಲಿ ಸೂಚಿಸಿರುವಂತೆ, ಮಕ್ಕಳ ಪ್ರಕರಣಗಳನ್ನು ಕುರಿತು ಗಮನ ಹರಿಸಲು ನಿಯೋಜಿಸಲ್ಪಟ್ಟಂತಹ ಜಿಲ್ಲೆ ಅಥವಾ ನಗರ ಅಥವಾ ರೈಲ್ವೆ ಪೊಲೀಸ್‌ನಂತಹ ಇತರ ಪೊಲೀಸರ ಘಟಕಗಳು |

| | | | | |
|---|---|---|---|---|
| (*56*) | | **"special home"** means an institution established by a State Government or by a voluntary or non-governmental organisation, registered under section 48, for housing and providing rehabilitative services to *children in conflict with law*, who are found, through inquiry, to have committed an offence and are sent to such institution by an order of the Board (JJB); | | **'ವಿಶೇಷ ಗೃಹಗಳು'** ಎಂದರೆ, ಸೆ. 48ರಡಿಯಲ್ಲಿ ನೋಂದಾಯಿತವಾದ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದಿರುವ ಸರ್ಕಾರದಿಂದ ಅಥವಾ ಸ್ವಯಂಸೇವಾ ಸಂಘಟನೆಗಳಿಂದ ಸ್ಥಾಪಿಸಿ ನಡೆಸಲ್ಪಡುವ ಹಾಗೂ ಕಾನೂನಿನೊಡನೆ ಸಂಘರ್ಷದಲ್ಲಿರುವರೆಂದು ಮಕ್ಕಳ ನ್ಯಾಯ ಮಂಡಳಿಯು (JJB) ವಿಚಾರಣೆ ನಡೆಸಿ, ನಿರ್ಧರಿಸಿ ಅಂತಹ ಮಕ್ಕಳನ್ನು ಪುನರ್ವಸತಿಗಾಗಿ ನಿಯೋಜಿಸಲ್ಪಡುವ ಸಂಸ್ಥೆಗಳು |
| (*57*) | | **"Specialised Adoption Agency" (SAA)** means an institution established by the State Government or by a voluntary or non-governmental organisation and recognized under section 65, for housing orphans, abandoned and surrendered children, placed there by order of the Committee (CWC), for the purpose of adoption; | | **'ವಿಶೇಷ ದತ್ತು ಕೇಂದ್ರ'** ಎಂದರೆ ಮಕ್ಕಳ ಕಲ್ಯಾಣ ಸಮಿತಿಯ ಆದೇಶದಂತೆ ಅನಾಥ, ಪರಿತ್ಯಜಿಸಿದ, ಹಾಜರು ಪಡಿಸಿದ ಮಕ್ಕಳ ದತ್ತುವಿನ ಉದ್ದೇಶಕ್ಕಾಗಿ ಸೆಕ್ಷನ್ 65ರ ಅಡಿಯಲ್ಲಿ ಗುರುತಿಸಿಕೊಂಡ ರಾಜ್ಯ ಸರ್ಕಾರ ಸ್ಥಾಪಿಸಿರುವ ಸಂಸ್ಥೆಗಳು ಅಥವಾ ಸ್ವಯಂಸೇವಾ ಅಥವಾ ಸರ್ಕಾರೇತರ ಸಂಸ್ಥೆಗಳು. |
| (*58*) | | **"sponsorship"** means provision of supplementary support, financial or otherwise, to the families to meet the medical, educational and developmental needs of the child; | | **'ಪ್ರಾಯೋಜಕತ್ವ'** ಎಂದರೆ ಮಕ್ಕಳ ವೈದ್ಯಕೀಯ, ಶೈಕ್ಷಣಿಕ ಮತ್ತು ಬೆಳವಣಿಗೆಯ ಅವಶ್ಯಕತೆಗಳನ್ನು ಪೂರೈಸಲು ಕುಟುಂಬಗಳಿಗೆ ಆರ್ಥಿಕ ಅಥವಾ ಇನ್ನಿತರೆ ಪೂರಕ ನೆರವನ್ನು ನೀಡುವುದು. |
| (*59*) | | **"State Government",** in relation to a Union territory, means the Administrator of that Union territory appointed by the President under article 239 of the Constitution; | | **'ರಾಜ್ಯ ಸರ್ಕಾರಗಳು'** ಎಂದರೆ ಕೇಂದ್ರಾಡಳಿತ ಪ್ರದೇಶಗಳಿಗೂ ಸಂಬಂಧಪಟ್ಟ ಹಾಗೆ ಸಂವಿಧಾನದ ವಿಧಿ 239ರ ಅಡಿಯಲ್ಲಿ ರಾಷ್ಟ್ರಪತಿಗಳಿಂದ ನೇಮಕಗೊಂಡ ಕೇಂದ್ರಾಡಳಿತ ಪ್ರದೇಶದ ನಿರ್ವಾಹಕರು. |
| (*60*) | | **"surrendered child"** means a child, who *is relinquished* by the parent or guardian to the Committee, on account of physical, emotional and social factors beyond their control, and declared as such by the Committee; | | **'ಒಪ್ಪಿಸಲ್ಪಟ್ಟ ಮಗು'** ಎಂದರೆ ದೈಹಿಕ, ಭಾವನಾತ್ಮಕ ಮತ್ತು ಸಾಮಾಜಿಕ ವಿಚಾರಗಳಲ್ಲಿ ಕೈಮೀರಿ ಹೋಗಿರುವ ಮತ್ತು ಸಮಿತಿಯು ಆ ರೀತಿ ಘೋಷಿಸಿದ ಪೋಷಕರು ಮಕ್ಕಳ ಕಲ್ಯಾಣ ಸಮಿತಿಗೆ ಒಪ್ಪಿಸಿದ/ಪರಿತ್ಯಜಿಸಿದ ಮಕ್ಕಳು. |
| (*61*) | | all words and expressions used but not defined in this Act and defined in other Acts shall have the meanings respectively assigned to them in those Acts. | | ಇಲ್ಲಿ (ಈ ಕಾಯಿದೆಯಲ್ಲಿ) ಪ್ರಯೋಗಿಸಿರುವ ಎಲ್ಲಾ ಪದಗಳು ಮತ್ತು ಅಭಿಪ್ರಾಯಗಳನ್ನು ಈ ಕಾಯ್ದೆಯಡಿ ವ್ಯಾಖ್ಯಾನಿಸದಿದ್ದಲ್ಲಿ ಮತ್ತು ಇತರೆ ಕಾಯ್ದೆಯಡಿ ವ್ಯಾಖ್ಯಾನಿಸಿದ್ದಲ್ಲಿ, ಅವುಗಳಿಗೆ ಆಯಾ ಕಾಯ್ದೆಯಲ್ಲಿ ಹೇಳಿರುವ ವ್ಯಾಖ್ಯಾನಗಳೆ ಅನ್ವಯವಾಗುತ್ತದೆ. |

## <u>Chapter II</u> General Principles of Care and Protection of Children
**ಮಕ್ಕಳ ಪೋಷಣೆ ಮತ್ತು ರಕ್ಷಣೆಯ ಸಾಮಾನ್ಯ ತತ್ತ್ವಗಳು**

| Sec | | | | | |
|---|---|---|---|---|---|
| **3** | | | **General principles to be followed in administration of Act (*i-xvi*)** | | **ಈ ಕಾಯಿದೆಯ ಜಾರಿಯಲ್ಲಿ ಅನುಸರಿಸಬೇಕಾದ ಸಾಮಾನ್ಯ ತತ್ತ್ವಗಳು** |
| | | | The Central Government, the State Governments, the Board, and other agencies, as the case may be, while implementing the provisions of this Act shall be guided by the following fundamental principles, namely:— | | ಪ್ರಕರಣಕ್ಕೆ ತಕ್ಕ ಹಾಗೆ ಈ ಕಾಯ್ದೆಯ ಆಶಯಗಳನ್ನು ಜಾರಿಮಾಡುವ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಮಂಡಳಿ ಮತ್ತು ಯಾವುದೇ ಸಂಸ್ಥೆಗಳು ಅನುಸರಿಸಲೇಬೇಕಾದ ಮೂಲಭೂತ ತತ್ವಗಳು ಈ ಕೆಳಗಿನಂತಿವೆ:– |
| | (*i*) | | ***Principle of presumption of innocence:*** Any child shall be presumed to be an innocent of any *mala fide* or criminal intent up to the age of eighteen years. | | <u>***ಮುಗ್ಧರೆಂದು ಪರಿಗಣಿಸುವ ತತ್ತ್ವ:–***</u> 18 ವರ್ಷದವರೆಗಿನ ಯಾವುದೇ ಮಗುವನ್ನು ಯಾವುದೇ ದುರುದ್ದೇಶದ ಅಥವಾ ಆಪರಾಧಿಕ ಉದ್ದೇಶಗಳಿಲ್ಲದ ಮುಗ್ಧರೆಂದು ಪರಿಗಣಿಸಬೇಕು. |
| | (*ii*) | | ***Principle of dignity and worth*:** All human beings shall be treated with equal dignity and rights. | | <u>***ಘನತೆ ಮತ್ತು ಪ್ರಾಮುಖ್ಯತೆಯ ತತ್ತ್ವ:–***</u> ಎಲ್ಲಾ ಮಾನವರನ್ನೂ ಸಮಾನ ಘನತೆ ಮತ್ತು ಹಕ್ಕುಗಳನ್ನು ಹೊಂದಿದವರೆಂದು ಪರಿಗಣಿಸಬೇಕು. |
| | (*iii*) | | ***Principle of participation*:** Every child shall have a right to be heard and to participate in all processes and decisions affecting his interest and the child's views shall be taken into consideration with due regard to the age and maturity of the child. | | <u>***ಭಾಗವಹಿಸುವ ತತ್ತ್ವ:–***</u> ಪ್ರತಿಯೊಂದು ಮಗುವಿಗೂ ಅಭಿಪ್ರಾಯಗಳನ್ನು ಹೇಳುವ ಮತ್ತು ತನ್ನ ಹಿತಾಸಕ್ತಿಯ ಮೇಲೆ ಪರಿಣಾಮ ಬೀರುವ ವಿಚಾರಗಳ ಕುರಿತಾದ ತೀರ್ಮಾನಗಳ ಮೇಲಿನ ಎಲ್ಲಾ ಪ್ರಕ್ರಿಯೆಗಳಲ್ಲೂ ಭಾಗವಹಿಸುವ ಹಕ್ಕಿದೆ ಹಾಗು ಮಗುವಿನ ವಯಸ್ಸು ಮತ್ತು ಬೌದ್ಧಿಕ ಬೆಳವಣಿಗೆಯ ಮಟ್ಟಕ್ಕೆ ಗೌರವ ನೀಡಿ ಅವರ ಅಭಿಪ್ರಾಯಗಳನ್ನು ಪರಿಗಣಿಸಲೇಬೇಕು. |
| | (*iv*) | | ***Principle of best interest*:** All decisions regarding the child shall be based on the primary consideration that they are in the best interest of the child and to help the child to develop full potential. | | <u>***ಹಿತದೃಷ್ಟಿಯ ತತ್ತ್ವ:–***</u> ಮಗುವಿನ ಕುರಿತಾದ ಎಲ್ಲಾ ತೀರ್ಮಾನಗಳು ಮಗುವಿನ ಹಿತಾಸಕ್ತಿಗೆ ಪೂರಕವಾಗಿರುವುದರ ಆಧಾರದ ಮೇಲೆ ಪರಿಗಣಿಸಬೇಕು ಹಾಗು ಮಗುವಿಗೆ ತನ್ನ ಪೂರ್ಣ ಸಾಮರ್ಥ್ಯವನ್ನು ಹೊಂದಲು ಸಹಾಯ ಮಾಡಬೇಕು. |
| | *v*) | | ***Principle of family responsibility*:** The primary responsibility of care, nurture and protection of the child shall be that of the biological family or adoptive or foster parents, as the case may be | | <u>***ಕೌಟುಂಬಿಕ ಜವಾಬ್ದಾರಿಯ ತತ್ತ್ವ:–***</u> ಮಗುವಿನ ಪೋಷಣೆ, ಬೆಳವಣಿಗೆ ಮತ್ತು ರಕ್ಷಣೆಯ ಪ್ರಾಥಮಿಕ ಜವಾಬ್ದಾರಿಗಳು ಪ್ರಕರಣಕ್ಕೆ ತಕ್ಕ ಹಾಗೆ ಜೈವಿಕ ಪೋಷಕರು ಅಥವಾ ದತ್ತು ಪಡೆದವರು ಅಥವಾ ಫಾಸ್ಟರ್ ಪೋಷಕರದ್ದಾಗಿರುತ್ತದೆ. |
| | (*vi*) | | ***Principle of safety:*** All measures shall be taken to ensure that the child is safe and is not subjected to any harm, abuse or maltreatment while in contact with the care and protection system, and thereafter. | | <u>***ಸುರಕ್ಷಣಾ ತತ್ತ್ವ:–***</u> ಪೋಷಣೆ ಮತ್ತು ರಕ್ಷಣೆ ವ್ಯವಸ್ಥೆಯ ಸಂಪರ್ಕದಲ್ಲಿದ್ದಾಗ ಮತ್ತು ನಂತರ ಮಗುವಿನ ಸುರಕ್ಷತೆಗಾಗಿ, ಮಗು ಯಾವುದೇ ರೀತಿಯ ಹಾನಿ, ದುರುಪಯೋಗ ಅಥವಾ ದುರಾಚಾರಕ್ಕೆ ಒಳಗಾಗದಿರುವುದನ್ನು ಖಾತ್ರಿಗೊಳಿಸುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು. |

| | | | | | |
|---|---|---|---|---|---|
| | (*vii*) | | ***Positive measures***: All resources are to be mobilised including those of family and community, for promoting the well-being, facilitating development of identity and providing an inclusive and enabling environment, to reduce vulnerabilities of children and the need for intervention under this Act. | | ***ಧನಾತ್ಮಕ ಕ್ರಮಗಳು:*** ಮಕ್ಕಳ ಅಸಹಾಯಕತೆಯನ್ನು ಕಡಿಮೆ ಮಾಡಲು ಮತ್ತು ಈ ಕಾಯ್ದೆಯಡಿ ಅವಶ್ಯವಿರುವ ಮಧ್ಯವರ್ತಿಕೆಗಳನ್ನು ಕೈಗೊಂಡು ಮಕ್ಕಳ ಸುರಕ್ಷತೆಯನ್ನು ಉತ್ತೇಜಿಸಲು, ಸ್ವಂತಿಕೆಯನ್ನು ಬೆಳಸಿಕೊಳ್ಳುವುದನ್ನು ಪ್ರೋತ್ಸಾಹಿಸಲು ಮತ್ತು ಸರ್ವಾಂಗೀಣ ಹಾಗು ಪೂರಕ ವಾತಾವರಣವನ್ನು ಒದಗಿಸಲು ಕುಟುಂಬ ಮತ್ತು ಸಮುದಾಯವೂ ಸೇರಿದಂತೆ ಎಲ್ಲಾ ನಿಟ್ಟಿನಿಂದಲೂ ಸಂಪನ್ಮೂಲಗಳನ್ನು ಕ್ರೂಢೀಕರಿಸಬೇಕು. |
| | (*viii*) | | ***Principle of non-stigmatising semantics***: Adversarial or accusatory words are not to be used in the processes pertaining to a child. | | ***ಕಳಂಕರಹಿತ ಶಬ್ದಾರ್ಥದ ತತ್ತ್ವ:–*** ಮಕ್ಕಳಿಗೆ ಸಂಬಂಧಿಸಿದ ಪ್ರಕ್ರಿಯೆಗಳಲ್ಲಿ ಯಾವುದೇ ವ್ಯತಿರಿಕ್ತ ಅಥವಾ ಕಟು ನುಡಿಗಳನ್ನು ಬಳಸಬಾರದು. |
| | (*ix*) | | ***Principle of non-waiver of rights***: No waiver of any of the right of the child is ermissible or valid, whether sought by the child or person acting on behalf of the child, or a Board or a Committee and any non-exercise of a fundamental right shall not amount to waiver. | | ***ಹಕ್ಕುಗಳ ರಹಿತರಾಗದಿರುವ ತತ್ತ್ವ:–*** ಮಗು ಅಥವಾ ಮಗುವಿನ ಪರವಾಗಿ ಯಾರೇ ಅಪೇಕ್ಷಿಸಿದರೂ ಮಕ್ಕಳ ಯಾವುದೇ ಹಕ್ಕುಗಳನ್ನು ತೆಗೆದುಬಿಡುವಂತಿಲ್ಲ/ ತಡೆಹಿಡಿಯುವಂತಿಲ್ಲ, ಮಂಡಳಿ ಅಥವಾ ಸಮಿತಿ ಅಥವಾ ಇನ್ನಾರಿಂದಾಗಲೀ ಸಾಂವಿಧಾನಿಕ ಹಕ್ಕುಗಳನ್ನು ತಡೆಯಿಡಿಯುವಂತಿಲ್ಲ. |
| | (*x*) | | ***Principle of equality and non-discrimination***: There shall be no discrimination against a child on any grounds including sex, caste, ethnicity, place of birth, disability and equality of access, opportunity and treatment shall be provided to every child | | ***ಸಮಾನತೆ ಮತ್ತು ತಾರತಮ್ಯರಹಿತ ತತ್ತ್ವ:–***ಮಕ್ಕಳನ್ನು ಲಿಂಗ, ಜಾತಿ, ಹಿನ್ನೆಲೆ, ಜನ್ಮ ಸ್ಥಳ, ಅಂಗವಿಕಲತೆ ಮೊದಲಾದ ಆಧಾರದ ಮೇಲೆ ತಾರತಮ್ಯ ಮಾಡಬಾರದು ಮತ್ತು ಎಲ್ಲಾ ಮಕ್ಕಳಿಗೆ ಸಮಾನವಾದ ಲಭ್ಯತೆ, ಅವಕಾಶ ಮತ್ತು ಉಪಚಾರವನ್ನು ಒದಗಿಸಬೇಕು. |
| | (*xi*) | | ***Principle of right to privacy and confidentiality***: Every child shall have a right to protection of his privacy and confidentiality, by all means and throughout the judicial process. | | ***ಖಾಸಗಿತನದ ಮತ್ತು ಗೌಪ್ಯತೆಯ ಹಕ್ಕಿನ ತತ್ತ್ವ:–*** ಎಲ್ಲ ವಿಧದಲ್ಲೂ ನ್ಯಾಯಾಂಗ ಪ್ರಕ್ರಿಯೆಯಲ್ಲಿ ಎಲ್ಲಾ ಮಕ್ಕಳ ಖಾಸಗೀತನದ ಮತ್ತು ಗೌಪ್ಯತೆಯ ಹಕ್ಕನ್ನು ರಕ್ಷಿಸಬೇಕು. |
| | (*xii*) | | ***Principle of institutionalisation as a measure of last resort:*** A child shall be placed in institutional care as a step of last resort after making a reasonable inquiry. | | ***ಕೊನೆಯ ಪ್ರಯತ್ನವಾಗಿ ಮಗುವನ್ನು ಸಂಸ್ಥೆಯಲ್ಲಿರಿಸುವ ತತ್ತ್ವ:–*** ಮಗುವಿಗೆ ನೆಲೆ ಒದಗಿಸಲು ಎಲ್ಲಾ ರೀತಿಯ ಪ್ರಯತ್ನಗಳನ್ನು/ ತನಿಖೆಗಳನ್ನು ನಡೆಸಿಯೂ ಬೇರೆ ವಿಧಾನಗಳು ಇಲ್ಲದಾಗ ಕೊನೆಯ ಪ್ರಯತ್ನವಾಗಿ ಮಗುವನ್ನು ಸಾಂಸ್ಥಿಕ ಪೋಷಣೆಗೆ ಒಳಪಡಿಸಬೇಕು. |
| | (*xiii*) | | ***Principle of repatriation and restoration***: Every child in the juvenile justice system shall have the right to be re-united with his family at the earliest and to be restored to the same socio-economic and cultural status that he was in, before coming under the purview of this Act, unless such restoration and repatriation is not in his best interest. | | ***ವಾಪಸಾತಿ ಮತ್ತು (ಪೋಷಕರೊಂದಿಗೆ) ಸೇರಿಸಲು / ಯಥಾಸ್ಥಾಪನೆ / ಪುನರ್ವಸತಿಗೊಳಿಸುವ ತತ್ತ್ವ:–*** ಮಕ್ಕಳ ನ್ಯಾಯ ಕಾಯ್ದೆಯಡಿ ಬರುವ ಎಲ್ಲಾ ಮಕ್ಕಳಿಗೂ ಈ ವ್ಯವಸ್ಥೆಗೆ ಬರುವ ಮುನ್ನ ಇದ್ದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸ್ಥಾನಮಾನದೊಡನೆ, ಆದಷ್ಟು ಬೇಗ ತಮ್ಮ ಕುಟುಂಬ/ಪೋಷಕರನ್ನು ಸೇರುವ ಹಕ್ಕು ಇರುತ್ತದೆ. ಆದರೆ ಪೋಷಕರೊಂದಿಗೆ ಸೇರಿಸುವ ಮತ್ತು ಪುನರ್ವಸತಿಗೊಳಿಸುವ ಪ್ರಕ್ರಿಯೆಯು ಮಕ್ಕಳ ಹಿತಾಸಕ್ತಿಗೆ ವಿರುದ್ಧವಾಗಿರಬಾರದು. |

| | | | | | |
|---|---|---|---|---|---|
| | | | | | |
| | (*xiv*) | | ***Principle of fresh start*: All past records of any child under the Juvenile Justice system should be erased except in special circumstances. | | ***ಹೊಸ ಪ್ರಾರಂಭದ ತತ್ವ:*** ಕೆಲವು ವಿಶೇಷ ಸನ್ನಿವೇಶಗಳನ್ನು ಹೊರತುಪಡಿಸಿ ಮಕ್ಕಳ ನ್ಯಾಯ ಕಾಯ್ದೆಯಡಿ ಬರುವ ಯಾವುದೇ ಮಗುವಿನ ಹಿಂದಿನ ದಾಖಲೆಗಳನ್ನು ಅಳಿಸಿಬಿಡಬೇಕು/ನಾಶ ಪಡಿಸಬೇಕು. |
| | (*xv*) | | ***Principle of diversion*:** Measures for dealing with children in conflict with law without resorting to judicial proceedings shall be promoted unless it is in the best interest of the child or the society as a whole. | | ***ಪಥ ಬದಲಾವಣೆಯ ತತ್ವ:*** ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು ಮಕ್ಕಳ ಹಿತಾಸಕ್ತಿಗೆ ಅಥವಾ ಒಟ್ಟಾರೆ ಸಮಾಜದ ಹಿತಾಸಕ್ತಿಗೆ ವಿರುದ್ಧವಾಗಿಲ್ಲದಿದ್ದಲ್ಲಿ ನ್ಯಾಯಾಂಗ ಪ್ರಕ್ರಿಯೆ ಹೊರಗೆ ಪ್ರಕರಣಗಳನ್ನು ನಿರ್ವಹಿಸುವುದನ್ನು ಉತ್ತೇಜಿಸಬೇಕು. |
| | **(*xvi*)** | | ***Principles of natural justice*:** Basic procedural standards of fairness shall be adhered to, including the right to a fair hearing, rule against bias and the right to review, by all persons or bodies, acting in a judicial capacity under this Act. | | ***ಸಾಮಾಜಿಕ ನ್ಯಾಯದ ತತ್ವ:*** ಮೂಲ ಪ್ರಕ್ರಿಯೆ ಗುಣಮಟ್ಟಗಳು, ನ್ಯಾಯಸಮ್ಮತ ವಿಚಾರಣೆ, ಪೂರ್ವಾಗ್ರಹ ಪೀಡಿತರಾಗದಿರುವುದು ಮತ್ತು ಪರಿಶೀಲನೆಯ ಹಕ್ಕುಗಳನ್ನು ಒಳಗೊಂಡಂತೆ ನ್ಯಾಯಸಮ್ಮತ ಪ್ರಕ್ರಿಯೆಯನ್ನು ಈ ಕಾಯ್ದೆಯಡಿಯಲ್ಲಿ ನ್ಯಾಯಾಂಗ ಸಾಮರ್ಥ್ಯವುಳ್ಳ ಎಲ್ಲಾ ವ್ಯಕ್ತಿಗಳು ಅಥವಾ ಸಂಸ್ಥೆಗಳು ಅನುಸರಿಸಬೇಕು. |

# <u>Chapter III</u> Juvenile Justice Board – JJB ಮಕ್ಕಳ ನ್ಯಾಯ ಮಂಡಳಿ

| **Sec** | | | **Juvenile Justice Board (JJB) (*1-7*)** | | **ಮಕ್ಕಳ ನ್ಯಾಯ ಮಂಡಳಿ** |
|---|---|---|---|---|---|
| **4** | (*1*) | | Notwithstanding anything contained in the Code of Criminal Procedure, 1973, the State Government ***shall,*** constitute for every district, one or more Juvenile Justice Boards for exercising the powers and discharging its functions relating to children in conflict with law under this Act. | | ಅಪರಾಧ ಪ್ರಕ್ರಿಯಾ ಸಂಹಿತೆ **(CrPC)** 1973ರಲ್ಲಿ ಹೇಳಲಾಗಿರುವುದು ಏನೇ ಇದ್ದರೂ ಸಹ, ರಾಜ್ಯ ಸರ್ಕಾರಗಳು ಪ್ರತಿ ಜಿಲ್ಲೆಗೆ ಒಂದು ಅಥವ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳ ನ್ಯಾಯ ಮಂಡಳಿಗಳನ್ನು ರಚಿಸಿ, ಕಾನೂನಿನೊಡನೆ ಸಂಘರ್ಷದಲ್ಲಿದ್ದಾರೆಂದು ಶಂಕಿಸಲ್ಪಟ್ಟ ಮಕ್ಕಳಿಗೆ ಸಂಬಂಧಿಸಿದಂತೆ ತಮ್ಮ ಅಧಿಕಾರಗಳನ್ನು ಬಳಸಿ ಕರ್ತವ್ಯಗಳನ್ನು ನಿರ್ವಹಿಸಲು ಈ ಕಾಯಿದೆಯಲ್ಲಿ ನಿರ್ದೇಶಿಸಿರುವಂತೆ ಅವಕಾಶಗಳನ್ನು ಮಾಡಿಕೊಡಲೇಬೇಕು. |
| | (*2*) | | A Board shall consist of a Metropolitan Magistrate or a Judicial Magistrate of First Class ***<u>not being</u>*** Chief Metropolitan Magistrate or Chief Judicial Magistrate -CJM (hereinafter referred to as ***<u>Principal Magistrate</u>***) with at least three years experience and ***<u>two social workers</u>*** selected in such manner as may be prescribed, of whom at least **one shall be a woman**, forming a Bench and every such Bench shall have the **powers conferred by the Code of Criminal Procedure (Cr.P.C), 1973 on a Metropolitan Magistrate or, as the case may be, a Judicial Magistrate of First Class**. | | ಮಂಡಳಿಯು ಒಬ್ಬ ಮೆಟ್ರೋಪಾಲಿಟನ್ ದಂಡಾಧಿಕಾರಿಗಳು ಅಥವಾ ಮುಖ್ಯ ದಂಡಾಧಿಕಾರಿಗಳು ಅಥವಾ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳಲ್ಲದ, ಕನಿಷ್ಠ ಮೂರು ವರ್ಷಗಳ ಅನುಭವವಿರುವ ಪ್ರಥಮ ವರ್ಗದ ನ್ಯಾಯಿಕ ದಂಡಾಧಿಕಾರಿಗಳು (ಮುಂದೆ ಅವರನ್ನು ಮುಖ್ಯ ದಂಡಾಧಿಕಾರಿಗಳು ಎಂದು ಸೂಚಿಸಲಾಗುತ್ತದೆ), ಮತ್ತು ಕನಿಷ್ಟ ಒಬ್ಬ ಮಹಿಳೆಯನ್ನೊಳಗೊಂಡ ಇಬ್ಬರು ಸಮಾಜ ಕಾರ್ಯಕರ್ತರನ್ನು ಒಳಗೊಂಡ ಒಂದು ಪೀಠದಂತೆ ಈ ಮಂಡಲಿಯನ್ನು ರಚಿಸುವುದು. ಇಂತಹ ಪ್ರತಿ ಮಂಡಲಿಗೆ ಅಪರಾಧ ಪ್ರಕ್ರಿಯಾ ಸಂಹಿತೆ **(CrPC)** 1973 ರಲ್ಲಿ ವಿವರಿಸಿರುವಂತೆ ಮೆಟ್ರೋಪಾಲಿಟನ್ ದಂಡಾಧಿಕಾರಿಗಳು ಅಥವಾ ಆಯಾ ಪ್ರಸಂಗದಲ್ಲಿ ಅನ್ವಯಿಸುವಂತೆ ಪ್ರಥಮ ವರ್ಗದ ನ್ಯಾಯಿಕ ದಂಡಾಧಿಕಾರಿಗಳಿಗೆ ಇರುವಂತಹ ಅಧಿಕಾರ ಮತ್ತು ಸ್ಥಾನಮಾನಗಳು ಇರುತ್ತವೆ. |
| | (*3*) | | No social worker shall be appointed as a member of the Board unless such person has been actively involved in health, education, or welfare activities pertaining to children for ***<u>atleast seven years</u>*** or a practicing professional with a degree in child psychology, psychiatry, sociology or law. | | ಮಕ್ಕಳ ಆರೋಗ್ಯ, ಶಿಕ್ಷಣ ಅಥವಾ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕನಿಷ್ಟ ಏಳು ವರ್ಷಗಳ ಅನುಭವ ಇಲ್ಲದ ಅಥವಾ ಮಕ್ಕಳ ಮನೋವಿಜ್ಞಾನ, ಮನಶ್ಶಾಸ್ತ್ರ, ಸಮಾಜಶಾಸ್ತ್ರ ಅಥವಾ ಕಾನೂನು ಕ್ಷೇತ್ರದಲ್ಲಿ ತೊಡಗಿಸಿಕೊಂಡಿಲ್ಲದಿದ್ದಲ್ಲಿ ಅಂತಹ ವ್ಯಕ್ತಿಗಳನ್ನು ಮಂಡಳಿಗೆ ಸದಸ್ಯರನ್ನಾಗಿ ನೇಮಿಸುವಂತಿಲ್ಲ. |
| | (*4*) | | No person shall be eligible for selection as a member of the Board, if he — | | ಮಂಡಳಿಯ ಸದಸ್ಯರಾಗಿ ಈ ಕೆಳಗಿನ ಯಾವುದೇ ವ್ಯಕ್ತಿಗಳು ಆಯ್ಕೆಯಾಗಲು ಅರ್ಹರಾಗಿರುವುದಿಲ್ಲ:– |
| | | (*i*) | has any past record of violation of human rights or child rights; | | ಹಿಂದೆ ಮಾನವ ಹಕ್ಕುಗಳು ಅಥವಾ ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸಿದ ಪ್ರಕರಣಗಳಿದ್ದಲ್ಲಿ; |
| | | (*ii*) | has been convicted of an offence involving moral turpitude, and such conviction *<u>has not</u>* been reversed or *<u>has not</u>* been granted full pardon in respect of such offence; | | ಯಾವುದೇ ಸದಸ್ಯರು ಅನೈತಿಕ ವ್ಯವಹಾರದಲ್ಲಿ ಸಿಲುಕಿರುವುದು ಹಾಗು ಇಂತಹ ಆರೋಪವನ್ನು ತೊಡೆದು ಹಾಕದಿದ್ದಲ್ಲಿ ಅಥವಾ ಇಂತಹ ಆರೋಪದಿಂದ ಅವರನ್ನು ಸಂಪೂರ್ಣವಾಗಿ ಕ್ಷಮಿಸದಿದ್ದಲ್ಲಿ, |
| | | (*iii*) | has been removed or dismissed from service of the Central Government or a State Government or an undertaking or corporation owned or controlled by the Central Government or a State Government; | | ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಅಥವಾ ಜವಾಬ್ದಾರಿ ಹೊಂದಿರುವ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಗಳ ಸ್ವಾಮಿತ್ವದ ಅಥವಾ ನಿರ್ವಹಿಸುವ ಯಾವುದೇ ಸೇವೆಯಿಂದ ವಜಾಗೊಳಿಸಿದ್ದಲ್ಲಿ; |
| | | (*iv*) | has ever indulged in child abuse or employment of child labour or any other violation of human rights or immoral act. | | ಮಕ್ಕಳ ದುರುಪಯೋಗದಲ್ಲಿ ಭಾಗಿಯಾಗಿದ್ದಲ್ಲಿ ಅಥವಾ ಬಾಲಕಾರ್ಮಿಕರಿಂದ ದುಡಿಸಿಕೊಂಡಿದ್ದಲ್ಲಿ ಅಥವಾ ಇನ್ಯಾವುದೇ ಮಾನವ ಹಕ್ಕುಗಳ ಅಥವಾ ಅನೈತಿಕ ಕಾಯ್ದೆಯ ಉಲ್ಲಂಘನೆ ಮಾಡಿದ್ದಲ್ಲಿ; |

| | | | | | |
|---|---|---|---|---|---|
| | (*5*) | | The State Government shall ensure that *induction training and sensitisation* of *all members including Principal Magistrate of the Board* on care, protection, rehabilitation, legal provisions and justice for children, as may be prescribed, is provided ***within a period of sixty days*** from the date of appointment. | | ಮುಖ್ಯ ನ್ಯಾಯಾಧೀಶರೂ ಸೇರಿದಂತೆ ಮಂಡಳಿಯ ಎಲ್ಲಾ ಸದಸ್ಯರಿಗೆ ಪೋಷಣೆ, ರಕ್ಷಣೆ, ಪುನರ್ವಸತಿ, ಕಾನೂನು ಸೇವೆಗಳು ಮತ್ತು ಮಕ್ಕಳ ನ್ಯಾಯ ಇವೇ ಮೊದಲಾದ ವಿಚಾರಗಳನ್ನು ಕುರಿತು ಪ್ರವೇಶದ/ನೇಮಕಾತಿಯ ಆರಂಭಿಕ ತರಬೇತಿ ಮತ್ತು ಸಂವೇದನಾಶೀಲತೆಯನ್ನು ಅವರುಗಳು ನೇಮಕಗೊಂಡ **ಆರು ದಿನಗಳ ಒಳಗೆ** ನೀಡುವುದನ್ನು ರಾಜ್ಯ ಸರ್ಕಾರವು ಖಾತ್ರಿಪಡಿಸಬೇಕು. |
| | (*6*) | | The term of office of the members of the Board and the manner in which such member may resign shall be such, as may be prescribed. | | ಮಂಡಳಿಯ ಸದಸ್ಯರ ಸದಸ್ಯತ್ವದ ಅವಧಿ ಮತ್ತು ಅವರು ರಾಜೀನಾಮೆ ನೀಡುವುದು ಇವೇ ಮೊದಲಾದವುಗಳು ನಿರ್ದಿಷ್ಟಪಡಿಸಿದಂತಿರಬೇಕು. |
| | (*7*) | | The appointment of any member of the Board, except the Principal Magistrate, may be terminated after holding an inquiry by the State Government, if he – | | ಮುಖ್ಯ ನ್ಯಾಯಾಧೀಶರನ್ನು ಹೊರತುಪಡಿಸಿ ಮಂಡಳಿಯ ಸದಸ್ಯರು ಈ ಕೆಳಗಿನ ಕೃತ್ಯಗಳಲ್ಲಿ ಭಾಗಿಯಾಗಿದ್ದಲ್ಲಿ ರಾಜ್ಯ ಸರ್ಕಾರವು ತನಿಖೆ ನಡೆಸಿದ ನಂತರ ಅವರ ಸದಸ್ಯತ್ವನ್ನು ರದ್ದುಪಡಿಸಿಬಹುದು. |
| | | (*i*) | has been found guilty of misuse of power vested under this Act; or | | ಈ ಕಾಯ್ದೆಯಡಿಯಲ್ಲಿ ನೀಡಿರುವ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದು ಕಂಡು ಬಂದಲ್ಲಿ; ಅಥವಾ |
| | | (*ii*) | fails to attend the proceedings of the Board ***consecutively*** for three months without any valid reason; or | | ಯಾವುದೇ ಸೂಕ್ತ ಕಾರಣಗಳನ್ನು ನೀಡದೆ ಸತತ ಮೂರು ತಿಂಗಳುಗಳ ಕಾಲ ಮಂಡಳಿಯ ಪ್ರಕ್ರಿಯೆಗಳಿಗೆ ಗೈರು ಹಾಜರಾದರೆ; ಅಥವಾ |
| | | (*iii*) | fails to attend less than three-fourths of the sittings in a year; or | | ವರ್ಷದಲ್ಲಿ 3/4ಕ್ಕಿಂತ ಕಡಿಮೆ ಸಭೆಗಳಿಗೆ (ವಿಚಾರಣಾ ದಿನಗಳಿಗೆ) ಗೈರು ಹಾಜರಾದಲ್ಲಿ; ಅಥವಾ |
| | | (*iv*) | becomes ineligible under sub-section (*4*) during his term as a member | | ಉಪ ಸೆಕ್ಷನ್ (4)ರಡಿಯಲ್ಲಿ ಸದಸ್ಯತ್ವದ ಅವಧಿಯಲ್ಲಿ ಸದಸ್ಯತ್ವಕ್ಕೆ ಅನರ್ಹಗೊಂಡಲ್ಲಿ |
| **Sec 5** | | | **Placement of person, who cease to be a child during process of inquiry.** | | **ತನಿಖೆಯ ಅವಧಿಯಲ್ಲಿ 'ಬಾಲ್ಯಾವಸ್ಥೆ'ಯನ್ನು ದಾಟುವ ವ್ಯಕ್ತಿಗಳನ್ನು ಇರಿಸುವುದು** |
| | | | Where an inquiry has been initiated in respect of any child under this Act, and during the course of such inquiry, the child completes the age of eighteen years, then, notwithstanding anything contained in this Act or in any other law for the time being in force, the inquiry may be continued by the Board and orders may be passed in respect of such person as if such person had continued to be a child. | | ಈ ಕಾಯ್ದೆಯಡಿ ಯಾವುದೇ ಮಗುವನ್ನು ಕುರಿತಂತೆ ತನಿಖೆ ಪ್ರಾರಂಭಿಸಿದರೆ ಮತ್ತು ಈ ತನಿಖೆಯ ಅವಧಿಯಲ್ಲಿ ಮಗುವಿಗೆ 18 ವರ್ಷ ತುಂಬಿದರೆ ಈ ಕಾಯ್ದೆಯಲ್ಲಿ ಅಥವಾ ಆ ಸಮಯದಲ್ಲಿ ಜಾರಿಯಲ್ಲಿರುವ ಯಾವುದೇ ಕಾಯ್ದೆಯಲ್ಲಿ ಏನೇ ಹೇಳಿದ್ದರೂ ಆ ವ್ಯಕ್ತಿಯನ್ನು ಮಗುವೆಂದೇ ಪರಿಗಣಿಸಿ ಮಂಡಳಿಯು ತನಿಖೆಯನ್ನು ಮುಂದುವರೆಸಬಹುದು ಮತ್ತು ಅದೇಶವನ್ನು ನೀಡಬಹುದು. |
| **Sec 6** | | | **Placement of persons, who committed an offence, when person was below the age of eighteen years (*1-3*)** | | **18 ವರ್ಷದೊಳಗಿನ ವ್ಯಕ್ತಿಗಳು ಅಪರಾಧಿಕ ಕೃತ್ಯ ಮಾಡಿದರೆ, ಅಂತಹವರನ್ನು ಇರಿಸಲು ವ್ಯವಸ್ಥೆ** |
| | (*1*) | | Any person, who has completed eighteen years of age, and is *apprehended* for committing an offence when he was *below the age of eighteen years,* then, such person shall, subject to the provisions of this section, *be treated as a child during the process of inquiry*. | | ಯಾವುದೇ ವ್ಯಕ್ತಿ ತನ್ನ 18 ವರ್ಷದೊಳಗಿನ ವಯಸ್ಸಿನಲ್ಲಿ ಆಪರಾಧಿಕ ಕೃತ್ಯ ಮಾಡಿದ್ದು ಪ್ರಸ್ತುತ 18 ವರ್ಷವನ್ನು ಮೀರಿದ್ದಲ್ಲಿ ಅಂತಹ ವ್ಯಕ್ತಿಯನ್ನು ಈ ಕಾಯ್ದೆಯ ಆಶಯದಂತೆ ತನಿಖೆಯ ಪ್ರಕ್ರಿಯೆಯಲ್ಲಿ ಮಗುವೆಂದೇ ಪರಿಗಣಿಸಬೇಕು. |
| | (*2*) | | The person referred to in sub-section (*1*), if not released on bail by the Board shall be placed in a *place of safety* during the process of inquiry. | | ಈ ಉಪಕಾಯ್ದೆ (1)ರಲ್ಲಿ ಸೂಚಿಸಿರುವ ವ್ಯಕ್ತಿಯನ್ನು ಮಂಡಳಿಯು ಜಾಮೀನಿನ ಮೇಲೆ ಬಿಡುಗಡೆ ಮಾಡದಿದ್ದಲ್ಲಿ ಆ ವ್ಯಕ್ತಿಯನ್ನು ತನಿಖೆಯ ಅವಧಿಯಲ್ಲಿ ಸುರಕ್ಷಿತ ಸ್ಥಳದಲ್ಲಿರಿಸಬೇಕು. |
| | (*3*) | | The person referred to in sub-section (*1*) shall be treated as per the procedure specified under the provisions of this Act. | | ಈ ಉಪಕಾಯ್ದೆ (1)ರಲ್ಲಿ ಸೂಚಿಸಿರುವ ವ್ಯಕ್ತಿಯನ್ನು ಈ ಕಾಯ್ದೆಯಲ್ಲಿ ನಿರ್ದಿಷ್ಟಪಡಿಸಿರುವ ಪ್ರಕ್ರಿಯೆಗಳ ಅಂಶಗಳ ಪ್ರಕಾರವೇ ನಡೆಸಿಕೊಳ್ಳಬೇಕು. |

| | | | | | |
|---|---|---|---|---|---|
| **Sec 7** | | | **Procedure in relation to Board** | | **ಮಂಡಲಿಯ ಪ್ರಕ್ರಿಯೆ** |
| | (*1*) | | The Board shall meet at such times and shall observe such rules in regard to the transaction of business at its meetings, as may be prescribed and shall ensure that all procedures are child friendly and that the venue is not intimidating to the child and does not resemble as regular courts. | | ಮಂಡಳಿಯು ನಿಗದಿತ ದಿನಗಳಲ್ಲಿ ಸೇರಬೇಕು ಮತ್ತು ತನ್ನ ಸಭೆಗಳ ಪ್ರಕ್ರಿಯೆಗಳಲ್ಲಿ ನಿಗದಿಪಡಿಸಿದಂತೆ ನಿಯಮಗಳನ್ನು ಪಾಲಿಸುವುದನ್ನು ಗಮನಿಸಬೇಕು ಮತ್ತು ಎಲ್ಲಾ ಪ್ರಕ್ರಿಯೆಗಳು ಮಕ್ಕಳ ಸ್ನೇಹಿಯಾಗುರುವುದನ್ನು ಹಾಗು ಜಾಗವು ಮಕ್ಕಳಲ್ಲಿ ಹೆದರಿಕೆಯನ್ನು ಉಂಟುಮಾಡುವಂತೆ ಮತ್ತು ಸಾಮಾನ್ಯ ನ್ಯಾಯಾಲಯಗಳಂತೆ ಕಂಡುಬಂದಿರುವುದನ್ನು ಖಾತ್ರಿಪಡಿಸಬೇಕು. |
| | (*2*) | | A child in conflict with law may be produced before an individual member of the Board, when the Board is not in sitting. | | ಮಂಡಲಿಯ ಸಭೆಗಳು ನಡೆಯದ ಸಂದರ್ಭದಲ್ಲಿ ಕಾನೂನಿನೊಡನೆ ಸಂಘರ್ಷದಲ್ಲಿದ್ದಾರೆಂದು ಶಂಕಿಸಲ್ಪಟ್ಟ ಮಕ್ಕಳನ್ನು ಮಂಡಲಿಯ ಒಬ್ಬ ಸದಸ್ಯರೆದುರು ಹಾಜರಿಸಲ್ಪಡಬಹುದು. |
| | (*3*) | | A Board may act notwithstanding the absence of any member of the Board, and no order passed by the Board shall be invalid by the reason only of the absence of any member during any stage of proceedings:<br>Provided that there shall be atleast two members including the Principal Magistrate present at the time of final disposal of the case or in making an order under sub-section (*3*) of section 18. | | ಮಂಡಲಿಯ ಯಾವುದೇ ಒಬ್ಬ ಸದಸ್ಯರು ಹಾಜರಿಲ್ಲ ಎಂಬ ಕಾರಣದಿಂದ ಮಂಡಲಿಯ ಕಾರ್ಯಕಲಾಪಗಳನ್ನು ತಡೆ ಹಿಡಿಯಲಾಗದು ಮತ್ತು ಯಾವುದೇ ಒಬ್ಬ ಸದಸ್ಯರು ಗೈರು ಹಾಜರಾಗಿದ್ದಾರೆಂಬ ನೆಪದಿಂದ ಯಾವುದೆ ಹಂತದಲ್ಲಿ ಮಂಡಲಿಯು ಹೊರಡಿಸಿದ ನಿರ್ಣಯಗಳು ಅನೂರ್ಜಿತವಾಗುವುದಿಲ್ಲ; ಆದರೆ ಸೆಕ್ಷನ್ 18ರ ಉಪ ಕಾಯ್ದೆ (3)ರರಡಿಯಲ್ಲಿ ಅಂತಿಮ ನಿರ್ಣಯಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಮುಖ್ಯ ದಂಡಾಧಿಕಾರಿಗಳನ್ನೊಳಗೊಂಡಂತೆ ಕನಿಷ್ಠ ಇಬ್ಬರು ಸದಸ್ಯರು ಹಾಜರಿರಬೇಕು. |
| | (*4*) | | In the event of any difference of opinion among the members of the Board in the interim or final disposal, the opinion of the majority shall prevail, but where there is no such majority, the opinion of the Principal Magistrate, shall prevail. | | ತಾತ್ಕಾಲಿಕ ಅಥವ ಅಂತಿಮ ನಿರ್ಣಯಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಮಂಡಳಿಯ ಸದಸ್ಯರ ನಡುವೆ ಭಿನ್ನಾಭಿಪ್ರಾಯ ಮೂಡಿದಲ್ಲಿ ಬಹುಮತದಂತೆ ನಿರ್ಣಯವನ್ನು ತೆಗೆದುಕೊಳ್ಳಬಹುದು ಮತ್ತು ಅಂತಹ ಬಹುಮತದ ಸಂದರ್ಭ ಒದಗದಿದ್ದಲ್ಲಿ, ಮುಖ್ಯ ದಂಡಾಧಿಕಾರಿಗಳು ತೆಗೆದುಕೊಂಡ ನಿರ್ಣಯವೇ ಅಂತಿಮವಾಗುತ್ತದೆ. |
| | | | | | |
| **Sec 8** | | | **Powers functions and responsibilities of the Board.** | | **ಮಕ್ಕಳ ನ್ಯಾಯ ಮಂಡಲಿಯ ಕಾರ್ಯನಿರ್ವಹಣೆ, ಜವಾಬ್ದಾರಿಗಳು ಮತ್ತು ಅಧಿಕಾರಗಳು** |
| | (*1*) | | Notwithstanding anything contained in any other law for the time being in force but save as otherwise expressly provided in this Act, the Board constituted for any district shall have the power to deal exclusively with all the proceedings under this Act, relating to children in conflict with law, in the area of jurisdiction of such Board. | | ನಿರ್ದಿಷ್ಟ ಜಿಲ್ಲೆಗೆಂದು ಮಕ್ಕಳ ನ್ಯಾಯ ಮಂಡಲಿಯನ್ನು ರಚಿಸಿದ್ದಾಗ, ಈ ದೇಶ–ಕಾಲದಲ್ಲಿ ಇನ್ನಾವುದೇ ಕಾಯಿದೆ ಕಟ್ಟಲೆಗಳಲ್ಲಿ ಏನೇ ಹೇಳಿದ್ದರು ಸಹ ಅದನ್ನು ಹೊರತು ಪಡಿಸಿ, ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಕಾನೂನಿನೊಡನೆ ಸಂಘರ್ಷದಲ್ಲಿರುವರೆಂದು ಶಂಕಿಸಲಾದ ಮಕ್ಕಳನ್ನು ಕುರಿತು ವಿಚಾರಣೆ ಕೈಗೊಳ್ಳಲು ಮಂಡಳಿಯು ವಿಶೇಷ ಅಧಿಕಾರವನ್ನು ಹೊಂದಿರುತ್ತದೆ. |
| | (*2*) | | The powers conferred on the Board by or under this Act may also be exercised by the High Court and the Children's Court, when the proceedings come before them under section 19 or in appeal, revision or otherwise. | | ಈ ಕಾಯಿದೆಯಡಿ ಮಂಡಲಿಗೆ ನೀಡಲಾಗಿರುವ ಅಧಿಕಾರಗಳು ಪ್ರಕ್ರಣಗಳು ಸೆ. 19ರಲ್ಲಿರುವಂತೆ ತಮ್ಮೆದುರು ಬಂದಲ್ಲಿ ಬಂದಲ್ಲಿ/ತಮ್ಮೆದುರು ಅಪೀಲು, ಮೇಲ್ಮನವಿ, ಮರು ವಿಚಾರಣೆ ಮತ್ತಿತರ ಸಂದರ್ಭದಲ್ಲಿ ಆಯಾ ರಾಜ್ಯದ ಉಚ್ಚ ನ್ಯಾಯಾಲಯ ಮತ್ತು ಮಕ್ಕಳ ನ್ಯಾಯಾಲಯಗಳಿಗೂ ಸಹ ಇರುತ್ತದೆ. ಅವರೂ ಸಹ ಈ ಕಾಯಿದೆಯ ವಿಚಾರಗಳನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಬಹುದು. |

| | | | | | |
|---|---|---|---|---|---|
| | (*3*) | | The functions and responsibilities of the Board shall include'— | | ಮಂಡಳಿಯ ಕಾರ್ಯ ಮತ್ತು ಜವಾಬ್ದಾರಿಗಳು ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ:– |
| | | (*a*) | ensuring the informed participation of the child and the parent or guardian, in every step of the process; | | ಮೊದಲೇ ಮಾಹಿತಿ ನೀಡಿ ಮಗು ಮತ್ತು ಹೆತ್ತವರು ಅಥವಾ ಪೋಷಕರು ಪ್ರಕ್ರಿಯೆಯ ಎಲ್ಲಾ ಹಂತಗಳಲ್ಲೂ ಭಾಗವಹಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು; |
| | | (*b*) | ensuring that the child's rights are protected throughout the process of apprehending the child, inquiry, aftercare and rehabilitation; | | ಮಗುವನ್ನು ವಶಕ್ಕೆ ತೆಗೆದುಕೊಳ್ಳುವ, ತನಿಖೆ, ಪೋಷಣೆ ಮತ್ತು ಪನರ್ವಸತಿಯ ಎಲ್ಲಾ ಹಂತಗಳಲ್ಲೂ ಮಗುವಿನ ಹಕ್ಕುಗಳನ್ನು ರಕ್ಷಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು; |
| | | (*c*) | ensuring availability of legal aid for the child through the legal services institutions; | | ಕಾನೂನು ಸೇವಾ ಸಂಸ್ಥೆಗಳ ಮೂಲಕ ಮಗುವಿಗೆ ಕಾನೂನು ನೆರವಿನ ಲಭ್ಯತೆಯನ್ನು ಖಾತ್ರಿಪಡಿಸಿಕೊಳ್ಳುವುದು; |
| | | (*d*) | wherever necessary the Board shall provide an interpreter or translator, having such qualifications, experience, and on payment of such fees as may be prescribed, to the child if he fails to understand the language used in the proceedings; | | ತನಿಖಾ ಪ್ರಕ್ರಿಯೆಯಲ್ಲಿ ಬಳಸುವ ಭಾಷೆ ಮಗುವಿಗೆ ಅರ್ಥವಾಗದಿದ್ದಲ್ಲಿ, ಅವಶ್ಯವಿದ್ದಲ್ಲೆಲ್ಲಾ ಮಂಡಳಿಯು ಅರ್ಹತೆ ಮತ್ತು ಅನುಭವವುಳ್ಳ ದುಭಾಷಿಗಳನ್ನು / ಅನುವಾದಕರನ್ನು ನಿರ್ದಿಷ್ಟಪಡಿಸಿದ ಸಂಭಾವನೆಯನ್ನು ನೀಡಿ ಗೊತ್ತುಪಡಿಸಬೇಕು. |
| | | (*e*) | directing the Probation Officer, or in case a Probation Officer is not available to the Child Welfare Officer or a social worker, to undertake a social investigation into the case and submit a social investigation report within a period of fifteen days from the date of first production before the Board to ascertain the circumstances in which the alleged offence was committed; | | ಯಾವ ಪರಿಸ್ಥಿತಿಯಲ್ಲಿ ಮಗುವನ್ನು ಕಾನೂನಿನೊಡನೆ ಸಂಘರ್ಷದಲ್ಲಿದೆ ಎಂದು ಶಂಕಿಸಲಾಗಿದೆ ಎಂಬುದನ್ನು ಕುರಿತು ಪ್ರಕರಣದ ಸಾಮಾಜಿಕ ತನಿಖೆ ನಡೆಸಿ ಸಾಮಾಜಿಕ ತನಿಖೆಯ ವರದಿಯನ್ನು ಮಗುವು ಮಂಡಳಿಯೆದುರು ಹಾಜರಾದ ಹದಿನೈದು ದಿನದೊಳಗೆ ನೀಡಬೇಕೆಂದು ಪರಿವೀಕ್ಷಣಾ ಅಧಿಕಾರಿಗೆ ಅಥವಾ ಪರಿವೀಕ್ಷಣಾ ಅಧಿಕಾರಿಯು ಲಭ್ಯವಿಲ್ಲದಿದ್ದಲ್ಲಿ ಮಕ್ಕಳ ಕಲ್ಯಾಣ ಅಧಿಕಾರಿಗೆ ಅಥವಾ ಸಾಮಾಜಿಕ ಕಾರ್ಯಕರ್ತರಿಗೆ ಮಂಡಳಿಯು ನಿರ್ದೇಶಿಸಬೇಕು. |
| | | (*f*) | adjudicate and dispose of cases of children in conflict with law in accordance with the process of inquiry specified in section 14; | | ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳ ನ್ಯಾಯನಿರ್ಣಯ ಮತ್ತು ಪ್ರಕರಣಗಳ ವಿಲೇವಾರಿಯನ್ನು ಸೆಕ್ಷನ್ 14ರಲ್ಲಿ ಸೂಚಿಸಿರುವ ತನಿಖಾ ಪ್ರಕ್ರಿಯೆಯಂತೆ ನಡೆಸಬೇಕು. |
| | | (*g*) | transferring to the Committee, matters concerning the child alleged to be in conflict with law, stated to be in need of care and protection at any stage, thereby recognising that a child in conflict with law can also be a child in need of care simultaneously and there is a need for the Committee and the Board to be both involved; | | ಕಾನೂನಿನೊಡನೆ ಸಂಘರ್ಷದಲ್ಲಿರುವ ಎಂದು ಶಂಕಿಸಲಾದ ಮಗುವಿಗೆ ಯಾವುದೇ ಹಂತದಲ್ಲಿ ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆ ಇದೆ ಎಂದು ಕಂಡುಬಂದಲ್ಲಿ ಮಗುವನ್ನು ಸಮಿತಿಗೆ ವರ್ಗಾಯಿಸಬೇಕು. ಕಾನೂನಿನೊಡನೆ ಸಂಘರ್ಷದಲ್ಲಿರುವ ಕೆಲವು ಮಕ್ಕಳಿಗೆ ಅದೇ ಸಮಯಕ್ಕೆ ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆಯಿರುವುದರಿಂದ ಸಮಿತಿಗಳು ಮತ್ತು ಮಂಡಳಿಗಳು ಒಟ್ಟಾಗಿ ಕಾರ್ಯನಿರ್ವಹಿಸುವ ಅವಶ್ಯಕತೆಯಿದೆ. |
| | | (*h*) | disposing of the matter and passing a final order that includes an individual care plan for the child's rehabilitation, including follow up by the Probation Officer or the District Child Protection Unit or a member of a non-governmental organisation, as may be required; | | ಪ್ರಕರಣದ ವಿಲೇವಾರಿ ಮತ್ತು ಅಂತಿಮ ತೀರ್ಪನ್ನು ನೀಡುವುದು ಪರಿಸ್ಥಿತಿಗೆ ಅನುಗುಣವಾಗಿ ಪರಿವೀಕ್ಷಣಾ ಅಧಿಕಾರಿಗಳಿಂದ ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅಥವಾ ಸ್ವಯಂಸೇವಾ ಸಂಸ್ಥೆಯ ಸದಸ್ಯರಿಂದ ಅನುಸರಣೆಯೂ ಸೇರಿದಂತೆ ಮಗುವಿನ ಪುನರ್ವಸತಿಯ ವಯಕ್ತಿಕ ಪೋಷಣಾ ಯೋಜನೆಯನ್ನು ಒಳಗೊಂಡಿರಬೇಕು. |
| | | (*i*) | conducting inquiry for declaring fit persons regarding care of children in conflict with law; | | ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳ ಪೋಷಣೆಗೆ ಅರ್ಹ ವ್ಯಕ್ತಿಗಳನ್ನು ಘೋಷಿಸುವುದಕ್ಕೆ ತನಿಖೆಯನ್ನು ಕೈಗೊಳ್ಳಬೇಕು. |

| | | | | | |
|---|---|---|---|---|---|
| | | (*j*) | conducting at least one inspection visit every month of residential facilities for children in conflict with law and recommend action for improvement in quality of services to the District Child Protection Unit and the State Government; | | ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗು ಇರುವ ಸ್ಥಳಕ್ಕೆ ಪ್ರತಿ ತಿಂಗಳೂ ಕನಿಷ್ಠ ಒಂದು ಬಾರಿ ಭೇಟಿ ನೀಡಿ ಅಲ್ಲಿನ ಸೌಲಭ್ಯಗಳನ್ನು ತಿಳಿದುಕೊಳ್ಳುವುದು ಮತ್ತು ಸೇವೆಯ ಗುಣಮಟ್ಟಗಳನ್ನು ಸುಧಾರಿಸಲು ತೆಗೆದುಕೊಳ್ಳಬಹುದಾದ ಕ್ರಮಗಳನ್ನು ಕುರಿತು ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು; |
| | | (*k*) | order the police for registration of first information report for offences committed against any child in conflict with law, under this Act or any other law for the time being in force, on a complaint made in this regard; | | ಕಾನೂನಿನೊಡನೆ ಸಂಘರ್ಷದಲ್ಲಿರುವ ಯಾವುದೇ ಮಗುವಿನ ಮೇಲೆ ಈ ಕಾಯಿದೆಯಲ್ಲಿ ಅಥವಾ ಈಗ ಚಾಲ್ತಿಯಲ್ಲಿರುವ ಯಾವುದೇ ಕಾಯ್ದೆಯಲ್ಲಿ ನಿಷೇಧಿಸಿರುವ ಎಂತಹದೇ ಅಪರಾಧವನ್ನು ಯಾರೆ ಮಾಡಿದ್ದಲ್ಲಿ ಮತ್ತು ಈ ಕುರಿತು ದೂರಿದ್ದಲ್ಲಿ, ಆ ಕುರಿತು ಪೊಲೀಸ್ ದೂರು ದಾಖಲಿಸಲು ನಿರ್ದೇಶಿಸಬೇಕು. |
| | | (*l*) | order the police for registration of first information report for offences committed against any child in need of care and protection, under this Act or any other law for the time being in force, on a written complaint by a Committee in this regard; | | ಪೋಷಣೆ ಮತ್ತು ರಕ್ಷಣೆ ಆವಶ್ಯಕತೆಯಿರುವ ಯಾವುದೇ ಮಗುವಿನ ಮೇಲೆ ಈ ಕಾಯಿದೆಯಲ್ಲಿ ಅಥವಾ ಈಗ ಚಾಲ್ತಿಯಲ್ಲಿರುವ ಯಾವುದೇ ಕಾಯ್ದೆಯಲ್ಲಿ ನಿಷೇಧಿಸಿರುವ ಎಂತಹದೇ ಅಪರಾಧವನ್ನು ಯಾರೆ ಮಾಡಿದ್ದಲ್ಲಿ ಮತ್ತು ಈ ಕುರಿತು ಮಕ್ಕಳ ಕಲ್ಯಾಣ ಸಮಿತಿಯಿಂದ ಲಿಖಿತ ದೂರಿದ್ದಲ್ಲಿ, ಆ ಕುರಿತು ಪೊಲೀಸ್ ದೂರು ದಾಖಲಿಸಲು ನಿರ್ದೇಶಿಸಬೇಕು |
| | | (*m*) | conducting *regular inspection of jails* meant for adults to check if any child is lodged in such jails and take immediate measures for transfer of such a child to the observation home; and | | ವಯಸ್ಕರಿಗೆಂದಿರುವ ಬಂದೀಖಾನೆಗಳ ನಿರಂತರ ತನಿಖೆ ನಡೆಸಿ ಅಲ್ಲಿ ಯಾವುದಾದರೂ ಮಗು ಸೆರೆವಾಸದಲ್ಲಿದ್ದಲ್ಲಿ ಆ ಮಗುವನ್ನು ಪರಿವೀಕ್ಷಣಾ ಗೃಹಕ್ಕೆ ವರ್ಗಾಯಿಸಲು ತಕ್ಷಣ ಕ್ರಮಗಳನ್ನು ಕೈಗೊಳ್ಳಬೇಕು; ಮತ್ತು |
| | | (*n*) | any other function as may be prescribed. | | ನಿರ್ಧಿಷ್ಟಪಡಿಸಬಹುದಾದ ಇತರೆ ಯಾವುದೇ ಕಾರ್ಯಗಳು. |
| | | | | | |
| **Sec 9** | | | **Procedure to be followed by a Magistrate who has not been empowered under this Act.** | | **ಈ ಕಾಯಿದೆಯಡಿ ಅಧಿಕಾರ ಹೊಂದಿಲ್ಲದ ನ್ಯಾಯಾಧೀಶರುಗಳು ಕೈಗೊಳ್ಳಬೇಕಾದ ಪ್ರಕ್ರಿಯೆಗಳು** |
| | (*1*) | | When a Magistrate, not empowered to exercise the powers of the Board under this Act is of the opinion that the person alleged to have committed the offence and brought before him is a child, he shall, without any delay, record such opinion and forward the child immediately along with the record of such proceedings to the Board having jurisdiction. | | ಈ ಕಾಯಿದೆಯಂತೆ ಅಧಿಕಾರವಿಲ್ಲದ ಯಾವುದಾದರೂ ದಂಡಾಧಿಕಾರಿಗಳ ಎದುರು (ಸಾಕ್ಷಿ ಹೇಳಲಲ್ಲದೆ ಬೇರೆ ಉದ್ದೇಶದಿಂದ) ಯಾವುದೇ ಮಗು ಅಥವಾ ಕಾನೂನಿನೊಡನೆ ಸಂಘರ್ಷದಲ್ಲಿರುವರೆಂದು ಶಂಕಿಸಲಾದ ಮಕ್ಕಳನ್ನು ಹಾಜರುಪಡಿಸಿದ್ದೇ ಆದಲ್ಲಿ, ಅಂತಹ ದಂಡಾಧಿಕಾರಿಗಳು ಯಾವುದೇ ವಿಳಂಬವಿಲ್ಲದೆ ಅಂತಹ ಅಭಿಪ್ರಾಯವನ್ನು ದಾಖಲಿಸಿ, ಆ ದಾಖಲೇ ಸಮೇತ ಈ ಕಾಯಿದೆಯಡಿ ನಿರ್ಧರಿಸಲಾದ ಅಧಿಕಾರವುಳ್ಳ ಸಕ್ಷಮ ಮಂಡಳಿಗೆ ಕಳುಹಿಸಬೇಕು. |
| | (*2*) | | In case a person alleged to have committed an offence claims before a court other than a Board, that the person is a child or was a child on the date of commission of the offence, or if the court itself is of the opinion that the person was a child on the date of commission of the offence, the said court shall make an inquiry, take such evidence as may be necessary (but not an affidavit) to determine the age of such person, and shall record a finding on the matter, stating the age of the person as nearly as may be: | | ಕಾನೂನಿನ ಉಲ್ಲಂಘನೆ ಎಂದು ಶಂಕಿಸಲಾದ ಕೃತ್ಯವನ್ನು ಮಾಡಿದವರೆಂದು ಶಂಕಿತರಾದವರನ್ನು ನ್ಯಾಯಾಲಯದ ಎದುರು ಹಾಜರು ಪಡಿಸಿದಾಗ ಅಂತಹ ಶಂಕಿತ ಕೃತ್ಯವನ್ನು ಮಾಡಿದಾಗ ಅವರು ಇನ್ನೂ ಮಕ್ಕಳು ಆಗಿದ್ದರೆಂದು ಅನುಮಾನವು ಬಂದಲ್ಲಿ, ಅಂತಹ ನ್ಯಾಯಾಲಯವು ವಿಚಾರಣೆಯನ್ನು ಮಾಡಿ ಅದಕ್ಕೆ ಅತ್ಯಾವಶ್ಯಕವಾದ ಸಾಕ್ಷಿಗಳನ್ನು ದಾಖಲಿಸಿ (ಅಫಿಡವಿಟ್‌ನ್ನು ಹೊರತು ಪಡಿಸಿ) ಅಂತಹ ವ್ಯಕ್ತಿಯ/ಮಕ್ಕಳ ವಯಸ್ಸನ್ನು ಆದಷ್ಟೂ ಹತ್ತಿರದಲ್ಲಿ ನಿಗಧಿಪಡಿಸಿ, ಆ ವ್ಯಕ್ತಿ ಮಗುವು ಹೌದೋ ಅಲ್ಲವೋ ಎಂದು ನಿರ್ಧರಿಸಬಹುದು. |

| | | | | |
|---|---|---|---|---|
| | | | Provided that such a claim may be raised before any court and it shall be recognized at any stage, even after final disposal of the case, and such a claim shall be determined in accordance with the provisions contained in this Act and the rules made there under even if the person has ceased to be a child on or before the date of commencement of this Act. | ಈ ರೀತಿ ನಿರ್ಧರಿಸಲ್ಪಟ್ಟ ವಯಸ್ಸನ್ನು ಕುರಿತು ಯಾವುದೇ ಸಂದರ್ಭದಲ್ಲೂ ಯಾವುದೇ ನ್ಯಾಯಾಲಯದೆದುರು ಪ್ರಶ್ನಿಸಲು–ಈ ಪ್ರಕರಣವನ್ನು ಪೂರ್ಣವಾಗಿ ಮುಗಿಸಿದ ಮೇಲೂ– ಅಧಿಕಾರವಿರುತ್ತದೆ. ಆದರೆ ಈ ರೀತಿಯ ಪ್ರಶ್ನೆಗಳನ್ನು ಈ ಕಾಯಿದೆಯ ಮಿತಿಗಳಲ್ಲಿ ಮತ್ತು ಆ ಕುರಿತು ಮಾಡಿರುವ ನಿಯಮಗಳನ್ವಯ ನಡೆಸಿ, ಈ ಕಾಯಿದೆಯು ಚಾಲ್ತಿಗೆ ಬಂದ ಅಥವಾ ಬಂದ ಮೇಲೆ ಅಂತಹ ವ್ಯಕ್ತಿ ತನ್ನ ಬಾಲ್ಯಾವಸ್ಥೆ ಮೀರಿದ ಸಂದರ್ಭದಲ್ಲೂ ಸಹ ಈ ನಿಯಮ ಚಾಲ್ತಿಯಲ್ಲಿರುತ್ತದೆ |
| | (*3*) | | If the court finds that a person has committed an offence and was a child on the date of commission of such offence, it shall forward the child to the Board for passing appropriate orders and the sentence, if any, passed by the court shall be deemed to have no effect. | ಒಬ್ಬ ವ್ಯಕ್ತಿಯು ಆಪರಾಧಿಕ ಕೃತ್ಯ ಮಾಡಿದ್ದಾರೆಂದೂ, ಹಾಗೆ ಕೃತ್ಯ ಮಾಡಿದಾಗ ಅವರು ಮಗುವಾಗಿದ್ದರೆಂದು ನ್ಯಾಯಾಲಯವು ಕಂಡುಕೊಂಡಾಗ, ಅಂತಹ ಮಕ್ಕಳನ್ನು ಆಯಾ ನ್ಯಾಯಾಲಯವು 'ಮಂಡಳಿ'ಗೆ ಸೂಕ್ತ ನಿರ್ದೇಶನ ನೀಡಲು ವರ್ಗಾಯಿಸಬೇಕು, ಮತ್ತು ನ್ಯಾಯಾಲಯವು ಮಕ್ಕಳನ್ನು ಕುರಿತು ನೀಡಿರುವ ಯಾವುದೇ ತೀರ್ಪು ಎಂತಹದೇ ಪರಿಣಾಮ ಹೊಂದಿರುವುದಿಲ್ಲ. |
| | (*4*) | | In case a person under this section is required to be kept in protective custody, while the person's claim of being a child is being inquired into, such person may be placed, in the intervening period in a place of safety. | ವಿಚಾರಣೆ ನಡೆಸುತ್ತಿರುವ ಯಾವುದೇ ವ್ಯಕ್ತಿಯು ತಾನು ಮಗುವೆಂದು ಹೇಳಿಕೊಂಡಲ್ಲಿ ಈ ಸೆಕ್ಷನ್ ಅಡಿಯಲ್ಲಿ ಅಂತಹ ವ್ಯಕ್ತಿಯನ್ನು ರಕ್ಷಣಾ ಸುಪರ್ದಿಯಲ್ಲಿಡುವ ಅವಶ್ಯಕತೆ ಇದ್ದಲ್ಲಿ, ಅವರನ್ನು ತನಿಖಾ ಅವಧಿಯುದ್ದಕ್ಕೂ ಸುರಕ್ಷಿತ ಸ್ಥಳದಲ್ಲಿರಿಸಬೇಕು. |

## Chapter IV Procedures in relation to children in conflict with law
**ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು ಕುರಿತು ಪ್ರಕ್ರಿಯೆಗಳು**

| Sec | | | | |
|---|---|---|---|---|
| **10.** | | | **Apprehension of child alleged to be in conflict with law.** | **ಕಾನೂನಿನೊಡನೆ ಸಂಘರ್ಷದಲ್ಲಿರುವರೆಂದು ಆಪಾದಿಸಲಾದ ಮಕ್ಕಳನ್ನು ವಶಕ್ಕೆ ತೆಗೆದುಕೊಳ್ಳುವುದು** |
| | (*1*) | | As soon as a child alleged to be in conflict with law is apprehended by the police, such child shall be placed under the charge of the special juvenile police unit or the designated child welfare police officer, who shall produce the child before the Board without any loss of time but within a period of twenty-four hours of apprehending the child excluding the time necessary for the journey, from the place where such child was apprehended:<br><br>Provided that in no case, a child alleged to be in conflict with law shall be placed in a police lockup or lodged in a jail. | ಕಾನೂನಿನೊಡನೆ ಸಂಘರ್ಷದಲ್ಲಿರುವ ಯಾವುದೇ ಮಗುವನ್ನು ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡ ತಕ್ಷಣವೇ ಆ ಮಗುವನ್ನು ಆಯಾ ಪೊಲೀಸ್ ಠಾಣೆಯ ನಿಗದಿತ ಮಕ್ಕಳ ವಿಶೇಷ ಪೊಲೀಸ್ ಘಟಕದ ಅಡಿಯಲ್ಲಿರಿಸಬೇಕು ಮತ್ತು ಈ ಘಟಕದವರೇ ಯಾವುದೇ ತಡವಿಲ್ಲದೆ, ಮಗುವನ್ನು ವಶಕ್ಕೆ ತೆಗೆದುಕೊಂಡ ಸ್ಥಳದಿಂದ ಪ್ರಯಾಣದ ಸಮಯವನ್ನು ಹೊರತು ಪಡಿಸಿ, 24 ಘಂಟೆಗಳೊಳಗೆ ಮಕ್ಕಳ ನ್ಯಾಯ ಮಂಡಳಿಯೆದುರು ಹಾಜರುಪಡಿಸಬೇಕು.<br><br>ಎಂತಹದೇ ಸಂದರ್ಭದಲ್ಲಿಯೂ ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು ಯಾವುದೇ ಕಾರಣಕ್ಕೂ ಯಾವುದೇ ಪೊಲೀಸ್ ಠಾಣೆಯ ಕೋಣೆ, ಬಂಧೀಖಾನೆ/ಜೈಲಿನಲ್ಲಿ ಇರಿಸಬಾರದು. |
| | (*2*) | | The State Government shall make rules consistent with this Act,— | ಈ ಮುಂದಿನವುಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರವು ನಿಯಮಗಳನ್ನು ರಚಿಸಬಹುದು : |
| | | (*i*) | to provide for persons through whom (including registered voluntary or non-governmental organisations) any child alleged to be in conflict with law may be produced before the Board; | ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು (ನೋಂದಾಯಿತವಾದ ಸ್ವಯಂಸೇವಾ ಸಂಘಟನೆಗಳನ್ನೂ ಒಳಗೊಂಡಂತೆ) ಮಕ್ಕಳ ನ್ಯಾಯ ಮಂಡಳಿಯೆದುರು ಹಾಜರು ಪಡಿಸಲು ನಿರ್ದಿಷ್ಟ ವ್ಯಕ್ತಿಗಳೊಡನೆ ವ್ಯವಸ್ಥೆಗಳನ್ನು ಮಾಡುವುದು. |
| | | (*ii*) | to provide for the manner in which the child alleged to be in conflict with law may be sent to an observation home or place of safety, as the case may be. | ಹಾಗೆ ಹಾಜರು ಪಡಿಸಲಾಗುವ ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು ಪರಿವೀಕ್ಷಣಾಲಯಗಳಿಗೆ ಕಳುಹಿಸುವ ವಿಧಿ ವಿಧಾನಗಳನ್ನು ವಿವರಿಸಿ ಒದಗಿಸುವುದು |
| | | | | |
| **Sec 11.** | | | **Role of person in whose charge child in conflict with law is placed.** | **ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳ ಸುಪರ್ದಿ ಹೊಂದಿರುವ ವ್ಯಕ್ತಿಗಳ ಪಾತ್ರ** |
| | | | Any person in whose charge a child in conflict with law is placed, shall while the order is in force, have responsibility of the said child, as if the said person was the child's parent and responsible for the child's maintenance:<br><br>Provided that the child shall continue in such person's charge for the period stated by the Board, notwithstanding that the said child is claimed by the parents or any other person except when the Board is of the opinion that the parent or any other person are fit to exercise charge over such child. | ಯಾರ ವಶದಲ್ಲಿ ಮಗು/ಮಕ್ಕಳನ್ನು ಇರಿಸಲಾಗುತ್ತದೋ, ಅಂತಹವರು ಆ ಮಗುವಿನ/ಮಕ್ಕಳ ಪೋಷಕರು ಅಥವಾ ಇತರ ವ್ಯಕ್ತಿಗಳು ಬಂದು ತಮ್ಮ ವಶಕ್ಕೆ ತೆಗೆದುಕೊಳ್ಳುವವರೆಗೆ, ಅಂತಹ ಮಕ್ಕಳ ನಿಜವಾದ ಪೋಷಕರು ಆಯಾ ಮಕ್ಕಳನ್ನು ನೋಡಿಕೊಳ್ಳುವ ಯಾವುದೆಲ್ಲಾ ಜವಾಬ್ದಾರಿಗಳನ್ನು ಹೊರಬೇಕಾಗುತ್ತದೋ ಅದನ್ನು ನಿರ್ವಹಿಸಬೇಕು.<br><br>ಪೋಷಕರು ಅಥವಾ ಇನ್ನಿತರ ಯಾವುದೇ ವ್ಯಕ್ತಿ ಮಂಡಳಿಯ ಸುಪರ್ದಿಯಿಂದ ಮಗು/ ಮಕ್ಕಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಮುಂದೆ ಬಂದಾಗ, ಅಂತಹ ವ್ಯಕ್ತಿಗಳು ಮಗುವನ್ನು ಪಡೆಯಲು ಅರ್ಹರು ಎಂದು ಮಂಡಳಿಯು ನಿರ್ದೇಶಿಸುವವರೆಗೆ, ಮಂಡಳಿಯ ಆದೇಶ ಜಾರಿ ಇರುವ ತನಕ ಮಗು ನಿರ್ದಿಷ್ಟ ವ್ಯಕ್ತಿಗಳ ಸುಪರ್ದಿಯಲ್ಲಿರುವುದು. |
| | | | | |

| | | | | |
|---|---|---|---|---|
| **Sec 12.** | | | **Bail to a person who is apparently a child alleged to be in conflict with law.** | **ಕಾನೂನಿನೊಡನೆ ಸಂಘರ್ಷದಲ್ಲಿರುವವರೆಂದು ಆಪಾದಿಸಲಾದ ವ್ಯಕ್ತಿಗಳಿಗೆ ಜಾಮೀನು** |
| | (*1*) | | When any person, who is apparently a child and is alleged to have committed a bailable or non-bailable offence, is apprehended or detained by the police or appears or brought before a Board, such person shall, notwithstanding anything contained in the Code of Criminal Procedure, 1973 or in any other law for the time being in force, *<u>be released on bail with or without surety</u>* or placed under the supervision of a probation officer or under the care of any fit person:<br><br>Provided that such person shall *<u>not be so released</u>* if there appears reasonable grounds for believing that the release is likely to bring that person into association with any known criminal or expose the said person to moral, physical or psychological danger or the person's release would defeat the ends of justice, and the Board shall record the reasons for denying the bail and circumstances that led to such a decision. | ಜಾಮೀನಿನ ಮೇಲೆ ಬಿಡುಗಡೆಗೆ ಅರ್ಹವಾದ ಅಥವಾ ಅನರ್ಹವಾದ ಕಾನೂನುಗಳನ್ನು ಉಲ್ಲಂಘನೆ ಮಾಡಿ ಯಾವುದೇ ವ್ಯಕ್ತಿ ಬಂಧಿತನಾಗಿದ್ದಲ್ಲಿ ಅಥವಾ ತಡೆ ಹಿಡಿಯಲ್ಪಟ್ಟು ಅಂತಹ ವ್ಯಕ್ತಿ 'ಮಗು' ಎಂದು ಗುರುತಿಸಲ್ಪಟ್ಟು, ಮಕ್ಕಳ ನ್ಯಾಯ ಮಂಡಳಿಯೆದುರು ತಂದಾಗ, ಅಪರಾಧ ಪ್ರಕ್ರಿಯಾ ಸಂಹಿತೆ **(CrPC)** 1973ಲ್ಲಿ ಯಾವುದೇ ನಿಯಮ ಹೇಳಿದ್ದರೂ, ಅಥವಾ ಸದ್ಯದಲ್ಲಿ ಚಾಲ್ತಿಯಲ್ಲಿರುವ ಯಾವುದೇ ಕಾಯಿದೆಯಲ್ಲಿ ಹೇಳಿದ್ದರೂ ಸಹ, ಅಂತಹ ಮಕ್ಕಳನ್ನು ಯಾವುದೇ ಜಾಮೀನು/ಆಧಾರ ಇಟ್ಟುಕೊಂಡು ಅಥವಾ ಇಲ್ಲದೆಯೂ ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು ಅಥವಾ ಪರಿವೀಕ್ಷಣಾಧಿಕಾರಿಗಳ ಅಥವಾ ಅರ್ಹ ಸಂಸ್ಥೆ, ಅರ್ಹ ವ್ಯಕ್ತಿಯ ಉಸ್ತುವಾರಿಯಲ್ಲಿ ಇರಿಸಬೇಕು.<br><br>ಆದರೆ, ಹೀಗೆ ಜಾಮೀನಿನ ಮೇಲೆ ಬಿಡುಗಡೆ ಮಾಡುವುದರಿಂದ ಮಗು ಅಪರಾಧಿಗಳ ಸಂಗಕ್ಕೆ / ವಶಕ್ಕೆ ಬೀಳುವ ಅಥವಾ ಮಗುವಿನ ನೈತಿಕ, ದೈಹಿಕ ಅಥವಾ ಮಾನಸಿಕ ಸ್ವಾಸ್ಥ್ಯಕ್ಕೆ ತೊಂದರೆ ಆಗುವ ಅಪಾಯವಿದ್ದಲ್ಲಿ ಅಥವಾ ಮಗುವನ್ನು ಬಿಡುಗಡೆ ಮಾಡುವುದರಿಂದ ನ್ಯಾಯ ನೀಡುವ ಪ್ರಕ್ರಿಯೆಗೆ ಅಪಾಯ ಉಂಟಾಗುತ್ತದೆ ಎಂದಾದಲ್ಲಿ ಅಂತಹ ಮಕ್ಕಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬಾರದು. |
| | | (*2*) | When such person having been apprehended is not released on bail under subsection (*1*) by the officer-in-charge of the police station, such officer shall cause the person to be kept only in an observation home in such manner as may be prescribed until the person can be brought before a Board. | ಯಾವುದಾದರೂ ಮಗುವನ್ನು ವಶಕ್ಕೆ ಪಡೆದಿದ್ದು, ಮಗುವಿನ ಉಸ್ತುವಾರಿ ಮಾಡುವ ಪೊಲೀಸ್ ಠಾಣೆಯ ಅಧಿಕಾರಿಗಳು ಈ ಮೇಲಿನ ಉಪ ಸೆಕ್ಷನ್ (1) ರಂತೆ ಜಾಮೀನಿನ ಮೇಲೆ ಬಿಡುಗಡೆ ಮಾಡಿಲ್ಲದೇ ಇದ್ದ ಪಕ್ಷದಲ್ಲಿ, ಮಕ್ಕಳ ನ್ಯಾಯ ಮಂಡಳಿಯೆದುರು ಆ ಮಗುವನ್ನು ಕರೆತರುವ ತನಕ ಚಾಲ್ತಿಯಲ್ಲಿರುವ ನಿಯಮ ಮತ್ತು ವಿಧಾನದಲ್ಲಿ ಸಂಬಂಧಿಸಿದ ಪರಿವೀಕ್ಷಣಾಲಯದಲ್ಲಿಯೇ ಇರಿಸಬೇಕು. |
| | | (*3*) | When such person is not released on bail under sub-section (*1*) by the Board, it shall make an order sending him to an observation home or a place of safety, as the case may be, for such period during the pendency of the inquiry regarding the person, as may be specified in the order. | ಮಕ್ಕಳ ನ್ಯಾಯ ಮಂಡಳಿಯು ಈ ಮೇಲಿನ ಉಪ ಸೆಕ್ಷನ್ (1) ರಂತೆ ಮಗುವನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡದೇ ಇದ್ದ ಪಕ್ಷದಲ್ಲಿ, ಆ ಮಗುವನ್ನು ಬಂಧೀಖಾನೆಗೆ ಕಳುಹಿಸುವ ಬದಲು, ಮಗುವನ್ನು ಸಂಬಂಧಿಸಿದ ಪ್ರಕರಣವು ತನಿಖೆಯಾಗಿ ಇತ್ಯರ್ಥವಾಗುವ ತನಕ ಪರಿವೀಕ್ಷಣಾಲಯದಲ್ಲಿ ಅಥವಾ ಸುರಕ್ಷಿತ ಸ್ಥಳದಲ್ಲಿ ಇರಿಸಲು ಮಂಡಳಿಯು ನಿರ್ದೇಶಿಸಬಹುದು. |
| | | (*4*) | When a child in conflict with law is unable to fulfill the conditions of bail order within seven days of the bail order, such child shall be produced before the Board for modification of the conditions of bail. | ಕಾನೂನಿನೊಡನೆ ಸಂಘರ್ಷದಲ್ಲಿರುವ ಯಾವುದೇ ಮಗು ಜಾಮೀನು ಆದೇಶದ ಷರತ್ತುಗಳನ್ನು ಜಾಮೀನು ಆದೇಶ ಹೊರಡಿಸಿದ ಏಳು ದಿನಗಳೊಳಗೆ ಪೂರೈಸಲು ವಿಫಲರಾದಲ್ಲಿ ಅಂತಹ ಮಗುವನ್ನು ಜಾಮೀನು ಷರತ್ತುಗಳ ಬದಲಾವಣೆಗಾಗಿ ಮಂಡಳಿಯ ಮುಂದೆ ಹಾಜರುಪಡಿಸಬೇಕು. |
| | | | | |

| | | | | |
|---|---|---|---|---|
| **Sec 13** | | | **Information to parents, guardian or probation officer.** | **ಮಕ್ಕಳ ಮಾಹಿತಿಯನ್ನು ತಾಯಿ/ತಂದೆ, ಪೋಷಕರು ಅಥವಾ ಪರಿವೀಕ್ಷಣಾಧಿಕಾರಿಗಳಿಗೆ ನೀಡುವುದು** |
| | (*1*) | | Where a child alleged to be in conflict with law is apprehended, the officer designated as Child Welfare Police Officer of the police station, or the special juvenile police unit to which such child is brought, shall, as soon as possible after apprehending the child, inform - | ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು ಪೊಲೀಸ್ ಠಾಣೆಯ ಅಧಿಕಾರಿಗಳು ವಶಕ್ಕೆ ತೆಗೆದುಕೊಂಡಾಗ ಆಯಾ ಠಾಣೆಯ ನಿಗದಿತ ಮಕ್ಕಳ ಕಲ್ಯಾಣಾಧಿಕಾರಿ ಅಥವಾ ಮಕ್ಕಳ ವಿಶೇಷ ಪೊಲೀಸ್ ಘಟಕದವರೆದುರು ಮಗುವನ್ನು ತಂದಾಗ, ಅವರು ಆದಷ್ಟೂ ಶೀಘ್ರವಾಗಿ ಈ ಮುಂದಿನವರಿಗೆ ಸುದ್ದಿಯನ್ನು ಮುಟ್ಟಿಸಬೇಕು. |
| | | (*i*) | the parent or guardian of such child, if they can be found, and direct them to be present at the Board before which the child is produced; and | ಮಗುವಿನ ಪೋಷಕರು, ತಂದೆ ತಾಯಿ ಪತ್ತೆಯಾದಲ್ಲಿ ಅವರಿಗೆ ತಿಳಿಸಿ, ಮಗುವನ್ನು ಹಾಜರು ಪಡಿಸಲಿರುವ ಮಕ್ಕಳ ನ್ಯಾಯ ಮಂಡಳಿಯೆದುರು ಬರಲು ತಿಳಿಸಬೇಕು; ಮತ್ತು |
| | | (*ii*) | the probation officer, or if no probation officer is available, a Child Welfare Officer, for preparation and submission within two weeks to the Board, a social investigation report containing information regarding the antecedents and family background of the child and other material circumstances likely to be of assistance to the Board for making the inquiry. | ಮಕ್ಕಳ ನ್ಯಾಯ ಮಂಡಳಿಯು ಮಗುವನ್ನು ಕುರಿತು ಸೂಕ್ತ ವಿಚಾರಣೆ ಮತ್ತು ನಿರ್ಧಾರವನ್ನು ಕೈಗೊಳ್ಳಲು ಸಂಬಂಧಿಸಿದ ಪರಿವೀಕ್ಷಣಾಧಿಕಾರಿಗಳು ಅಥವಾ ಪರಿವೀಕ್ಷಣಾಧಿಕಾರಿಗಳು ಲಭ್ಯವಿಲ್ಲದಿದ್ದಲ್ಲಿ ಮಕ್ಕಳ ಕಲ್ಯಾಣ ಅಧಿಕಾರಿಗಳು ಮಂಡಳಿಯ ತನಿಖೆಗೆ ಸಹಾಯವಾಗುವಂತೆ ಆ ಮಗುವಿನ ಹಿಂದಿನ ಚಟುವಟಿಕೆಗಳು ಕುಟುಂಬದ ಹಿನ್ನೆಲೆ, ಪರಿಸ್ಥಿತಿ ಮತ್ತಿತರ ವಿಚಾರಗಳನ್ನು ಕುರಿತು ಮಾಹಿತಿಗಳನ್ನು ಒಳಗೊಂಡ ಸಾಮಾಜಿಕ ತನಿಖೆಯ ವರದಿಯನ್ನು ಎರಡು ವಾರದೊಳಗೆ ಮಂಡಳಿಗೆ ಸಲ್ಲಿಸಬೇಕು. |
| | (*2*) | | Where a child is released on bail, the probation officer or the Child Welfare Officer shall be informed by the Board. | ಮಗುವನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದಲ್ಲಿ, ಆ ಮಾಹಿತಿಯನ್ನು ಮಂಡಳಿಯು ಪರಿವೀಕ್ಷಾಧಿಕಾರಿಗಳು ಅಥವಾ ಮಕ್ಕಳ ಕಲ್ಯಾಣ ಅಧಿಕಾರಿಗಳಿಗೆ ತಿಳಿಸಬೇಕು. |
| | | | | |
| **Sec 14** | | | **Inquiry by Board regarding child in conflict with law.** | **ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವನ್ನು ಕುರಿತು ಮಂಡಲಿಯಿಂದ ವಿಚಾರಣೆ** |
| | (*1*) | | Where a child alleged to be in conflict with law is produced before Board, the Board shall hold an inquiry in accordance with the provisions of this Act and may pass such orders in relation to such child as it deems fit under sections 17 and 18 of this Act. | ಕಾನೂನಿನೊಡನೆ ಸಂಘರ್ಷದಲ್ಲಿದ್ದಾರೆಂದು ಆಪಾದಿಸಲಾಗಿರುವ ಮಕ್ಕಳನ್ನು ಮಕ್ಕಳ ನ್ಯಾಯ ಮಂಡಳಿಯೆದುರು ತಂದಾಗ, ಈ ಕಾಯಿದೆಯಡಿ ನೀಡಲಾಗಿರುವ ಅವಕಾಶಗಳಂತೆ, ಮಕ್ಕಳ ನ್ಯಾಯ ಮಂಡಳಿಯು ವಿಚಾರಣೆ ನಡೆಸಿ ಕಾಯ್ದೆಯ ಸೆಕ್ಷನ್ 17 ಮತ್ತು 18ರ ಅಡಿಯಲ್ಲಿ ಯಾವುದು ಸೂಕ್ತವೋ ಆ ರೀತಿಯಲ್ಲಿ ನಿರ್ದೇಶನಗಳನ್ನು ನೀಡಬಹುದು. |
| | (*2*) | | The inquiry under this section shall be completed within a period of four months from the date of first production of the child before the Board, unless the period is extended, for a maximum period of two more months by the Board, having regard to the circumstances of the case and after recording the reasons in writing for such extension. | ಈ ಸೆಕ್ಷನ್ನಿನಂತೆ ಮಗುವನ್ನು ಮಕ್ಕಳ ನ್ಯಾಯ ಮಂಡಳಿಯೆದುರು ಹಾಜರು ಪಡಿಸಿ ಪ್ರಕರಣದ ವಿಚಾರಣೆ ಆರಂಭವಾದ ನಾಲ್ಕು ತಿಂಗಳೊಳಗೆ ಎಲ್ಲ ರೀತಿಯ ಪ್ರಕ್ರಿಯೆಗಳನ್ನು ಮುಗಿಸಬೇಕು. ಆದರೆ ಪರಿಸ್ಥಿತಿ ಮತ್ತು ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೂ ಹೆಚ್ಚಿನ ಕಾಲಾವಧಿ ಬೇಕೆಂದು ಕಂಡುಬಂದಲ್ಲಿ ಆ ಕುರಿತು ಕಾರಣಗಳನ್ನು ಲಿಖಿತ ರೂಪದಲ್ಲಿ ದಾಖಲಿಸಿ ಗರಿಷ್ಟ 2 ತಿಂಗಳ ಹೆಚ್ಚಿನ ಅವಧಿಯವರೆಗೆ ಮುಂದುವರೆಸಬಹುದು. |
| | (*3*) | | A preliminary assessment in case of heinous offences under section 15 shall be disposed of by the Board within a period of three months from the date of first production of the child before the Board. | ಘೋರ ಆಪರಾಧಿಕ ಕೃತ್ಯಗಳ ಪ್ರಕರಣಗಳಲ್ಲಿ ಸೆ.15ರ ಅಡಿಯಲ್ಲಿ ನಿರ್ದೇಶಿಸಿರುವಂತೆ ಪೂರ್ವಭಾವಿ ಮೌಲ್ಯಮಾಪನವನ್ನು ಮಗುವು ಮಂಡಳಿಯ ಮುಂದ ಹಾಜರಾದ ಮೊದಲ ದಿನದಿಂದ ಮೂರು ತಿಂಗಳೊಳಗೆ ವಿಲೇವಾರಿ ಮಾಡಬೇಕು. |

| | | | |
|---|---|---|---|
| (*4*) | | If inquiry by the Board under sub-section (*2*) for petty offences remains inconclusive even after the extended period, the proceedings shall stand terminated:<br><br>Provided that for serious or heinous offences, in case the Board requires further extension of time for completion of inquiry, the same shall be granted by the Chief Judicial Magistrate or, as the case may be, the Chief Metropolitan Magistrate, for reasons to be recorded in writing. | ಚಿಕ್ಕ ಪುಟ್ಟ ಆಪರಾಧಿಕ ಕೃತ್ಯಗಳಿಗೆ ಸಂಬಂಧಿಸಿದಂತೆ ಉಪ ಸೆ. (2)ರಂತೆ ಮಂಡಳಿಯ ವಿಚಾರಣೆಗಳು ಹೆಚ್ಚಿನ ಕಾಲಾವಧಿಯನ್ನು ಕೊಟ್ಟ ಮೇಲೂ ಅನಿಶ್ಚಿತವಾಗಿ ಉಳಿದಲ್ಲಿ, ಪ್ರಕ್ರಿಯೆಯು ರದ್ದಾದಂತೆಯೇ:<br><br>ಆದರೆ, ಗಂಭೀರ ಮತ್ತು ಘೋರ ಆಪರಾಧಿಕ ಕೃತ್ಯಗಳಿಗೆ ಸಂಬಂಧಿಸಿದಂತೆ, ವಿಚಾರಣೆ ನಡೆಸಲು ಮಂಡಳಿಗೆ ಇನ್ನೂ ಹೆಚ್ಚಿನ ಸಮಯದ ಆವಶ್ಯಕತೆಯಿದ್ದಲ್ಲಿ ಈ ಕುರಿತು ಮುಖ್ಯ ನ್ಯಾಯಾಧೀಶರಿಗೆ ಅಥವಾ ಪ್ರಕರಣಕ್ಕೆ ಸಂಬಂಧಿಸಿದಂತೆ, ಮುಖ್ಯ ಮೆಟ್ರೋಪಾಲಿಟನ್ ನ್ಯಾಯಾಧೀಶರಿಗೆ ಬರಹದಲ್ಲಿ ಕಾರಣಗಳನ್ನು ವಿವರಿಸಿ ಹೆಚ್ಚಿನ ಅವಧಿಯನ್ನು ಪಡೆಯಬಹುದು. |
| (*5*) | | The Board shall take the following steps to ensure fair and speedy inquiry, namely:— | ಮಂಡಳಿಯು ನ್ಯಾಯಬದ್ಧ ಮತ್ತು ತ್ವರಿತ ವಿಚಾರಣೆಗಾಗಿ ಈ ಕೆಳಗಿನ ಕ್ರಮಗಳನ್ನು ಅನುಸರಿಸುವುದನ್ನು ಖಾತ್ರಿಗೊಳಿಸಬೇಕು:– |
| | (*a*) | at the time of initiating the inquiry, the Board shall satisfy itself that the child in conflict with law has not been subjected to any ill-treatment by the police or by any other person, including a lawyer or probation officer and take corrective steps in case of such ill-treatment; | ತನಿಖೆಯನ್ನು ಪ್ರಾರಂಭಿಸುವ ಸಮಯದಲ್ಲಿ ಮಂಡಳಿಯು ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವು ಪೋಲಿಸ್ ಅಥವಾ ವಕೀಲರು, ಪರಿವೀಕ್ಷಣಾಧಿಕಾರಿಗಳು ಸೇರಿದಂತೆ ಯಾರಿಂದಲೂ ದುರ್ವರ್ತನೆಗೆ ಒಳಗಾಗಿಲ್ಲವೆಂದು ಮನವರಿಕೆ ಮಾಡಿಕೊಳ್ಳಬೇಕು, ಹಾಗಾಗಿದ್ದಲ್ಲಿ ಅದಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. |
| | (*b*) | in all cases under the Act, the proceedings shall be conducted in simple manner as possible and care shall be taken to ensure that the child, against whom the proceedings have been instituted, is given child-friendly atmosphere during the proceedings; | ಈ ಕಾಯ್ದೆಯಡಿಯ ಎಲ್ಲಾ ಪ್ರಕರಣಗಳಲ್ಲಿ, ಎಲ್ಲಾ ವಿಚಾರಣೆಯನ್ನು ಸಾಧ್ಯವಾದಷ್ಟೂ ಸರಳವಾಗಿ ನಡೆಸಬೇಕು ಮತ್ತು ಯಾವ ಮಗುವಿನ ವಿರುದ್ಧ ವಿಚಾರಣೆ ನಡೆಯುತ್ತಿದೆಯೋ ಆ ಮಗುವಿನ ಪೋಷಣೆಯ ಕುರಿತು ನಿಗಾ ವಹಿಸಬೇಕು ಮತ್ತು ವಿಚಾರಣೆಯ ಹಂತಗಳಲ್ಲಿ ಮಕ್ಕಳ ಸ್ನೇಹಿ ವಾತಾವರಣವನ್ನು ಒದಗಿಸಬೇಕು. |
| | (*c*) | every child brought before the Board shall be *given the opportunity of being heard* and participate in the inquiry; | ಮಂಡಳಿಯ ಮುಂದು ಬರುವ ಪ್ರತಿಯೊಂದು ಮಗುವಿಗೂ ತನ್ನ ಅಭಿಪ್ರಾಯವನ್ನು ಹೇಳುವ ಮತ್ತು ತನಿಖೆಯಲ್ಲಿ ಭಾಗವಹಿಸುವ ಅವಕಾಶವನ್ನು ನೀಡಬೇಕು. |
| | (*d*) | cases of *petty offences*, shall be disposed of by the Board through *summary proceedings*, as per the procedure prescribed under the Code of Criminal Procedure, 1973; | ಸಣ್ಣ ಆಪರಾಧಿಕ ಪ್ರಕರಣಗಳನ್ನು ಅಪರಾಧ ಪ್ರಕ್ರಿಯಾ ಸಂಹಿತೆ (CrPC) 1973ರಲ್ಲಿ ಸೂಚಿಸಿರುವ ಪ್ರಕ್ರಿಯೆಗಳ ಅಡಿಯಲ್ಲಿ ಮಂಡಳಿಯು ಸಂಕ್ಷಿಪ್ತವಾದ ವಿಚಾರಣೆಯ ಮೂಲಕ ವಿಲೇವಾರಿ ಮಾಡಬೇಕು. |
| | (*e*) | inquiry of serious offences shall be disposed of by the Board, by following the procedure, for trial in summons cases under the Code of Criminal Procedure, 1973; | ತೀವ್ರ ಆಪರಾಧಿಕ ಪ್ರಕರಣಗಳನ್ನು ಅಪರಾಧ ಪ್ರಕ್ರಿಯಾ ಸಂಹಿತೆ (CrPC) 1973ರಲ್ಲಿ ಸೂಚಿಸಿರುವ ಸಮನ್ಸ್ ಪ್ರಕರಣಗಳ ಪ್ರಕ್ರಿಯೆಗಳ ಅಡಿಯಲ್ಲಿ ವಿಚಾರಣೆ ನಡೆಸಿ ವಿಲೇವಾರಿ ಮಾಡಬೇಕು. |
| | (*f*) | inquiry of heinous offences,— | ಘೋರ ಆಪರಾಧಿಕ ಕೃತ್ಯಗಳ ತನಿಖೆಯನ್ನು:– |
| | | (i) for child **below the age of sixteen years** as on the date of commission of an offence shall be disposed of by the Board under clause (*e*);<br>(ii) for child ***above the age of sixteen years*** as on the date of commission of an offence shall be dealt with in the manner prescribed under section 15. | (i) ಆಪರಾಧಿಕ ಕೃತ್ಯ ಎಸಗಿದ ದಿನದಂದು ಮಗುವಿನ ವಯಸ್ಸು ಹದಿನಾರು ವರ್ಷಕ್ಕಿಂತ ಕಡಿಮೆಯಿದ್ದಲ್ಲಿ ಮೇಲಿನ ಕ್ಲಾಝ್ (ಇ) ಅಡಿಯಲ್ಲಿ ಮಂಡಳಿಯ ಪ್ರಕರಣದ ವಿಲೇ ಮಾಡಬೇಕು.<br>(ii) ಆಪರಾಧಿಕ ಕೃತ್ಯ ಎಸಗಿದ ದಿನದಂದು ಮಗುವಿನ ವಯಸ್ಸು ಹದಿನಾರು ವರ್ಷಕ್ಕಿಂತ ಹೆಚ್ಚಿದ್ದಲ್ಲಿ ಸೆಕ್ಷನ್ 15ರಡಿಯಲ್ಲಿ ಸೂಚಿಸಿರುವ ವಿಧಿವಿಧಾನಗಳ ಮೂಲಕ ನಿರ್ವಹಿಸಬೇಕು. |
| | | | |

| | | | | |
|---|---|---|---|---|
| **Sec 15** | | | **Preliminary assessment into heinous offences by Board.** | **ಘೋರ ಆಪರಾಧಿಕ ಕೃತ್ಯಗಳನ್ನು ಕುರಿತು ಮಂಡಳಿಯಿಂದ ಪ್ರಾಥಮಿಕ ಮೌಲ್ಯಮಾಪನ** |
| | (*1*) | | In case of a heinous offence alleged to have been committed by a child, who has **completed or is above the age of sixteen years**, the Board shall conduct a preliminary assessment with regard to his mental and physical capacity to commit such offence, ability to understand the consequences of the offence and the circumstances in which he allegedly committed the offence, and may pass an order in accordance with the provisions of subsection (*3*) of section 18:<br><br>Provided that for such an assessment, the Board may take the assistance of experienced psychologists or psycho-social workers or other experts.<br><br>*Explanation.*—For the purposes of this section, it is clarified that preliminary assessment is not a trial, but is to assess the capacity of such child to commit and understand the consequences of the alleged offence. | ಹದಿನಾರು ವರ್ಷಕ್ಕಿಂತ ಹೆಚ್ಚು ವಯೋಮಾನದ ಮಗುವು ಘೋರ ಆಪರಾಧಿಕ ಕೃತ್ಯ ಮಾಡಿರುವ ಅಪಾದನೆಯಿದ್ದಲ್ಲಿ, ಆ ರೀತಿಯ ಕೃತ್ಯ ಮಾಡಲು, ಅಂತಹದುರ ಕುರಿತಾದ ಅರಿವು ಮತ್ತು ಯಾವ ಸಂದರ್ಭದಲ್ಲಿ ಈ ಕೃತ್ಯ ಮಾಡಿದ ಶಂಕೆಯಿದೆ ಎನ್ನುವುದನ್ನು ಕುರಿತು ಮಂಡಳಿಯು ಮಗುವಿನ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯ ಕುರಿತು ಪ್ರಾಥಮಿಕ ಪರಿಶೀಲನೆ ಮಾಡಿ ಸೆಕ್ಷನ್ 18ರ ಉಪ ಸೆಕ್ಷನ್ (3)ರಲ್ಲಿ ಸೂಚಿಸಿರುವ ಹಾಗೆ ಆದೇಶವನ್ನು ಜಾರಿ ಮಾಡಬೇಕು.<br><br>ಆದರೆ ಈ ರೀತಿಯ ಪ್ರಾಥಮಿಕ ಪರಿಶೀಲನೆಗೆ ಮಂಡಳಿಯು ಅನುಭವಿ ಮನೋವಿಜ್ಞಾನಿಗಳ ಅಥವಾ ಮನೋ–ಸಾಮಾಜಿಕ ಕಾರ್ಯಕರ್ತರ ಅಥವಾ ಇತರೆ ತಜ್ಞರ ನೆರವನ್ನು ಪಡೆದುಕೊಳ್ಳಬೇಕು.<br><br>ವಿವರಣೆ: ಈ ಕಾಯ್ದೆಯ ಉದ್ದೇಶಕ್ಕಾಗಿ ಪ್ರಾಥಮಿಕ ಪರಿಶೀಲನೆಯು ವಿಚಾರಣೆ ಅಲ್ಲ ಎಂದು ಸ್ಪಷ್ಟಪಡಿಸುತ್ತದೆ. ಆದರೆ, ಇದು ಶಂಕಿತ ಆಪರಾಧಿಕ ಕೃತ್ಯ ಮಾಡುವ ಮತ್ತು ಅದರ ಪರಿಣಾಮಗಳನ್ನು ಅರ್ಥೈಸಿಕೊಳ್ಳುವ ಮಗುವಿನ ಸಾಮರ್ಥ್ಯವನ್ನು ತಿಳಿದುಕೊಳ್ಳಲು ಮಾತ್ರ. |
| | (*2*) | | Where the Board is satisfied on preliminary assessment that the matter should be disposed of by the Board, then the Board shall follow the procedure, as far as may be, for trial in summons case under the Code of Criminal Procedure, 1973:<br><br>Provided that the order of the Board to dispose of the matter shall be appealable under sub-section (*2*) of section 101:<br><br>Provided further that the assessment under this section shall be completed within the period specified in section 14. | ಮಂಡಳಿಗೆ ಪ್ರಾಥಮಿಕ ವಿಚಾರಣೆಯು ತೃಪ್ತಿತಂದು ಪ್ರಕರಣವನ್ನು ವಿಲೇವಾರಿ ಮಾಡಬಹುದು ಎನಿಸಿದರೆ, ಮಂಡಳಿಯು ಅಪರಾಧ ಪ್ರಕ್ರಿಯಾ ಸಂಹಿತೆ **(CrPC)** 1973ರಡಿಯಲ್ಲಿ ಸೂಚಿಸಿರುವ ವಿಧಿವಿಧಾನಗಳನ್ನು ಅನುಸರಿಸಿ ಸಂಬಂಧಪಟ್ಟವರನ್ನು ಕರೆಸಿ ವಿಚಾರಣೆ ನಡೆಸಬಹುದು.<br><br>ಆದರೆ ಮಂಡಳಿಯು ಪ್ರಕರಣದ ವಿಲೇವಾರಿ ಮಾಡಿ ನೀಡಿದ ಆದೇಶವನ್ನು ಪ್ರಶ್ನಿಸಿ ಸೆಕ್ಷನ್ 101ರ ಉಪ ಸೆಕ್ಷನ್ (2)ರಡಿಯಲ್ಲಿ ಮೇಲ್ಮನವಿ ಸಲ್ಲಿಸಬಹುದು.<br><br>ಆದರೆ ಈ ಸೆಕ್ಷನ್ ಅಡಿಯಲ್ಲಿ ಹೆಚ್ಚಿನ ಪರಿಶೀಲನೆಯನ್ನು ಸೆಕ್ಷನ್ 14ರಲ್ಲಿ ಸೂಚಿಸಿರುವ ಸಮಯದೊಳಗೆ ಪೂರ್ಣಗೊಳಿಸಬೇಕು. |
| | | | | |
| **Sec 16** | | | **Review of pendency of inquiry.** | **ತನಿಖೆ ಪೂರ್ಣಗೊಂಡಿಲ್ಲದವುಗಳ ವಿಶ್ಲೇಷಣೆ** |
| | (*1*) | | The Chief Judicial Magistrate or the Chief Metropolitan Magistrate shall review the pendency of cases of the Board once in every three months, and shall direct the Board to increase the frequency of its sittings or may recommend the constitution of additional Boards. | ಮುಖ್ಯ ನಾಯಾಧೀಶರು ಅಥವಾ ಮುಖ್ಯ ಮೆಟ್ರೋಪಾಲಿಟನ್ ನ್ಯಾಯಾಧೀಶರು ಮೂರು ತಿಂಗಳಿಗೊಮ್ಮೆ ಮಂಡಳಿಯಲ್ಲಿ ತನಿಖೆ ಪೂರ್ಣಗೊಂಡಿಲ್ಲದ ಪ್ರಕರಣಗಳನ್ನು ವಿಶ್ಲೇಷಿಸಬೇಕು ಮತ್ತು ಮಂಡಳಿಯು ಸೇರುವ ದಿನಗಳನ್ನು ಹೆಚ್ಚಿಸಲು ಆದೇಶಿಸಬಹುದು ಹಾಗು ಹೆಚ್ಚುವರಿ ಮಂಡಳಿಯನ್ನು ರಚಿಸುವಂತೆ ಶಿಫಾರಸ್ಸು ಮಾಡಬಹುದು. |
| | (*2*) | | The number of cases pending before the Board, duration of such pendency, nature of pendency and reasons thereof shall be reviewed in every six months by a high level committee consisting of the Executive Chairperson of the State Legal | ಮಂಡಳಿಯಲ್ಲಿ ತನಿಖೆ ಪೂರ್ಣಗೊಂಡಿಲ್ಲದ ಪ್ರಕರಣಗಳ ಸಂಖ್ಯೆ, ಸಮಯ ಮತ್ತು ಪೂರ್ಣಗೊಂಡಿಲ್ಲದ ಸ್ವರೂಪ ಮತ್ತು ಕಾರಣಗಳನ್ನು ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಕಾರ್ಯಕಾರಿ ಅಧ್ಯಕ್ಷರು, ಗೃಹ ಕಾರ್ಯದರ್ಶಿಗಳು, ರಾಜ್ಯದಲ್ಲಿ |

| | | | | |
|---|---|---|---|---|
| | | | Services Authority, who shall be the Chairperson, the Home Secretary, the Secretary responsible for the implementation of this Act in the State and a representative from a voluntary or nongovernmental organisation to be nominated by the Chairperson. | ಈ ಕಾಯ್ದೆಯನ್ನು ಜಾರಿ ಮಾಡುವ ಹೊಣೆಯನ್ನು ಹೊಂದಿರುವ ಕಾರ್ಯದರ್ಶಿ ಹಾಗು ಅಧ್ಯಕ್ಷರು ನಾಮನಿರ್ದೇಶನ ಮಾಡಿದ ಸ್ವಯಂಸೇವಾ ಅಥವಾ ಸರ್ಕಾರೇತನ ಸಂಸ್ಥೆಯ ಪ್ರತಿನಿಧಿಗಳನ್ನು ಒಳಗೊಂಡ ಉನ್ನತ ಮಟ್ಟದ ಸಮಿತಿಯು ಪ್ರತಿ ಆರು ತಿಂಗಳಿಗೊಮ್ಮೆ ಮೌಲ್ಯಮಾಪನ ಮಾಡಬೇಕು. |
| | (*3*) | | The information of such pendency shall also be furnished by the Board to the Chief Judicial Magistrate or the Chief Metropolitan Magistrate and the District Magistrate on quarterly basis in such form as may be prescribed by the State Government. | ತನಿಖೆ ಪೂರ್ಣಗೊಂಡಿಲ್ಲದ ಪ್ರಕರಣಗಳ ಮಾಹಿತಿಯನ್ನು ಮಂಡಳಿಯು ಮುಖ್ಯ ನಾಯಾಧೀಶರು ಅಥವಾ ಮುಖ್ಯ ಮೆಟ್ರೋಪಾಲಿಟನ್ ನ್ಯಾಯಾಧೀಶರು ಮತ್ತು ಜಿಲ್ಲಾ ನ್ಯಾಯಾಧೀಶರಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ರಾಜ್ಯ ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ನೀಡಬೇಕು. |
| | | | | |
| **Sec 17** | | | **Orders regarding a child not found to be in conflict with law.** | **ಕಾನೂನಿನೊಡನೆ ಸಂಘರ್ಷದಲ್ಲಿ ಇಲ್ಲ ಎಂದು ಕಂಡುಬಂದ ಮಕ್ಕಳನ್ನು ಕುರಿತು ಆದೇಶಗಳು** |
| | (*1*) | | Where a Board is satisfied on inquiry that the child brought before it has not committed any offence, then notwithstanding anything contrary contained in any other law for the time being in force, the Board shall pass order to that effect. | ಮಂಡಳಿಯ ಮುಂದೆ ಹಾಜರಾದ ಮಗುವಿನ ತನಿಖೆ ನಡೆಸಿ ಮಗು ಯಾವುದೇ ಅಪರಾಧಿಕ ಕೃತ್ಯ ಮಾಡಿಲ್ಲವೆಂದು ಮಂಡಳಿಗೆ ಮನವರಿಕೆಯಾದಲ್ಲಿ ಸದ್ಯದಲ್ಲಿ ಜಾರಿಯಲ್ಲಿರುವ ಯಾವುದೇ ಕಾಯಿದೆ ಕಟ್ಟಲೆಯಲ್ಲಿ ಏನೇ ಹೇಳಿದ್ದರೂ ಸಹ ಮಂಡಳಿಯು ಅಂತಹ ಪರಿಣಾಮ ಬೀರುವ ತನ್ನ ಆದೇಶವನ್ನು ನೀಡಬಹುದು. |
| | (*2*) | | In case it appears to the Board that the child referred to in sub-section (*1*) is in need of care and protection, it may refer the child to the Committee with appropriate directions. | ಮಂಡಳಿಗೆ ಉಪ ಸೆಕ್ಷನ್ (1)ರಲ್ಲಿ ಉಲ್ಲೇಖಿಸಿದ ಮಗುವಿಗೆ ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆ ಇದೆ ಎಂದು ಕಂಡುಬಂದಲ್ಲಿ ಅದು ಮಗುವನ್ನು ಸೂಕ್ತ ಅದೇಶದೊಡನೆ ಸಮಿತಿಗೆ ಕಳುಹಿಸಬಹುದು. |
| | | | | |
| **Sec 18** | | | **Orders regarding child found to be in conflict with law.** | **ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು ಕುರಿತು ಆದೇಶಗಳು** |
| | (*1*) | | Where a Board is satisfied on inquiry that a child irrespective of age has committed a petty offence, or a serious offence, or a child below the age of sixteen years has committed a heinous offence, then, notwithstanding anything contrary contained in any other law for the time being in force, and based on the nature of offence, specific need for supervision or intervention, circumstances as brought out in the social investigation report and past conduct of the child, the Board may, if it so thinks fit,— | ವಿಚಾರಣೆ / ತನಿಖೆಯ ನಂತರ ಯಾವುದೇ ವಯೋಮಾನದ ಮಗು ಸಣ್ಣ ಅಪರಾಧಿಕ ಕೃತ್ಯ ಅಥವಾ ಗಂಭೀರ ಅಪರಾಧಿಕ ಕೃತ್ಯ ಅಥವಾ ಹದಿನಾರು ವರ್ಷದೊಳಗಿನ ಮಗು ಘೋರ ಅಪರಾಧಿಕ ಕೃತ್ಯ ಎಸಗಿದೆ ಎಂದು ಮಂಡಳಿಗೆ ಖಾತರಿ ಆದ ಮೇಲೆ, ಬೇರೆ ಯಾವುದೇ ಕಾಯಿದೆಯಲ್ಲಿ ಹೇಳಿರುವ ವಿಚಾರಗಳೇನೇ ಇದ್ದರೂ ಸಹ ಅಪರಾಧಿಕ ಕೃತ್ಯದ ಸ್ವರೂಪ, ಉಸ್ತುವಾರಿ ಅಥವಾ ಮಧ್ಯವರ್ತಿಕೆಯ ನಿರ್ದಿಷ್ಟ ಅವಶ್ಯಕತೆಗಳು, ಸಾಮಾಜಿಕ ತನಿಖಾ ವರದಿಯಲ್ಲಿ ಕಂಡುಬಂದ ಪರಿಸ್ಥಿತಿಗಳು ಮತ್ತು ಮಗುವಿನ ಹಿಂದಿನ ವರ್ತನೆಗಳ ಆಧಾರದ ಮೇಲೆ ಮಂಡಳಿಯು ಈ ಮುಂದಿನಂತೆ ತೀರ್ಮಾನಗಳನ್ನು ಕೈಗೊಳ್ಳಬಹುದು:– |
| | | (*a*) | allow the child to go home after advice or admonition by following appropriate inquiry and counseling to such child and to his parents or the guardian; | ಮಗುವಿಗೆ ಸಂಬಂಧಿಸಿದ ವಿಚಾರದ ಬಗ್ಗೆ ವಿವರಣೆ, ತನಿಖೆ ಆಗಿ ಪೋಷಕರು ಅಥವಾ ತಾಯಿ ತಂದೆಯರನ್ನು ಸೂಕ್ತವಾದ ಸಮಾಲೋಚನೆಗೆ ಒಳಪಡಿಸಿ ಮಗುವಿಗೆ ಸಲಹೆ ಮತ್ತು/ಅಥವಾ ವಾಕ್‌ದಂಡನೆ ನೀಡಿ ಮನೆಗೆ ಕಳುಹಿಸಬಹುದು; |
| | | (*b*) | direct the child to participate in group counseling and similar activities; | ಸಮೂಹ ಆಪ್ತ ಸಮಾಲೋಚನೆ ಮತ್ತು ಆ ತರಹದ ವಿವಿಧ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಮಗುವಿಗೆ ನಿರ್ದೇಶಿಸುವುದು; |

| | | | |
|---|---|---|---|
| | (c) | order the child to perform community service under the supervision of an organisation or institution, or a specified person, persons or group of persons identified by the Board; | ಮಂಡಳಿಯು ಗುರುತಿಸಿದ ವ್ಯಕ್ತಿಗಳು ಅಥವಾ ವ್ಯಕ್ತಿಗಳ ಗುಂಪಿನ ಉಸ್ತುವಾರಿಯಲ್ಲಿ ಮಗುವಿಗೆ ಸರ್ಕಾರಿ ಸಂಸ್ಥೆ ಅಥವಾ ನಿರ್ದಿಷ್ಟಪಡಿಸಿದ ವ್ಯಕ್ತಿ, ಸಂಸ್ಥೆಯಲ್ಲಿ ಸಮುದಾಯ ಸೇವೆಗಳಲ್ಲಿ ತೊಡಗಿಕೊಳ್ಳಲು ನಿರ್ದೇಶಿಸುವುದು; |
| | (*d*) | order the child or parents or the guardian of the child to pay fine:<br><br>Provided that, in case the child is working, it may be ensured that the provisions of any labour law for the time being in force are not violated; | ಮಗುವಿಗೆ ಅಥವಾ ಮಗುವನ್ನು ಹೆತ್ತವರಿಗೆ ಅಥವಾ ಪೋಷಕರಿಗೆ ದಂಡ ಸಲ್ಲಿಸುವಂತೆ ಆದೇಶಿಸಬಹುದು:<br><br>ಆದರೆ ಒಂದು ವೇಳೆ ಮಗುವು ದುಡಿಯುತ್ತಿದ್ದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಕಾರ್ಮಿಕ ಕಾಯ್ದೆಗಳ ನಿಬಂಧನೆಗಳ ಉಲ್ಲಂಘನೆಯಾಗದಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು. |
| | (*e*) | direct the child to be released on probation of good conduct and placed under the care of any parent, guardian or fit person, on such parent, guardian or fit person executing a bond, with or without surety, as the Board may require, for the good behavior and child's well-being for any period not exceeding three years; | ಮಂಡಳಿಯು ನಿರ್ಧರಿಸುವಂತೆ ಮೂರು ವರ್ಷಗಳಿಗೆ ಮೀರದಂತೆ ಮಗುವಿನ ಹಿತದೃಷ್ಟಿ ಮತ್ತು ಪರಿವರ್ತನೆಗಾಗಿ, ಮಗುವು ಒಳ್ಳೆಯ ಸ್ವಭಾವ ಮತ್ತು ನಡತೆಯಿಂದ ನಡೆದುಕೊಳ್ಳುವ ಭರವಸೆಯ ಮೇಲೆ ಸ್ವಂತ ತಾಯಿ–ತಂದೆಯರು, ಪೋಷಕರು, ಅಥವಾ ಅಂತಹ ಅರ್ಹ ವ್ಯಕ್ತಿಯು ನೀಡುವ ಭದ್ರತೆ ಇರುವ ಅಥವಾ ಇಲ್ಲದಿರುವ ಮುಚ್ಚಳಿಕೆಯ ಮೇಲೆ ಬಿಡುಗಡೆ ಮಾಡಲು ನಿರ್ದೇಶಿಸಬಹುದು; |
| | (*f*) | direct the child to be released on probation of good conduct and placed under the care and supervision of any fit facility for ensuring the good behavior and child's well-being for any period not exceeding three years; | ಮಂಡಳಿಯು ನಿರ್ಧರಿಸುವಂತೆ ಮೂರು ವರ್ಷಗಳಿಗೆ ಮೀರದಂತೆ ಮಗುವಿನ ಹಿತದೃಷ್ಟಿ ಮತ್ತು ಪರಿವರ್ತನೆಗಾಗಿ, ಮಗುವು ಒಳ್ಳೆಯ ಸ್ವಭಾವ ಮತ್ತು ನಡತೆಯಿಂದ ನಡೆದುಕೊಳ್ಳುವ ಭರವಸೆಯ ಮೇಲೆ ಅರ್ಹ ಸಂಸ್ಥೆಯ ಸುಪರ್ದಿಗೆ ಪ್ರೊಬೇಷನ್ ಮೇಲೆ ಬಿಡುಗಡೆ ಮಾಡಲು ನಿರ್ದೇಶಿಸಬಹುದು; |
| | (*g*) | direct the child to be sent to a special home, for such period, not exceeding three years, as it thinks fit, for providing reformative services including education, skill development, counseling, behavior modification therapy, and psychiatric support during the period of stay in the special home:<br>Provided that if the conduct and behavior of the child has been such that, it would not be in the child's interest, or in the interest of other children housed in a special home, the Board may send such child to the place of safety. | ಮಂಡಳಿಯು ನಿರ್ಧರಿಸುವಂತೆ ಮಗುವಿನ ಹಿತದೃಷ್ಟಿ ಮತ್ತು ಶಿಕ್ಷಣ, ವೃತ್ತಿ ತರಬೇತಿ, ಆಪ್ತ ಸಮಾಲೋಚನೆ, ನಡವಳಿಕೆ ಸುಧಾರಣಾ ಚಿಕಿತ್ಸೆ ಮತ್ತು ಮಾನಸಿಕ ನೆರವೂ ಸೇರಿದಂತೆ ಪರಿವರ್ತನಾ ಸೇವೆಗಳಿಗಾಗಿ ಮೂರು ವರ್ಷಗಳಿಗೆ ಮೀರದಂತೆ ವಿಶೇಷ ನಿಲಯಗಳಲ್ಲಿ ವಾಸಿಸಲು ನಿರ್ದೇಶಿಸಬಹುದು;<br>ಆದರೆ ಮಗುವಿನ ವರ್ತನೆ ಮತ್ತು ನಡವಳಿಕೆಯು ಮಗುವಿನ ಅಥವಾ ವಿಶೇಷ ನಿಲಯದಲ್ಲಿರುವ ಇತರೆ ಮಕ್ಕಳ ಹಿತದೃಷ್ಟಿಗೆ ಪೂರಕವಾಗಿಲ್ಲದಿದ್ದಲ್ಲಿ ಮಂಡಳಿಯು ಅಂತಹ ಮಗುವನ್ನು ಸುರಕ್ಷಿತ ಸ್ಥಳಗಳಿಗೆ ಕಳುಹಿಸಬಹುದು. |
| (2) | | If an order is passed under clauses (*a*) to (*g*) of sub-section (*1*), the Board may, in addition pass orders to— | ಉಪಕಾಯ್ದೆ (1)ರ ಕ್ಲಾಜ (ಎ) ಯಿಂದ (ಜಿ)ವರೆಗಿನ ಅಡಿಯಲ್ಲಿ ಆದೇಶವನ್ನು ನೀಡಿದ್ದಲ್ಲಿ ಮಂಡಳಿಯು ಈ ಕೆಳಗಿನವುಗಳ ಕುರಿತು ಆದೇಶವನ್ನು ನೀಡಬೇಕು – |
| | (*i*) | attend school; or | ಶಾಲೆಗೆ ಹಾಜರಾಗುವುದು; ಅಥವಾ |
| | (*ii*) | attend a vocational training centre; or | ವೃತ್ತಿ ತರಬೇತಿಗೆ ಹಾಜರಾಗುವುದು; ಅಥವಾ |
| | (*iii*) | attend a therapeutic centre; or | ಚಿಕಿತ್ಸಾ ಕೇಂದ್ರಕ್ಕೆ ಹಾಜರಾಗುವುದು; ಅಥವಾ |
| | (*iv*) | prohibit the child from visiting, frequenting or appearing at a specified place; or | ನಿರ್ದಿಷ್ಟ ಸ್ಥಳಕ್ಕೆ ಮಗುವು ಭೇಟಿ ನೀಡದಂತೆ, ಓಡಾಡದಂತೆ ಅಥವಾ ಕಾಣಿಸಿಕೊಳ್ಳದಂತೆ ನಿರ್ಬಂಧಿಸಬಹುದು; ಅಥವಾ |
| | (*v*) | undergo a de-addiction programme. | ವ್ಯಸನ ಮುಕ್ತ ಚಿಕಿತ್ಸೆ ಕಾರ್ಯಕ್ರಮಕ್ಕೆ ಹಾಜರಾಗುವುದು. |
| (*3*) | | Where the Board after preliminary assessment under section 15 pass an order that there is a need for trial of the said child as an adult, then the Board may order transfer of the trial of the case to the Children's Court having jurisdiction to try such offences. | ಸೆಕ್ಷನ್ 15ರ ಅಡಿಯ ಪ್ರಾಥಮಿಕ ವಿಚಾರಣೆಯಿಂದ ಮಂಡಳಿಗೆ ಮಗುವಿಗೆ ವಯಸ್ಕರ ರೀತಿಯಲ್ಲಿ ವಿಚಾರಣೆ ನಡೆಸುವ ಅವಶ್ಯಕತೆ ಕಂಡಬಂದಲ್ಲಿ ಮಂಡಳಿಯು ಈ ರೀತಿಯ ಅಪರಾಧಿಕ ಕೃತ್ಯಗಳ ವಿಚಾರಣಾ ವ್ಯಾಪ್ತಿಯನ್ನು ಹೊಂದಿರುವ ಮಕ್ಕಳ ನ್ಯಾಯಲಯಕ್ಕೆ ಪ್ರಕರಣವನ್ನು ವರ್ಗಾಯಿಸಬಹುದು. |

| Sec | | | Powers of Children's Court. | ಮಕ್ಕಳ ನ್ಯಾಯಾಲಯಗಳ ಅಧಿಕಾರ |
|---|---|---|---|---|
| 19 | (*1*) | | After the receipt of preliminary assessment from the Board under section 15, the Children´s Court may decide that— | ಸೆಕ್ಷನ್ 15ರ ಅಡಿಯ ಮಂಡಳಿಯ ಪ್ರಾಥಮಿಕ ವಿಚಾರಣೆಯನ್ನು ಪಡೆದ ಮಕ್ಕಳ ನ್ಯಾಯಾಲಯವು ಈ ರೀತಿಯಾಗಿ ತೀರ್ಮಾನಿಸಬಹುದು; |
| | | (*i*) | there is a need for trial of the child **<u>as an adult</u>** as per the provisions of the Code of Criminal Procedure, 1973 and pass appropriate orders after trial subject to the provisions of this section and section 21, considering the special needs of the child, the tenets of fair trial and maintaining a child friendly atmosphere; | ಅಪರಾಧ ಪ್ರಕ್ರಿಯಾ ಸಂಹಿತೆ **(CrPC)** 1973ರ ಅಡಿಯಲ್ಲಿ ಮಗುವನ್ನು ವಯಸ್ಕರ ರೀತಿಯಲ್ಲಿ ವಿಚಾರಣೆಗೆ ಒಳಪಡಿಸುವ ಅವಶ್ಯಕತೆ ಇದೆಯೇ ಮತ್ತು ಈ ಸೆಕ್ಷನ್‌ಗೆ ಮತ್ತು ಸೆಕ್ಷನ್ 21ಕ್ಕೆ ಸಂಬಂಧಿಸಿದಂತೆ ಮಗುವಿನ ವಿಶೇಷ ಅವಶ್ಯಕತೆಗಳನ್ನು ಹಾಗು ಮುಕ್ತ ವಿಚಾರಣೆ ಹಾಗು ಮಕ್ಕಳ ಸ್ನೇಹಿ ವಾತಾವರಣವನ್ನು ಕಾಪಾಡಿಕೊಳ್ಳುವುದನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾದ ಆದೇಶವನ್ನು ನೀಡಬಹುದು. |
| | | (*ii*) | there is no need for trial of the child as an adult and may conduct an inquiry as a Board and pass appropriate orders in accordance with the provisions of section 18. | ಮಗುವನ್ನು ವಯಸ್ಕರಂತೆ ವಿಚಾರಣೆ ನಡೆಸುವ ಅವಶ್ಯಕತೆ ಇಲ್ಲದಿದ್ದಲ್ಲಿ ಮತ್ತು ಮಂಡಳಿಯು ತನಿಖೆ ನಡೆಸುವ ಹಾಗಿದ್ದಲ್ಲಿ ಸೆಕ್ಷನ್ 18ರ ಅಡಿಯಲ್ಲಿ ಸೂಕ್ತ ಅದೇಶವನ್ನು ನೀಡಬಹುದು. |
| | (*2*) | | The Children's Court shall ensure that the final order, with regard to a child in conflict with law, shall include *<u>an individual care plan</u>* for the rehabilitation of child, including follow up by the probation officer or the District Child Protection Unit or a social worker. | ಮಕ್ಕಳ ನ್ಯಾಯಲಯವು ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವಿನ ಕುರಿತು ಅಂತಿಮ ಆದೇಶವನ್ನು ನೀಡುವಾಗ ಮಗುವಿನ ಪರಿವೀಕ್ಷಣಾಧಿಕಾರಿಗಳು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅಥವಾ ಸಾಮಾಜಿಕ ಕಾರ್ಯಕರ್ತರಿಂದ ಅನುಸರಣೆಯೂ ಸೇರಿದಂತೆ ಮಗುವಿನ ಪುನರ್ವಸತಿಗಾಗಿ ವ್ಯಕ್ತಿಗತ ಪೋಷಣಾ ಯೋಜನೆಯನ್ನು ಖಾತ್ರಿಗೊಳಿಸಬೇಕು. |
| | (*3*) | | The Children's Court shall ensure that the child who is found to be in conflict with law is sent to a place of safety till he attains the age of twenty-one years and thereafter, the person shall be transferred to a jail:<br><br>Provided that the reformative services including educational services, skill development, alternative therapy such as behavior modification therapy, and psychiatric support shall be provided to the child during the period of his stay in the placeof safety. | ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗು ಎಂದು ಪರಿಗಣಿಸಿದ ಕೂಡಲೇ ಮಂಡಳಿಯು ಮಗುವಿಗೆ 21 ವರ್ಷಗಳು ಪೂರೈಸುವ ತನಕ ಸುರಕ್ಷಿತ ಸ್ಥಳಕ್ಕೆ ಕಳುಹಿಸುವ ಮತ್ತು ನಂತರ ಆ ವ್ಯಕ್ತಿಯನ್ನು ಕಾರಾಗೃಹಕ್ಕೆ ವರ್ಗಾಯಿಸುವುದನ್ನು ಮಕ್ಕಳ ನ್ಯಾಯಾಲಯವು ಖಾತ್ರಿಗೊಳಿಸಬೇಕು.<br><br>ಆದರೆ ಮಗುವು ಸುರಕ್ಷಿತ ಸ್ಥಳದಲ್ಲಿರುವ ತನಕ ಶಿಕ್ಷಣ ಸೇವೆ, ಕೌಶಲಾಭಿವೃದ್ಧಿ ಹಾಗು ವರ್ತನೆ, ನಡವಳಿಕೆ ಸುಧಾರಣಾ ಚಿಕಿತ್ಸೆ ಮತ್ತು ಮಾನಸಿಕ ನೆರವೂ ಸೇರಿದಂತೆ ಪರ್ಯಾಯ ಚಿಕಿತ್ಸೆಗಳ ಸುಧಾರಣಾ ಸೇವೆಯನ್ನು ಒದಗಿಸಬೇಕು. |
| | (*4*) | | The Children's Court shall ensure that there is a periodic follow up report every year by the probation officer or the District Child Protection Unit or a social worker, as required, to evaluate the progress of the child in the place of safety and to ensure that there is no ill-treatment to the child in any form. | ಸುರಕ್ಷಿತ ಸ್ಥಳದಲ್ಲಿರುವ ಮಗುವಿನ ಪ್ರಗತಿಯನ್ನು ಮೌಲ್ಯಮಾಪನ ಮಾಡಲು ಮತ್ತು ಮಗು ಯಾವುದೇ ರೀತಿಯ ದುರ್ವರ್ತನೆಗೆ ಒಳಗಾಗದಿರುವುದನ್ನು ಖಾತ್ರಿಪಡಿಸಲು ಮಕ್ಕಳ ನ್ಯಾಯಲಯವು ಅವಶ್ಯಕತೆಗೆ ತಕ್ಕಂತೆ ಪರಿವೀಕ್ಷಾಧಿಕಾರಿಗಳು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅಥವಾ ಸಾಮಾಜಿಕ ಕಾರ್ಯಕರ್ತರಿಂದ ಪ್ರತಿ ವರ್ಷ ಅನುಸರಣಾ ವರದಿಯನ್ನು ಖಾತ್ರಿಪಡಿಸಬೇಕು. |
| | (*5*) | | The reports under sub-section (*4*) shall be forwarded to the Children´s Court for record and follow up, as may be required. | ಅವಶ್ಯಕತೆಗೆ ತಕ್ಕ ಹಾಗೆ ಉಪ ಸೆ. (4)ರ ಅಡಿಯ ವರದಿಯನ್ನು ಮಕ್ಕಳ ನ್ಯಾಯಾಲಯಕ್ಕೆ ದಾಖಲೆಗಾಗಿ ಮತ್ತು ಅನುಸರಣೆಗಾಗಿ ರವಾನಿಸಬೇಕು. |
| | | | | |

| | | | | |
|---|---|---|---|---|
| **Sec 20** | | | **Child attained age of twenty-one years and yet to complete prescribed term of stay in place of safety.** | **21 ವರ್ಷ ಪೂರೈಸಿದ್ದರೂ, ಸುರಕ್ಷಿತ ಸ್ಥಳದಲ್ಲಿಯೇ ನಿರ್ದೇಶಿಸಲ್ಪಟ್ಟ ಅವಧಿಯನ್ನು ಪೂರೈಸುವುದು** |
| | (*1*) | | When the child in conflict with the law attains the age of twenty-one years and is yet to complete the term of stay, the Children´s Court shall provide for a follow up by the probation officer or the District Child Protection Unit or a social worker or by itself, as required, to evaluate if such child has undergone reformative changes and if the child can be a contributing member of the society and for this purpose the progress records of the child under sub-section (*4*) of section 19, along with evaluation of relevant experts are to be taken into consideration. | ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗು 21 ವರ್ಷ ಪೂರೈಸಿದ ಮೇಲೆ ಮತ್ತು ಸುರಕ್ಷಿತ ನಿಲಯದಲ್ಲಿರುವ ತನ್ನ ಅವಧಿಯನ್ನು ಪೂರೈಸಿಲ್ಲದಿದ್ದಲ್ಲಿ, ಮಕ್ಕಳ ನ್ಯಾಯಾಲಯವು, ಪರಿವೀಕ್ಷಣಾಧಿಕಾರಿಗಳಿಂದ /ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ /ಸಮಾಜ ಕಾರ್ಯಕರ್ತರಿಂದ /ತಾನೇ ಮುಂದಾಗಿ ಆವಶ್ಯಕತೆಗೆ ತಕ್ಕಂತೆ ಅನುಸರಣೆಯನ್ನು ಏರ್ಪಡಿಸಿ, ನಿರ್ದಿಷ್ಟ ಮಗುವಿನಲ್ಲಿ ಸುಧಾರಣೆಗಳು ಬಂದಿವೆಯೇ ಮತ್ತು ಮಗು ಸಮಾಜಕ್ಕೆ ಕೊಡುಗೆಗಳನ್ನು ಕೊಡುವಂತಹ ವ್ಯಕ್ತಿಯಾಗಿ ಪರಿವರ್ತನೆ ಹೊಂದಿದೆಯೆ ಎಂದು ಕಂಡುಕೊಳ್ಳಬೇಕು ಮತ್ತು ಇದಕ್ಕಾಗಿ ಸಂಬಂಧಿತ ತಜ್ಞರಿಂದ ಸೆ. 19ರ ಉಪ ಸೆ.(4)ರಲ್ಲಿ ಹೇಳಿರುವಂತೆ ನೀಡಿರುವ ದಾಖಲೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. |
| | (*2*) | | After the completion of the procedure specified under sub-section (*1*), the Children's Court may— | ಉಪ ಸೆಕ್ಷನ್ (1)ರಡಿಯಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಮಕ್ಕಳ ನ್ಯಾಯಾಲಯವು ಈ ಕೆಳಗಿನ ತೀರ್ಮಾನಗಳನ್ನು ಕೈಗೊಳ್ಳಬಹುದು – |
| | | (*i*) | decide to release the child on such conditions as it deems fit which includes appointment of a monitoring authority for the remainder of the prescribed term of stay; | ನಿರ್ದಿಷ್ಟಪಡಿಸಿದ ಉಳಿದ ಅವಧಿಗೆ ಉಸ್ತುವಾರಿ ಪ್ರಾಧಿಕಾರವನ್ನು ನೇಮಿಸುವುದೂ ಸೇರಿದಂತೆ ತನಗೆ ಸೂಕ್ತವೆನಿಸಿದ ಷರತ್ತಿನೊಡನೆ ಮಗುವನ್ನು ಬಿಡುಗಡೆ ಮಾಡಲು ತೀರ್ಮಾನಿಸಬಹುದು; |
| | | (*ii*) | decide that the child shall complete *the remainder of his term in a jail*:<br><br>Provided that each State Government shall maintain a list of monitoring authorities and monitoring procedures as may be prescribed. | ಉಳಿದ ಅವಧಿಯನ್ನು ಮಗು ಕಾರಾಗೃಹದಲ್ಲಿ ಪೂರ್ಣಗೊಳಿಸುವಂತೆ ತೀರ್ಮಾನಿಸಬಹುದು;<br>ಆದರೆ ಪ್ರತಿಯೊಂದು ರಾಜ್ಯ ಸರ್ಕಾರಗಳು ನಿರ್ದಿಷ್ಟಪಡಿಸಿದಂತೆ ಉಸ್ತುವಾರಿ ಪ್ರಾಧಿಕಾರದ ಮತ್ತು ಉಸ್ತುವಾರಿ ಪ್ರಕ್ರಿಯೆಗಳ ಪಟ್ಟಿಯ ನಿರ್ವಹಣೆ ಮಾಡಬೇಕು. |
| **Sec 21** | | | **Order that may not be passed against a child in conflict with law.** | **ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳ ವಿರುದ್ಧ ಮಂಡಲಿ ಹೊರಡಿಸಬಾರದಾದ ಆದೇಶಗಳು** |
| | | | No child in conflict with law shall be sentenced to death or for life imprisonment without the possibility of release, for any such offence, either under the provisions of this Act or under the provisions of the Indian Penal Code or any other law for the time being in force. | ಈ ಕಾಯ್ದೆಯ ಅಡಿಯಲ್ಲಿ ಅಥವಾ ಭಾರತೀಯ ದಂಡ ಸಂಹಿತೆ (IPC) 1860ಯ ಅಡಿಯಲ್ಲಿ ಅಥವಾ ಪ್ರಸ್ತುತ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನ ಅಡಿಯಲ್ಲಿ ಬಿಡುಗಡೆಯ ಸಾಧ್ಯತೆಯಿಲ್ಲದಿರುವ ಕಾನೂನಿನೊಡನೆ ಸಂಘರ್ಷದಲ್ಲಿರುವ ಯಾವುದೇ ಮಗುವಿಗೆ ಮರಣ ದಂಡನೆ ಅಥವಾ ಜೀವಾವಧಿ ಶಿಕ್ಷೆಯನ್ನು ವಿಧಿಸಲಾಗದು. |
| **Sec 22** | | | **Proceeding under Chapter VIII of the Code of Criminal Procedure not to apply against child.** | **ಅಪರಾಧ ಪ್ರಕ್ರಿಯಾ ಸಂಹಿತೆಯ ಅಧ್ಯಾಯ VIII ರಂತೆ ಮಕ್ಕಳನ್ನು ಕುರಿತು ನಡೆಸಬಾರದ ಪ್ರಕ್ರಿಯೆಗಳು** |
| | | | Notwithstanding anything to the contrary contained in the Code of Criminal Procedure, 1973, or any preventive detention law for the time being in force, no proceeding shall be instituted and no order shall be passed against any child under Chapter VIII of the said Code. | ಅಪರಾಧ ಪ್ರಕ್ರಿಯಾ ಸಂಹಿತೆ (CrPC) 1973ರಲ್ಲಿರುವುದಕ್ಕೆ ಅಥವಾ ಪ್ರಸ್ತುತ ಜಾರಿಯಲ್ಲಿರುವ ಯಾವುದೇ ನಿಯಂತ್ರಣ ಕಾಯ್ದೆಗೆ ವ್ಯತಿರಿಕ್ತವಾಗಿ ಯಾವುದೇ ರೀತಿಯ ಪ್ರಕ್ರಿಯೆಗಳನ್ನು ಜರುಗಿಸಬಾರದು ಮತ್ತು ಸಂಹಿತೆಯ 8ನೇ ಅಧ್ಯಾಯದಂತೆ ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳ ವಿರುದ್ಧ ಯಾವುದೇ ನಿರ್ದೇಶನಗಳನ್ನು ಹೊರಡಿಸಬಾರದು. |
| | | | | |

| | | | | |
|---|---|---|---|---|
| **Sec 23** | | | **No joint proceedings of child in conflict with law and person not a child.** | **ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು ಮಕ್ಕಳಲ್ಲದವರೊಡನೆ ಸೇರಿಸಿ ವಿಚಾರಣೆ ಮಾಡಬಾರದು** |
| | (*1*) | | Notwithstanding anything contained in section 223 of the Code of Criminal Procedure, 1973 or in any other law for the time being in force, there shall be no joint proceedings of a child alleged to be in conflict with law, with a person who is not a child. | ಅಪರಾಧ ಪ್ರಕ್ರಿಯಾ ಸಂಹಿತೆ (CrPC) 1973ರ ಸೆಕ್ಷನ್ 223 ಅಥವಾ ಈ ಸಮಯದಲ್ಲಿ ಚಾಲ್ತಿಯಲ್ಲಿರುವ ಯಾವುದೇ ಕಾಯಿದೆಯಂತೆ ಯಾವುದೇ ಸಂದರ್ಭದಲ್ಲೂ ಕಾನೂನಿನೊಡನೆ ಸಂಘರ್ಷದಲ್ಲಿರುವ ಯಾವುದೇ ಮಗುವನ್ನು ಅವರ ಯಾವುದೇ ಕೃತ್ಯಕ್ಕೂ ಮಕ್ಕಳಲ್ಲದ ವ್ಯಕ್ತಿಗಳ ಜೊತೆ ಜಂಟಿಯಾಗಿ ವಿಚಾರಣೆ ನಡೆಸಕೂಡದು |
| | (*2*) | | If during the inquiry by the Board or by the Children's Court, the person alleged to be in conflict with law is found that he is not a child, such person shall not be tried along with a child. | ಮಂಡಳಿಯು ಅಥವಾ ಮಕ್ಕಳ ನ್ಯಾಯಾಲಯವು ವಿಚಾರಣೆ ನಡೆಸುವಾಗ ಕಾನೂನಿನೊಡನೆ ಸಂಘರ್ಷದಲ್ಲಿರುವ ಶಂಕಿತ ವ್ಯಕ್ತಿಯು ಮಗು ಅಲ್ಲವೆಂದು ಗೊತ್ತಾದಲ್ಲಿ ಅಂತಹ ವ್ಯಕ್ತಿಯ ವಿಚಾರಣೆಯನ್ನು ಯಾವುದೇ ಇತರ ಮಕ್ಕಳು/ಮಗುವಿನ ಜೊತೆ ನಡೆಸಬಾರದು. |
| | | | | |
| **Sec 24** | | | **Removal of disqualification on the findings of an offence.** | **ಅಪರಾಧಿಕ ಕೃತ್ಯ ಕುರಿತು ಕಂಡುಬಂದಿರುವ ವಿಚಾರಗಳಲ್ಲಿ ಅನರ್ಹತೆಗಳನ್ನು ತೆಗೆದುಬಿಡುವುದು** |
| | (*1*) | | Notwithstanding anything contained in any other law for the time being in force, a child who has committed an offence and has been dealt with under the provisions of this Act shall not suffer disqualification, if any, attached to a conviction of an offence under such law:<br><br>Provided that in case of a child who has completed or is above the age of sixteen years and is found to be in conflict with law by the Children's Court under clause (*i*) of sub-section (*1*) of section 19, the provisions of sub-section (*1*) shall not apply. | ಈ ಕಾಯಿದೆಯಡಿ ಕಾನೂನಿನೊಡನೆ ಸಂಘರ್ಷದಲ್ಲಿದ್ದ ಮಗು ಮಾಡಿರುವ ಕೃತ್ಯವನ್ನು ಕುರಿತು ವಿಚಾರಣೆ ನಡೆಸಿದ ಮೇಲೆ ಇನ್ನಾವುದೆ ಕಾಯಿದೆಯಡಿ ಇದೇ ಕೃತ್ಯಕ್ಕೆ ಶಿಕ್ಷೆ ವಿಧಿಸಬಹುದಾದ ಸಾಧ್ಯತೆಯನ್ನು ಅನರ್ಹಗೊಳಿಸಲಾಗಿದೆ.<br><br>ಆದರೆ ಸೆಕ್ಷನ್ 19ರ ಉಪ ಸೆಕ್ಷನ್ (1)ರ ಕ್ಲಾಜ್ (1)ರಡಿಯಲ್ಲಿ ಮಕ್ಕಳ ನ್ಯಾಯಾಲಯಕ್ಕೆ ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗು 16 ವರ್ಷ ಅಥವಾ ಹೆಚ್ಚಿನ ವಯೋಮಾನವನ್ನು ಹೊಂದಿದ್ದು ಕಂಡುಬಂದಲ್ಲಿ ಅಂತಹ ಮಗುವಿಗೆ ಉಪ ಕಾಯ್ದೆ (1)ರ ನಿಯಮಗಳನ್ನು ಅನ್ವಯವಾಗುವುದಿಲ್ಲ. |
| | (*2*) | | The Board shall make an order directing the Police, or by the Children's court to its own registry that the relevant records of such conviction shall be destroyed after the expiry of the period of appeal or, as the case may be, a reasonable period as may be prescribed:<br><br>Provided that in case of a heinous offence where the child is found to be in conflict with law under clause (*i*) of sub-section (*1*) of section 19, the relevant records of conviction of such child shall be retained by the Children's Court. | ಆಯಾ ಪ್ರಕರಣಗಳಿಗೆ ಅನ್ವಯಿಸುವಂತೆ, ಆಯಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮನವಿ ಮಾಡುವ ಅವಧಿ ಮುಗಿದ ಮೇಲೆ ಅಥವಾ ಈ ಕಾಯಿದೆಯನ್ವಯ ಮಾಡಲಾಗಿರುವ ನಿಯಮಗಳಲ್ಲಿ ನಮೂದಿಸಿರುವ ಕಾಲಾವಧಿಯ ನಂತರ ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವನ್ನು ಕುರಿತು ಮಂಡಳಿಯು ನಡೆಸಿರಬಹುದಾದ ಪ್ರಕ್ರಿಯೆ ಮತ್ತಿತರ ದಾಖಲೆಗಳನ್ನು ತೆಗೆದು ಬಿಡಲು ಮಂಡಳಿಯು ಪೋಲಿಸ್ ಇಲಾಖೆಗೆ ಅಥವಾ ಮಕ್ಕಳ ನ್ಯಾಯಾಲಯವು ತನ್ನ ದಾಖಲಾಗಾರಕ್ಕೆ ನಿರ್ದೇಶಿಸಬಹುದು.<br>ಆದರೆ ಸೆಕ್ಷನ್ 19ರ ಉಪ ಸೆಕ್ಷನ್ (1)ರ ಕ್ಲಾಜ್ (1)ರಡಿಯಲ್ಲಿ ಮಕ್ಕಳ ನ್ಯಾಯಾಲಯಕ್ಕೆ ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗು ಅತಿ ಹೀನ ಕೃತ್ಯದಲ್ಲಿ ಭಾಗಿಯಾಗಿರುವುದು ಖಾತರಿಯಾಗಿದ್ದಲ್ಲಿ ಅಂತಹ ಮಗುವಿನ ಶಿಕ್ಷೆ ಕುರಿತು ಸೂಕ್ತ ದಾಖಲೆಗಳನ್ನು ಮಕ್ಕಳ ನ್ಯಾಯಾಲಯವು ಉಳಿಸಿಕೊಳ್ಳಬಹುದು. |
| | | | | |

| | | | | |
|---|---|---|---|---|
| **Sec 25** | | | **Special provision in respect of pending cases.** | **ಇನ್ನೂ ಬಗೆಹರಿಯದಿದ್ದ ಪ್ರಕರಣಗಳನ್ನು ಕುರಿತು ವಿಶೇಷ ನಿಬಂಧನೆಗಳು** |
| | | | Notwithstanding anything contained in this Act, all proceedings in respect of a child alleged or found to be in conflict with law pending before any Board or court on the date of commencement of this Act, shall be continued in that Board or court as if this Act had not been enacted. | ಈ ಕಾಯಿದೆಯು ಜಾರಿಗೆ ಬಂದ ಪ್ರದೇಶ ಮತ್ತು ಸಮಯದಲ್ಲಿ ಯಾವುದೇ ಮಂಡಳಿ ಅಥವಾ ನ್ಯಾಯಾಲಯದಲ್ಲಿ ಮಕ್ಕಳ ಮೇಲೆ ಹೂಡಲಾಗಿರುವ ಪ್ರಕರಣಗಳು ನಡೆಯುತ್ತಿದ್ದಲ್ಲಿ, ಈ ಕಾಯಿದೆಯು ಜಾರಿಯಲ್ಲಿಲ್ಲವೋ ಎಂಬತೆ ಆ ಕೃತ್ಯವನ್ನು ಕುರಿತು ಆಯಾ ಮಂಡಳಿ ಅಥವಾ ನ್ಯಾಯಾಲಯವು ತನ್ನ ವಿಚಾರಣೆಯನ್ನು ಮುಂದುವರೆಸಬೇಕು. |
| | | | | |
| **Sec 26** | | | **Provision with respect of runaway child in conflict with law.** | **ಕಾನೂನಿನೊಡನೆ ಸಂಘರ್ಷದಲ್ಲಿದ್ದು ಪರಾರಿಯಾದ/ಓಡಿಹೋದ ಮಕ್ಕಳನ್ನು ಕುರಿತು ಕ್ರಮಗಳು** |
| | (*1*) | | Notwithstanding anything to the contrary contained in any other law for the time being in force, any police officer may take charge of a child in conflict with law who has run away from a special home or an observation home or a place of safety or from the care of a person or institution under whom the child was placed under this Act. | ಈಗ ಚಾಲ್ತಿಯಲ್ಲಿರುವ ಬೇರೆ ಇನ್ನಾವುದೇ ಕಾಯಿದೆಗಳಲ್ಲಿ ಏನೇ ಹೇಳಿದ್ದರೂ, ವಿಶೇಷ ನಿಲಯಗಳು ಅಥವ ಪರಿವೀಕ್ಷಣಾಲಯಗಳು ಆಥವಾ ಸುರಕ್ಷಿತ ಸ್ಥಳ ಅಥವಾ ವ್ಯಕ್ತಿಗತ ಪೋಷಣೆಯಿಂದ ಆಥವಾ ಮಗುವನ್ನು ಇರಿಸಿದ ಸಂಸ್ಥೆಗಳಿಂದ ಕಾನೂನಿನೊಡನೆ ಸಂಘರ್ಷದಲ್ಲಿರುವ ಯಾವುದೇ ಮಗು ಅಂತಹ ಸ್ಥಳಗಳಿಂದ ಓಡಿ ಹೋದಲ್ಲಿ ಅಂತಹ ಮಕ್ಕಳನ್ನು ಯಾವುದೇ ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಳ್ಳಬಹುದು. |
| | (*2*) | | The child referred to in sub-section (*1*) shall be produced, within twenty-four hours, preferably before the Board which passed the original order in respect of that child, if possible, or to the nearest Board where the child is found. | ಉಪ ಸೆಕ್ಷನ್ (1)ರಲ್ಲಿ ಸೂಚಿಸಿದ ಮಗುವನ್ನು ಕುರಿತು ಮೂಲ ಆದೇಶವನ್ನು ಹೊರಡಿಸಿದ ಮಂಡಳಿಯ ಮುಂದೆ ಅಥವಾ ಮಗು ದೊರಕಿದ ಸ್ಥಳಕ್ಕೆ ಹತ್ತಿರವಿರುವ ಮಂಡಳಿಯ ಮುಂದೆ 24 ಗಂಟೆಗಳೊಳಗೆ ಹಾಜರು ಪಡಿಸಬೇಕು. |
| | (*3*) | | The Board shall *ascertain the reasons for the child having run away* and pass appropriate orders for the child to be sent back either to the institution or person from whose custody the child had run away or any other similar place or person, as the Board may deem fit:<br><br>Provided that the Board may also give additional directions regarding any special steps that may be deemed necessary, for the best interest of the child. | ಮಗು ಓಡಿ ಹೋಗಲು ಕಾರಣಗಳನ್ನು ಮಂಡಳಿಯು ಪರಿಶೀಲಿಸಿ ಮಗುವನ್ನು ಸಂಸ್ಥೆಗೆ ಅಥವಾ ಓಡಿ ಹೋದ ಮಗುವನ್ನು ಸುಪರ್ದಿಯಲ್ಲಿಟ್ಟುಕೊಂಡಿದ್ದ ವ್ಯಕ್ತಿ ಅಥವಾ ಅದೇ ರೀತಿಯ ಸ್ಥಳ ಅಥವಾ ವ್ಯಕ್ತಿಯ ಬಳಿಗೆ ವಾಪಸು ಕಳುಹಿಸಲು ಸೂಕ್ತ ಆದೇಶವನ್ನು ಪರಿಸ್ಥಿತಿಗೆ ತಕ್ಕ ಹಾಗೆ ನೀಡಬಹುದು.<br><br>ಅದರೆ ಇದರ ಜೊತೆಗೆ ಮಂಡಳಿಯು ಮಗುವಿನ ಹಿತದೃಷ್ಟಿಯಿಂದ ವಿಶೇಷ ಕ್ರಮಗಳು ಅವಶ್ಯವೆನಿಸಿದರೆ ಅದಕ್ಕೆ ತಕ್ಕ ಹಾಗೆ ಸೂಕ್ತ ಹೆಚ್ಚುವರಿ ನಿರ್ದೇಶನವನ್ನು ನೀಡಬಹುದು. |
| | (*4*) | | No additional proceeding shall be instituted in respect of such child. | ಇಂತಹ ಮಗುವಿನ ಕುರಿತು ಯಾವುದೇ ಹೆಚ್ಚುವರಿ ಕ್ರಮಗಳನ್ನು ಕೈಗೊಳ್ಳುವಂತಿಲ್ಲ. |
| | | | | |

## <u>Chapter V</u> Child Welfare Committee – CWC ಮಕ್ಕಳ ಕಲ್ಯಾಣ ಸಮಿತಿ

| Sec | | | | |
|---|---|---|---|---|
| 27 | | | **Child Welfare Committee.** | **ಮಕ್ಕಳ ಕಲ್ಯಾಣ ಸಮಿತಿ** |
| | (*1*) | | The State Government shall by notification in the Official Gazette constitute for every district, one or more Child Welfare Committees for exercising the powers and to discharge the duties conferred on such Committees in relation to children in need of care and protection under this Act and ensure that induction training and sensitisation of all members of the committee is provided within two months from the date of notification. | ರಾಜ್ಯ ಸರ್ಕಾರವು ತಮ್ಮ ರಾಜ್ಯ ಪತ್ರದಲ್ಲಿ ಪ್ರಕಟಿಸಿ ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಒಂದು ಅಥವಾ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳ ಕಲ್ಯಾಣ ಸಮಿತಿಗಳನ್ನು ರಚಿಸಿ, ಆಯಾ ಸಮಿತಿಗಳು ಕಾಯಿದೆಯಲ್ಲಿನ ನಿರ್ದಿಷ್ಟ ಅಧಿಕಾರಗಳನ್ನು ಬಳಸಿ, ಸಮಿತಿಯು ಈ ಕಾಯಿದೆಯಲ್ಲಿ ವ್ಯಾಖ್ಯಾನಿಸಿರುವಂತಹ ಪೋಷಣೆ ಮತ್ತು ರಕ್ಷಣೆಯ ಆವಶ್ಯಕತೆ ಇರುವ ಮಕ್ಕಳ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಅನುವು ಮಾಡಿಕೊಡಬೇಕು ಮತ್ತು ಸೂಚನೆ ಹೊರಡಿಸಿದ ಎರಡು ತಿಂಗಳೊಳಗೆ ಸಮಿತಿಯ ಎಲ್ಲಾ ಸದಸ್ಯರಿಗೆ ಸೂಕ್ತ ತರಬೇತಿಯನ್ನು ಖಾತ್ರಿಗೊಳಿಸಬೇಕು. |
| | (*2*) | | The Committee shall consist of a Chairperson, and four other members as the State Government may think fit to appoint, of whom atleast one shall be a woman and another, an expert on the matters concerning children. | ರಾಜ್ಯ ಸರ್ಕಾರವು ಸೂಕ್ತವೆಂದು ಪರಿಗಣಿಸಲ್ಪಡುವ ಒಬ್ಬ ಅಧ್ಯಕ್ಷರು ಮತ್ತು ನಾಲ್ಕು ಜನ ಸದಸ್ಯರನ್ನು ಸಮಿತಿಗೆ ನೇಮಿಸಬೇಕು. ಇದರಲ್ಲಿ ಕನಿಷ್ಟ ಒಬ್ಬರಾದರೂ ಮಹಿಳೆಯರಿದ್ದು ಇನ್ನೊಬ್ಬರು ಮಕ್ಕಳ ವಿಚಾರಗಳನ್ನು ಕುರಿತ ನುರಿತ ವ್ಯಕ್ತಿಯಾಗಿರಬೇಕು. |
| | (*3*) | | The District Child Protection Unit <u>*shall provide a Secretary and other staff*</u> that may be required for secretarial support to the Committee for its effective functioning. | ಸಮಿತಿಯ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಅವಶ್ಯವಿರುವ ಕಾರ್ಯಕಾರಿ ನೆರವು ನೀಡಲು ಕಾರ್ಯದರ್ಶಿ ಮತ್ತು ಇತರೆ ಸಿಬ್ಬಂದಿಗಳನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಒದಗಿಸಬೇಕು. |
| | (*4*) | | No person shall be appointed as a member of the Committee unless such person has been actively involved in health, education or welfare activities pertaining to children for atleast seven years or is a practicing professional with a degree in child psychology or psychiatry or law or social work or sociology or human development. | ಆರೋಗ್ಯ, ಶಿಕ್ಷಣ ಅಥವಾ ಕಲ್ಯಾಣ ಕ್ಷೇತ್ರಗಳಲ್ಲಿ ಕನಿಷ್ಟ ಏಳು ವರ್ಷಗಳ ಕಾಲ ತೊಡಗಿಸಿಕೊಂಡ ಅಥವಾ ಮಕ್ಕಳ ಮನಶಾಸ್ತ್ರ ಅಥವಾ ಮನೋವಿಜ್ಞಾನ ಅಥವಾ ಕಾನೂನು ಅಥವಾ ಸಮಾಜಕಾರ್ಯ ಅಥವಾ ಮಾನವ ಅಭಿವೃದ್ಧಿಗಳಲ್ಲಿ ಶೈಕ್ಷಣಿಕ ಪದವಿಯೊಂದಿಗಿನ ವೃತ್ತಿ ಪರಿಣಿತರಲ್ಲದ ಬೇರಾವುದೇ ವ್ಯಕ್ತಿಯನ್ನು ಸಮಿತಿಗೆ ನೇಮಿಸುವಂತಿಲ್ಲ. |
| | (*5*) | | No person shall be appointed as a member unless he possesses such other qualifications as may be prescribed. | ಮೇಲೆ ಸೂಚಿಸಿದವುಗಳಿಗೆ ಸಂಬಂಧಿಸಿದ ಇತರೆ ಅರ್ಹತೆಯನ್ನು ಹೊಂದಿಲ್ಲದ ಯಾವುದೇ ವ್ಯಕ್ತಿಯನ್ನು ಸದಸ್ಯರನ್ನಾಗಿ ನೇಮಿಸುವಂತಿಲ್ಲ. |
| | (*6*) | | <u>*No person*</u> shall be appointed for a period of <u>*more than three years*</u> as a member of the Committee. | ಯಾವುದೇ ವ್ಯಕ್ತಿಯನ್ನು ಮೂರು ವರ್ಷಕ್ಕಿಂತ ಹೆಚ್ಚು ಕಾಲ ಸಮಿತಿಯ ಸದಸ್ಯರಾಗಿ ನೇಮಿಸುವಂತಿಲ್ಲ. |
| | (*7*) | | The appointment of any member of the Committee shall be terminated by the State Government after making an inquiry, if— | ಸಮಿತಿಗೆ ನಿಯುಕ್ತರಾದ ಯಾವುದೇ ಸದಸ್ಯರನ್ನು ಈ ಮುಂದಿನ ವಿಚಾರಗಳ ಹಿನ್ನೆಲೆಯಲ್ಲಿ ತನಿಖೆ ಮಾಡಿ ಸದಸ್ಯತ್ವವನ್ನು ರದ್ದು ಪಡಿಸಬಹುದು : |
| | | (*i*) | he has been found guilty of misuse of power vested on him under this Act; | ಈ ಕಾಯಿದೆಯಡಿ ನಿಯೋಜಿಸಲ್ಪಟ್ಟವರಿಗೆ ನೀಡಲಾಗಿರುವ ಅಧಿಕಾರಗಳ ದುರುಪಯೋಗ ಮಾಡುತ್ತಿರುವುದು ಕಂಡುಬಂದಲ್ಲಿ |
| | | (*ii*) | he has been convicted of an offence involving moral turpitude and such conviction has not been reversed or he has not been granted full pardon in respect of such offence; | ಅಂತಹ ಸದಸ್ಯರು ಅನೈತಿಕ ವ್ಯವಹಾರದಲ್ಲಿ ತೊಡಗಿದ್ದು ಅವರಿಗೆ ನ್ಯಾಯಾಲಯದಿಂದ ಶಿಕ್ಷೆ ಆಗಿದ್ದಲ್ಲಿ ಅಥವಾ ಅವರಿಗೆ ವಿಧಿಸಲಾಗಿದ್ದ ಶಿಕ್ಷೆಯನ್ನು ನ್ಯಾಯಾಲಯವು ರದ್ದು ಪಡಿಸದೇ ಇದ್ದ ಪಕ್ಷದಲ್ಲಿ ಅಥವಾ ಅಂತಹ ಆಪರಾಧಿಕ ಆಪಾದನೆಯಿಂದ ಅವರನ್ನು ಮುಕ್ತಗೊಳಿಸಿ ಪೂರ್ಣ ಪ್ರಮಾಣದ ಕ್ಷಮಾಪಣೆಯನ್ನು ನೀಡದಿದ್ದ ಪಕ್ಷದಲ್ಲಿ ; |

| | | | | |
|---|---|---|---|---|
| | | (*iii*) | he fails to attend the proceedings of the Committee consecutively *for three months* without any valid reason or he fails to *attend less than three-fourths* of the sittings in a year. | ಇಂತಹ ಸದಸ್ಯರು ಯಾವುದೆ ಸೂಕ್ತ ಕಾರಣಗಳನ್ನು ನೀಡದೆ, ಸತತವಾಗಿ ಸಮಿತಿಯ ಸಭೆಗಳಿಗೆ ಮೂರು ತಿಂಗಳುಗಳ ಕಾಲ ಬಾರದಿದ್ದಲ್ಲಿ ಅಥವಾ ವರ್ಷದಲ್ಲಿ ನಡೆಯುವ ಒಟ್ಟೂ ಸಭೆಗಳ ನಾಲ್ಕನೇ ಮೂರು ಭಾಗದಷ್ಟು ಸಭೆಗಳಿಗೆ ಹಾಜರಾಗದಿದ್ದಲ್ಲಿ. |
| | (*8*) | | The District Magistrate shall conduct a quarterly review of the functioning of the Committee. | ಜಿಲ್ಲಾ ನ್ಯಾಯಾಧೀಶರು ಸಮಿತಿಯ ಕಾರ್ಯಚಟುವಟಿಕೆಗಳ ಕುರಿತು ಮೂರು ತಿಂಗಳಿಗೊಮ್ಮೆ ಪರಾಮರ್ಶೆ ನಡೆಸಬೇಕು. |
| | (*9*) | | The Committee shall function as a *Bench* and shall have the powers conferred by the Code of Criminal Procedure, 1973 on a *Metropolitan Magistrate* or, as the case may be a Judicial Magistrate of First Class. | ಮಕ್ಕಳ ಕಲ್ಯಾಣ ಸಮಿತಿಯು ನ್ಯಾಯಾಧೀಶರ ಪೀಠದಂತೆ ಕಾರ್ಯ ನಿರ್ವಹಿಸಬೇಕಿದ್ದು, ಅಪರಾಧ ಪ್ರಕ್ರಿಯಾ ಸಂಹಿತೆ (CrPC) 1973ರಲ್ಲಿ ನಿಗಧಿ ಪಡಿಸಿರುವಂತೆ ಅಧಿಕಾರಗಳನ್ನು ಹೊಂದಿದ್ದು, ಮಹಾನಗರ ನ್ಯಾಯಾಧೀಶರು (ಮೆಟ್ರೋಪಾಲಿಟನ್ ನ್ಯಾಯಾಧೀಶರು) ಅಥವಾ ಆಯಾ ಸಂದರ್ಭಕ್ಕೆ ತಕ್ಕಂತೆ ಮೊದಲ ದರ್ಜೆಯ ನ್ಯಾಯಾಧೀಶರಂತೆ ಕಾರ್ಯ ನಿರ್ವಹಿಸಬೇಕು |
| | (*10*) | | The District Magistrate shall be *the grievances redressal authority* for the Child Welfare Committee and anyone connected with the child, may file a petition before the District Magistrate, who shall consider and pass appropriate orders. | ಮಕ್ಕಳ ಕಲ್ಯಾಣ ಸಮಿತಿಗೆ ಮತ್ತು ಮಕ್ಕಳಿಗೆ ಸಂಬಂಧಪಟ್ಟ ಯಾವುದೇ ವ್ಯಕ್ತಿಗೆ ಜಿಲ್ಲಾ ನ್ಯಾಯಾಧೀಶರು ಕುಂದುಕೊರತೆಗಳ ಪರಿಹಾರ ಪ್ರಾಧಿಕಾರವಾಗಿದ್ದು, ಜಿಲ್ಲಾ ನ್ಯಾಯಾಧೀಶರ ಮುಂದೆ ಮನವಿಯನ್ನು ಸಲ್ಲಿಸಿದರೆ ಅವರು ಅದನ್ನು ಪರಿಗಣಿಸಿ ಸೂಕ್ತ ಆದೇಶವನ್ನು ನೀಡಬೇಕು. |
| | | | | |
| **Sec** | | | **Procedure in relation to Committee.** | **ಮಕ್ಕಳ ಕಲ್ಯಾಣ ಸಮಿತಿಯ ಪ್ರಕ್ರಿಯೆಗಳು** |
| **28** | (*1*) | | The Committee shall meet at least *twenty days* in a month and shall observe such rules and procedures with regard to the transaction of business at its meetings, as may be prescribed. | ಸಮಿತಿಯು ತಿಂಗಳಿಗೆ ಕನಿಷ್ಟ 20 ದಿನಗಳ ಕಾಲ ಸಭೆಗಳನ್ನು ನಡೆಸಿ, ಅಲ್ಲಿ ಸೂಚಿಸಲಾಗುವ ರೀತಿಯಲ್ಲಿ ಕಾರ್ಯಕಲಾಪಗಳನ್ನು ನಡೆಸಬೇಕು. |
| | (*2*) | | A visit to an existing child care institution by the Committee, to check its functioning and well being of children shall be considered as a sitting of the Committee. | ಮಕ್ಕಳ ಪೋಷಣಾ ಗೃಹಗಳ ಕಾರ್ಯಚಟುವಟಿಕೆಗಳು ಮತ್ತು ಮಕ್ಕಳ ಸುರಕ್ಷತೆ ಕುರಿತು ತನಿಖೆ ನಡೆಸಲು ಅಂತಹ ಗೃಹಗಳಿಗೆ ಭೇಟಿ ನೀಡುವುದನ್ನೂ ಸಹ ಸಮಿತಿಯ ಸಭೆ ಎಂದು ಪರಿಗಣಿಸಬೇಕು. |
| | (*3*) | | A child in need of care and protection may be produced before an individual member of the Committee for being placed in a Children's Home or fit person when the Committee is not in session. | ಸಮಿತಿಯು ಸಭೆ ಸೇರದ ಸಂದರ್ಭದಲ್ಲಿ, ಪೋಷಣೆ ಮತ್ತು ರಕ್ಷಣೆಯ ಆವಶ್ಯಕತೆ ಇರುವ ಮಕ್ಕಳನ್ನು ಸಮಿತಿಯ ಒಬ್ಬ ಸದಸ್ಯರ ಮುಂದೆ ಹಾಜರು ಪಡಿಸಿ ಅಂತಹ ಮಕ್ಕಳನ್ನು ರಕ್ಷಿತ ಗೃಹಗಳಲ್ಲಿ ಇರಿಸಬಹುದು. |
| | (*4*) | | In the event of any difference of opinion among the members of the Committee at the time of taking any decision, the opinion of the *majority shall prevail* but where there is no such majority, the *opinion of the Chairperson shall prevail.* | ಮಕ್ಕಳಿಗೆ ಸಂಬಂಧಿಸಿದ ಯಾವುದೇ ತಾತ್ಕಾಲಿಕ ಅಥವಾ ಅಂತಿಮ ನಿರ್ಧಾರಗಳನ್ನು ಕೈಗೊಳ್ಳುವಾಗ ಸದಸ್ಯರ ನಡುವೆ ಭಿನ್ನಾಭಿಪ್ರಾಯ ಬಂದಲ್ಲಿ, ಬಹುಮತಕ್ಕೆ ಪ್ರಾಮುಖ್ಯತೆ ಬರುತ್ತದೆ, ಆದರೆ, ಬಹುಮತದ ಸಾಧ್ಯತೆ ಇಲ್ಲದ ಪಕ್ಷದಲ್ಲಿ ಸಮಿತಿಯ ಅಧ್ಯಕ್ಷರ ತೀರ್ಮಾನವೇ ಅಂತಿಮವಾಗುತ್ತದೆ. |
| | (*5*) | | Subject to the provisions of sub-section (*1*), the Committee may act, notwithstanding the absence of any member of the Committee, and no order made by the Committee shall be invalid by reason only of the absence of any member during any stage of the proceeding: Provided that there shall be *at least three members* present at the time of final disposal of the case. | ಈ ಮೇಲಿನ ಉಪ ಸೆಕ್ಷನ್ (1) ಪ್ರಕರಣವನ್ನು ಕುರಿತು ನಡೆದಿರುವ ಚರ್ಚೆ/ವಿಚಾರಣೆ ಸಮಯದಲ್ಲಿ ಯಾವುದೇ ಸದಸ್ಯರು ಗೈರು ಆಗಿದ್ದ ಕಾರಣವೊಂದರಿಂದಲೇ ಯಾವುದೇ ನಿರ್ಧಾರವನ್ನು ಅಸಿಂಧು ಎಂದು ಪರಿಗಣಿಸಲಾಗದು<br><br>ಅದರೆ ಪ್ರಕರಣದ ಅಂತಿಮ ವಿಲೇವಾರಿ ಸಮಯದಲ್ಲಿ ಕನಿಷ್ಟ ಮೂರು ಸದಸ್ಯರು ಹಾಜರಿರಬೇಕು. |
| | | | | |

| | | | | |
|---|---|---|---|---|
| **Sec 29** | | | **Powers of Committee.** | **ಮಕ್ಕಳ ಕಲ್ಯಾಣ ಸಮಿತಿಯ ಅಧಿಕಾರ** |
| | (*1*) | | The Committee shall have the authority to dispose of cases for the care, protection, treatment, development and rehabilitation of children in need of care and protection, as well as to provide for their basic needs and protection. | ಯಾವ ಮಕ್ಕಳಿಗೆ ಪೋಷಣೆ, ರಕ್ಷಣೆ, ಚಿಕಿತ್ಸೆ, ಅಭಿವೃದ್ಧಿ ಮತ್ತು ಪುನರ್ವಸತಿಯ ಆವಶ್ಯಕತೆ ಇದೆಯೋ ಮತ್ತು ಮಕ್ಕಳ ಮೂಲ ಆವಶ್ಯಕತೆಗಳನ್ನು ಪೂರೈಸಿ ಅವರ ಮಾನವ ಹಕ್ಕುಗಳನ್ನು ರಕ್ಷಿಸಲು ಮಕ್ಕಳ ಕಲ್ಯಾಣ ಸಮಿತಿ ಅಂತಿಮ ಅಧಿಕಾರ ಹೊಂದಿದೆ. |
| | (*2*) | | Where a Committee has been constituted for any area, such Committee shall, notwithstanding anything contained in any other law for the time being in force, but save as otherwise expressly provided in this Act, have the power to deal exclusively with all proceedings under this Act relating to children in need of care and protection. | ಯಾವುದಾದರೂ ಪ್ರದೇಶಕ್ಕೆ (ಜಿಲ್ಲೆಗೆ) ಮಕ್ಕಳ ಕಲ್ಯಾಣ ಸಮಿತಿಯನ್ನು ನೇಮಿಸಲಾಗಿರುತ್ತದೋ, ಅಂತಹ ಸಮಿತಿಗೆ, ಈ ಸಮಯದಲ್ಲಿ ಚಾಲ್ತಿಯಲ್ಲಿರುವ ಇನ್ನಾವುದೇ ಕಾಯಿದೆಯಲ್ಲಿ ಎಂತಹದೇ ವಿಚಾರವಿದ್ದರೂ, ಈ ಕಾಯಿದೆಯಲ್ಲಿ ಆ ಕುರಿತು ಉಲ್ಲೇಖವಿಲ್ಲದಿದ್ದ ಪಕ್ಷದಲ್ಲಿ, ಈ ಕಾಯಿದೆಯಲ್ಲಿ, ಮಕ್ಕಳ ಪೋಷಣೆ ಮತ್ತು ರಕ್ಷಣೆಗೆ ಸಂಬಂಧಿಸಿದಂತೆ ಈ ಕಾಯಿದೆ ಉಲ್ಲೇಖಿಸುವ ಎಲ್ಲ ಪ್ರಕ್ರಿಯೆಗಳನ್ನು ನಡೆಸಲು ವಿಶೇಷ ಅಧಿಕಾರವಿದೆ. |
| | | | | |
| **Sec 30** | | | **Functions and responsibilities of Committee.** | **ಸಮಿತಿಯ ಕಾರ್ಯಕಲಾಪ ಮತ್ತು ಜವಾಬ್ದಾರಿಗಳು** |
| | | | The functions and responsibilities of the Committee shall include— | ಸಮಿತಿಯ ಕಾರ್ಯಕಲಾಪ ಮತ್ತು ಜವಾಬ್ದಾರಿಗಳು ಈ ಕೆಳಗಿನವುಗಳನ್ನು ಒಳಗೊಂಡಿದೆ – |
| | | (*i*) | taking cognizance of and receiving the children produced before it; | ತನ್ನ ಮುಂದೆ ಹಾಜರುಪಡಿಸಿದ ಮಕ್ಕಳನ್ನು ಸ್ವೀಕರಿಸಿ ಅವರ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಳ್ಳುವುದು |
| | | (*ii*) | conducting inquiry on all issues relating to and affecting the safety and wellbeing of the children under this Act; | ಮಕ್ಕಳ ಕಲ್ಯಾಣ, ರಕ್ಷಣೆಗೆ ಪರಿಣಾಮ ಬೀರುವ ಸಂಬಂಧಿತ ಎಲ್ಲ ವಿಷಯಗಳ ಕುರಿತು ಈ ಕಾಯ್ದೆಯಡಿ ತನಿಖೆಯನ್ನು ನಡೆಸುವುದು. |
| | | (*iii*) | directing the Child Welfare Officers or probation officers or District Child Protection Unit or non-governmental organisaiton to conduct social investigation and submit a report before the Committee; | ಪರಿವೀಕ್ಷಾಧಿಕಾರಿಗಳು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅಥವಾ ಸಾಮಾಜಿಕ ಕಾರ್ಯಕರ್ತರಿಗೆ ಮಕ್ಕಳ ಕಲ್ಯಾಣ ಸಮಿತಿಯು ಸಾಮಾಜಿಕ ತನಿಖೆಯನ್ನು ನಡೆಸಿ ಅದರ ವರದಿಯನ್ನು ಸಮಿತಿಯ ಮುಂದೆ ಮಂಡಿಸಬೇಕೆಂದು ನಿರ್ದೇಶಿಸುವುದು. |
| | | (*iv*) | conducting inquiry for declaring fit persons for care of children in need of care and protection; | ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆಯಿರುವ ಮಕ್ಕಳನ್ನು ನೋಡಿಕೊಳ್ಳಲು ಅರ್ಹ ವ್ಯಕ್ತಿಯೆಂದು ಘೋಷಿಸಲು ತನಿಖೆಯನ್ನು ನಡೆಸುವುದು. |
| | | (*v*) | directing placement of a child in foster care; | ಮಗುವನ್ನು ಫಾಸ್ಟರ್ ಕೇರ್‌ನಲ್ಲಿಡಲು ನಿರ್ದೇಶನ ನೀಡಬಹುದು. |
| | | (*vi*) | ensuring care, protection, appropriate rehabilitation or restoration of children in need of care and protection, based on the child's individual care plan and passing necessary directions to parents or guardians or fit persons or children's homes or fit facility in this regard; | ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆಯಿರುವ ಮಕ್ಕಳ ವ್ಯಕ್ತಿಗತ ಪೋಷಣಾ ಯೋಜನೆಯ ಆಧಾರದ ಮೇಲೆ ಅವರ ಪೋಷಣೆ, ರಕ್ಷಣೆ, ಸೂಕ್ತ ಪುನರ್ವಸತಿ ಅಥವಾ ಪುನಃ ಸ್ಥಾಪನೆಗೊಳಿಸಲು ಹೆತ್ತವರಿಗೆ ಅಥವ ಪೋಷಕರಿಗೆ ಅಥವಾ ಬಾಲಮಂದಿರಗಳಿಗೆ ಅಥವಾ ಈ ಕುರಿತಾದ ಅರ್ಹ ವ್ಯವಸ್ಥೆಗಳಿಗೆ ಅವಶ್ಯವಿರುವ ಸೂಕ್ತ ನಿರ್ದೇಶನಗಳನ್ನು ನೀಡುವುದು. |
| | | (*vii*) | selecting registered institution for placement of each child requiring institutional support, based on the child's age, gender, disability and needs and keeping in mind the available capacity of the institution; | ಸಾಂಸ್ಥಿಕ ನೆರವಿನ ಅವಶ್ಯಕತೆಯಿರುವ ಮಗುವಿಗೆ ಅದರ ವಯಸ್ಸು, ಲಿಂಗ, ವಿಕಲಾಂಗತೆ ಮತ್ತು ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಇಂತಹ ಮಗುವನ್ನು ಸಾಂಸ್ಥೀಕರಣಗೊಳಿಸಲು ಸೌಲಭ್ಯಗಳನ್ನು ಹೊಂದಿರುವ ನೋಂದಾಯಿತ ಸಂಸ್ಥೆಗಳನ್ನು ಆರಿಸುವುದು. |
| | | (*viii*) | conducting at least two inspection visits per month of residential facilities for children in need of care and protection and recommending action for improvement in quality of services to the District Child Protection Unit and the State Government; | ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆಯಿರುವ ಮಕ್ಕಳ ಸನಿವಾಸ ಸೌಲಭ್ಯಗಳಿಗೆ ಕನಿಷ್ಠ ತಿಂಗಳಿಗೆ ಎರಡು ಬಾರಿ ತನಿಖಾ ಭೇಟಿಯನ್ನು ನೀಡುವುದು ಮತ್ತು ಅಲ್ಲಿನ ಸೇವೆಗಳ ಗುಣಮಟ್ಟದ ಸುಧಾರಣೆಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ರಜ್ಯ ಸರ್ಕಾರಗಳಿಗೆ ಕ್ರಮ ಕೈಗೊಳ್ಳಲು ಸಲಹೆಗಳನ್ನು ನೀಡುವುದು. |

| | | | | |
|---|---|---|---|---|
| | | (*ix*) | certifying the execution of the surrender deed by the parents and ensuring that they are given time to reconsider their decision as well as making all efforts to keep the family together; | ಪೋಷಕರಿಂದ ಮಗುವನ್ನು ವಶಕ್ಕೆ ಪಡೆದ ಕುರಿತು ಪ್ರಮಾಣೀಕರಿಸುವುದು ಮತ್ತು ಅವರಿಗೆ ಅವರ ನಿರ್ಧಾರವನ್ನು ಮರುಚಿಂತಿಸಲು ಸಮಯ ನೀಡುವುದನ್ನು ಮತ್ತು ಮಗುವು ಕುಟುಂಬದ ಜೊತೆಗಿರುವಂತೆ ಮಾಡುವ ಎಲ್ಲಾ ಪ್ರಯತ್ನಗಳನ್ನು ಖಾತ್ರಿಪಡಿಸುವುದು |
| | | (*x*) | ensuring that all efforts are made for restoration of abandoned or lost children to their families following due process, as may be prescribed; | ತ್ಯಜಿಸಲ್ಪಟ್ಟ ಅಥವಾ ಕಳೆದುಹೋದ ಮಗುವನ್ನು ಅವರ ಕುಟುಂಬಗಳಿಗೆ ಸೇರಿಸಲು ಎಲ್ಲಾ ಪ್ರಯತ್ನಗಳನ್ನು ಮಾಡುವುದನ್ನು ನಿರ್ದಿಷ್ಟ ಸೂಚಿತ ಪ್ರಕ್ರಿಯೆಗಳನ್ನು ಅನುಸರಿಸುವುದರ ಮೂಲಕ ಖಾತ್ರಿಗೊಳಿಸುವುದು. |
| | | (*xi*) | declaration of orphan, abandoned and surrendered child as legally free for adoption after due inquiry; | ಸೂಕ್ತವಾದ ತನಿಖೆಯ ನಂತರ ಅನಾಥ, ಪರಿತ್ಯಜಿಸಿದ ಅಥವಾ ವಶಕ್ಕೆ ಪಡೆದ ಮಗುವನ್ನು ದತ್ತು ನೀಡಲು ಕಾನೂನು ಮುಕ್ತ ಎಂದು ಘೋಷಿಸುವುದು. |
| | | (*xii*) | taking **<u>suo motu cognizance</u>** of cases and reaching out to children in need of care and protection, *<u>who are not produced</u>* before the Committee, provided that such decision is taken by at least three members; | ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರಾಗದ ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆ ಇರುವ ಮಕ್ಕಳು ಇರುವ ಸ್ಥಳಗಳಿಗೆ ಧಾವಿಸಿ/ತೆರಳಿ <u>ಸ್ವಪ್ರೇರಿತ</u> ಪ್ರಕರಣಗಳನ್ನು ದಾಖಲಿಸಿಕೊಳ್ಳಬೇಕು, ಆದರೆ ಇಂತಹ ನಿರ್ಧಾರ ಕೈಗೊಳ್ಳುವಾಗ ಕನಿಷ್ಟ ಮೂರು ಸದಸ್ಯರ ಒಪ್ಪಿಗೆಯಿರಬೇಕು. |
| | | (*xiii*) | taking action for rehabilitation of sexually abused children who are reported as children in need of care and protection to the Committee by Special Juvenile Police Unit or local police, as the case may be, under the Protection of Children from Sexual Offences Act, 2012; | ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆ ಇರುವ ಮಕ್ಕಳೆಂದು ಪ್ರಕರಣಕ್ಕೆ ತಕ್ಕ ಹಾಗೆ ಮಕ್ಕಳ ವಿಶೇಷ ಪೋಲಿಸ್ ಘಟಕ ಅಥವಾ ಸ್ಥಳೀಯ ಪೋಲಿಸರು ವರದಿ ನೀಡಿದ ಲೈಂಗಿಕ ದುರುಪಯೋಗಗೊಂಡ ಮಕ್ಕಳನ್ನು ಲೈಂಗಿಕ ದೌರ್ಜನ್ಯಗಳಿಂದ ಮಕ್ಕಳ ರಕ್ಷಣೆ ಕಾಯ್ದೆ 2012ರ ಅಡಿಯಲ್ಲಿ ಪುನರ್ವಸತಿಗೊಳಿಸಲು ಕ್ರಮಗಳನ್ನು ಕೈಗೊಳ್ಳುವುದು. |
| | | (*xiv*) | dealing with cases referred by the Board under sub-section (*2*) of section 17; | ಸೆಕ್ಷನ್ 17ರ ಉಪ ಸೆಕ್ಷನ್ (2)ರ ಅಡಿಯಲ್ಲಿ ಮಂಡಳಿಯು ಸೂಚಿಸಿದ ಪ್ರಕರಣಗಳನ್ನು ನಿರ್ವಹಿಸುವುದು. |
| | | (*xv*) | co-ordinate with the police, labour department and other agencies involved in the care and protection of children with support of the District Child Protection Unit or the State Government; | ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅಥವಾ ರಾಜ್ಯ ಸರ್ಕಾರದ ನೆರವಿನಿಂದ ಮಕ್ಕಳ ರಕ್ಷಣೆ ಮತ್ತು ಪೋಷಣೆಯ ಅವಶ್ಯಕತೆಗೆ ಸಂಬಂಧಿಸಿದಂತೆ ಪೋಲಿಸ್, ಕಾರ್ಮಿಕ ಇಲಾಖೆ ಮತ್ತು ಇತರೆ ಸಂಸ್ಥೆಗಳೊಡನೆ ನಿರಂತರ ಸಂಯೋಜನೆ ಸಂಪರ್ಕವನ್ನು ಇಟ್ಟುಕೊಳ್ಳುವುದು. |
| | | (*xvi*) | in case of a complaint of abuse of a child in any child care institution, the Committee shall conduct an inquiry and give directions to the police or the District Child Protection Unit or labour department or ChildLine services, as the case may be; | ಯಾವುದೇ ಮಕ್ಕಳ ಪೋಷಣಾ ಸಂಸ್ಥೆಯಲ್ಲಿ ಮಕ್ಕಳ ದುರುಪಯೋಗದ ದೂರು ಬಂದಲ್ಲಿ, ಸಮಿತಿಯು ತನಿಖೆಯನ್ನು ನಡೆಸಬೇಕು ಮತ್ತು ಪ್ರಕರಣಕ್ಕೆ ತಕ್ಕ ಹಾಗೆ ಪೋಲಿಸರಿಗೆ ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಅಥವಾ ಕಾರ್ಮಿಕ ಇಲಾಖೆಗೆ ಅಥವಾ ಚೈಲ್ಡ್ ಲೈನ್ ಸೇವೆಗೆ ನಿರ್ದೇಶನವನ್ನು ನೀಡಬೇಕು. |
| | | (*xvii*) | accessing appropriate legal services for children; | ಮಗುವಿಗೆ ಸೂಕ್ತ ಕಾನೂನು ಸೇವೆಯನ್ನು ಒದಗಿಸುವುದು. |
| | | (*xviii*) | such other functions and responsibilities, as may be prescribed. | ನಿರ್ಧಿಷ್ಟಪಡಿಸಿದ ಇತರೆ ಯಾವುದೇ ಕಾರ್ಯಗಳು ಮತ್ತು ಜವಾಬ್ದಾರಿಗಳು. |

# <u>Chapter VI</u> Procedure in relationship to Children in need of care and protection
## ಪೋಷಣೆ ಮತ್ತು ರಕ್ಷಣೆಯ ಆವಶ್ಯಕತೆಯಿರುವ ಮಕ್ಕಳನ್ನು ಕುರಿತು ಪ್ರಕ್ರಿಯೆಗಳು

| Sec | | | **Production before Committee.** | **ಸಮಿತಿಯೆದುರು ಹಾಜರು ಪಡಿಸುವುದು** |
|---|---|---|---|---|
| **31** | (*1*) | | Any child in need of care and protection may be produced before the Committee by any of the following persons, namely:— | ಪೋಷಣೆ ಮತ್ತು ರಕ್ಷಣೆಯ ಆವಶ್ಯಕತೆ ಇರುವ ಮಕ್ಕಳನ್ನು ಈ ಮುಂದಿನ ಯಾರಾದರೊಬ್ಬರು ಮಕ್ಕಳ ಕಲ್ಯಾಣ ಸಮಿತಿಯೆದುರು ಹಾಜರು ಪಡಿಸಬಹುದು. |
| | | (*i*) | any police officer or special juvenile police unit or a designated Child Welfare Police Officer or any officer of District Child Protection Unit or inspector appointed under any labour law for the time being in force; | ಯಾವುದೇ ಪೊಲೀಸ್ ಅಥವಾ ಮಕ್ಕಳ ವಿಶೇಷ ಪೊಲೀಸ್ ಘಟಕ ಅಥವಾ ನಿಗಧಿತ ಪೊಲೀಸ್ ಅಧಿಕಾರಿ ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಯಾವುದೇ ಅಧಿಕಾರಿ ಅಥವಾ ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಕಾರ್ಮಿಕ ಕಾಯ್ದೆಯ ಅಡಿಯಲ್ಲಿ ನೇಮಕಗೊಂಡಿರುವ ಅಧಿಕಾರಿ. |
| | | (*ii*) | any public servant; | ಯಾವುದೇ ಸಾರ್ವಜನಿಕ ಸೇವೆಯಲ್ಲಿರುವ ವ್ಯಕ್ತಿ (ಸರ್ಕಾರಿ ನೌಕರರು) |
| | | (*iii*) | **ChildLine Services** or any voluntary or non-governmental organisation or any agency as may be recognised by the State Government; | ಚೈಲ್ಡ್‌ಲೈನ್ ಸೇವೆಗಳು ಅಥವಾ ಯಾವುದೇ ಸ್ವಯಂಸೇವಾ ಸಂಘಟನೆ ಅಥವಾ ಅಂತಹ ಇತರ ಸ್ವಯಂಸೇವಾ ಸಂಘಟನೆಗಳು ಅಥವಾ ರಾಜ್ಯ ಸರ್ಕಾರದಿಂದ ಮನ್ನಣೆ ಪಡೆದ ಯಾವುದೇ ಸಂಘಟನೆ |
| | | (*iv*) | Child Welfare Officer or probation officer; | ಮಕ್ಕಳ ಕಲ್ಯಾಣಾಧಿಕಾರಿಗಳು ಅಥವಾ ಪರಿವೀಕ್ಷಣಾಧಿಕಾರಿಗಳು; |
| | | (*v*) | any social worker or a public spirited citizen; | ಯಾವುದೇ ಸಮಾಜ ಸೇವಾ ಕಾರ್ಯಕರ್ತರು ಅಥವಾ ಸಾರ್ವಜನಿಕ ಹಿತಾಸಕ್ತಿ ಇರುವ ಪ್ರಜೆ |
| | | (*vi*) | by the child himself; or | ಮಗುವೇ ಸ್ವಯಂ ಆಗಿ ಸಮಿತಿಯ ಎದುರು ಬರಬಹುದು |
| | | (*vii*) | any nurse, doctor or management of a nursing home, hospital or maternity home: | ಯಾವುದೇ ದಾದಿ, ವೈದ್ಯರು ಅಥವಾ ಚಿಕಿತ್ಸಾ ಗೃಹ, ಆಸ್ಪತ್ರೆ ಅಥವಾ ಪ್ರಸೂತಿ ಗೃಹದ ಉಸ್ತುವಾರಿದಾರರು. |
| | | | Provided that the child shall be produced before the Committee without any loss of time but within a period of twenty-four hours excluding the time necessary for the journey. | ಮಗುವನ್ನು ಸಮಯ ವ್ಯರ್ಥ್ಯವಾಗದಂತೆ ಶೀಘ್ರವಾಗಿ, ಆದರೆ ಪ್ರಯಾಣದ ಸಮಯವನ್ನು ಹೊರತುಪಡಿಸಿ 24 ಗಂಟೆಯೊಳಗಾಗಿ ಸಮಿತಿಯ ಮುಂದೆ ಹಾಜರುಪಡಿಸಬೇಕು |
| | (*2*) | | The State Government may make rules consistent with this Act, to provide for the manner of submitting the report to the Committee and the manner of sending and entrusting the child to children's home or fit facility or fit person, as the case may be, during the period of the inquiry. | ಇಂತಹ ಪ್ರಕರಣಗಳನ್ನು ಕುರಿತು ಮಕ್ಕಳ ಕಲ್ಯಾಣ ಸಮಿತಿಗೆ ವರದಿ ನೀಡುವುದು ಹಾಗೂ ಸಮಿತಿಯ ವಿಚಾರಣಾ ಅವಧಿಯಲ್ಲಿ ಪ್ರಕರಣಕ್ಕೆ ತಕ್ಕ ಹಾಗೆ ಮಗುವನ್ನು ಮಕ್ಕಳ ನಿಲಯಗಳಿಗೆ ಆಥವಾ ಅರ್ಹ ಸೌಲಭ್ಯ ಅಥವಾ ಅರ್ಹ ವ್ಯಕ್ತಿಯ ಬಳಿಗೆ ಕಳುಹಿಸಿ ದಾಖಲಿಸುವ ಪ್ರಕ್ರಿಯೆಗಳ ಬಗ್ಗೆ ರಾಜ್ಯ ಸರ್ಕಾರವು ನಿಯಮಗಳನ್ನು ರೂಪಿಸಬಹುದು. |
| | | | | |
| **32** | | | **Mandatory reporting regarding a child found separated from guardian.** | **ಪೋಷಕರಿಂದ ಪ್ರತ್ಯೇಕವಾದ ಮಕ್ಕಳು ಕಂಡುಬಂದಾಗ ಕಡ್ಡಾಯವಾಗಿ ವರದಿ ಮಾಡಲೇಬೇಕು** |
| | (*1*) | | Any individual or a police officer or any functionary of any organisation or a nursing home or hospital or maternity home, who or which finds and takes charge, or is handed over a child who appears or claims to be abandoned or lost, or a child who appears or claims to be an orphan without family support, shall within twenty-four hours (excluding the time necessary for the journey), give information to the **Childline Services** or the nearest police station or to a | ಯಾವುದೇ ವ್ಯಕ್ತಿ ಅಥವಾ ಪೊಲೀಸ್ ಅಥವಾ ಯಾವುದೇ ಸಂಸ್ಥೆಗಳ ಅಥವಾ ನರ್ಸಿಂಗ್ ಹೋಂ ಅಥವಾ ಆಸ್ಪತ್ರೆ ಅಥವಾ ಹೆರಿಗೆ ಆಸ್ಪತ್ರೆ ಅಥವಾ ಯಾರೇ ಆಗಲಿ ತೊರೆಯಲ್ಪಟ್ಟ ಮಕ್ಕಳನ್ನು ವಶಕ್ಕೆ ಪಡೆದಲ್ಲಿ ಅಥವಾ ತೊರೆಯಲ್ಪಟ್ಟಂತೆ ಕಂಡುಬಂದ ಅಥವಾ ಯಾರಾದರೂ ಬಿಟ್ಟುಹೋದ, ಕೊಟ್ಟುಹೋದ ಅಥವಾ ಕಳೆದುಹೋದ ಅಥವಾ ಕುಟುಂಬದವರಿಲ್ಲದೆ ಅನಾಥವೆಂದು ಕಂಡುಬಂದಲ್ಲಿ, ಪ್ರಕರಣಗಳಿಗೆ ತಕ್ಕಂತೆ ಪ್ರಯಾಣದ ಸಮಯವನ್ನು ಹೊರತುಪಡಿಸಿ ಇಪ್ಪತ್ನಾಲ್ಕು ಘಂಟೆಗಳೊಳಗೆ ಚೈಲ್ಡ್‌ಲೈನ್ ಸೇವೆಗಳಿಗೆ ಮಾಹಿತಿಯನ್ನು ನೀಡಬೇಕು ಅಥವಾ ಹತ್ತಿರದ |

| | | | | |
|---|---|---|---|---|
| | | | Child Welfare Committee or to the District Child Protection Unit, or hand over the child to a child care institution registered under this Act, as the case may be. | ಪೊಲೀಸ್ ಠಾಣೆಗೆ ಅಥವಾ ಮಕ್ಕಳ ಕಲ್ಯಾಣ ಸಮಿತಿಗೆ ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಮಾಹಿತಿ ನೀಡಬೇಕು ಅಥವಾ ನೋಂದಾಯಿತವಾದ ಮಕ್ಕಳ ಪೋಷಣಾ ಸಂಸ್ಥೆಗಳಿಗೆ ಒಪ್ಪಿಸಬೇಕು. |
| | (*2*) | | The information regarding a child referred to in sub-section (*1*) shall be mandatorily uploaded on a portal as may be specified by the Central Government or the Committee or the District Child Protection Unit or the child care institution, as the case may be. | ಉಪ ಸೆಕ್ಷನ್ (1)ರಲ್ಲಿ ಸೂಚಿಸಿರುವ ಮಗುವಿನ ಮಾಹಿತಿಯನ್ನು ಪ್ರಕರಣಕ್ಕೆ ತಕ್ಕ ಹಾಗೆ ಕೇಂದ್ರ ಸರ್ಕಾರ ಅಥವಾ ಸಮಿತಿ ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅಥವಾ ಮಕ್ಕಳ ಪೋಷಣಾ ಸಂಸ್ಥೆಗಳು ನಿರ್ಧಿಷ್ಟಪಡಿಸಿದ ಅಂತರ್ಜಾಲದಲ್ಲಿ ಪ್ರಕಟಿಸಲೇಬೇಕು. |
| | | | | |
| **Sec** | | | **Offence of non-reporting** | **ವರದಿ ಮಾಡದಿದ್ದರೆ ಆಪರಾಧಿಕ ಕೃತ್ಯ** |
| **33** | | | If information regarding a child as required under section 32 is not given within the period specified in the said section, then, such act shall be regarded as an offence. | ಸೆಕ್ಷನ್ 32ರ ಅಡಿಯಲ್ಲಿ ರಕ್ಷಣೆ ಅವಶ್ಯವಿರುವ ಮಗುವಿನ ಕುರಿತಾದ ಮಾಹಿತಿಯನ್ನು ಆ ಸೆಕ್ಷನ್ ಅಡಿಯಲ್ಲಿ ನಿಗದಿಪಡಿಸಿರುವ ಸಮಯದೊಳಗೆ ನೀಡದಿದ್ದಲ್ಲಿ ಅಂತಹ ಕೃತ್ಯವನ್ನು ಆಪರಾಧಿಕ ಕೃತ್ಯವೆಂದು ಪರಿಗಣಿಸಲಾಗುವುದು. |
| | | | | |
| **Sec** | | | **Penalty for non-reporting.** | **ವರದಿ ಮಾಡದಿದ್ದಲ್ಲಿ ದಂಡ** |
| **34** | | | Any person who has committed an offence under section 33 shall be liable to imprisonment up to six months or fine of ten thousand rupees or both. | ಸೆಕ್ಷನ್ 33ರ ಅಡಿಯಲ್ಲಿ ಯಾವುದೇ ವ್ಯಕ್ತಿ ಅಪರಾಧ ಎಸಗಿದರೆ ಅಂತಹ ವ್ಯಕ್ತಿಗೆ ಆರು ತಿಂಗಳವರೆಗೆ ಕಾರಾಗೃಹ ವಾಸ ಅಥವಾ 10 ಸಾವಿರ ದಂಡ ಅಥವಾ ಎರಡಕ್ಕೂ ಅರ್ಹವಾಗಿರುತ್ತಾರೆ. |
| | | | | |
| **Sec** | | | **Surrender of children.** | **ಮಕ್ಕಳನ್ನು ಒಪ್ಪಿಸುವುದು/ಸಲ್ಲಿಸುವುದು** |
| **35** | (*1*) | | A parent or guardian, who for physical, emotional and social factors beyond their control, wishes to surrender a child, shall produce the child before the Committee. | ತಮ್ಮ ದೈಹಿಕ, ಭಾವನಾತ್ಮಕ ಮತ್ತು ಸಾಮಾಜಿಕ ವಿಚಾರಗಲನ್ನು ಮೀರಿ ಮಗುವನ್ನು ಬಿಟ್ಟುಬಿಡಲು ಬಯಸುವ ಹೆತ್ತವರು ಅಥವಾ ಪೋಷಕರು ಮಗುವನ್ನು ಸಮಿತಿಗೆ ಒಪ್ಪಿಸಬೇಕು. |
| | (*2*) | | If, after prescribed process of inquiry and counselling, the Committee is satisfied, a surrender deed shall be executed by the parent or guardian, as the case may be, before the Committee. | ನಿರ್ಧಿಷ್ಟಪಡಿಸಿದ ತನಿಖೆಯ ಪ್ರಕ್ರಿಯೆಯ ನಂತರ ಸಮಿತಿಗೆ ತೃಪ್ತಿಯಾದಲ್ಲಿ ಮಗುವನ್ನು ಒಪ್ಪಿಸಿದ ಪ್ರಮಾಣ ಪತ್ರವನ್ನು ಪ್ರಕರಣಕ್ಕೆ ತಕ್ಕ ಹಾಗೆ ಹೆತ್ತವರು ಅಥವಾ ಪೋಷಕರು ಸಮಿತಿಗೆ ನೀಡಬೇಕು. |
| | (*3*) | | The parents or guardian who surrendered the child, shall be given two months time to reconsider their decision and in the intervening period the Committee shall either allow, after due inquiry, the child to be with the parents or guardian under supervision, or place the child in a Specialised Adoption Agency, if he or she is below six years of age, or a children's home if he is above six years. | ಮಗುವನ್ನು ಒಪ್ಪಿಸಿದ ಹೆತ್ತವರು ಅಥವಾ ಪೋಷಕರಿಗೆ ಅವರ ನಿರ್ಧಾರವನ್ನು ಮರುಪರಿಶೀಲಿಸಲು ಎರಡು ತಿಂಗಳು ಕಾಲಾವಧಿ ನೀಡಬೇಕು ಮತ್ತು ಈ ಅವಧಿಯಲ್ಲಿ ತನಿಖೆಯ ನಂತರ ಮಗುವು ತಮ್ಮ ಹೆತ್ತವರು ಅಥವಾ ಪೋಷಕರು ಉಸ್ತುವಾರಿಯಲ್ಲಿಸಲು ಅಥವಾ ಮಗುವಿನ ವಯಸ್ಸು 6 ವರ್ಷಕ್ಕಿಂತ ಕಡಿಮೆ ಇದ್ದಲ್ಲಿ ವಿಶೇಷ ದತ್ತು ಸಂಸ್ಥೆಯಲ್ಲಿರಿಸಲು ಅಥವಾ ವಯೋಮಾನ 6 ವರ್ಷಕ್ಕಿಂತ ಹೆಚ್ಚಿದ್ದಲ್ಲಿ ಬಾಲಮಂದಿರದಲ್ಲಿ ಇರಿಸಲು ಅವಕಾಶ ಮಾಡಿಕೊಡಬೇಕು. |
| | | | | |
| **Sec** | | | **Inquiry.** | **ತನಿಖೆ** |
| **36** | (*1*) | | On production of a child or receipt of a report under section 31, the Committee shall hold an inquiry in such manner as may be prescribed and the Committee, on its own or on the report from any person or agency as specified in sub-section (*2*) of section 31, | ಈ ಮೇಲಿನ ಸೆಕ್ಷನ್ 31ರಂತೆ ಮಕ್ಕಳನ್ನು ಸಮಿತಿಯು ಸ್ವೀಕರಿಸಿದ ಮೇಲೆ ನಿಗದಿತ ವಿಧಾನದಲ್ಲಿ ವಿಚಾರಣೆಯನ್ನು ತಾನೇ ಅಥವಾ ಸೆಕ್ಷನ್ 31 (2)ರಲ್ಲಿ ಸೂಚಿಸಿರುವಂತೆ ಇನ್ನಾವುದೇ ವ್ಯಕ್ತಿ ಅಥವಾ ಸಂಸ್ಥೆ ನೀಡಿರುವ ವರದಿಯ ಆಧಾರದಲ್ಲಿ ನಡೆಸಿ, ತ್ವರಿತ ಸಾಮಾಜಿಕ ವಿಚಾರಣೆಗಾಗಿ ಮಗುವನ್ನು ಮಕ್ಕಳ ನಿಲಯಕ್ಕೆ ಅಥವಾ ಅರ್ಹ ಸೌಲಭ್ಯ |

| | | |
|---|---|---|
| | may pass an order to send the child to the children's home or a fit facility or fit person, and for speedy social investigation by a social worker or Child Welfare Officer or Child Welfare Police Officer:<br><br>Provided that all children below six years of age, who are orphan, surrendered or appear to be abandoned shall be placed in a Specialised Adoption Agency, where available. | ಅಥವಾ ಅರ್ಹ ವ್ಯಕ್ತಿಯೊಡನೆ ದಾಖಲಿಸುವ ಆದೇಶ ಹೊರಡಿಸಿ ಅಲ್ಲಿಂದ ಆದಷ್ಟೂ ಬೇಗನೆ ಸಮಾಜ ಕಾರ್ಯಕರ್ತರಿಂದ ಅಥವಾ ಮಕ್ಕಳ ಕಲ್ಯಾಣಾಧಿಕಾರಿಗಳಿಂದ ಅಥವಾ ಮಕ್ಕಳ ಕಲ್ಯಾಣ ಪೋಲಿಸ್ ಅಧಿಕಾರಿಯಿಂದ ತನಿಖೆ ಮಾಡಿಸಬೇಕು.<br><br>ಆದರೆ ಆರು ವರ್ಷದೊಳಗಿನ ಅನಾಥ, ಒಪ್ಪಿಸಿದ ಅಥವಾ ತ್ಯಜಿಸಿದ ಮಕ್ಕಳೆಂದು ಕಂಡುಬರುವ ಮಕ್ಕಳನ್ನು ಸಾಧ್ಯವಿದ್ದೆಡೆ ವಿಶೇಷ ದತ್ತು ಸಂಸ್ಥೆಯಲ್ಲಿ ಇರಿಸಬೇಕು. |
| (2) | The social investigation shall be completed within fifteen days so as to enable the Committee to pass final order within four months of first production of the child: Provided that for orphan, abandoned or surrendered children, the time for completion of inquiry shall be as specified in section 38. | ಮಗು ಸಮಿತಿಯ ಮುಂದೆ ಹಾಜರಾದ ದಿನದಿಂದ ನಾಲ್ಕು ತಿಂಗಳೊಳಗೆ ಅಂತಿಮ ಅದೇಶವನ್ನು ಹೊರಡಿಸಲು ಸಾಧ್ಯವಾಗುವಂತೆ ಸಾಮಾಜಿಕ ತನಿಖೆಯನ್ನು ಹದಿನೈದು ದಿನದೊಳಗೆ ಮುಕ್ತಾಯಗೊಳಿಸಬೇಕು. ಆದರೆ, ಅನಾಥ, ತ್ಯಜಿಸಿದ ಅಥವಾ ಒಪ್ಪಿಸಿದ ಮಕ್ಕಳ ತನಿಖೆಯನ್ನು ಸೆಕ್ಷನ್ 38ರಲ್ಲಿ ಸ್ಪಷ್ಟಪಡಿಸಿರುವ ಸಮಯದೊಳಗೆ ಮುಕ್ತಾಯಗೊಳಿಸಬೇಕು. |
| (3) | After the completion of the inquiry, if Committee is of the opinion that the said child has no family or ostensible support or is in continued need of care and protection, it may send the child to a Specialised Adoption Agency if the child is below six years of age, children's home or to a fit facility or person or foster family, till suitable means of rehabilitation are found for the child, as may be prescribed, or till the child attains the age of eighteen years:<br><br>Provided that the situation of the child placed in a children's home or with a fit facility or person or a foster family, shall be reviewed by the Committee, as may be prescribed. | ತನಿಖೆಯು ಪೂರ್ಣಗೊಂಡ ನಂತರ ಮಗುವಿಗೆ ಕುಟುಂಬವಿಲ್ಲ ಅಥವಾ ಕೌಟುಂಬಿಕ ನೆರವಿಲ್ಲ ಅಥವಾ ಇನ್ನೂ ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆಯಿದೆ ಎಂದು ಸಮಿತಿ ಅಭಿಪ್ರಾಯಪಟ್ಟರೆ ಆರು ವರ್ಷದೊಳಗಿನ ಮಗುವನ್ನು ನಿರ್ದಿಷ್ಟ ಪಡಿಸಿದ ಸೂಕ್ತ ಪುನರ್ವಸತಿ ವಿಧಾನಗಳು ದೊರಕುವವರೆಗೆ ಅಥವಾ ಮಗು 18 ವರ್ಷ ಪೂರೈಸುವ ತನಕ ವಿಶೇಷ ದತ್ತು ಸಂಸ್ಥೆಗೆ ಅಥವಾ ಅರ್ಹ ಸೌಲಭ್ಯ ಅಥವಾ ವ್ಯಕ್ತಿ ಅಥವಾ ಫಾಸ್ಟರ್ ಕುಟುಂಬಗಳಿಗೆ ಕಳುಹಿಸಬಹುದು.<br><br>ಆದರೆ ಮಗುವನ್ನಿರಿಸಿದ ಬಾಲಮಂದಿರ ಅಥವಾ ಅರ್ಹ ಸೌಲಭ್ಯ ಅಥವಾ ವ್ಯಕ್ತಿ ಅಥವಾ ಫಾಸ್ಟರ್ ಕುಟುಂಬಗಳ ಪರಿಸ್ಥಿತಿಯನ್ನು ಸಮಿತಿಯು ನಿರ್ದಿಷ್ಟಪಡಿಸಿದಂತೆ ಪರಾಮರ್ಶೆ ಮಾಡಬೇಕು. |
| (4) | The Committee shall submit a quarterly report on the nature of disposal of cases and pendency of cases to the District Magistrate in the manner as may be prescribed, for review of pendency of cases. | ಬಾಕಿ ಉಳಿದಿರುವ ಪ್ರಕರಣಗಳ ಪರಾಮರ್ಶೆ ಮಾಡಲು ಸಮಿತಿಯು ವಿಲೇವಾರಿ ಮಾಡಿದ ಪ್ರಕರಣಗಳ ಸ್ವರೂಪ ಮತ್ತು ಬಾಕಿ ಉಳಿದರುವ ಪ್ರಕರಣಗಳ ವಿವರವನ್ನು ಮೂರು ತಿಂಗಳಿಗೊಮ್ಮೆ ಜಿಲ್ಲಾ ನ್ಯಾಯಾಧೀಶರಿಗೆ ನಿರ್ದಿಷ್ಟಪಡಿಸಿದ ಮಾದರಿಯಲ್ಲಿ ನೀಡಬೇಕು. |
| (5) | After review under sub-section (4), the District Magistrate shall direct the Committee to take necessary remedial measures to address the pendency, if necessary and send a report of such reviews to the State Government, who may cause the constitution of additional Committees, if required:<br><br>Provided that if the pendency of cases continues to be unaddressed by the Committee even after three months of receiving such directions, the State Government shall terminate the said Committee and shall constitute a new Committee. | ಉಪ ಸೆಕ್ಷನ್ (4)ರಡಿಯಲ್ಲಿ ಪರಾಮರ್ಶೆ ಮಾಡಿದ ನಂತರ ಜಿಲ್ಲಾ ನ್ಯಾಯಾಧೀಶರು ಸಮಿತಿಗೆ ಬಾಕಿ ಇರುವ ಪ್ರಕರಣಗಳ ವಿಲೇವಾರಿಗೆ ಅವಶ್ಯವಿರುವ ಪಾರಿಹಾರಿಕ ಕ್ರಮಗಳನ್ನು ತೆಗೆದುಕೊಳ್ಳಲು ನಿರ್ದೇಶನ ನೀಡಬೇಕು ಮತ್ತು ಅವಶ್ಯವೆನಿಸಿದರೆ ಹೆಚ್ಚುವರಿ ಸಮಿತಿಯನ್ನು ಸ್ಥಾಪಿಸುವ ಸಲುವಾಗಿ ರಾಜ್ಯ ಸರ್ಕಾರಕ್ಕೆ ತಮ್ಮ ಪರಾಮರ್ಶೆಯ ವರದಿಯನ್ನು ಸಲ್ಲಿಸಬಹುದು.<br><br>ಆದರೆ ನಿರ್ದೇಶನ ಪಡೆದ ಮೂರು ತಿಂಗಳೊಳಗೆ ಬಾಕಿ ಇರುವ ಪ್ರಕರಣಗಳನ್ನು ವಿಲೇವಾರಿ ಮಾಡಲು ಸಮಿತಿಗೆ ಸಾಧ್ಯವಾಗದಿದ್ದಲ್ಲಿ ರಾಜ್ಯ ಸರ್ಕಾರವು ಅಂತಹ ಸಮಿತಿಯನ್ನು ವಿಸರ್ಜಿಸಿ ಹೊಸ ಸಮಿತಿಯನ್ನು ಸ್ಥಾಪಿಸಬೇಕು. |

| | | | | |
|---|---|---|---|---|
| | (*6*) | | In anticipation of termination of the Committee and in order that no time is lost in constituting a new Committee, the State Government shall maintain a standing panel of eligible persons to be appointed as members of the Committee. | ಸಮಿತಿಯನ್ನು ವಿಸರ್ಜಿಸಿದ ಸಮಯದಲ್ಲಿ ಹೊಸ ಸಮಿತಿಯನ್ನು ರಚಿಸಲು ಕಾಲ ವ್ಯರ್ಥವಾಗುವುದನ್ನು ತಡೆಯಲು ರಾಜ್ಯ ಸರ್ಕಾರವು ಬದಲಿ ಅರ್ಹವ್ಯಕ್ತಿಗಳ ಪಟ್ಟಿಯನ್ನು ಸಮಿತಿಯ ಸದಸ್ಯರನ್ನಾಗಿ ನೇಮಿಸಲು ಸಿದ್ಧವಾಗಿಟ್ಟುಕೊಂಡಿರಬೇಕು. |
| | (*7*) | | In case of any delay in the constitution of a new Committee under sub-section (*5*), the Child Welfare Committee of a nearby district shall assume responsibility in the intervening period. | ಉಪ ಸೆಕ್ಷನ್ (5)ರಡಿಯಲ್ಲಿ ಹೊಸ ಸಮಿತಿಯ ಸ್ಥಾಪನೆ ವಿಳಂಬವಾದಲ್ಲಿ ಆ ಸಮಯದಲ್ಲಿ ಹತ್ತಿರದ ಜಿಲ್ಲೆಯ ಮಕ್ಕಳ ಕಲ್ಯಾಣ ಸಮಿತಿಯು ಜವಾಬ್ದಾರಿ ತೆಗೆದುಕೊಳ್ಳಲು ನಿಯೋಜಿಸಬೇಕು. |
| | | | | |
| **Sec 37** | | | **Orders passed regarding a child in need of care and protection.** | **ಪೋಷಣೆ ಮತ್ತು ರಕ್ಷಣೆ ಆವಶ್ಯಕತೆಯಿರುವ ಮಕ್ಕಳನ್ನು ಕುರಿತು ಆದೇಶಗಳು** |
| | *(1)* | | The Committee on being satisfied through the inquiry that the child before the Committee is a child in need of care and protection, may, on consideration of Social Investigation Report submitted by Child Welfare Officer and taking into account the child's wishes in case the child is sufficiently mature to take a view, pass one or more of the following orders, namely:— | ಸಮಿತಿಯ ಮುಂದಿರುವ ಮಗುವಿನ ತನಿಖೆಯ ಮುಖಾಂತರ ಅಥವಾ ಮಕ್ಕಳ ಕಲ್ಯಾಣ ಅಧಿಕಾರಿಯ ಸಾಮಾಜಿಕ ವರದಿಯ ಆಧಾರದ ಮೇಲೆ ಮತ್ತು ಮಗು ಸಾಕಷ್ಟು ಪ್ರಮಾಣದಲ್ಲಿ ಪ್ರೌಢವಾಗಿದ್ದಲ್ಲಿ ಅದರ ಅಭಿಪ್ರಾಯವನ್ನು ಪರಿಗಣಿಸಿ ಮಗುವಿಗೆ ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆ ಇದೆ ಎಂದು ಸಮಿತಿ ಅಭಿಪ್ರಾಯಪಟ್ಟರೆ ಈ ಕೆಳಗಿನ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಆದೇಶವನ್ನು ಹೊರಡಿಸಬಹುದು. |
| | | (*a*) | declaration that a child is in need of care and protection; | ಮಗುವಿಗೆ ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆಯಿದೆ ಎಂದು ಘೋಷಿಸುವುದು; |
| | | (*b*) | restoration of the child to parents or guardian or family with or without supervision of Child Welfare Officer or designated social worker; | ಮಕ್ಕಳ ಕಲ್ಯಾಣಾಧಿಕಾರಿ ಅಥವಾ ನೇಮಿಸಿದ ಸಾಮಾಜಿಕ ಕಾರ್ಯಕರ್ತರ ಉಸ್ತುವಾರಿ ಸಹಿತವಾಗಿ ಅಥವಾ ರಹಿತವಾಗಿ ಮಗುವನ್ನು ಅದರ ಹೆತ್ತವರು ಅಥವಾ ಪೋಷಕರು ಅಥವಾ ಕುಟುಂಬದೊಡನೆ ಒಗ್ಗೂಡಿಸುವುದು; |
| | | I | placement of the child in Children's Home or fit facility or Specialised Adoption Agency for the purpose of adoption for long term or temporary care, keeping in mind the capacity of the institution for housing such children, either after reaching the conclusion that the family of the child cannot be traced or even if traced, restoration of the child to the family is not in the best interest of the child; | ಮಗುವಿನ ಕುಟುಂಬವು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾದರೂ ಸಹ ಮಗುವನ್ನು ಕುಟುಂಬದಲ್ಲಿ ಒಗ್ಗೂಡಿಸುವುದು ಮಗುವಿನ ಹಿತದೃಷ್ಟಿಗೆ ಧಕ್ಕೆಯಾಗುತ್ತದೆ ಎಂಬ ಅಭಿಪ್ರಾಯಕ್ಕೆ ಬಂದರೆ ಮಗುವನ್ನಿಡುವ ಸಂಸ್ಥೆಯ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಬಾಲ ಮಂದಿರ ಅಥವಾ ಅರ್ಹ ಸೌಲಭ್ಯ ಅಥವಾ ವಿಶೇಷ ದತ್ತು ಸಂಸ್ಥೆಯಲ್ಲಿ ದೀರ್ಘಾವಧಿ ಅಥವಾ ತಾತ್ಕಾಲಿಕ ಪೋಷಣೆ ಉದ್ದೇಶಕ್ಕಾಗಿ ಮಗುವನ್ನು ಇರಿಸುವುದು; |
| | | (*d*) | placement of the child with fit person for long term or temporary care; | ದೀರ್ಘಾವಧಿ ಅಥವಾ ತಾತ್ಕಾಲಿಕ ಪೋಷಣೆಗಾಗಿ ಮಗುವನ್ನು ಅರ್ಹ ವ್ಯಕ್ತಿಯ ಬಳಿ ಇರಿಸುವುದು; |
| | | (*e*) | foster care orders under section 44; | ಸೆಕ್ಷನ್ 44ರ ಅಡಿಯಲ್ಲಿ ಫಾಸ್ಟರ್ ಕೇರ್ ಆದೇಶವನ್ನು ಹೊರಡಿಸುವುದು; |
| | | (*f*) | sponsorship orders under section 45; | ಸೆಕ್ಷನ್ 45ರ ಅಡಿಯಲ್ಲಿ ಪ್ರಾಯೋಜನಾ ಅದೇಶವನ್ನು ಹೊರಡಿಸುವುದು; |
| | | (*g*) | directions to persons or institutions or facilities in whose care the child is placed, regarding care, protection and rehabilitation of the child, including directions relating to immediate shelter and services such as medical attention, psychiatric and psychological support including need-based counselling, occupational therapy or behaviour modification therapy, skill training, legal aid, | ಮಗುವಿನ ಪೋಷಣೆ, ರಕ್ಷಣೆ ಮತ್ತು ಪುನರ್ವಸತಿಗಾಗಿ ಯಾವ ವ್ಯಕ್ತಿ ಅಥವಾ ಸಂಸ್ಥೆ ಅಥವಾ ವ್ಯವಸ್ಥೆಯಲ್ಲಿ ಇರಿಸಲಾಗುತ್ತದೋ ಅಂತವರಿಗೆ ತತ್‌ಕ್ಷಣದಲ್ಲಿ ಆಶ್ರಯ ನೀಡಲು ಮತ್ತು ಆರೋಗ್ಯ, ವೈದ್ಯಕೀಯ ಗಮನ, ಮಾನಸಿಕ ಸಮಾಲೋಚನೆ, ಚಿಕಿತ್ಸೆ ಮತ್ತು ಬೆಂಬಲ, ಆವಶ್ಯಕತೆಗೆ ತಕ್ಕಂತೆ ಆಪ್ತ ಸಮಾಲೋಚನೆ, ವೃತ್ತಿಶೀಲ ಚಿಕಿತ್ಸೆ ಅಥವಾ ಸ್ವಭಾವ ಬದಲಾವಣೆ ಚಿಕಿತ್ಸೆ, ಕೌಶಲ್ಯ ತರಬೇತಿ, ಕಾನೂನು ಸೇವೆ, |

| | | | | |
|---|---|---|---|---|
| | | | educational services, and other developmental activities, as required, as well as follow-up and coordination with the District Child Protection Unit or State Government and other agencies; | ಶೈಕ್ಷಣಿಕ ಸೇವೆಗಳು ಮತ್ತಿತರ ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಮತ್ತು ಮಗುವಿನ ಅನುಸರಣೆ ಮಾಡಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅಥವಾ ರಾಜ್ಯ ಸರ್ಕಾರ ಮತ್ತಿತರ ಸಂಸ್ಥೆಗಳೊಡನೆ ಸಂಯೋಜನೆ ಇಟ್ಟುಕೊಳ್ಳಲು ನಿರ್ದೇಶನವನ್ನು ನೀಡುವುದು |
| | | (*h*) | declaration that the child is legally free for adoption under section 38. | ಸೆಕ್ಷನ್ 38ರ ಅಡಿಯಲ್ಲಿ ದತ್ತು ನೀಡಲು ಮಗುವನ್ನು ಕಾನೂನಿನಂತೆ ಮುಕ್ತ ಎಂದು ಘೋಷಿಸುವುದು; |
| | (*2*) | | The Committee may also pass orders for — | ಸಮಿತಿಯು ಈ ಆದೇಶಗಳನ್ನೂ ಸಹ ನೀಡಬಹುದು– |
| | | (*i*) | declaration of fit persons for foster care; | ಫಾಸ್ಟರ್ ಕೇರ್ ಉದ್ದೇಶಕ್ಕಾಗಿ ಅರ್ಹ ವ್ಯಕ್ತಿಗಳನ್ನು ಘೋಷಿಸುವುದು; |
| | | (*ii*) | getting after care support under section 46 of the Act; or | ಕಾಯ್ದೆಯ ಸೆಕ್ಷನ್ 46ರ ಅಡಿಯಲ್ಲಿ ಪೋಷಣೆಯ ನಿಲಯದಿಂದ ಬಿಡುಗಡೆ ನಂತರದ ನೆರವನ್ನು ಪಡೆದುಕೊಳ್ಳುವುದು; ಅಥವಾ |
| | | (*iii*) | any other order related to any other function as may be prescribed. | ನಿರ್ದಿಷ್ಟಪಡಿಸಿದಂತೆ ಇತರೆ ಯಾವುದೇ ಕಾರ್ಯಗಳಿಗೆ ಸಂಬಂಧಿಸಿದಂತೆ ಇನ್ನಿತರ ಆದೇಶವನ್ನು ಹೊರಡಿಸುವುದು. |
| | | | | |
| **Sec 38** | | | **Procedure for declaring a child legally free for adoption.** | **ಮಗು ಕಾನೂನಿನಂತೆ ದತ್ತು ಹೋಗಲು ಅರ್ಹ ಎಂದು ಘೋಷಿಸುವ ಪ್ರಕ್ರಿಯೆ** |
| | (*1*) | | In case of orphan and abandoned child, the Committee shall make all efforts for **tracing the parents** or guardians of the child and on completion of such inquiry, if it is established that the child is either an orphan having no one to take care, or abandoned, the Committee shall declare the child legally free for adoption:<br><br>Provided that such declaration shall be made within a period of two months from the date of production of the child, for children who are up to two years of age and within four months for children above two years of age:<br><br>Provided further that notwithstanding anything contained in this regard in any other law for the time being in force, *<u>no first information report</u>* shall be registered against any biological parent in the process of inquiry relating to an abandoned or surrendered child under this Act. | ಮಗು ಅನಾಥ ಅಥವಾ ತ್ಯಜಿಸಿದ್ದಾದರೆ ಸಮಿತಿಯು ಅದರ ಹೆತ್ತವರು ಅಥವಾ ಪೋಷಕರನ್ನು ಹುಡುಕಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕು ಮತ್ತು ಅಂತಹ ಪ್ರಯತ್ನದ ನಂತರ ಮಗುವಿನ ಪೋಷಣೆಗೆ ಯಾರೂ ಇಲ್ಲದ ಅನಾಥ ಅಥವಾ ತ್ಯಜಿಸಿದ ಮಗು ಎಂದು ಸಾಬೀತಾದಲ್ಲಿ ಸಮಿತಿಯು ಮಗುವನ್ನು ದತ್ತು ಹೋಗಲು ಕಾನೂನಿನಂತೆ ಮುಕ್ತ ಎಂದು ಘೋಷಿಸಬೇಕು.<br><br>ಆದರೆ ಇಂತಹ ಘೋಷಣೆಯನ್ನು ಎರಡು ವರ್ಷದೊಳಗಿನ ಮಗುವಿಗೆ ಮಗು ಸಮಿತಿಯ ಮುಂದೆ ಹಾಜರಾದ ದಿನದಿಂದ ಎರಡು ತಿಂಗಳೊಳಗೆ ಮತ್ತು ಎರಡು ವರ್ಷದ ಮೇಲ್ಪಟ್ಟ ಮಕ್ಕಳಿಗೆ ನಾಲ್ಕು ತಿಂಗಳೊಳಗೆ ಮಾಡಬೇಕು<br><br>ಆದರೆ ಈ ಕುರಿತಂತೆ ಪ್ರಸ್ತುತ ಜಾರಿಯಲ್ಲಿರುವ ಬೇರೆ ಕಾಯ್ದೆಯಲ್ಲಿ ಏನೇ ಹೇಳಿದ್ದರೂ ಸಹ ಈ ಕಾಯ್ದೆಯಡಿ ತ್ಯಜಿಸಿದ ಅಥವಾ ಒಪ್ಪಿಸಿದ ಮಗುವಿನ ತನಿಖೆಯ ಪ್ರಕ್ರಿಯೆಯಲ್ಲಿ ಮಗುವಿನ ಜೈವಿಕ ಪೋಷಕರ ವಿರುದ್ಧ ಯಾವುದೇ ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡುವಂತಿಲ್ಲ. |
| | (*2*) | | In case of surrendered child, the institution where the child has been placed by the Committee on an application for surrender, shall bring the case before the Committee immediately on completion of the period specified in section 35, for declaring the child legally free for adoption. | ಒಪ್ಪಿಸಿದ ಮಗುವಿನ ಪ್ರಕರಣದಲ್ಲಿ, ಮಗುವನ್ನು ಒಪ್ಪಿಸಿದ ಅರ್ಜಿಯನ್ನು ಪಡೆದ ಸಮಿತಿಯು ಮಗುವನ್ನು ಇರಿಸಿದ ಸಂಸ್ಥೆಯು ಸೆಕ್ಷನ್ 35ರಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಗಿದ ತಕ್ಷಣ ಮಗುವನ್ನು ದತ್ತು ನೀಡಲು ಕಾನೂನು ಮುಕ್ತ ಎಂದು ಘೋಷಿಸಲು ಸಮಿತಿಯ ಮುಂದೆ ಪ್ರಕರಣವನ್ನು ತರಬೇಕು. |
| | (*3*) | | Notwithstanding anything contained in any other law for the time being in force, a child of a mentally retarded parents or a unwanted child of victim of sexual assault, such child may be declared free for adoption by the Committee, by following the procedure under this Act | ಪ್ರಸ್ತುತ ಜಾರಿಯಲ್ಲಿರುವ ಬೇರೆ ಬೇರೆ ಕಾಯ್ದೆಗಳಲ್ಲಿ ಏನೇ ಹೇಳಿದ್ದರೂ ಸಹ ಈ ಕಾಯ್ದೆಯಡಿ ಮಾನಸಿಕ ವಿಕಲತೆ ಇರುವ ಪೋಷಕರ ಮಗು ಅಥವಾ ಲೈಂಗಿಕ ದೌರ್ಜನ್ಯದಿಂದ ಜನಿಸಿದ ಬೇಡದ ಮಗುವಾಗಿದ್ದಲ್ಲಿ ಅಂತಹ ಮಗುವನ್ನು ದತ್ತು ಹೋಗಲು ಮುಕ್ತ ಎಂದು ಘೋಷಿಸಲು ಈ ಕಾಯಿದೆಯಡಿ ಸೂಚಿಸಿರುವ ಪ್ರಕ್ರಿಯೆಗಳನ್ನು ಅನುಸರಿಸಬೇಕು; |

| | | | | |
|---|---|---|---|---|
| | (*4*) | | The decision to declare an orphan, abandoned or surrendered child as legally free for adoption shall be taken by at least three members of the Committee. | ಅನಾಥ, ತ್ಯಜಿಸಿದ ಅಥವಾ ಒಪ್ಪಿಸಿದ ಮಗುವನ್ನು ದತ್ತು ನೀಡಲು ಕಾನೂನು ಮುಕ್ತ ಎಂದು ಘೋಷಿಸುವ ನಿರ್ಧಾರವನ್ನು ಸಮಿತಿಯ ಕನಿಷ್ಠ ಮೂರು ಸದಸ್ಯರು ಅನುಮೋದಿಸಬೇಕು. |
| | (*5*) | | The Committee shall inform the State Agency and the Authority regarding the number of children declared as legally free for adoption and number of cases pending for decision in the manner as may be prescribed, every month. | ಎಷ್ಟು ಮಕ್ಕಳನ್ನು ದತ್ತು ನೀಡಲು ಕಾನೂನು ಮುಕ್ತ ಎಂದು ಘೋಷಿಸಲಾಗಿದೆ ಮತ್ತು ಎಷ್ಟು ಪ್ರಕರಣಗಳಲ್ಲಿ ನಿರ್ಧಾರ ತೆಗೆದುಕೊಳ್ಳಲು ಬಾಕಿ ಇದೆ ಎಂಬುದರ ಮಾಹಿತಿಯನ್ನು ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಸಮಿತಿಯು ಪ್ರತಿ ತಿಂಗಳೂ ನೀಡಬೇಕು. |

# Chapter VII Rehabilitation and Social reintegration
# ಪುನರ್ವಸತಿ ಮತ್ತು ಸಮಾಜದಲ್ಲಿ ಪುನಸ್ಥಾಪನೆ

| Sec | | | | | |
|---|---|---|---|---|---|
| 39 | | | **Process of rehabilitation and social reintegration.** | | **ಪುನರ್ವಸತಿ ಮತ್ತು ಸಾಮಾಜಿಕ ಪುನಸ್ಥಾಪನೆಗೆ ಪ್ರಕ್ರಿಯೆಗಳು** |
| | (*1*) | | The process of rehabilitation and social integration of children under this Act shall be undertaken, based on the individual care plan of the child, preferably through family based care such as by restoration to family or guardian with or without supervision or sponsorship, or adoption or foster care:<br><br>Provided that all efforts shall be made to keep siblings placed in institutional or noninstitutional care, together, unless it is in their best interest not to be kept together. | | ಮಗುವಿನ ಪುನರ್ವಸತಿ ಮತ್ತು ಸಾಮಾಜಿಕ ಪುನರ್ಮಿಲನ ಪ್ರಕ್ರಿಯೆಯು ಮಗುವಿನ ವ್ಯಕ್ತಿಗತ ಪೋಷಣಾ ಯೋಜನೆಯ ಆಧಾರದ ಮೇಲೆ ಅದರಲ್ಲೂ ವಿಶೇಷವಾಗಿ ಕೌಟುಂಬಿಕ ಪೋಷಣಾ ಆಧಾರಗಳಾದ ಉಸ್ತುವಾರಿ ಸಹಿತ ಅಥವಾ ರಹಿತ ಕುಟುಂಬದೊಡನೆ ಪುನರ್ವಸತಿ, ಅಥವಾ ಪ್ರಯೋಜನೆ ಅಥವಾ ದತ್ತು ಅಥವಾ ಫಾಸ್ಟರ್ ಕೇರ್ ಮೂಲಕ ನಡೆಯಬೇಕು<br><br>ಆದರೆ, ಒಡಹುಟ್ಟಿದವರು ಜೊತೆಯಾಗಿದ್ದಲ್ಲಿ ಅವರ ಹಿತಾಸಕ್ತಿಗೆ ಧಕ್ಕೆಯಾಗುತ್ತದೆ ಎಂದು ಅನಿಸಿದಿದ್ದಲ್ಲಿ ಅವರನ್ನು ಸಾಂಸ್ಥಿಕ ಅಥವಾ ಅಸಾಂಸ್ಥಿಕ ಪೋಷಣೆಯಲ್ಲಿ ಜೊತೆಯಲ್ಲೇ ಇರಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕು. |
| | (*2*) | | For children in conflict with law the process of rehabilitation and social integration shall be undertaken in the observation homes, if the child is not released on bail or in special homes or place of safety or fit facility or with a fit person, if placed there by the order of the Board. | | ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗು ಮಂಡಳಿಯ ಆದೇಶದ ಮೇರೆಗೆ ಜಾಮೀನಿನ ಮೇಲೆ ಬಿಡುಗಡೆಯಾಗದಿದ್ದಲ್ಲಿ ಅಥವಾ ವಿಶೇಷ ಗೃಹದಲ್ಲಿದ್ದಲ್ಲಿ ಅಥವಾ ಸುರಕ್ಷಿತ ಸ್ಥಳ ಅಥವಾ ಅರ್ಹ ವ್ಯವಸ್ಥೆ/ಸೌಲಭ್ಯ ಅಥವಾ ಅರ್ಹ ವ್ಯಕ್ತಿಯ ಬಳಿ ಇದ್ದಲ್ಲಿ ಮಗುವಿನ ಪುನರ್ವಸತಿ ಮತ್ತು ಸಾಮಾಜಿಕ ಪುನರ್ಮಿಲನ ಪ್ರಕ್ರಿಯೆಯು ಪರಿವೀಕ್ಷಣಾ ಮಂದಿರದಲ್ಲೇ ಕೈಗೊಳ್ಳಬೇಕು. |
| | (*3*) | | The children in need of care and protection who are not placed in families for any reason may be placed in an institution registered for such children under this Act or with a fit person or a fit facility, on a temporary or long-term basis, and the process of rehabilitation and social integration shall be undertaken wherever the child is so placed. | | ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆ ಇರುವ ಮಗು ಯಾವುದೇ ಕಾರಣದಿಂದ ತನ್ನದೇ ಕುಟುಂಬದೊಡನೆ ಇರಿಸಿದಿದ್ದಲ್ಲಿ ಈ ಕಾಯ್ದೆಯಡಿ ಇಂತಹ ಮಗುವನ್ನು ಇರಿಸಿಕೊಳ್ಳಲು ನೋಂದಾಯಿಸಿದ ಸಂಸ್ಥೆಯಲ್ಲಿ ಅಥವಾ ಅರ್ಹ ವ್ಯಕ್ತಿ ಅಥವಾ ಅರ್ಹ ಸೌಲಭ್ಯಗಳಲ್ಲಿ ದೀರ್ಘಾವಧಿಗೆ ಅಥವಾ ತಾತ್ಕಾಲಿಕವಾಗಿ ಮಗುವನ್ನು ಇರಿಸಿದ್ದಲ್ಲಿ  ಮಗುವಿನ ಪುನರ್ವಸತಿ ಮತ್ತು ಸಾಮಾಜಿಕ ಪುನರ್ಮಿಲನ ಪ್ರಕ್ರಿಯೆಯನ್ನು ಮಗು ನೆಲೆಸಿರುವ ಜಾಗದಲ್ಲೇ ಕೈಗೊಳ್ಳಬೇಕು |
| | (*4*) | | The Children in need of care and protection who are leaving institutional care or children in conflict with law leaving special homes or place of safety on attaining eighteen years of age, may be provided financial support as specified in section 46, to help them to re-integrate into the mainstream of the society. | | ಹದಿನೆಂಟು ವರ್ಷ ತುಂಬಿದ ನಂತರ ಸಂಸ್ಥೆಯಿಂದ ಹೊರಬರುವ ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆ ಇರುವ ಮಕ್ಕಳು ಹಾಗು ವಿಶೇಷ ಗೃಹ ಅಥವಾ ಸುರಕ್ಷಿತ ಸ್ಥಳಗಳಿಂದ ಹೊರಬರುವ ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳಿಗೆ ಸಮಾಜದ ಮುಖ್ಯವಾಹಿನಿಯೊಡನೆ ಪುನರ್ಮಿಲನ ಹೊಂದಲು ಸೆಕ್ಷನ್ 46ರಲ್ಲಿ ನಿರ್ಧಿಷ್ಟಪಡಿಸಿದಂತೆ ಆರ್ಥಿಕ ನೆರವನ್ನು ಒದಗಿಸಬಹುದು. |
| | | | | | |

| | | | | | |
|---|---|---|---|---|---|
| **Sec 40** | | | **Restoration of child in need of care and protection.** | | **ಪೋಷಣೆ ಮತ್ತು ರಕ್ಷಣೆಯ ಆವಶ್ಯಕತೆ ಇರುವ ಮಗುವಿನ ಪುನಃಸ್ಥಾಪನೆ** |
| | (*1*) | | The restoration and protection of a child shall be the prime objective of any Children's Home, Specialised Adoption Agency or open shelter. | | ಯಾವುದೆ ಮಕ್ಕಳ ನಿಲಯ, ವಿಶೇಷ ದತ್ತು ಕೇಂದ್ರ ಅಥವಾ ತರೆದ ತಂಗುದಾಣದ ಮೂಲ ಉದ್ದೇಶ ಮಕ್ಕಳನ್ನು ರಕ್ಷಿಸುವುದು ಹಾಗೂ ಪುನಃಸ್ಥಾಪನೆಗೊಳಿಸುವುದು. |
| | (*2*) | | The Children's Home, Specialised Adoption Agency or an open shelter, as the case may be, shall take such steps as are considered necessary for the restoration and protection of a child deprived of his family environment temporarily or permanently where such child is under their care and protection. | | ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ಕುಟುಂಬದೊಡನೆ ಸಂಪರ್ಕ ಕಳೆದುಕೊಂಡ ಅಥವಾ ಕುಟುಂಬದ ವಾತಾವರಣದಿಂದ ಹೊರಗಿದ್ದು, ಮಕ್ಕಳ ನಿಲಯ, ವಿಶೇಷ ದತ್ತು ಕೇಂದ್ರ ಅಥವಾ ತರೆದ ತಂಗುದಾಣದ ಪೋಷಣೆ ಮತ್ತು ರಕ್ಷಣೆಯನ್ನು ಪಡೆದಿರುವ ಮಗುವಿನ ಕೌಟುಂಬಿಕ ಹಕ್ಕನ್ನು ಪುನಃ ಸ್ಥಾಪಿಸಲು ಕ್ರಮವನ್ನು ಕೈಗೊಳ್ಳಬೇಕು. |
| | (*3*) | | The Committee shall have the powers to restore any child in need of care and protection to his parents, guardian or fit person, as the case may be, after determining the suitability of the parents or guardian or fit person to take care of the child, and give them suitable directions. | | ಪೋಷಣೆ ಮತ್ತು ರಕ್ಷಣೆಯ ಆವಶ್ಯಕತೆ ಇರುವ ಯಾವುದೇ ಮಗುವನ್ನು ಆ ಮಗುವಿನ ಸ್ವಂತ ಪೋಷಕರು, ತಂದೆ ತಾಯಿ ಅಥವಾ ಸೂಕ್ತ ಅರ್ಹ ವ್ಯಕ್ತಿ ಅಥವಾ ಅರ್ಹ ಸಂಸ್ಥೆಗೆ ನಿಯೋಜಿಸುವ ಅಧಿಕಾರವನ್ನು ಮಕ್ಕಳ ಕಲ್ಯಾಣ ಸಮಿತಿಯು ಹೊಂದಿದೆ. |
| | | | *Explanation.*—For the purposes of this section, "restoration and protection of a child" means restoration to—<br>(*a*) parents;<br>(*b*) adoptive parents;<br>(*c*) foster parents;<br>(*d*) guardian; or<br>(*e*) fit person. | | ವಿವರಣೆ : ಈ ಸೆಕ್ಷನ್ನಿನಲ್ಲಿ ವಿವರಿಸಿರುವಂತೆ 'ಮಗುವಿನ ರಕ್ಷಣೆಗಾಗಿ ಮರು ಸ್ಥಾಪನೆ' ಎಂದರೆ ಮಗುವನ್ನು ಈ ಮುಂದಿನವರ ಬಳಿ ನಿಯೋಜಿಸುವುದು :<br>ಎ. ಹೆತ್ತವರು<br>ಬಿ. ದತ್ತು ಪೋಷಕರು<br>ಸಿ. ಫಾಸ್ಟರ್ ಪೋಷಕರು (ಸಾಕಿಕೊಳ್ಳುವವರು)<br>ಡಿ. ಪೋಷಕರು<br>ಇ. ಅರ್ಹ ವ್ಯಕ್ತಿ |
| **Sec 41** | | | **Registration of child care institutions (CCI)** | | **ಮಕ್ಕಳ ಅನುಪಾಲನಾ ಸಂಸ್ಥೆಗಳ ದಾಖಲೆ (CCI)** |
| | (*1*) | | Notwithstanding anything contained in any other law for the time being in force, all institutions, whether run by a State Government or by voluntary or NGO, which are meant, either wholly or partially, for housing children in need of care and protection or children in conflict with law, shall, be registered under this Act in such manner as may be prescribed, within a period of six months from the date of commencement of this Act, regardless of whether they are receiving grants from the Central Government or, as the case may be, the State Government or not:<br><br>Provided that the institutions having valid registration under the Juvenile Justice (Care and Protection of Children) Act, 2000 on the date of commencement of this Act shall be deemed to have been registered under this Act. | | ಈಗ ಚಾಲ್ತಿಯಲ್ಲಿರುವ ಯಾವುದೇ ಕಾಯಿದೆಯಲ್ಲಿ ಏನೇ ಹೇಳಿದ್ದರೂ, ಅರೆಕಾಲಿಕ ಅಥವಾ ಪೂರ್ಣವಾಗಿ ಪೋಷಣೆ ಮತ್ತು ರಕ್ಷಣೆ ಆವಶ್ಯಕತೆಯಿರುವ ಮಕ್ಕಳನ್ನು ನೋಡಿಕೊಳ್ಳಲೆಂದು ಅಥವಾ ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳ ಆರೈಕೆಗೆಂದು ರಾಜ್ಯ ಸರ್ಕಾರದಿಂದ ನಡೆಸಲ್ಪಡುವ ಅಥವಾ ಸ್ವಯಂಸೇವಾ ಸಂಘಟನೆಗಳಿಂದ ನಡೆಸಲ್ಪಡುವ, ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಧನ ಸಹಾಯ ಪಡೆಯುತ್ತಿರಲಿ ಇಲ್ಲದಿರಲಿ ಎಲ್ಲ ಸಂಸ್ಥೆಗಳು ಈ ಕಾಯಿದೆಯಡಿ ನಿರ್ದಿಷ್ಟಪಡಿಸಿ ಸೂಚಿಸುವಂತೆ ಆರು ತಿಂಗಳೊಳಗೆ ನೋಂದಾಯಿತವಾಗಬೇಕು.<br>ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ 2000ದಂತೆ ಈಗಾಗಲೇ ಸಂಸ್ಥೆಗಳು ದಾಖಲಾಗಿದ್ದಲ್ಲಿ, ಈ ಪ್ರಸ್ತುತ ಕಾಯಿದೆಯು ಜಾರಿಯಾದ ದಿನಕ್ಕೆ ಅಂತಹ ಸಂಸ್ಥೆಗಳು ಈಗಾಗಲೇ ದಾಖಲಾಗಿವೆ ಎಂದು ಪರಿಗಣಿಸಲಾಗುತ್ತದೆ. |
| | (*2*) | | At the time of registration under this section, the State Government shall determine and record the capacity and | | ಈ ಕಾಯಿದೆಯಡಿ ಸಂಸ್ಥೆಗಳನ್ನು ನೋಂದಾಯಿತವಾದ ಸಂದರ್ಭದಲ್ಲಿ, ಪ್ರಕರಣಗಳಿಗೆ ತಕ್ಕಂತೆ, ರಾಜ್ಯ ಸರ್ಕಾರವು ಪ್ರತಿ ಸಂಸ್ಥೆಯನ್ನು ಮಕ್ಕಳ ಮಂದಿರ ಅಥವಾ ಮುಕ್ತ |

| | | | | |
|---|---|---|---|---|
| | | purpose of the institution and shall register the institution as a Children's Home or open shelter or Specialised Adoption Agency or observation home or special home or place of safety, as the case may be. | | ತಂಗುದಾಣ ಅಥವಾ ವಿಶೇಷ ದತ್ತು ಸಂಸ್ಥೆ ಅಥವಾ ಪರಿವೀಕ್ಷಣಾಲಯ ಅಥವಾ ವಿಶೇಷ ನಿಲಯ ಅಥವಾ ಸುರಕ್ಷಿತ ಸ್ಥಳ ಎಂದು ಗುರುತಿಸಿ ಅವುಗಳಲ್ಲಿ ಎಷ್ಟು ಮಕ್ಕಳನ್ನು ಇರಿಸಬಹುದು ಎಂಬುದನ್ನು ಪರಿಗಣಿಸಿ ದಾಖಲಿಸಬೇಕು. |
| (*3*) | | On receipt of application for registration under sub-section (*1*), from an existing or new institution housing children in need of care and protection of children in conflict with law, the State Government may grant provisional registration, within one month from the date of receipt of application, for a maximum period of six months, in order to bring such institution under the purview of this Act, and shall determine the capacity of the Home which shall be mentioned in the registration certificate:<br><br>Provided that if the said institution does not fulfill the prescribed criteria for registration, within the period specified in sub-section (*1*), the provisional registration shall stand cancelled and the provisions of sub-section (*5*) shall apply. | | ಈ ಮೇಲಿನ ಉಪ ಸೆ. (1)ರಂತೆ ಪೋಷಣೆ ಮತ್ತು ರಕ್ಷಣೆ ಆವಶ್ಯಕತೆ ಇರುವ ಮಕ್ಕಳು ಅಥವಾ ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು ಹೊಂದಿರುವ ಈಗ ಚಾಲ್ತಿಯಲ್ಲಿರುವ ಅಥವಾ ಹೊಸದಾದ ಸಂಸ್ಥೆಗಳಿಂದ ಅರ್ಜಿ ಸ್ವೀಕರಿಸಿದ ಒಂದು ತಿಂಗಳೊಳಗೆ ರಾಜ್ಯ ಸರ್ಕಾರವು ಗರಿಷ್ಟ ಆರು ತಿಂಗಳುಗಳ ಕಾಲಕ್ಕೆ ತಾತ್ಕಾಲಿಕ ನೋಂದಣಿಯನ್ನು ನೀಡಿ, ಅಲ್ಲಿ ಎಷ್ಟು ಮಕ್ಕಳನ್ನು ನೋಡಿಕೊಳ್ಳಬಹುದು ಎಂಬುದನ್ನು ಕುರಿತು ದಾಖಲಿಸಿ ಪ್ರಮಾಣ ಪತ್ರವನ್ನು ನೀಡಬೇಕು.<br><br>ಆದರೆ, ಉಪ ಸೆ. (1)ರಲ್ಲಿರುವ ನಿಯಮಗಳಿಗೆ ನಿರ್ದಿಷ್ಟ ಸಂಸ್ಥೆಯು ಒಳಪಡದಿದ್ದಲ್ಲಿ, ತಾತ್ಕಾಲಿಕ ನೋಂದಣಿ ಪ್ರಮಾಣಪತ್ರವು ರದ್ದಾಗಿ ಅದಕ್ಕೆ ಉಪ ಸೆ.(5) ಅನ್ವಯಿಸುತ್ತದೆ. |
| (*4*) | | If the State Government does not issue a provisional registration certificate within one month from the date of application, the proof of receipt of application for registration shall be treated as provisional registration to run an institution for a maximum period of six months. | | ಸಂಸ್ಥೆಗಳು ಸಲ್ಲಿಸಿದ ಅರ್ಜಿಗೆ ರಾಜ್ಯ ಸರ್ಕಾರವು ಒಂದು ತಿಂಗಳೊಳಗೆ ಪ್ರತಿಕ್ರಿಯಿಸಿ ನೋಂದಣಿ ಪ್ರಮಾಣ ಪತ್ರ ನೀಡದೇ ಇದ್ದ ಪಕ್ಷದಲ್ಲಿ, ಅರ್ಜಿ ಸಲ್ಲಿಸಿದ ಪುರಾವೆಯನ್ನೇ ಮುಂದಿನ ಗರಿಷ್ಟ ಆರು ತಿಂಗಳುಗಳ ಕಾಲಕ್ಕೆ ಪ್ರಮಾಣಪತ್ರವೆಂದು ಪರಿಗಣಿಸಲಾಗುತ್ತದೆ. |
| (*5*) | | If the application for registration is not disposed of within six months by any officer or officers of any State Government, it shall be regarded as dereliction of duty on their part by their higher controlling authority and appropriate departmental proceedings shall be initiated. | | ಸಂಸ್ಥೆಗಳು ಸಲ್ಲಿಸಿದ ಅರ್ಜಿಯನ್ನು ಆರು ತಿಂಗಳಾದರೂ ಸಂಬಂಧಿಸಿದ ಅಧಿಕಾರಿಗಳು ಅಥವಾ ಯಾವುದೇ ರಾಜ್ಯ ಸರ್ಕಾರದ ಅಧಿಕಾರಿಗಳು ಪರಿಗಣಿಸಿ ಪರಿಶೀಲಿಸದಿದ್ದಲ್ಲಿ, ಅದನ್ನು ಕರ್ತವ್ಯ ಲೋಪವೆಂದು ಅವರ ಮೇಲಾಧಿಕಾರಿಗಳು ಪರಿಗಣಿಸಿ ಸೂಕ್ತವಾದಿ ಇಲಾಖಾ ತನಿಖೆ ಮತ್ತು ಪ್ರಕ್ರಿಯೆಗಳನ್ನು ನಡೆಸಬೇಕು |
| (*6*) | | The period of registration of an institution shall be five years, and it shall be subject to renewal in every five years. | | ಸಂಸ್ಥೆಯ ನೋಂದಣಿಯ ಅವಧಿ ಐದು ವರ್ಷಗಳದ್ದಾಗಿರುತ್ತದೆ ಮತ್ತು ಪ್ರತಿ ಐದು ವರ್ಷಕ್ಕೊಮ್ಮೆ ನವೀಕರಿಸಬೇಕು. |
| (*7*) | | The State Government may, after following the procedure as may be prescribed, cancel or withhold registration, as the case may be, of such institutions which fail to provide rehabilitation and reintegration services as specified in section 53 and till such time that the registration of an institution is renewed or granted, the State Government shall manage the institution. | | ಸೆ. 53ರಲ್ಲಿ ಸೂಚಿಸಿರುವಂತಹ ಪುನರ್ವಸತಿ ಮತ್ತು ಕುಟುಂಬಗಳೊಡನೆ ಪುನರ್ಮಿಲನ ಸೇವಾ ಕಾರ್ಯಗಳನ್ನು ಸಂಸ್ಥೆಗಳು ನಡೆಸದೇ ಇದ್ದ ಪಕ್ಷದಲ್ಲಿ ಅಂತಹ ಸಂಸ್ಥೆಗಳ ದಾಖಲಾತಿಯನ್ನು ಸೂಕ್ತ ಪ್ರಕ್ರಿಯೆಗಳನ್ನು ಅನುಸರಿಸಿ ರಾಜ್ಯ ಸರ್ಕಾರವು ರದ್ದುಪಡಿಸಬಹುದು ಮತ್ತು ಅಂತಹ ಸಂಸ್ಥೆಗಳ ದಾಖಲಾತಿಯನ್ನು ಪುನರ್ನವೀಕರಿಸುವುದೋ ಅಥವಾ ಹೊಸದಾಗಿ ನೀಡುವುದೋ ಆಗುವ ತನಕ ಅಂತಹ ಸಂಸ್ಥೆಗಳನ್ನು ರಾಜ್ಯ ಸರ್ಕಾರವು ನಿರ್ವಹಿಸಬೇಕು. |

| | | | | | |
|---|---|---|---|---|---|
| | (*8*) | | Any child care institution registered under this section shall be duty bound to admit children, subject to the capacity of the institution, as directed by the Committee, whether they are receiving grants from the Central Government or, as the case may be, the State Government or not. | | ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದ ಅನುದಾನ ಪಡೆಯುತ್ತಿರಲಿ ಅಥವಾ ಇಲ್ಲವಾಗಲಿ ಯಾವುದೇ ನೋಂದಾಯಿತವಾದ ಮಕ್ಕಳ ಕಲ್ಯಾಣ ಸಂಸ್ಥೆಗಳು ಸಮಿತಿಯಿಂದ ನಿರ್ದೇಶಿತವಾದಲ್ಲಿ ಮಕ್ಕಳನ್ನು ಪಡೆಯುವುದು ಕಡ್ಡಾಯವಾಗಿದೆ. |
| | (*9*) | | Notwithstanding anything contained in any other law for the time being in force, the inspection committee appointed under section 54, shall have the powers to inspect any institution housing children, even if not registered under this Act to determine whether such institution is housing children in need of care and protection. | | ಈಗ ಚಾಲ್ತಿಯಲ್ಲಿರುವ ಯಾವುದೇ ಕಾಯಿದೆಯಲ್ಲಿ ಏನೇ ಹೇಳಿರಲಿ, ಸೆ. 54ರಲ್ಲಿ ನಿಯೋಜಿಸಲ್ಪಟ್ಟಿರುವ ತನಿಖಾ ಸಮಿತಿಯು ಈ ಕಾಯಿದೆಯಡಿ ನೋಂದಾಯಿತವಾಗಿರದಿದ್ದರೂ, ಮಕ್ಕಳನ್ನು ಇಟ್ಟುಕೊಂಡಿರುವ ಯಾವುದೇ ಸಂಸ್ಥೆಯನ್ನು, ಅಂತಹ ಸಂಸ್ಥೆಗಳು ಪೋಷಣೆ ಮತ್ತು ರಕ್ಷಣೆ ಆವಶ್ಯಕತೆ ಇರುವ ಮಕ್ಕಳನ್ನು ಹೊಂದಿರುವರೇ ಎಂದು ಪರಿಶೀಲಿಸಲು ಅಧಿಕಾರವನ್ನು ಹೊಂದಿರುತ್ತಾರೆ. |
| | | | | | |
| **Sec 42** | | | **Penalty for non-registration of child care institutions.** | | **ಮಕ್ಕಳ ಅನುಪಾಲನಾ ಸಂಸ್ಥೆಗಳು ದಾಖಲೆಗೊಳ್ಳದಿದ್ದಲ್ಲಿ ದಂಡ** |
| | | | Any person, or persons, in-charge of an institution housing children in need of care and protection and children in conflict with law, who fails to comply with the provisions of sub-section (*1*) of section 41, shall be punished with imprisonment which may extend to one year or a fine of not less than one lakh rupees or both:<br>Provided that every thirty days delay in applying for registration shall be considered as a separate offence. | | ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆಯಿರುವ ಹಾಗು ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು ಇರಿಸಿಕೊಂಡಿರುವ ವ್ಯಕ್ತಿ, ವ್ಯಕ್ತಿಗಳು, ಸಂಸ್ಥೆಯ ಮುಖ್ಯಸ್ಥರು ಸೆಕ್ಷನ್ 41ರ ಉಪ ಸೆಕ್ಷನ್ (1)ರಲ್ಲಿ ಹೇಳಿರುವುದನ್ನು ಪಾಲಿಸದಿದ್ದಲ್ಲಿ ಅವರಿಗೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಅಥವಾ ಒಂದು ಲಕ್ಷಕ್ಕೆ ಕಡಿಮೆಯಿಲ್ಲದಂತೆ ದಂಡ ಅಥವಾ ಎರಡನ್ನೂ ವಿಧಿಸಬಹುದು.<br>ಜೊತೆಗೆ, ನೋಂದಣಿಗೆ ಅರ್ಜಿ ಸಲ್ಲಿಸಲು ಪ್ರತಿ 30 ದಿನಗಳ ಕಾಲದ ವಿಳಂಬವನ್ನು ಬೇರೆ ಅಪರಾಧ ಎಂದು ಪರಿಗಣಿಸಲಾಗುವುದು. |
| **Sec** | | | **Open shelter.** | | **ತೆರೆದ ತಂಗುದಾಣ** |
| **43** | (*1*) | | The State Government may establish and maintain, by itself or through voluntary or non-governmental organisations, as many open shelters as may be required, and such open shelters shall be registered as such, in the manner as may be prescribed. | | ಸರ್ಕಾರವು ಅವಶ್ಯವಿರುವಷ್ಟು ಸಂಖ್ಯೆಯ ತೆರೆದ ತಂಗುದಾಣವನ್ನು ತಾನೇ ಸ್ವತಃ ಅಥವಾ ಸ್ವಯಂಸೇವಾ ಸಂಸ್ಥೆಗಳ ಮೂಲಕ ತೆರೆದು ನಿರ್ವಹಿಸಬಹುದು ಮತ್ತು ಇಂತಹ ತೆರೆದ ತಂಗುದಾಣಗಳು ನಿರ್ದಿಷ್ಟಪಡಿಸಿದ ವಿಧಿವಿಧಾನಗಳ ರೀತಿಯಲ್ಲಿ ನೋಂದಣಿಯಾಗಿರಬೇಕು. |
| | (*2*) | | The open shelters referred to in sub-section (*1*) shall function as a community based facility for children in need of residential support, on short term basis, with the objective of protecting them from abuse or weaning them, or keeping them, away from a life on the streets. | | ಉಪ ಸೆಕ್ಷನ್ (1)ರಲ್ಲಿ ಸೂಚಿತವಾಗಿರುವ ತೆರೆದ ತಂಗುದಾಣಗಳು ಕೌಟುಂಬಿಕ ನೆರವಿನ ಅವಶ್ಯಕತೆಯಿರುವ ಮಕ್ಕಳಿಗೆ ದುರುಪಯೋಗದಿಂದ ರಕ್ಷಿಸುವ ಮತ್ತು ಬೀದಿ ಜೀವನದಿಂದ ದೂರವಿಡುವ ಉದ್ದೇಶದಿಂದ ಅಲ್ಪಾವಧಿಗೆ ಸಮುದಾಯ ಆಧಾರಿತ ಸೌಲಭ್ಯಗಳನ್ನು ಒದಗಿಸುವ ಕಾರ್ಯವನ್ನು ನಿರ್ವಹಿಸಬೇಕು. |
| | (*3*) | | The open shelters shall send every month information, in the manner as may be prescribed, regarding children availing the services of the shelter, to the District Child Protection Unit and the Committee. | | ತಂಗುದಾಣದಲ್ಲಿ ಮಕ್ಕಳು ಪಡೆಯುತ್ತಿರುವ ಸೌಲಭ್ಯಗಳ ಕುರಿತು ತೆರೆದ ತಂಗುದಾಣಗಳು ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಮತ್ತು ಸಮಿತಿಗೆ ಪ್ರತಿ ತಿಂಗಳೂ ಮಾಹಿತಿಯನ್ನು ನೀಡಬೇಕು. |
| | | | | | |

| Sec | | | Foster care. | | ಫಾಸ್ಟರ್ ಕೇರ್ (ಮಕ್ಕಳನ್ನು ಸಾಕಿಕೊಳ್ಳುವುದು) |
|---|---|---|---|---|---|
| 44 | (*1*) | | The children in need of care and protection may be placed in foster care, including group foster care for their care and protection through orders of the Committee, after following the procedure as may be prescribed in this regard, in a family which does not include the child's biological or adoptive parents or in an unrelated family recognised as suitable for the purpose by the State Government, for a short or extended period of time. | | ಸೂಚಿಸಲಾದ ಸೂಕ್ತವಾದ ವಿಧಿವಿಧಾನಗಳನ್ನು ಅನುಸರಿಸಿ ಸಮಿತಿಯ ನಿರ್ದೇಶನದಂತೆ ಪೋಷಣೆ ಮತ್ತು ರಕ್ಷಣೆ ಆವಶ್ಯಕತೆಯಿರುವ ಮಕ್ಕಳನ್ನು ಆ ಉದ್ದೇಶಕ್ಕಾಗಿ ಫಾಸ್ಟರ್ ಕೇರ್ ಅಥವಾ ಗುಂಪು ಫಾಸ್ಟರ್ ಕೇರ್‌ನಲ್ಲಿ, ಮಗುವಿನ ಜೈವಿಕ ಕುಟುಂಬವಲ್ಲದ ಅಥವಾ ದತ್ತು ಕುಟುಂಬವಲ್ಲದ ಆದರೆ ಮಗು/ಮಕ್ಕಳನ್ನು ಇರಿಸಿಕೊಳ್ಳಲು ಸೂಕ್ತವೆಂದು ರಾಜ್ಯ ಸರ್ಕಾರದಿಂದ ಗುರುತಿಸಲಾದ ಮಗುವಿನ ಸಂಬಂಧಿಯಲ್ಲದ ಕುಟುಂಬದಲ್ಲಿ ತಾತ್ಕಾಲಿಕವಾಗಿ ಅಥವಾ ಮುಂದುವರಿದ ಅವಧಿಗಾಗಿ ಇರಿಸಬಹುದು. |
| | (*2*) | | The selection of the foster family shall be based on family's ability, intent, capacity and prior experience of taking care of children. | | ಫಾಸ್ಟರ್ ಕೇರ್ ಕುಟುಂಬಗಳನ್ನು ಆ ಕುಟುಂಬದ ಅರ್ಹತೆ, ಉದ್ದೇಶ, ಸಾಮರ್ಥ್ಯ ಮತ್ತು ಮಗುವಿನ ಪೋಷಣೆಯಲ್ಲಿ ಈ ಮುಂಚಿನ ಅನುಭವದ ಆಧಾರದ ಮೇಲೆ ಆಯ್ಕೆ ಮಾಡಬೇಕು. |
| | (*3*) | | All efforts shall be made to keep siblings together in foster families, unless it is in their best interest not to be kept together. | | ಒಡಹುಟ್ಟಿದವರನ್ನು ಒಂದೇ ಫಾಸ್ಟರ್ ಕುಟುಂಬದಲ್ಲಿರಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕು ಆದರೆ ಈ ರೀತಿ ಒಟ್ಟಿಗೆ ಇರಿಸುವುದರಿಂದ ಅವರ ಹಿತಾಸಕ್ತಿಗೆ ಯಾವುದೇ ಧಕ್ಕೆಯಾಗಬಾರದು. |
| | (*4*) | | The State Government, after taking into account the number of children, shall provide monthly funding for such foster care through District Child Protection Unit after following the procedure, as may be prescribed, for inspection to ensure well being of the children. | | ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ನಿರ್ಧಿಷ್ಟಪಡಿಸಿದ ವಿಧಾನಗಳನ್ನು ಅನುಸರಿಸುವುದರ ಮೂಲಕ ತನಿಖೆ ನಡೆಸಿ ಮಕ್ಕಳ ಹಿತರಕ್ಷಣೆಯನ್ನು ಖಾತ್ರಿಪಡಿಸಿದ ನಂತರ ರಾಜ್ಯ ಸರ್ಕಾರವು ಮಕ್ಕಳ ಸಂಖ್ಯೆಯ ಆಧಾರದ ಮೇಲೆ ಫಾಸ್ಟರ್ ಕೇರ್ ವ್ಯವಸ್ಥೆಗೆ ಪ್ರತಿ ತಿಂಗಳೂ ಅನುದಾನ ನೀಡಬೇಕು. |
| | (*5*) | | In cases where children have been placed in foster care for the reason that their parents have been found to be unfit or incapacitated by the Committee, the child's parents may visit the child in the foster family at regular intervals, unless the Committee feels that such visits are not in the best interest of the child, for reasons to be recorded there for; and eventually, the child may return to the parent's homes once the parents are determined by the Committee to be fit to take care of the child. | | ಪೋಷಕರು ಪತ್ತೆಯಾಗದ ಅಥವಾ ಪೋಷಕರು ಮಗುವನ್ನು ನೋಡಕೊಳ್ಳಲು ಅನರ್ಹರು ಅಥವಾ ಅಸಾಮರ್ಥ್ಯವುಳ್ಳವರು ಎಂದು ಸಮಿತಿ ಭಾವಿಸಿದಲ್ಲಿ ಮಗುವನ್ನು ಫಾಸ್ಟರ್ ಕೇರ್‌ನಲ್ಲಿರಿಸಿದ ಪ್ರಕರಣಗಳಲ್ಲಿ, ಮಗುವಿನ ಪೋಷಕರು ನಿಯಮಿತ ಅವಧಿಗೊಮ್ಮೆ ಮಗುವನ್ನು ಭೇಟಿ ಮಾಡಬಹುದು ಮತ್ತು ಸಮಿತಿಗೆ ಅವರ ಭೇಟಿ ಮಗುವಿನ ಹಿತಾಸಕ್ತಿಯಿಂದ ಕೂಡಿಲ್ಲವೆಂದು ಅನಿಸಿದರೆ ಅದಕ್ಕೆ ಕಾರಣಗಳನ್ನು ದಾಖಲಿಸಬೇಕು ಮತ್ತು ಸಮಿತಿಯು ಪೋಷಕರು ಮಗುವಿನ ಪೋಷಣೆಗೆ ಅರ್ಹರು ಎಂದು ಅಭಿಪ್ರಾಯಪಟ್ಟಲ್ಲಿ ಮಗುವು ತನ್ನ ಕುಟುಂಬಕ್ಕೆ ವಾಪಸಾಗಬಹುದು. |
| | (*6*) | | The foster family shall be responsible for providing education, health and nutrition to the child and shall ensure the overall well being of the child in such manner, as may be prescribed. | | ಫಾಸ್ಟರ್ ಕುಟುಂಬವು ಮಗುವಿಗೆ ಶಿಕ್ಷಣ, ಆರೋಗ್ಯ ಮತ್ತು ಪೌಷ್ಟಿಕತೆಯನ್ನು ಒದಗಿಸುವ ಮತ್ತು ನಿರ್ದಿಷ್ಟ ಪಡಿಸಿದ ವಿಧಿವಿಧಾನಗಳಲ್ಲಿ ಮಗುವಿನ ಒಟ್ಟಾರೆ ಒಳಿತನ್ನು ಖಾತ್ರಿಪಡಿಸುವ ಜವಾಬ್ದಾರಿಯನ್ನು ಹೊಂದಿದೆ |
| | (*7*) | | The State Government may make rules for the purpose of defining the procedure, criteria and the manner in which foster care services shall be provided for children. | | ಫಾಸ್ಟರ್ ಕೇರ್‌ನಲ್ಲಿ ಮಗುವಿಗೆ ಒದಗಿಸಬಹುದಾದ ಸೇವೆಗಳ ಕುರಿತಾದ ಪ್ರಕ್ರಿಯೆ, ಅರ್ಹತೆ ಮತ್ತು ವಿಧಿವಿಧಾನಗಳನ್ನು ವ್ಯಾಖ್ಯಾನಿಸುವ ಉದ್ದೇಶದಿಂದ ರಾಜ್ಯ ಸರ್ಕಾರಗಳು ನಿಯಮಗಳನ್ನು ರಚಿಸಬೇಕು. |
| | (*8*) | | The inspection of foster families shall be conducted every month by the Committee in the form as may be prescribed to check the well-being of the child and whenever a foster family is found lacking in taking care of the child, the child shall be removed from that foster family and shifted to another foster family as the Committee may deem fit. | | ಮಗುವಿನ ಒಟ್ಟಾರೆ ಒಳಿತನ್ನು ತಪಾಸಣೆ ಮಾಡಲು ಸಮಿತಿಯು ಪ್ರತಿ ತಿಂಗಳೂ ಫಾಸ್ಟರ್ ಕುಟುಂಬಗಳನ್ನು ನಿರ್ಧಿಷ್ಟಪಡಿಸಿದಂತೆ ತನಿಖೆ ಮಾಡಬೇಕು ಮತ್ತು ಫಾಸ್ಟರ್ ಕುಟುಂಬವು ಮಗುವಿನ ಪೋಷಣೆಯಲ್ಲಿ ವಿಫಲವಾಗಿದೆ ಎಂದೆನಿಸಿದರೆ ಮಗುವನ್ನು ಅಲ್ಲಿಂದ ಹಿಂಪಡೆದು ಸಮಿತಿಯು ಅರ್ಹವೆಂದು ಭಾವಿಸಿದ ಬೇರೊಂದು ಫಾಸ್ಟರ್ ಕುಟುಂಬಕ್ಕೆ ವರ್ಗಾಯಿಸಬಹುದು. |

| | | | | |
|---|---|---|---|---|
| | (*9*) | | No child regarded as adoptable by the Committee shall be given for long-term foster care. | ದತ್ತು ನೀಡಲು ಅರ್ಹ ಎಂದು ಸಮಿತಿಯು ನಿರ್ಧರಿಸಿದ ಯಾವುದೇ ಮಗುವನ್ನು ಧೀರ್ಘಾವಧಿ ಫಾಸ್ಟರ್ ಕೇರ್‌ನಲ್ಲಿ ಇರಿಸುವಂತಿಲ್ಲ. |
| | | | | |
| **Sec** | | | **Sponsorship.** | **ಪ್ರಾಯೋಜನೆ** |
| **45** | (*1*) | | The State Government shall make rules for the purpose of undertaking various programmes of sponsorship of children, such as individual to individual sponsorship, group sponsorship or community sponsorship. | ಇಂತಹ ಪ್ರಾಯೋಜನೆಯನ್ನು ವಿವಿಧ ರೀತಿಯಲ್ಲಿ ನಡೆಸಲು ಯೋಜನೆಗಳನ್ನು – ವ್ಯಕ್ತಿಗತ ಅಥವಾ ಗುಂಪು ಅಥವಾ ಸಮುದಾಯಗಳಿಗೆ ಪ್ರಾಯೋಜನೆಯ ನೆರವು ನೀಡಲು ಸರ್ಕಾರವು ನಿಯಮಗಳನ್ನು ರೂಪಿಸಬಹುದು. |
| | (*2*) | | The criteria for sponsorship shall include,— | ಪ್ರಾಯೋಜನೆಯ ಅರ್ಹತೆಯು ಈ ಕೆಳಗಿವನವುಗಳನ್ನು ಒಳಗೊಂಡಿದೆ – |
| | | | (i) where mother is a widow or divorced or abandoned by family;<br>(ii) where children are orphan and are living with the extended family;<br>(iii) where parents are victims of life threatening disease;<br>(iv) where parents are incapacitated due to accident and unable to take care of children both financially and physically. | (i) ತಾಯಿ ವಿಧವೆಯಾಗಿದ್ದು ಅಥವಾ ವಿಚ್ಚೇದಿತೆ ಅಥವಾ ಕುಟುಂಬದಿಂದ ತ್ಯಜಿಸಿದವಳಾಗಿದ್ದಲ್ಲಿ;<br>(ii) ಮಗು ಅನಾಥವಾಗಿದ್ದು, ಕುಟುಂಬದ ಇತರರೊಡನೆ ವಾಸಿಸುತ್ತಿದ್ದಲ್ಲಿ;<br>(iii) ಪೋಷಕರು ಜೀವಕ್ಕೆ ಎರವಾಗುವಂತಹ ಕಾಯಿಲೆಯಿಂದ ಬಳಲುತ್ತಿದ್ದಲ್ಲಿ;<br>(iv) ಪೋಷಕರು ಅಪಘಾತದಿಂದಾದ ಅಸಾಮರ್ಥ್ಯದಿಂದ ಮಗುವಿನ ಆರ್ಥಿಕ ಮತ್ತು ದೈಹಿಕ ಪೋಷಣೆಯನ್ನು ಮಾಡಲಾಗದಿದ್ದಲ್ಲಿ. |
| | (*3*) | | The duration of sponsorship shall be such as may be prescribed. | ಪ್ರಾಯೋಜನೆಯ ಅವಧಿ ನಿರ್ಧಿಷ್ಟಪಡಿಸಿದಂತೆ ಇರುತ್ತದೆ. |
| | (*4*) | | The sponsorship programme may provide supplementary support to families, to Children's Homes and to special homes to meet medical, nutritional, educational and other needs of the children, with a view to improving their quality of life. | ಬಡ ಕುಟುಂಬಗಳು ಹಾಗೂ ಮಕ್ಕಳ ನಿಲಯಗಳು ಹಾಗೂ ವಿಶೇಷ ಗೃಹಗಳಲ್ಲಿರುವ ಮಕ್ಕಳ ಜೀವನದ ಗುಣಮಟ್ಟವನ್ನು ಹೆಚ್ಚಿಸಲು ಅವರ ಆರೋಗ್ಯ ರಕ್ಷಣೆ, ಪೌಷ್ಟಿಕ ಆಹಾರ, ಶಿಕ್ಷಣವೇ ಮೊದಲಾದ ಆವಶ್ಯಕತೆಗಳನ್ನು ಪೂರೈಸಲು ಅತ್ಯಾವಶ್ಯಕವಾದುದನ್ನು ಈ ಪ್ರಾಯೋಜನೆ ಕಾರ್ಯಕ್ರಮವು ಒದಗಿಸಬಹುದು. |
| | | | | |
| **Sec 46** | | | **After care of children leaving child care institution** | **ಮಕ್ಕಳ ಅನುಪಾಲನ ಸಂಸ್ಥೆಗಳಿಂದ ಹೊರಬಂದ ಮಕ್ಕಳ ಪೋಷಣೆ** |
| | | | Any child leaving a child care institution on completion of eighteen years of age may be provided with financial support in order to facilitate child's re-integration into the mainstream of the society in the manner as may be prescribed. | 18 ವರ್ಷ ದಾಟಿದ ಮಕ್ಕಳು ಅನುಪಾಲನಾ ನಿಲಯಗಳನ್ನು ಬಿಟ್ಟು ಹೊರಬಂದಾಗ, ಅಂತಹ ಮಕ್ಕಳಿಗೆ ಸಮಾಜಿಕ ಮುಖ್ಯವಾಹಿನಿಯೊಳಗೆ ಮರು ಸೇರ್ಪಡೆಯಾಗುವುದಕ್ಕೆ ನೆರವಾಗಲು ನಿರ್ದಿಷ್ಟಪಡಿಸಿದಂತೆ ಆರ್ಥಿಕ ಬೆಂಬಲವನ್ನು ನೀಡಬಹುದು. |
| **Sec** | | | **Observation homes.** | **ಪರಿವೀಕ್ಷಣಾಲಯಗಳು** |
| **47** | (*1*) | | The State Government shall establish and maintain in every district or a group of districts, either by itself, or through voluntary or non-governmental organisations, observation homes, which shall be registered under section 41 of this Act, for temporary reception, care and rehabilitation of any child alleged to be in conflict with law, during the pendency of any inquiry under this Act. | ರಾಜ್ಯ ಸರ್ಕಾರಗಳು ಪ್ರತಿಯೊಂದು ಜಿಲ್ಲೆಯಲ್ಲಿಯೂ ಅಥವಾ ಜಿಲ್ಲೆಗಳ ಸಮೂಹದಲ್ಲಿ ತಾನೇ ಸ್ವತಃ ಅಥವಾ ನೋಂದಾಯಿತವಾದ ಸ್ವಯಂಸೇವಾ ಸಂಸ್ಥೆ ಅಥವಾ ಸರ್ಕಾರೇತರ ಸಂಸ್ಥೆಗಳ ಮೂಲಕ ಈ ಕಾಯ್ದೆಯ ಸೆಕ್ಷನ್ 41ರಡಿಯಲ್ಲಿ ಕಾನೂನಿನೊಡನೆ ಸಂಘರ್ಷದಲ್ಲಿದ್ದಾರೆ ಎಂದು ಶಂಕಿಸಲಾದ ಮಕ್ಕಳ ತನಿಖೆಯ ಅವಧಿಯಲ್ಲಿ ಅಂತಹವರ ಪೋಷಣೆ ಮತ್ತು ಪುನರ್ವಸತಿಯ ತಾತ್ಕಾಲಿಕ ಸ್ವೀಕಾರ ವ್ಯವಸ್ಥೆಗಾಗಿ ಈ ಕಾಯ್ದೆಯಡಿ ಪರಿವೀಕ್ಷಣಾಲಯಗಳನ್ನು ತೆರೆಯಬೇಕು. |

| | | | | | |
|---|---|---|---|---|---|
| | (*2*) | | Where the State Government is of the opinion that any registered institution other than a home established or maintained under sub-section (*1*), is fit for the temporary reception of such child alleged to be in conflict with law during the pendency of any inquiry under this Act, it may register such institution as an observation home for the purposes of this Act. | | ಈ ಮೇಲಿನ ಉಪ ಪರಿಚ್ಛೇದ (1)ರಂತೆ ನಿರ್ಮಿಸಲಾದ ಅಥವಾ ನೇಮಿಸಲಾದ ನಿಲಯಗಳಲ್ಲದೆ, ನೋಂದಾಯಿತವಾದ ಬೇರೆ ಸಂಸ್ಥೆಗಳೂ ಸಹ ಕಾನೂನಿನೊಡನೆ ಸಂಘರ್ಷದಲ್ಲಿದ್ದಾರೆಂದು ಶಂಕಿತರಾದ ಮಕ್ಕಳನ್ನು ತನಿಖೆಯ ಕಾಲದಲ್ಲಿ ಅಥವಾ ನಿರ್ಣಯ ತೆಗೆದುಕೊಳ್ಳುವ ತನಕ ತಾತ್ಕಾಲಿಕವಾಗಿ ಇರಿಸಿಕೊಳ್ಳಲು ಸೂಕ್ತರಾಗಿದ್ದಾರೆಂದು ಕಂಡುಬಂದಲ್ಲಿ ಅಂತಹ ಸಂಸ್ಥೆಗಳನ್ನು ಈ ಕಾಯಿದೆಯಡಿ ಅರ್ಹ ಸಂಸ್ಥೆಗಳೆಂದು ಸರ್ಕಾರವು ಪ್ರಾಮಾಣೀಕರಿಸಬಹುದು. |
| | (*3*) | | The State Government may, by rules made under this Act, provide for the management and monitoring of observation homes, including the standards and various types of services to be provided by them for rehabilitation and social integration of a child<br>alleged to be in conflict with law and the circumstances under which, and the manner in which, the registration of an observation home may be granted or withdrawn. | | ಈ ಕಾಯಿದೆಯ ಜಾರಿಗಾಗಿ ರಾಜ್ಯ ಸರ್ಕಾರಗಳು ನಿಯಮಗಳನ್ನು ರಚಿಸಿ, ಪರಿವೀಕ್ಷಣಾಲಯಗಳ ನಿರ್ವಹಣೆ, ಹಾಗೂ ಅವುಗಳನ್ನು ನಡೆಸಲು ತೆಗೆದುಕೊಳ್ಳಬೇಕಾದ ಕ್ರಮಗಳು, ಮಕ್ಕಳ ಪುನರ್ವಸತಿಗೆ ಮತ್ತು ಸಾಮಾಜಿಕ ಪುನರ್ಮಿಲನಕ್ಕೆ ಮಾಪಕಗಳು, ಒದಗಿಸಬೇಕಾದ ವಿವಿಧ ಸೇವೆಗಳ ಗುಣಮಟ್ಟವೇ ಮೊದಲಾದ ವಿಚಾರಗಳ ಬಗ್ಗೆ ಮತ್ತು ಯಾವ ಯಾವ ನಿಯಮ ಮತ್ತು ಪರಿಸ್ಥಿತಿಗಳಲ್ಲಿ ಒಂದು ಸಂಸ್ಥೆಗೆ ಪರಿವೀಕ್ಷಣಾಲಯದ ಸ್ಥಾನಮಾನವನ್ನು ನೀಡಲಾಗುತ್ತದೆ ಅಥವಾ ಅದನ್ನು ಹಿಂತೆಗೆದುಕೊಳ್ಳಲಾಗುತ್ತದೆ ಎಂದು ವಿವರಿಸತಕ್ಕದ್ದು. |
| | (*4*) | | Every child alleged to be in conflict with law who is not placed under the charge of parent or guardian and is sent to an observation home shall be segregated according to the child's age and gender, after giving due consideration to physical and mental status of the child and degree of the offence committed. | | ತನ್ನ ಕುಟುಂಬಕ್ಕೆ ಅಥವಾ ಪೋಷಕರು/ಪಾಲಕರ ವಶಕ್ಕೆ ಯಾವುದಾದರೂ ಮಗು (ಕಾನೂನಿನೊಡನೆ ಸಂಘರ್ಷದಲ್ಲಿದ್ದಾರೆಂದು ಶಂಕಿತರಾದ ಮಕ್ಕಳನ್ನು)ವನ್ನು ನೀಡದೇ ಇದ್ದಲ್ಲಿ ಅಂತಹ ಮಕ್ಕಳನ್ನು ಪರಿವೀಕ್ಷಣಾಲಯಕ್ಕೆ ಕಳುಹಿಸಿದಾಗ, ಅವರ ದೈಹಿಕ ಮತ್ತು ಮಾನಸಿಕ ಸ್ಥಿತಿಗತಿಗಳು ಹಾಗೂ ಎಂತಹ ಆರೋಪವಿದೆಯೆಂಬ ಶಂಕೆಯನ್ನು ಪರಿಗಣಿಸಿದ ನಂತರ ಅವರ ವಯಸ್ಸು ಮತ್ತು ಲಿಂಗಕ್ಕನುಗುಣವಾಗಿ  ಮುಂದೆ ಅವರನ್ನು ಪರಿವೀಕ್ಷಣಾಲಯಕ್ಕೆ ಸೇರಿಸುವ ದೃಷ್ಟಿಯಿಂದ ವಿಭಾಗಿಸಿ ಇರಿಸಬೇಕು. |
| **Sec** | | | **Special homes.** | | **ವಿಶೇಷ ನಿಲಯಗಳು** |
| **48** | (*1*) | | The State Government may establish and maintain either by itself or through voluntary or non-governmental organisations, special homes, which shall be registered as such, in the manner as may be prescribed, in every district or a group of districts, as may be required for rehabilitation of those children in conflict with law who are found to have committed an offence and who are placed there by an order of the Juvenile Justice Board made under section 18. | | ಈ ಕಾಯಿದೆಯಲ್ಲಿ ವಿವರಿಸಿರುವಂತೆ ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳು ತಪ್ಪಿತಸ್ಥರೆಂದು ಸಾಬೀತಾದಲ್ಲಿ ಮತ್ತು ಮಕ್ಕಳ ನ್ಯಾಯ ಮಂಡಳಿಯು ಸೆಕ್ಷನ್ 18ರಡಿಯಲ್ಲಿ ಹೊರಡಿಸಿದ ಆದೇಶದ ಅನುಸಾರ ಇಂತಹ ಮಕ್ಕಳನ್ನು ಸ್ವೀಕರಿಸಲು ಹಾಗೂ ಪುನರ್ವಸತಿಗಾಗಿ, ಯಾವುದೇ ರಾಜ್ಯ ಸರ್ಕಾರಗಳು ಸ್ವಯಂ ಆಗಿ ಅಥವಾ ಸ್ವಯಂಸೇವಾ ಸಂಘಟನೆಗಳ ಮೂಲಕ ಆವಶ್ಯವಿರುವಷ್ಟು ನಿರ್ದಿಷ್ಟಪಡಿಸಿದಂತೆ ನೋಂದಾಯಿತವಾದ ವಿಶೇಷ ಗೃಹಗಳನ್ನು ಪ್ರತಿ ಜಿಲ್ಲೆಯಲ್ಲಿ ಅಥವಾ ಜಿಲ್ಲೆಗಳ ಸಮೂಹಕ್ಕಾಗಿ ಸ್ಥಾಪಿಸಬಹುದು. |
| | (*2*) | | The State Government may, by rules, provide for the management and monitoring of special homes, including the standards and various types of services to be provided by them which are necessary for social re-integration of a child, and the circumstances under which, and the manner in which, the registration of a special home may be granted or withdrawn. | | ಈ ಕಾಯಿದೆಯಡಿ ರೂಪಿಸಲಾಗಿರುವ ರಾಜ್ಯದ ನಿಯಮಗಳಂತೆ, ವಿಶೇಷ ಗೃಹಗಳ ನಿರ್ವಹಣೆ ಹಾಗು ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು ಸಮಾಜದೊಡನೆ ಮರುಸ್ಥಾಪನೆಗೊಳಿಸುವುದೇ ಮತ್ತಿತರ ಸೇವೆಗಳನ್ನು ನೀಡಲು ನಿಗದಿತವಾದ ಮಾಪಕಗಳನ್ನು ನಿಗದಿಪಡಿಸಬಹುದಲ್ಲದೆ, ಎಂತಹ ಪರಿಸ್ಥಿತಿ ಹಾಗೂ ನಿಯಮಗಳಡಿ ವಿಶೇಷ ಗೃಹಗಳಿಗೆ ಮಾನ್ಯತೆ ನೀಡಬಹುದು ಮತ್ತು ಅದನ್ನು ಹಿಂತೆಗೆದುಕೊಳ್ಳಬಹುದೆಂದು ವಿವರಿಸಬಹುದು |

| | | | | | |
|---|---|---|---|---|---|
| | (*3*) | | The rules made under sub-section (*2*) may also provide for the segregation and separation of children found to be in conflict with law on the basis of age, gender, the nature of offence committed by them and the child's mental and physical status. | | ಈ ಮೇಲಿನ ಉಪ ಸೆಕ್ಷನ್ (2)ರಲ್ಲಿ ತಿಳಿಸಿರುವಂತೆ ಸರ್ಕಾರವು ರಚಿಸಲಿರುವ ನಿಯಮವು, ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು ಅವರ ವಯಸ್ಸು, ಆ ಮಕ್ಕಳು ಮಾಡಿರಬಹುದಾದ ಆಪರಾಧಿಕ ಕೃತ್ಯದ ತೀವ್ರತೆ ಹಾಗೂ ಮಾನಸಿಕ ಮತ್ತು ದೈಹಿಕ ಸ್ಥಿತಿಗತಿಯ ಮೇಲೆ ಹೇಗೆ ಪ್ರತ್ಯೇಕಿಸಬೇಕೆಂದೂ ಸಹ ವಿವರಿಸಬಹುದು. |
| **Sec** | | | **Place of safety.** | | **ಸುರಕ್ಷಿತ ಸ್ಥಳ** |
| **49** | (*1*) | | The State Government shall set up atleast one place of safety in a State registered under section 41, so as to place a <u>person above the age of eighteen years</u> or child in conflict with law, who is between the age of <u>sixteen to eighteen years</u> and is accused of or convicted for committing a heinous offence. | | ಹದಿನೆಂಟು ವರ್ಷ ವಯಸ್ಸನ್ನು ಮೀರಿದ ವ್ಯಕ್ತಿಯನ್ನು ಅಥವಾ 16–18 ವಯೋಮಾನದ ಕಾನೂನಿನೊಡನೆ ಸಂಘರ್ಷದಲ್ಲಿದ್ದಾರೆ ಎಂದು ಶಂಕಿತವಾದ ಅಥವಾ ಹೀನ ಆಪರಾಧಿಕ ಕೃತ್ಯವನ್ನು ಮಾಡಿದ ತಪ್ಪಿತಸ್ಥ ಮಗುವನ್ನು ಇರಿಸಲು ರಾಜ್ಯ ಸರ್ಕಾರವು ರಾಜ್ಯದಲ್ಲಿ ಕನಿಷ್ಟ ಒಂದನ್ನಾದರೂ ಸೆಕ್ಷನ್ 41ರಡಿಯಲ್ಲಿ ನೋಂದಾಯಿಸಿದ ಸುರಕ್ಷಿತ ಸ್ಥಳವನ್ನು ಸ್ಥಾಪಿಸಬೇಕು. |
| | (*2*) | | Every place of safety shall have separate arrangement and facilities for stay of such children or persons during the process of inquiry and children or persons convicted of committing an offence. | | ಪ್ರತಿಯೊಂದು ಸುರಕ್ಷಿತ ಸ್ಥಳದಲ್ಲೂ ಇಂತಹ ಮಕ್ಕಳು ಅಥವಾ ವ್ಯಕ್ತಿಗಳು ತನಿಖೆಯ ಅವಧಿಯಲ್ಲಿ ಮತ್ತು ಆಪರಾಧಿಕ ಕೃತ್ಯ ಮಾಡಿದವರೆಂದು ಸಾಬೀತಾದ ಮಕ್ಕಳು ಹಾಗು ವ್ಯಕ್ತಿಗಳು ಉಳಿದುಕೊಳ್ಳಲು ಪ್ರತಿಯೊಂದು ಸುರಕ್ಷಿತ ಸ್ಥಳಗಳಲ್ಲೂ ಪ್ರತ್ಯೇಕವಾದ ವ್ಯವಸ್ಥೆ ಮತ್ತು ಸೌಲಭ್ಯಗಳಿರಬೇಕು. |
| | (*3*) | | The State Government may, by rules, prescribe the types of places that can be designated as place of safety under sub-section (*1*) and the facilities and services that may be provided therein. | | ರಾಜ್ಯ ಸರ್ಕಾರಗಳು ಉಪ ಸೆಕ್ಷನ್ (1)ರಡಿಯಲ್ಲಿ ಸುರಕ್ಷಿತ ಸ್ಥಳವೆಂದು ನೇಮಿಸಲಾದ ಸ್ಥಳದ ವಿಧ ಮತ್ತು ಅಲ್ಲಿ ದೊರೆಯಲಿರುವ ಸೌಲಭ್ಯಗಳು ಮತ್ತು ಸೇವೆಗಳನ್ನು ತನ್ನ ನಿಯಮವನ್ನು ರೂಪಿಸುವುದರ ಮೂಲಕ ವಿವರಿಸಬೇಕು. |
| **Sec** | | | **Children's Home.** | | **ಮಕ್ಕಳ ಗೃಹ/ನಿಲಯಗಳು** |
| **50** | (*1*) | | The State Government may establish and maintain, in every district or group of districts, either by itself or through voluntary or non-governmental organisations, Children's Homes, which shall be registered as such, for the placement of children in need of care and protection for their care, treatment, education, training, development and rehabilitation. | | ಪೋಷಣೆ ಮತ್ತು ರಕ್ಷಣೆ ಇರುವ ಮಕ್ಕಳ ಪ್ರಕರಣಗಳು ವಿಚಾರಣೆ ಆಗುತ್ತಿದ್ದ ಕಾಲದಲ್ಲಿ ಮಕ್ಕಳನ್ನು ಸ್ವೀಕರಿಸಲು ಮತ್ತು ಆ ನಂತರ ಅವರ ಪೋಷಣೆ, ರಕ್ಷಣೆ, ಚಿಕಿತ್ಸೆ, ಶಿಕ್ಷಣ, ತರಬೇತಿ, ಅಭಿವೃದ್ಧಿ ಮತ್ತು ಪುನರ್ವಸತಿಗಾಗಿ, ಸರ್ಕಾರವು ಸ್ವಯಂ ಆಗಿ ಅಥವಾ ಸ್ವಯಂಸೇವಾ ಸಂಘಟನೆಗಳೊಡನೆ ಸಹಕಾರದಿಂದ ಪ್ರತಿ ಜಿಲ್ಲೆಯಲ್ಲಿ ಅಥವಾ ಜಿಲ್ಲೆಗಳ ಸಮೂಹಕ್ಕಾಗಿ ನೋಂದಾಯಿತ ಮಕ್ಕಳ ನಿಲಯಗಳನ್ನು ಸ್ಥಾಪಿಸಬಹುದು. |
| | (*2*) | | The State Government shall designate any Children's Home as a home fit for children with special needs delivering specialised services, depending on requirement | | ರಾಜ್ಯ ಸರ್ಕಾರವು ಅವಶ್ಯಕತೆಗೆ ತಕ್ಕಂತೆ ಯಾವುದೇ ಮಕ್ಕಳ ನಿಲಯವನ್ನು ವಿಶೇಷ ಅವಶ್ಯಕತೆಯುಳ್ಳ ಮಕ್ಕಳಿಗೆ ವಿಶೇಷ ಸೇವೆಗಳನ್ನು ಒದಗಿಸಲು ಅರ್ಹ ನಿಲಯವೆಂದು ನೇಮಿಸಬಹುದು. |
| | (*3*) | | The State Government may, by rules, provide for the monitoring and management of Children's Homes including the standards and the nature of services to be provided by them, based on individual care plans for each child. | | ಪ್ರತಿಯೊಂದು ಮಗುವಿನ ವ್ಯಕ್ತಿಗಳ ಯೋಜನೆ ಆಧಾರದ ಮೇಲೆ ಮಕ್ಕಳ ನಿಲಯದ ಗುಣಮಟ್ಟ ಮತ್ತು ಒದಗಿಸುವ ಸೇವೆಗಳ ವಿಧಾನಗಳನ್ನು ಸೇರಿದಂತೆ ಉಸ್ತುವಾರಿ ಮತ್ತು ನಿರ್ವಹಣೆಗಾಗಿ ರಾಜ್ಯ ಸರ್ಕಾರವು ನಿಯಮವನ್ನು ರೂಪಿಸಬಹುದು. |
| **Sec** | | | **Fit facility.** | | **ಅರ್ಹ / ಸೂಕ್ತ ಸೌಲಭ್ಯ** |
| **51** | (*1*) | | The Board or the Committee shall recognise a facility being run by a Governmental organisation or a voluntary or non-governmental organisation registered under any law for the time being in force to | | ಮಂಡಳಿ ಮತ್ತು ಸಮಿತಿಯು ಪ್ರಸ್ತುತ ಚಾಲ್ತಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೋಂದಾಯಿಸಿದ ಸರ್ಕಾರದಿಂದ ನಡೆಸುತ್ತಿರುವ ಅಥವಾ ಸ್ವಯಂಸೇವಾ ಅಥವಾ ಸರ್ಕಾರೇತರ ಸಂಸ್ಥೆಗಳಲ್ಲಿರುವ ಸೌಲಭ್ಯಗಳ ಕುರಿತು |

| | | | | |
|---|---|---|---|---|
| | | | be fit to temporarily take the responsibility of a child for a specific purpose after due inquiry regarding the suitability of the facility and the organisation to take care of the child in such manner as may be prescribed. | ನಿರ್ದಿಷ್ಟಪಡಿಸಿದಂತೆ ಮಗುವಿನ ಪೋಷಣೆಗೆ ಅವಶ್ಯವಾದ ಸೂಕ್ತ ಸೌಲಭ್ಯಗಳು ನಿರ್ದಿಷ್ಟ ಉದ್ದೇಶಕ್ಕಾಗಿ ದೊರೆಯುತ್ತವೆಯೇ ಎಂಬುದನ್ನು ನಿಗದಿಪಡಿಸಿದ ವಿಧಿವಿಧಾನಗಳಂತೆ ಸಾಕಷ್ಟು ತನಿಖೆ ನಡೆಸಿದ ನಂತರ ಮಗುವಿನ ಜವಾಬ್ದಾರಿಯನ್ನು ತಾತ್ಕಾಲಿಕವಾಗಿ ಹೊರಲು ಅರ್ಹ ಎಂದು ಗುರುತಿಸಬಹುದು. |
| | (*2*) | | The Board or the Committee may withdraw the recognition under sub-section (*1*) for reasons to be recorded in writing. | ಮಂಡಳಿ ಅಥವಾ ಸಮಿತಿಯು ಉಪ ಸೆಕ್ಷನ್ (1)ರ ಅಡಿಯಲ್ಲಿ ಈ ಗುರುತಿಸುವಿಕೆಯನ್ನು ಹಿಂಪಡೆಯಬಹುದು ಮತ್ತು ಅದಕ್ಕೆ ಕಾರಣಗಳಲ್ಲಿ ಬರವಣಿಗೆಯಲ್ಲಿ ದಾಖಲಿಸಬೇಕು. |
| **Sec 52** | | | **Fit person.** | **ಅರ್ಹ ವ್ಯಕ್ತಿ** |
| | (*1*) | | The Board or the Committee shall, after due verification of credentials, recognize any person fit to temporarily receive a child for care, protection and treatment of such child for a specified period and in the manner as may be prescribed. | ಮಂಡಳಿ ಅಥವಾ ಸಮಿತಿಯು ಎಲ್ಲಾ ದಾಖಲೆಗಳನ್ನು ವಿವರವಾಗಿ ಪರಿಶೀಲಿಸಿದ ನಂತರ ಮಗುವಿನ ಪೋಷಣೆ, ರಕ್ಷಣೆ ಮತ್ತು ಚಿಕಿತ್ಸೆಗಾಗಿ ನಿರ್ದಿಷ್ಟ ಪಡಿಸಿದ ವಿಧಿವಿಧಾನಗಳ ಮೂಲಕ ನಿಗದಿತ ಅವಧಿಗೆ ತಾತ್ಕಾಲಿಕವಾಗಿ ಮಗುವನ್ನು ಇರಿಸಿಕೊಳ್ಳಲು ಅರ್ಹ ವ್ಯಕ್ತಿಯನ್ನು ಗುರುತಿಸಬೇಕು. |
| | (*2*) | | The Board or Committee, as the case may be, may withdraw the recognition granted under sub-section (*1*) for reasons to be recorded in writing. | ಮಂಡಳಿ ಅಥವಾ ಸಮಿತಿಯು ಉಪ ಸೆಕ್ಷನ್ (1)ರ ಅಡಿಯಲ್ಲಿ ಹೀಗೆ ನೀಡಿದ ಗುರುತಿಸುವಿಕೆಯನ್ನು ಹಿಂಪಡೆಯಬಹುದು ಮತ್ತು ಅದಕ್ಕೆ ಕಾರಣಗಳಲ್ಲಿ ಬರವಣಿಗೆಯಲ್ಲಿ ದಾಖಲಿಸಬೇಕು. |
| **Sec 53** | | | **Rehabilitation and reintegration services in institutions registered under this Act and Management thereof.** | **ಈ ಕಾಯಿದೆಯಡಿ ದಾಖಲಾದ ಸಂಸ್ಥೆಗಳಲ್ಲಿ ನೀಡುವ ಪುನರ್ವಸತಿ ಮತ್ತು ಪುನಃಸ್ಥಾಪನೆ ಸೇವೆಗಳು ಮತ್ತು ಅವುಗಳ ನಿರ್ವಹಣೆ** |
| | (*1*) | | The services that shall be provided, by the institutions registered under this Act in the process of rehabilitation and re-integration of children, shall be in such manner as may be prescribed, which may include— | ಈ ಕಾಯ್ದೆಯಡಿ ನೋಂದಾಯಿತವಾದ ಸಂಸ್ಥೆಯಲ್ಲಿ ಮಕ್ಕಳ ಪುನರ್ವಸತಿ ಮತ್ತು ಪುನರ್ಮಿಲದ ಪ್ರಕ್ರಿಯೆಯಲ್ಲಿ ದೊರೆಯುವ ಸೇವೆಗಳು ಈ ಕೆಳಗೆ ನಿರ್ಧಿಷ್ಟಪಡಿಸಿದ ವಿಧಿವಿಧಾನಗಳನ್ನು ಒಳಗೊಂಡಿರಬೇಕು – |
| | | | i. basic requirements such as food, shelter, clothing and medical attention as per the prescribed standards;<br>ii. equipment such as wheel-chairs, prosthetic devices, hearing aids, Braille kits, or any other suitable aids and appliances as required, for children with special needs;<br>iii. appropriate education, including supplementary education, special education, and appropriate education for children with special needs: Provided that for children between the age of six to fourteen years, the provisions of the Right of Children to Free and Compulsory Education Act, 2009 shall apply;<br>iv. skill development;<br>v. occupational therapy and life skill education;<br>vi. mental health interventions, including counselling specific to the need of the child; | (i) ಆಹಾರ, ಸೂರು, ಬಟ್ಟೆ ಮತ್ತು ವೈದ್ಯಕೀಯ ಸೇವೆಯಂತಹ ನಿರ್ದಿಷ್ಟಪಡಿಸಿದ ಗುಣಮಟ್ಟದ ಮೂಲ ಸೌಕರ್ಯಗಳನ್ನು ಹೊಂದಿರಬೇಕು;<br>(ii) ವಿಶೇಷ ಅವಶ್ಯಕತೆಯುಳ್ಳ ಮಕ್ಕಳಿಗಾಗಿ ಗಾಲಿ ಕುರ್ಚಿ, ಚಲನಾ ಸಾಧನಗಳು, ಶ್ರವಣ ಸಾಧನ, ಬ್ರೈಲ್ ಪೆಟ್ಟಿಗೆ ಅಥವಾ ಅವಶ್ಯವಿರುವ ಇನ್ನಿತರ ಸೂಕ್ತ ನೆರವು ಸಾಧನಗಳು ಮತ್ತು ಉಪಕರಣಗಳನ್ನು ಹೊಂದಿರಬೇಕು;<br>(iii) ವಿಶೇಷ ಅವಶ್ಯಕತೆಯುಳ್ಳ ಮಕ್ಕಳಿಗಾಗಿ ಪೂರಕ ಶಿಕ್ಷಣ, ವಿಶೇಷ ಶಿಕ್ಷಣ ಮತ್ತು ಸೂಕ್ತ ಶಿಕ್ಷಣವೂ ಸೇರಿದಂತೆ ಅಗತ್ಯವಿರುವ ಶಿಕ್ಷಣದ ವ್ಯವಸ್ಥೆಯಿರಬೇಕು; ಆದರೆ ಆರರಿಂದ ಹದಿನಾರು ವಯೋಮಾನದ ಮಕ್ಕಳಿಗೆ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆಯ ಆಶಯಗಳು ಅನ್ವಯವಾಗುತ್ತವೆ;<br>(iv) ವೃತ್ತಿ ತರಬೇತಿ;<br>(v) ಔದ್ಯೋಗಿಕ ಕೌಶಲ್ಯ ಮತ್ತು ಜೀವನ ಕೌಶಲ್ಯ ಶಿಕ್ಷಣ;<br>(vi) ಮಗುವಿಗೆ ಅವಶ್ಯವಿರುವ ನಿರ್ಧಿಷ್ಟ ಸಮಾಲೋಚನೆಯೂ ಸೇರಿದಂತೆ ಮಾನಸಿಕ ಆರೋಗ್ಯ ಮಧ್ಯವರ್ತಿಕೆಗಳು;<br>(vii) ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳೂ ಸೇರಿದಂತೆ ಮನರಂಜನಾ ಚಟುವಟಿಕೆಗಳು; |

| | | | | | |
|---|---|---|---|---|---|
| | | | vii. recreational activities including sports and cultural activities;<br>viii. legal aid where required;<br>ix. referral services for education, vocational training, de-addiction, treatment of diseases where required;<br>x. case management including preparation and follow up of individual care plan;<br>xi. birth registration;<br>xii. assistance for obtaining the proof of identity, where required; and<br>xiii. any other service that may reasonably be provided in order to ensure the well-being of the child, either directly by the State Government, registered or fit individuals or institutions or through referral services. | | (viii) ಅವಶ್ಯವಿದ್ದಲ್ಲಿ ಕಾನೂನು ನೆರವು;<br>(ix) ಅವಶ್ಯವಿದ್ದಲ್ಲಿ ಶಿಕ್ಷಣ, ವೃತ್ತಿ ತರಬೇತಿ, ವ್ಯಸನ ಮುಕ್ತತೆ, ಕಾಯಿಲೆಗಳಿಗೆ ಚಿಕಿತ್ಸೆಗಳಿಗೆ ನಿರ್ದೇಶನಾ ಸೇವೆಗಳು;<br>(x) ವ್ಯಕ್ತಿಗತ ಪೋಷಣಾ ಯೋಜನೆಯ ತಯ್ಯಾರಿ ಮತ್ತು ಅನುಸರಣೆಯೂ ಸೇರಿದಂತೆ ಪ್ರಕರಣ ನಿರ್ವಹಣೆಯ ವ್ಯವಸ್ಥೆ;<br>(xi) ಜನನ ನೋಂದಣಿ;<br>(xii) ಅವಶ್ಯವಿದ್ದಲ್ಲಿ ಗುರುತಿನ ಸಾಕ್ಷಿಯನ್ನು ಪಡೆಯಲು ನೆರವು; ಮತ್ತು<br>(xiii) ಮಕ್ಕಳ ಒಳಿತನ್ನು ಖಾತ್ರಿಪಡಿಸಲು ರಾಜ್ಯ ಸರ್ಕಾರದಿಂದ, ನೋಂದಾಯಿತರಿಂದ ನೇರವಾಗಿ ಅಥವಾ ಅರ್ಹ ವ್ಯಕ್ತಿಗಳು ಅಥವಾ ಸಂಸ್ಥೆಗಳು ಅಥವಾ ನಿರ್ದೇಶಿತ ಸೇವೆಗಳ ಮೂಲಕ ಒದಗಿಸಲೇಬೇಕಾದ ಸೇವೆಗಳನ್ನು ಒದಗಿಸುವುದು. |
| | (2) | | Every institution shall have a Management Committee, to be set up in a manner as may be prescribed, to manage the institution and monitor the progress of every child. | | ಪ್ರತಿಯೊಂದು ಸಂಸ್ಥೆಗಳು ನಿರ್ದಿಷ್ಟಪಡಿಸಿದ ವಿಧಿವಿಧಾನಗಳಲ್ಲಿ ಸಂಸ್ಥೆಯ ನಿರ್ವಹಣೆ ಮತ್ತು ಪ್ರತಿಯೊಂದು ಮಗುವಿನ ಪ್ರಗತಿಯನ್ನು ಉಸ್ತುವಾರಿ ಮಾಡಲು ನಿರ್ವಹಣಾ ಸಮಿತಿಯನ್ನು ಹೊಂದಿರಬೇಕು. |
| | (3) | | The officer in-charge of every institution, housing children above six years of age, shall facilitate setting up of children's committees for participating in such activities as may be prescribed, for the safety and well-being of children in the institution. | | ಪ್ರತಿಯೊಂದು ಸಂಸ್ಥೆಯ ಮೇಲ್ವಿಚಾರಕ ಅಧಿಕಾರಿಯು ಸಂಸ್ಥೆಯಲ್ಲಿರುವ ಮಕ್ಕಳ ರಕ್ಷಣೆ ಮತ್ತು ಒಳಿತಿಗಾಗಿ ನಿರ್ದಿಷ್ಟಪಡಿಸಿದ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುವ ಸಲುವಾಗಿ ಆರು ವರ್ಷದ ಮೇಲಿನ ವಯೋಮಾನದ ಮಕ್ಕಳನ್ನು ಒಳಗೊಂಡ ಮಕ್ಕಳ ಸಮಿತಿಯನ್ನು ರಚಿಸಲು ನೆರವಾಗಬೇಕು. |
| **Sec 54** | | | **Inspection of institutions registered under this Act.** | | **ಈ ಕಾಯಿದೆಯಡಿ ದಾಖಲಾದ ಸಂಸ್ಥೆಗಳ ಪರಿವೀಕ್ಷಣೆ** |
| | (1) | | The State Government shall appoint inspection committees for the State and district, as the case may be, for all institutions registered or recognised to be fit under this Act for such period and for such purposes, as may be prescribed. | | ಈ ಕಾಯಿದೆಯಡಿ ನೋಂದಾಯಿತವಾದ ಅಥವಾ ಗುರುತಿಸಲ್ಪಟ್ಟ ಎಲ್ಲ ಅರ್ಹ ಸಂಸ್ಥೆಗಳಿಗಾಗಿ ರಾಜ್ಯ ಸರ್ಕಾರವು ರಾಜ್ಯ ಮತ್ತು ಜಿಲ್ಲೆಗಳಿಗಾಗಿ 'ಪರಿಶೀಲನಾ ಸಮಿತಿ'ಗಳನ್ನು ನಿರ್ದಿಷ್ಟ ಅವಧಿಗೆ ಮತ್ತು ಉದ್ದೇಶಕ್ಕಾಗಿ ನೇಮಿಸಬೇಕು. |
| | (2) | | Such inspection committees shall mandatorily conduct visits to all facilities housing children in the area allocated, at least once in three months in a team of not less than three members, of whom at least one shall be a woman and one shall be a medical officer, and submit reports of the findings of such visits within a week of their visit, to the District Child Protection Units or State Government, as the case may be, for further action. | | ಅಂತಹ ಪರಿಶೀಲನಾ ಸಮಿತಿಗಳು ಆಯಾ ನಿರ್ದಿಷ್ಟ ಪ್ರದೇಶದಲ್ಲಿ ಮಕ್ಕಳನ್ನು ಇಟ್ಟುಕೊಳ್ಳುವ ವ್ಯವಸ್ಥೆಗಳಿರುವ ಎಲ್ಲ ವ್ಯವಸ್ಥೆಗಳನ್ನು ಕನಿಷ್ಠ ಮೂರು ಜನರ ತಂಡವಾಗಿ, ಅದರಲ್ಲಿ ಕನಿಷ್ಠ ಒಬ್ಬರಾದರೂ ಮಹಿಳೆಯಿರುವ, ಒಬ್ಬರು ಆರೋಗ್ಯಾಧಿಕಾರಿಯಿದ್ದು, ಕಡ್ಡಾಯವಾಗಿ ಪ್ರತಿ ಮೂರು ತಿಂಗಳಿಗಾದರೂ ಒಮ್ಮೆ ಭೇಟಿ ಕೊಟ್ಟು, ಹಾಗೆ ಭೇಟಿ ಕೊಟ್ಟ ಒಂದು ವಾರದೊಳಗೆ ಅಲ್ಲಿ ಕಂಡುಕೊಂಡದ್ದನ್ನು ಕುರಿತು ವರದಿಯನ್ನು ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಮುಂದಿನ ಕ್ರಮಗಳನ್ನು ಕೈಗೊಳ್ಳಲು ನೀಡಬೇಕು. |
| | (3) | | On the submission of the report by the inspection committee within a week of the inspection, appropriate action shall be taken within a month by the District Child Protection Unit or the State Government and a compliance report shall be submitted to the State Government. | | ಪರಿಶೀಲನೆ ನಡೆಸಿದ ಒಂದು ವಾರದೊಳಗೆ ಆ ಸಮಿತಿಯು ನೀಡುವ ವರದಿಯನ್ನು ಆಧರಿಸಿ ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕದಿಂದ ಅಥವಾ ರಾಜ್ಯ ಸರ್ಕಾರದಿಂದ ಸೂಕ್ತ ಕ್ರಮ ಕೈಗೊಂಡು ಆ ಕುರಿತು ರಾಜ್ಯ ಸರ್ಕಾರಕ್ಕೆ ಕೈಗೊಂಡ ಕ್ರಮ ಕುರಿತು ವರದಿಯನ್ನು ರಾಜ್ಯ ಸರ್ಕಾರಕ್ಕೆ ನೀಡಬೇಕು. |

| | | | | | |
|---|---|---|---|---|---|
| **Sec 55** | | | **Evaluation of functioning of structures.** | | **ವ್ಯವಸ್ಥೆಗಳ ಕಾರ್ಯನಿರ್ವಹಣೆ ಕುರಿತು ಮೌಲ್ಯಮಾಪನ** |
| | (*1*) | | The Central Government or State Government may independently evaluate the functioning of the Board, Committee, special juvenile police units, registered institutions, or recognised fit facilities and persons, at such period and through such persons or institutions as may be prescribed by that Government. | | ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಮಂಡಳಿ, ಸಮಿತಿ, ಮಕ್ಕಳ ವಿಶೇಷ ಪೋಲಿಸ್ ಘಟಕಗಳು, ನೋಂದಾಯಿತ ಸಂಸ್ಥೆಗಳು ಅಥವಾ ಗುರುತಿಸಿದ ಅರ್ಹ ಸೌಲಭ್ಯಗಳು ಮತ್ತು ವ್ಯಕ್ತಿಗಳ ಕಾರ್ಯವೈಖರಿಯನ್ನು ಸರ್ಕಾರ ನಿರ್ದಿಷ್ಟಪಡಿಸಿದಂತೆ ತಾನೇ ಸ್ವತಃ ಅಥವಾ ಅಂತಹ ವ್ಯಕ್ತಿಗಳ ಅಥವಾ ಸಂಸ್ಥೆಗಳ ಮೂಲಕ ಮೌಲ್ಯಮಾಪನ ಮಾಡಬಹುದು. |
| | (*2*) | | In case such independent evaluation is conducted by both the Governments, the evaluation made by the Central Government shall prevail. | | ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರೆಡೂ ಸ್ವತಃ ಮೌಲ್ಯಮಾಪನವನ್ನು ಮಾಡಿದ್ದಲ್ಲಿ, ಕೇಂದ್ರ ಸರ್ಕಾರ ಮಾಡಿದ ಮೌಲ್ಯಮಾಪನವು ಅಂತಿಮವಾಗುತ್ತದೆ. |

# Chapter VIII Adoption ದತ್ತು

| | | | | |
|---|---|---|---|---|
| **Sec** | | | **Adoption.** | **ದತ್ತು** |
| **56** | (1) | | Adoption shall be resorted to for ensuring right to family for the orphan, abandoned and surrendered children, as per the provisions of this Act, the rules made there under and the adoption regulations framed by the Authority. | ಯಾವ ಮಕ್ಕಳು ಅನಾಥರೋ ಅಥವಾ ಎಲ್ಲೋ ಬಿಟ್ಟು ಹೋಗಲ್ಪಟ್ಟ (ತ್ಯಜಿಸಲ್ಪಟ್ಟ) ಅಥವಾ ನಿರ್ದಿಷ್ಟ ಪಡಿಸಿದ ವಿಧಾನದಲ್ಲಿ ಮಕ್ಕಳನ್ನು ಅವರ ತಾಯಿ/ತಂದೆ ಅಥವಾ ಇಬ್ಬರೂ ಸೇರಿ ಪರಿತ್ಯಜಿಸುತ್ತಾರೋ ಅಂತಹ ಮಕ್ಕಳನ್ನು ಈ ಕಾಯ್ದೆಯಡಿ ನಿಯಮಗಳನ್ನು ರೂಪಿಸಿ ಮತ್ತು ಪ್ರಾಧಿಕಾರದಿಂದ ನಿಯಂತ್ರಣ ಚೌಕಟ್ಟನ್ನು ಅಳವಡಿಕೊಂಡು ಮಗುವಿನ ಕೌಟುಂಬಿಕ ಹಕ್ಕನ್ನು ಖಾತ್ರಿಗೊಳಿಸಲು ದತ್ತುವನ್ನು ಬಳಸಬೇಕು. |
| | (2) | | Adoption of a child from a relative by another relative, irrespective of their religion, can be made as per the provisions of this Act and the adoption regulations framed by the Authority. | ಮಗುವಿನ ದತ್ತಕವನ್ನು ಸಂಬಂಧಿಕರಿಂದ ಸಂಬಂಧಿಕರಿಗೆ, ಅವರು ಯಾವುದೇ ಧರ್ಮಾನುಯಾಯಿಗಳಾಗಿದ್ದರೂ ಈ ಕಾಯ್ದೆಯಲ್ಲಿ ಹೇಳಿರುವಂತೆ ಮತ್ತು ಪ್ರಾಧಿಕಾರವು ದತ್ತು ನಿಯಂತ್ರಣ ಪ್ರಾಧಿಕಾರವು ನಿರ್ಮಿಸಿರುವ ನಿಯಮಗಳಿಗನುಗುಣವಾಗಿ ದತ್ತು ನೀಡಬಹುದು. |
| | (3) | | Nothing in this Act shall apply to the adoption of children made under the provisions of the Hindu Adoption and Maintenance Act, 1956. | ಹಿಂದು ದತ್ತಕ ಮತ್ತು ನಿರ್ವಹಣಾ ಕಾಯ್ದೆ 1956 ಅಡಿಯಲ್ಲಿ ನೀಡಿದ ಮಕ್ಕಳ ದತ್ತುವಿಗೆ ಈ ಕಾಯ್ದೆಯಡಿ ಸೂಚಿಸಿರುವ ಯಾವುದೇ ವಿಚಾರಗಳು ಅನ್ವಯವಾಗುವುದಿಲ್ಲ. |
| | (4) | | All inter-country adoptions shall be done only as per the provisions of this Act and the adoption regulations framed by the Authority. | ಎಲ್ಲಾ ಅಂತರ್ದೇಶೀಯ (ವಿದೇಶೀ) ದತ್ತಕವನ್ನು ಈ ಕಾಯ್ದೆಯಲ್ಲಿ ಸೂಚಿಸಿರುವಂತೆಯೇ ಮತ್ತು ಪ್ರಾಧಿಕಾರವು ನಿರ್ಮಿಸಿರುವ ದತ್ತು ನಿಯಂತ್ರಣ ನಿಯಮಗಳಂತೆಯೇ ನೀಡಬೇಕು. |
| | (5) | | Any person, who takes or sends a child to a foreign country or takes part in any arrangement for transferring the care and custody of a child to another person in a foreign country without a valid order from the Court, shall be punishable as per the provisions of section 80. | ಯಾವುದೇ ವ್ಯಕ್ತಿ ವಿದೇಶದಿಂದ ಮಗುವನ್ನು ತೆಗೆದುಕೊಂಡಲ್ಲಿ ಅಥವಾ ಕಳುಹಿಸಿದ್ದಲ್ಲಿ ಅಥವಾ ನ್ಯಾಯಾಲಯದ ಸೂಕ್ತ ಆದೇಶವಿಲ್ಲದೆ ಮಗುವನ್ನು ಪೋಷಣೆ ಮತ್ತು ಸುಪರ್ದಿಯನ್ನು ಪರ ರಾಷ್ಟ್ರದ ವ್ಯಕ್ತಿಗೆ ವರ್ಗಾಯಿಸುವ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದಲ್ಲಿ ಈ ಕಾಯ್ದೆಯ ಸೆಕ್ಷನ್ 80ರ ಅಡಿಯಲ್ಲಿ ದಂಡನೆಗೆ ಅರ್ಹರಾಗುತ್ತಾರೆ. |
| | | | | |
| **Sec 57** | | | **Eligibility of prospective adoptive parents.** | **ಸಂಭವನೀಯ/ಭಾವೀ ದತ್ತು ಪೋಷಕರಾಗಲು ಅರ್ಹತೆಗಳು** |
| | (1) | | The prospective adoptive parents shall be physically fit, financially sound, mentally alert and highly motivated to adopt a child for providing a good upbringing to him. | ದತ್ತು ಪೋಷಕರಾಗುವವರು ದೈಹಿಕವಾಗಿ ಸದೃಢರಾಗಿದ್ದು, ಆರ್ಥಿಕ ಅನುಕೂಲತೆ, ಮಾನಸಿಕ ಜಾಗ್ರತೆ ಮತ್ತು ಮಗುವಿಗೆ ಉತ್ತಮ ಭವಿಷ್ಯವನ್ನು ರೂಪಿಸುವ ಉನ್ನತ ಮನೋಭಾವವನ್ನು ಹೊಂದಿರಬೇಕು. |
| | (2) | | In case of a couple, the consent of both the spouses for the adoption shall be required. | ದಂಪತಿಗಳಾಗಿದ್ದಲ್ಲಿ ಇಬ್ಬರ ಒಪ್ಪಿಗೆಯೂ ದತ್ತಕಕ್ಕೆ ಅವಶ್ಯವಾಗುತ್ತದೆ. |
| | (3) | | A single or divorced person can also adopt, subject to fulfillment of the criteria and in accordance with the provisions of adoption regulations framed by the Authority. | ಎಲ್ಲಾ ಮಾನದಂಡಗಳನ್ನು ಪೂರೈಸಿದ ಮತ್ತು ಪ್ರಾಧಿಕಾರವು ರೂಪಿಸಿದ ದತ್ತು ನಿಯಂತ್ರಣ ನಿಯಮಗಳಿಗೆ ಅನುಗುಣವಾಗಿ ಏಕ ಪೋಷಕ, ವಿವಾಹ ವಿಚ್ಛೇದಿತ ವ್ಯಕ್ತಿಗಳೂ ಸಹ ದತ್ತು ಪಡೆಯಬಹುದು. |
| | (4) | | A single male is not eligible to adopt a girl child. | ಏಕ ಪುರುಷರು ಹೆಣ್ಣು ಮಗುವನ್ನು ದತ್ತು ಪಡೆಯಲು ಅರ್ಹರಲ್ಲ. |
| | (5) | | Any other criteria that may be specified in the adoption regulations framed by the Authority. | ಪ್ರಾಧಿಕಾರವು ರೂಪಿಸಿದ ಇನ್ನಿತರ ಯಾವುದೇ ದತ್ತು ನಿಯಂತ್ರಣ ಮಾನದಂಡಗಳು. |
| | | | | |

| | | | | |
|---|---|---|---|---|
| **Sec 58** | | | **Procedure for adoption by Indian prospective adoptive parents living in India.** | **ಭಾರತದಲ್ಲಿ ನೆಲಸಿರುವ ಭಾರತೀಯ ಭಾವೀ ದತ್ತು ಪೋಷಕರಿಗೆ ದತ್ತು ಪಡೆಯಲು ಪ್ರಕ್ರಿಯೆಗಳು** |
| | (*1*) | | Indian prospective adoptive parents living in India, irrespective of their religion, if interested to adopt an orphan or abandoned or surrendered child, may apply for the same to a Specialised Adoption Agency, in the manner as provided in the adoption regulations framed by the Authority. | ಭಾರತದಲ್ಲಿ ನೆಲೆಸಿರುವ ದತ್ತು ನಿರೀಕ್ಷೆಯಲ್ಲಿರುವ ಪೋಷಕರು ಯಾವುದೇ ಧರ್ಮದವರಾಗಿದ್ದರೂ ಸಹ ಅನಾಥ ಅಥವಾ ತ್ಯಜಿಸಿದ ಅಥವಾ ಒಪ್ಪಿಸಿದ ಮಗುವನ್ನು ದತ್ತು ತೆಗೆದುಕೊಳ್ಳಲು ಆಸಕ್ತರಾಗಿದ್ದಲ್ಲಿ ಪ್ರಾಧಿಕಾರವು ರೂಪಿಸಿದ ನಿಯಮಗಳ ಪ್ರಕಾರ ವಿಶೇಷ ದತ್ತು ಕೇಂದ್ರಕ್ಕೆ ಇದಕ್ಕಾಗಿ ಅರ್ಜಿ/ಮನವಿ ಸಲ್ಲಿಸಬೇಕು. |
| | (*2*) | | The Specialised Adoption Agency shall prepare the home study report of the prospective adoptive parents and upon finding them eligible, will refer a child declared legally free for adoption to them along with the child study report and medical report of the child, in the manner as provided in the adoption regulations framed by the Authority. | ವಿಶೇಷ ದತ್ತು ಸಂಸ್ಥೆಯು ದತ್ತು ನಿರೀಕ್ಷೆಯಲ್ಲಿರುವ ಪೋಷಕರ ಗೃಹ ಅಧ್ಯಯನ ವರದಿಯನ್ನು ಸಿದ್ಧಪಡಿಸಿ, ಅದರ ಆಧಾರದ ಮೇಲೆ ಅವರು ಅರ್ಹರಾಗಿದ್ದಲ್ಲಿ ಪ್ರಾಧಿಕಾರವು ದತ್ತು ಕುರಿತು ರೂಪಿಸಿದ ನಿಯಮಗಳ ವಿಧಿವಿಧಾನಗಳ ಪ್ರಕಾರ ಅವರಿಗೆ ನಿರ್ದಿಷ್ಟ ಮಗುವಿನ ಅಧ್ಯಯನ ವರದಿ ಮತ್ತು ವೈದ್ಯಕೀಯ ವರದಿಯ ಸಹಿತ ಮಗುವನ್ನು ದತ್ತುವಿಗಾಗಿ ಪರಿಗಣಿಸಲು ಸೂಚಿಸಬಹುದು. |
| | (*3*) | | On the receipt of the acceptance of the child from the prospective adoptive parents along with the child study report and medical report of the child signed by such parents, the Specialised Adoption Agency shall give the child in pre-adoption foster care and file an application in the court for obtaining the adoption order, in the manner as provided in the adoption regulations framed by the Authority. | ದತ್ತು ನಿರೀಕ್ಷೆಯಲ್ಲಿರುವ ಪೋಷಕರು ಮಗುವಿನ ಅಧ್ಯಯನ ವರದಿ ಮತ್ತು ವೈದ್ಯಕೀಯ ವರದಿಗಳನ್ನು ಪರಿಶೀಲಿಸಿ, ಸಹಿ ಮಾಡಿ ಮಗುವನ್ನು ಒಪ್ಪಿದಾಗ ವಿಶೇಷ ದತ್ತು ಸಂಸ್ಥೆಯು ಮಗುವನ್ನು ದತ್ತು ಪೂರ್ವ ಫಾಸ್ಟರ್ ಕೇರ್‌ಗೆ ನೀಡಿ, ಪ್ರಾಧಿಕಾರವು ರೂಪಿಸಿರುವ ವಿಧಿವಿಧಾನಗಳಂತೆ, ದತ್ತು ಅನುಮತಿಗಾಗಿ ಅವರ ಅರ್ಜಿಯನ್ನು ಸಂಬಂಧಿಸಿದ ನ್ಯಾಯಾಲಯದಲ್ಲಿ ಸಲ್ಲಿಸಬೇಕು. |
| | (*4*) | | On the receipt of a certified copy of the court order, the Specialised Adoption Agency shall send immediately the same to the prospective adoptive parents. | ನ್ಯಾಯಾಲಯದ ಆದೇಶದ ಪ್ರಾಮಾಣಿಕರಿಸಿದ ಪ್ರತಿಯನ್ನು ಪಡೆದ ನಂತರ ವಿಶೇಷ ದತ್ತು ಸಂಸ್ಥೆಯು ತಕ್ಷಣ ಅದನ್ನು ಮಗುವನ್ನು ದತ್ತುವಿನಲ್ಲಿ ಅಪೇಕ್ಷಿಸಿದ್ದ ಪೋಷಕರಿಗೆ ಕಳುಹಿಸಬೇಕು. |
| | (*5*) | | The progress and wellbeing of the child in the adoptive family shall be followed up and ascertained in the manner as provided in the adoption regulations framed by the Authority. | ಪ್ರಾಧಿಕಾರವು ದತ್ತು ಕುರಿತು ರೂಪಿಸಿದ ನಿಯಮಗಳ ವಿಧಿವಿಧಾನಗಳ ಪ್ರಕಾರ ದತ್ತು ಕುಟುಂಬದಲ್ಲಿರುವ ಮಗುವಿನ ಪ್ರಗತಿ ಮತ್ತು ಒಳಿತನ್ನು ಅನುಸರಣೆ ಮಾಡಬೇಕು ಮತ್ತು ಮಗುವಿನ ಸ್ಥಿತಿಯನ್ನು ಅವಲೋಕಿಸಿ ಖಾತರಿ ಮಾಡಿಕೊಳ್ಳಬೇಕು. |
| | | | | |
| **Sec 59** | | | **Procedure for inter-country adoption of an orphan or abandoned or surrendered child.** | **ಅನಾಥ ಅಥವಾ ತೊರೆಯಲ್ಪಟ್ಟ ಅಥವಾ ಒಪ್ಪಿಸಿದ ಮಕ್ಕಳನ್ನು ಅಂತಾರಾಷ್ಟ್ರೀಯ ದತ್ತುವಿಗೆ ಪ್ರಕ್ರಿಯೆಗಳು** |
| | (*1*) | | If an orphan or abandoned or surrendered child could not be placed with an Indian or non-resident Indian prospective adoptive parent despite the joint effort of the Specialised Adoption Agency and State Agency within sixty days from the date the child has been declared legally free for adoption, such child shall be free for inter-country adoption:<br><br>Provided that children with physical and mental disability, siblings and children above five years of age may be given preference over other children for such inter-country adoption, in accordance with the adoption regulations, as may be framed by the Authority. | ಅನಾಥ ಅಥವಾ ತೊರೆಯಲ್ಪಟ್ಟ ಅಥವಾ ಒಪ್ಪಿಸಿದ ಮಗುವನ್ನು ದತ್ತು ನೀಡಲು ಮುಕ್ತ ಎಂದು ಘೋಷಿಸಿದ ದಿನದಿಂದ ಅರವತ್ತು ದಿನಗಳ ಒಳಗೆ ವಿಶೇಷ ದತ್ತು ಸಂಸ್ಥೆ ಮತ್ತು ರಾಜ್ಯ ಸಂಸ್ಥೆಗಳ ಜಂಟಿ ಪ್ರಯತ್ನದ ನಂತರವೂ ಭಾರತೀಯ ಅಥವಾ ಅನಿವಾಸಿ ಭಾರತೀಯರಿಗೆ ದತ್ತು ನೀಡಲು ಸಾಧ್ಯವಾಗದಿದ್ದಲ್ಲಿ ಅಂತಹ ಮಗುವನ್ನು ಅಂತಾರಾಷ್ಟ್ರೀಯ ದತ್ತುವಿಗೆ ಮುಕ್ತ ಎಂದು ಘೋಷಿಸಬೇಕು.<br><br>ಆದರೆ ದೈಹಿಕ ಮತ್ತು ಮಾನಸಿದ ವಿಕಲತೆ ಹೊಂದಿರುವವರು, ಒಡಹುಟ್ಟಿದವರು ಮತ್ತು ಐದು ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳಿಗೆ ಪ್ರಾಧಿಕಾರವು ರೂಪಿಸಿದ ದತ್ತು ನಿಯಮಾವಳಿಗಳ ಪ್ರಕಾರ ಅಂತಾರಾಷ್ಟ್ರೀಯ ದತ್ತುವಿಗೆ ಇತರೆ ಮಕ್ಕಳಿಗಿಂತ ಹೆಚ್ಚಿನ ಆದ್ಯತೆ ನೀಡಬಹುದು. |

| | | | | |
|---|---|---|---|---|
| | (2) | | An eligible non-resident Indian or overseas citizen of India or persons of Indian origin shall be given priority in inter-country adoption of Indian children. | ಅರ್ಹ ಅನಿವಾಸಿ ಭಾರತೀಯರು ಅಥವಾ ಸಾಗರೋತ್ತರ ಭಾರತೀಯರು ಅಥವಾ ಭಾರತೀಯ ಮೂಲದ ವ್ಯಕ್ತಿಗಳಿಗೆ ಭಾರತೀಯ ಮಗುವನ್ನು ಅಂತಾರಾಷ್ಟ್ರೀಯ ದತ್ತು ನೀಡಲು ಅದ್ಯತೆ ನೀಡಬೇಕು. |
| | (3) | | A non-resident Indian or overseas citizen of India, or person of Indian origin or a foreigner, who are prospective adoptive parents living abroad, irrespective of their religion, if interested to adopt an orphan or abandoned or surrendered child from India, may apply for the same to an authorised foreign adoption agency, or Central Authority or a concerned Government department in their country of habitual residence, as the case may be, in the manner as provided in the adoption regulations framed by the Authority. | ವಿದೇಶದಲ್ಲಿ ನೆಲೆಸಿರುವ ದತ್ತು ಪಡೆಯಲು ಅಪೇಕ್ಷಿಸುವ ಅನಿವಾಸಿ ಭಾರತೀಯರು ಅಥವಾ ಸಾಗರೋತ್ತರ ಭಾರತೀಯರು ಅಥವಾ ವಿದೇಶದ ಪ್ರಜೆಯಾಗಿರುವ ಭಾರತೀಯರು ಅಥವಾ ಭಾರತೀಯ ಮೂಲಕ ವ್ಯಕ್ತಿಗಳು ಅನಾಥ ಅಥವಾ ತ್ಯಜಿಸಿದ ಅಥವಾ ಒಪ್ಪಿಸಿದ ಮಗುವನ್ನು ದತ್ತು ಪಡೆಯಲು ಅಪೇಕ್ಷಿಸಿದರೆ ಅವರು ಯಾವುದೇ ಧರ್ಮದವರಾಗಿದ್ದರೂ ಸಹ ಪ್ರಾಧಿಕಾರವು ರೂಪಿಸಿದ ದತ್ತು ನಿಯಮಾವಳಿಗಳ ವಿಧಿವಿಧಾನಗಳ ಪ್ರಕಾರ ಅಯಾ ದೇಶದಲ್ಲಿ ಅಧಿಕೃತವಾಗಿ ಗುರುತಿಸಲ್ಪಟ್ಟ ವಿದೇಶಿ ದತ್ತು ಸಂಸ್ಥೆಗೆ ಅಥವಾ ಕೇಂದ್ರ ಪ್ರಾಧಿಕಾರಕ್ಕೆ ಅಥವಾ ಅವರು ನೆಲೆಸಿರುವ ದೇಶದ ಸಂಬಂಧಪಟ್ಟ ಸರ್ಕಾರಿ ಇಲಾಖೆಗೆ ಅರ್ಜಿಯನ್ನು ಸಲ್ಲಿಸಬೇಕು. |
| | (4) | | The authorised foreign adoption agency, or Central Authority, or a concerned Government department, as the case may be, shall prepare the home study report of such prospective adoptive parents and upon finding them eligible, will sponsor their application to Authority for adoption of a child from India, in the manner as provided in the adoption regulations framed by the Authority. | ಪ್ರಕರಣಗಳಿಗೆ ತಕ್ಕ ಹಾಗೆ ಅಧಿಕೃತ ವಿದೇಶಿ ದತ್ತು ಸಂಸ್ಥೆ ಅಥವಾ ಕೇಂದ್ರ ಪ್ರಾಧಿಕಾರ ಅಥವಾ ಸಂಬಂಧಪಟ್ಟ ಸರ್ಕಾರಿ ಇಲಾಖೆಗಳು ದತ್ತು ಅಪೇಕ್ಷಿಸಿದ ಪೋಷಕರ ಗೃಹ ವರದಿಯನ್ನು ಸಿದ್ಧಪಡಿಸಿ, ಅದರ ಆಧಾರದ ಮೇಲೆ ಅವರು ಅರ್ಹರೆಂದಾದಲ್ಲಿ ಪ್ರಾಧಿಕಾರವು ರೂಪಿಸಿದ ದತ್ತು ನಿಯಮಾವಳಿಗಳ ವಿಧಿವಿಧಾನಗಳ ಪ್ರಕಾರ ಭಾರತದಿಂದ ಮಗುವನ್ನು ದತ್ತು ಪಡೆಯಲು ಅವರ ಅರ್ಜಿಯನ್ನು ಪ್ರಾಧಿಕಾರಕ್ಕೆ ಕಳುಹಿಸಬೇಕು. |
| | (5) | | On the receipt of the application of such prospective adoptive parents, the Authority shall examine and if it finds the applicants suitable, then, it will refer the application to one of the Specialised Adoption Agencies, where children legally free for adoption are available. | ದತ್ತು ಅಪೇಕ್ಷಿಸಿದ ಪೋಷಕರಿಂದ ಇಂತಹ ಅರ್ಜಿಯನ್ನು ಪಡೆದ ಪ್ರಾಧಿಕಾರವು ಅರ್ಜಿಯನ್ನು ಪರಿಶೀಲಿಸಿ ಅದು ಸೂಕ್ತವೆಂದು ಕಂಡುಬಂದಲ್ಲಿ ದತ್ತು ನೀಡಲು ಮುಕ್ತ ಎಂದು ಘೋಷಿಸಿರುವ ಮಗು ಲಭ್ಯವಿರುವ ಯಾವುದಾದರು ವಿಶೇಷ ದತ್ತು ಸಂಸ್ಥೆಗೆ ಆ ಅರ್ಜಿಯನ್ನು ಕಳುಹಿಸಬೇಕು. |
| | (6) | | The Specialised Adoption Agency will match a child with such prospective adoptive parents and send the child study report and medical report of the child to such parents, who in turn may accept the child and return the child study and medical report duly signed by them to the said agency. | ವಿಶೇಷ ದತ್ತು ಸಂಸ್ಥೆಯು ದತ್ತು ಅಪೇಕ್ಷಿತ ಪೋಷಕರಿಗೆ ಸೂಕ್ತವಾದ ಮಗುವನ್ನು ಆರಿಸಿ ಆ ಪೋಷಕರಿಗೆ ಮಗುವಿನ ಅಧ್ಯಯನ ವರದಿ ಮತ್ತು ವೈದ್ಯಕೀಯ ವರದಿಯನ್ನು ನೀಡಬೇಕು, ಅವರು ಮಗುವನ್ನು ಒಪ್ಪಿಕೊಂಡು ಮಗುವಿನ ಅಧ್ಯಯನ ಮತ್ತು ವೈದ್ಯಕೀಯ ವರದಿಗೆ ಸಹಿ ಮಾಡಿ ಮೇಲೆ ಹೇಳಿದ ಸಂಸ್ಥೆಗೆ ಹಿಂದಿರುಗಿಸಬಹುದು. |
| | (7) | | On receipt of the acceptance of the child from the prospective adoptive parents, the Specialised Adoption Agency shall file an application in the court for obtaining the adoption order, in the manner as provided in the adoption regulations framed by the Authority. | ದತ್ತು ಅಪೇಕ್ಷಿತ ಪೋಷಕರಿಂದ ಮಗುವಿನ್ನು ಕುರಿತು ಒಪ್ಪಿಗೆಯನ್ನು ಪಡೆದ ವಿಶೇಷ ದತ್ತು ಸಂಸ್ಥೆಯು ದತ್ತು ಅದೇಶ ಪಡೆಯಲು ನ್ಯಾಯಾಲಯಕ್ಕೆ ಅರ್ಜಿಯನ್ನು ಪ್ರಾಧಿಕಾರವು ರೂಪಿಸಿದ ದತ್ತು ನಿಯಮಾವಳಿಗಳ ವಿಧಿವಿಧಾನಗಳ ಪ್ರಕಾರ ಸಲ್ಲಿಸಬೇಕು. |
| | (8) | | On the receipt of a certified copy of the court order, the specialised adoption agency shall send immediately the same to Authority, State Agency and to the prospective adoptive parents, and obtain a passport for the child. | ನ್ಯಾಯಾಲಯದ ಆದೇಶದ ಪ್ರಾಮಾಣಿಕರಿಸಿದ ಪ್ರತಿಯನ್ನು ಪಡೆದ ನಂತರ ವಿಶೇಷ ದತ್ತು ಪ್ರಾಧಿಕಾರವು ತಕ್ಷಣ ಅದನ್ನು ಪ್ರಾಧಿಕಾರಕ್ಕೆ, ರಾಜ್ಯ ಸಂಸ್ಥೆಗೆ ಮತ್ತು ಪೋಷಕರಿಗೆ ಕಳುಹಿಸಬೇಕು ಮತ್ತು ಮಗುವಿನ ಪಾಸ್‌ಪೋರ್ಟ್ ಪಡೆಯಬೇಕು. |
| | (9) | | The Authority shall intimate about the adoption to the immigration authorities of India and the receiving country of the child. | ಪ್ರಾಧಿಕಾರವು ದತ್ತು ಕುರಿತು ಭಾರತದ ಮತ್ತು ಮಗುವನ್ನು ಪಡೆಯುತ್ತಿರುವ ದೇಶದ ವಲಸೆ ಪ್ರಾಧಿಕಾರಕ್ಕೆ ಮಾಹಿತಿ ನೀಡಬೇಕು. |

| | | | | |
|---|---|---|---|---|
| | (*10*) | | The prospective adoptive parents shall receive the child in person from the specialised adoption agency as soon as the passport and visa are issued to the child. | ಮಗುವಿನ ಪಾಸ್ ಪೋರ್ಟ್ ಮತ್ತು ವೀಸಾ ದೊರೆತ ತಕ್ಷಣ ದತ್ತು ಅಪೇಕ್ಷಿಸಿದ ಪೋಷಕರು ಮಗುವನ್ನು ಖುದ್ದಾಗಿ ವಿಶೇಷ ದತ್ತು ಸಂಸ್ಥೆಯಿಂದ ಪಡೆದುಕೊಳ್ಳಬಹುದು. |
| | (*11*) | | The authorised foreign adoption agency, or Central Authority, or the concerned Government department, as the case may be, shall ensure the submission of progress reports about the child in the adoptive family and will be responsible for making alternative arrangement in the case of any disruption, in consultation with Authority and concerned Indian diplomatic mission, in the manner as provided in the adoption regulations framed by the Authority. | ಪ್ರಕರಣಕ್ಕೆ ತಕ್ಕ ಹಾಗೆ ಅಧಿಕೃತ ವಿದೇಶಿ ದತ್ತು ಸಂಸ್ಥೆ ಅಥವಾ ಕೇಂದ್ರ ಪ್ರಾಧಿಕಾರ ಅಥವಾ ಸಂಬಂಧಪಟ್ಟ ಸರ್ಕಾರಿ ಇಲಾಖೆಯು ದತ್ತು ಕುಟುಂಬದಲ್ಲಿ ಮಗುವಿನ ಪ್ರಗತಿಯ ಕುರಿತು ವರದಿಯಲ್ಲಿ ಸಲ್ಲಿಸುವುದನ್ನು ಖಾತ್ರಿಪಡಿಸಬೇಕು ಹಾಗು ಏನಾದರೂ ವ್ಯತ್ಯಯವಿದ್ದಲ್ಲಿ ಪ್ರಾಧಿಕಾರವು ರೂಪಿಸಿದ ದತ್ತು ನಿಯಮಾವಳಿಗಳ ವಿಧಿವಿಧಾನಗಳ ಪ್ರಕಾರ ಪ್ರಾಧಿಕಾರ ಮತ್ತು ಭಾರತೀಯ ರಾಯಭಾರಿ ಯೋಜನೆಯೊಡನೆ ಪ್ರಾಧಿಕಾರವು ರೂಪಿಸಿದ ದತ್ತು ನಿಯಮಾವಳಿಗಳ ವಿಧಿವಿಧಾನಗಳ ಪ್ರಕಾರ ಸಮಾಲೋಚಿಸಿ ಪರ್ಯಾಯ ವ್ಯವಸ್ಥೆಗೆ ಜವಾಬ್ದಾರರಾಗಬೇಕು. |
| | (*12*) | | A foreigner or a person of Indian origin or an overseas citizen of India, who has habitual residence in India, if interested to adopt a child from India, may apply to Authority for the same along with a no objection certificate from the diplomatic mission of his country in India, for further necessary actions as provided in the adoption regulations framed by the Authority. | ಭಾರತದಲ್ಲಿ ನೆಲೆಸಿರುವ ವಿದೇಶಿ ಅಥವಾ ಸಾಗರೋತ್ತರ ಭಾರತೀಯ ಅಥವಾ ಭಾರತದ ವಿದೇಶಿ ಪ್ರಜೆ ಭಾರತದ ಮಗುವನ್ನು ದತ್ತು ಪಡೆಯಲು ಆಸಕ್ತರಾಗಿದ್ದಲ್ಲಿ ಅವಶ್ಯವಿರುವ ಮುಂದಿನ ಪ್ರಕ್ರಿಯೆಗಳಿಗೆ ಪ್ರಾಧಿಕಾರವು ರೂಪಿಸಿದ ದತ್ತು ನಿಯಮಾವಳಿಗಳ ವಿಧಿವಿಧಾನಗಳ ಪ್ರಕಾರ ಭಾರತದಲ್ಲಿರುವ ಅವರ ದೇಶದ ರಾಯಭಾರಿ ಕಚೇರಿಯಿಂದ ನಿರಪೇಕ್ಷಣಾ ಪತ್ರ ಸಹಿತ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಬೇಕು. |
| | | | | |
| **Sec 60** | | | **Procedure for inter-country relative adoption.** | **ಸಂಬಂಧಿಗಳ ನಡುವೆ ಅಂತಾರಾಷ್ಟ್ರೀಯ ದತ್ತು ಪ್ರಕ್ರಿಯೆ** |
| | (*1*) | | A relative living abroad, who intends to adopt a child from his relative in India shall obtain an order from the court and apply for no objection certificate from Authority, in the manner as provided in the adoption regulations framed by the Authority. | ವಿದೇಶದಲ್ಲಿ ನೆಲೆಸಿರುವ ಸಂಬಂಧಿಕರು ಭಾರತದಲ್ಲಿರುವ ಸಂಬಂಧಿಗಳ ಮಗುವನ್ನು ದತ್ತು ಪಡೆಯಲು ಅಪೇಕ್ಷಿಸಿದರೆ, ಪ್ರಾಧಿಕಾರವು ರೂಪಿಸಿದ ದತ್ತು ನಿಯಮಾವಳಿಗಳ ವಿಧಿವಿಧಾನಗಳ ಪ್ರಕಾರ ನ್ಯಾಯಾಲಯದಿಂದ ಆದೇಶವನ್ನು ಪಡೆಯಬೇಕು ಮತ್ತು ಪ್ರಾಧಿಕಾರದಿಂದ ನಿರಾಪೇಕ್ಷಣ ಪತ್ರವನ್ನು ಪಡೆಯಬೇಕು. |
| | (*2*) | | The Authority shall on receipt of the order under sub-section (*1*) and the application from either the biological parents or from the adoptive parents, issue no objection certificate under intimation to the immigration authority of India and of the receiving country of the child. | ಉಪ ಸೆಕ್ಷನ್ (1)ರಡಿಯಲ್ಲಿ ಅದೇಶವನ್ನು ಪಡೆದ ಪ್ರಾಧಿಕಾರವು ಮತ್ತು ಜೈವಿಕ ಪೋಷಕರು ಅಥವಾ ದತ್ತು ಪಡೆಯುವ ಪೋಷಕರಿಂದ ಅರ್ಜಿ ಪಡೆದ ಪ್ರಾಧಿಕಾರವು ಭಾರತದ ವಲಸೆ ಪ್ರಾಧಿಕಾರಕ್ಕೆ ಮತ್ತು ಮಗುವನ್ನು ಪಡೆಯುವ ದೇಶಕ್ಕೆ ಮಾಹಿತಿ ನೀಡಿ ನಿರಾಪೇಕ್ಷಣಾ ಪತ್ರವನ್ನು ನೀಡಬೇಕು. |
| | (*3*) | | The adoptive parents shall, after receiving no objection certificate under sub-section (2), receive the child from the biological parents and shall facilitate the contact of the adopted child with his siblings and biological parents from time to time. | ಉಪ ಸೆಕ್ಷನ್ (2)ರಡಿಯಲ್ಲಿ ನಿರಾಪೇಕ್ಷಣಾ ಪತ್ರವನ್ನು ಪಡೆದ ದತ್ತು ಪೋಷಕರು ಮಗುವನ್ನು ಜೈವಿಕ ಪೋಷಕರಿಂದ ಪಡೆಯಬೇಕು ಮತ್ತು ಕಾಲಕಾಲಕ್ಕೆ ಮಗುವು ತನ್ನ ಜೈವಿಕ ಪೋಷಕರನ್ನು ಮತ್ತು ಒಡಹುಟ್ಟಿದವರನ್ನು ನೋಡಲು ಸಹಕರಿಸಬೇಕು. |
| | | | | |
| **Sec 61** | | | **Court procedure and penalty against payment in consideration of adoption.** | **ದತ್ತು ನೀಡಲು/ಪಡೆಯಲು ಹಣ ಕೊಟ್ಟಿದ್ದಲ್ಲಿ ಅದರ ವಿರುದ್ಧ ನ್ಯಾಯಾಲಯ ಪ್ರಕ್ರಿಯೆ ಮತ್ತು ದಂಡ** |
| | (*1*) | | Before issuing an adoption order, the court shall satisfy itself that —<br>(a) the adoption is for the welfare of the child; | ದತ್ತುವಿಗಾಗಿ ಆದೇಶವನ್ನು ನೀಡುವ ಮೊದಲು ನ್ಯಾಯಾಲಯವು ಈ ಮುಂದಿನವುಗಳನ್ನು ಖಾತರಿಪಡಿಸಿಕೊಳ್ಳಬೇಕು:<br>ಅ. ದತ್ತು ಮಗುವಿನ ಒಳಿತಿಗಾಗಿ ನಡೆಯುತ್ತಿದೆ; |

| | | | | |
|---|---|---|---|---|
| | | | (b) due consideration is given to the wishes of the child having regard to the age and understanding of the child; and<br>(c) that neither the prospective adoptive parents has given or agreed to give nor the specialised adoption agency or the parent or guardian of the child in case of relative adoption has received or agreed to receive any payment or reward in consideration of the adoption, except as permitted under the adoption regulations framed by the Authority towards the adoption fees or service charge or child care corpus. | b. ಮಗುವಿನ ವಯಸ್ಸು ಮತ್ತು ಬುದ್ಧಿಶಕ್ತಿಯ ಆಧಾರದ ಮೇಲೆ ಮಗುವಿನ ಆಶಯಗಳನ್ನು ಗೌರವಿಸಲಾಗಿದೆ ಮತ್ತು<br>c. ದತ್ತು ನಿಯಂತ್ರಣಕ್ಕಾಗಿ ಪ್ರಾಧಿಕಾರವು ರೂಪಿಸಿರುವ ನಿಯಮಗಳಂತೆ ನಿಗದಿಪಡಿಸಲಾಗಿರುವ ಶುಲ್ಕ ಅಥವಾ ಸೇವಾ ಶುಲ್ಕ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ನಿಧಿಗಳನ್ನು ಬಿಟ್ಟು ಬೇರೆ ಯಾವುದೇ ರೀತಿಯಲ್ಲಿ ದತ್ತು ಪಡೆಯುವವರಾಗಲಿ ಅಥವಾ ದತ್ತು ನೀಡುತ್ತಿರುವವರಾಗಲಿ: ಪೋಷಕರು, ಜೈವಿಕ ತಂದೆ, ತಾಯಿ ಅಥವಾ ಬಂಧುಗಳಾಗಲೀ ಯಾವುದೇ ರೀತಿಯಲ್ಲಿ ಹಣವನ್ನು ನೀಡಲಾಗಲೀ ತೆಗೆದುಕೊಳ್ಳುವುದಾಗಲೀ ಮಾಡಿರುವುದಿಲ್ಲ |
| | (2) | | The adoption proceedings shall be held *in camera* and the case shall be disposed of by the court within a period of two months from the date of filing. | ದತ್ತು ಸಂಬಂಧಿಸಿದ ಪ್ರಕ್ರಿಯೆಯು ನ್ಯಾಯಾಲಯದಲ್ಲಿ ಗೌಪ್ಯವಾಗಿ ನಡೆಯಬೇಕು ಮತ್ತು ಅರ್ಜಿ ಸಲ್ಲಿಸಿದ ದಿನಾಂಕದಿಂದ ಎರಡು ತಿಂಗಳೊಳಗೆ ನ್ಯಾಯಾಲಯವು ಪ್ರಕರಣವನ್ನು ವಿಲೇವಾರಿ ಮಾಡಬೇಕು. |
| | | | | |
| **Sec 62** | | | **Additional procedural requirements and documentation.** | **ಹೆಚ್ಚಿನ ಪ್ರಕ್ರಿಯೆಗಳ ಆವಶ್ಯಕತೆ ಮತ್ತು ದಾಖಲೆಗಳು** |
| | (1) | | The documentation and other procedural requirements, not expressly provided in this Act with regard to the adoption of an orphan, abandoned and surrendered child by Indian prospective adoptive parents living in India, or by non-resident Indian or overseas citizen of India or person of Indian origin or foreigner prospective adoptive parents, shall be as per the adoption regulations framed by the Authority. | ಅನಾಥ, ತ್ಯಜಿಸಲ್ಪಟ್ಟ, ತೊರೆಯಲ್ಪಟ್ಟ ಮಗುವನ್ನು ದತ್ತು ಪಡೆಯಲು ಮುಂದೆ ಬರುವ ನಿವಾಸಿ ಭಾರತೀಯರು, ಅಥವಾ ಅನಿವಾಸಿ ಭಾರತೀಯರು ಅಥವಾ ಹೊರದೇಶಗಳಲ್ಲಿರುವ ಭಾರತೀಯರು ಅಥವಾ ಭಾರತೀಯ ಮೂಲದ ವ್ಯಕ್ತಿಗಳು ಅಥವಾ ವಿದೇಶೀ ಪ್ರಜೆಗಳು, ಅನುಸರಿಸಬೇಕಾದ ದಾಖಲೆಗಳನ್ನು ನೀಡುವುದು ಮತ್ತಿತರ ಕಾಯಿದೆಯಲ್ಲಿ ಸ್ಪಷ್ಟವಾಗಿ ಹೇಳಿಲ್ಲದ ಪ್ರಕ್ರಿಯೆಗಳಿಗೆ ಪ್ರಾಧಿಕಾರವು ನಿರ್ದಿಷ್ಟಪಡಿಸುವ ವಿಧಿವಿಧಾನಗಳಂತೆ ನಡೆದುಕೊಳ್ಳಬೇಕು. |
| | (2) | | The specialised adoption agency shall ensure that the adoption case of prospective adoptive parents is disposed of within four months from the date of receipt of application and the authorised foreign adoption agency, Authority and State Agency shall track the progress of the adoption case and intervene wherever necessary, so as to ensure that the time line is adhered to. | ವಿಶೇಷ ದತ್ತು ಸಂಸ್ಥೆಯು ದತ್ತು ಅಪೇಕ್ಷಿಸಿ ಬಂದ ಪೋಷಕರ ಅರ್ಜಿಗಳನ್ನು ಸ್ವೀಕರಿಸಿದ ನಾಲ್ಕು ತಿಂಗಳೊಳಗೆ ವಿಲೇ ಮಾಡಬೇಕು ಮತ್ತು ದತ್ತುವಿನ ಪ್ರಗತಿಯ ಹಂತಗಳನ್ನು ನಿರ್ದಿಷ್ಟ ವಿದೇಶೀ ದತ್ತು ಸಂಸ್ಥೆ, ಪ್ರಾಧಿಕಾರ ಮತ್ತು ರಾಜ್ಯ ಸಂಸ್ಥೆಗಳು ಗಮನಿಸಿ ಆವಶ್ಯಕತೆ ಇದ್ದಲ್ಲಿ ಮಧ್ಯಪ್ರವೇಶಿಸಿ, ದತ್ತುವಿಗಾಗಿ ನಿಗದಿಪಡಿಸಿರುವ ಸಮಯದ ಘಟ್ಟಗಳನ್ನು ಅನುಸರಿಸಬೇಕು. |
| | | | | |
| **Sec 63** | | | **Effect of adoption.** | **ದತ್ತು ಪರಿಣಾಮಗಳು** |
| | | | A child in respect of whom an adoption order is issued by the court, shall become the child of the adoptive parents, and the adoptive parents shall become the parents of the child as if the child had been born to the adoptive parents, for all purposes, including intestacy, with effect from the date on which the adoption order takes effect, and on and from such date all the ties of the child in the family of his or her birth shall stand severed and replaced by those created by the adoption order in the adoptive family: | ಯಾವ ಮಗುವಿಗೆ ದತ್ತು ಹೋಗಬೇಕೆಂದು ನ್ಯಾಯಾಲಯ ನಿರ್ದೇಶನ ನೀಡಿದ ಮೇಲೆ, ಆ ಮಗು ದತ್ತು ಪಡೆದ ಪೋಷಕರ ಮಗುವಾಗುತ್ತದೆ, ಮತ್ತು ದತ್ತು ಪಡೆದವರು ಆ ಮಗುವಿಗೆ ಅವರಿಂದಲೇ ಜನಿಸಿದವರಂತೆ ಉಯಿಲು ಪಡೆಯಲೂ ಸೇರಿದಂತೆ ಎಲ್ಲ ಉದ್ದೇಶಗಳಿಗೆ, ದತ್ತು ಆದೇಶವು ಜಾರಿಗೆ ಬಂದ ದಿನದಿಂದ ಅಧಿಕೃತ ಪೋಷಕರಾಗುತ್ತಾರೆ, ಮತ್ತು ಅಂದಿನಿಂದ ದತ್ತು ಹೋದ ಮಗುವಿಗೆ ತಾನು ಹುಟ್ಟಿದ ಮೂಲ ಕುಟುಂಬ, ಪೋಷಕರೊಡನೆಯ ಎಲ್ಲ ಸಂಬಂಧಗಳು ಕಡಿದು ಹೋಗುತ್ತದೆ ಮತ್ತು ಅಲ್ಲಿ ಹೊಸ ದತ್ತು ಕುಟುಂಬದ ಸಂಬಂಧಗಳು ಮೂಡುತ್ತವೆ; |

| | | | | |
|---|---|---|---|---|
| | | | Provided that any property which has vested in the adopted child immediately before the date on which the adoption order takes effect shall continue to vest in the adopted child subject to the obligations, if any, attached to the ownership of such property including the obligations, if any, to maintain the relatives in the biological family. | ಆದರೆ, ದತ್ತು ಆದೇಶ ಬಂದು ಅದು ಜಾರಿಯಾದ ದಿನಕ್ಕೆ ಮೊದಲು ಮೂಲ ಕುಟುಂಬದಿಂದ ಆ ಮಗುವಿಗೆ ಯಾವುದಾದರೂ ಆಸ್ತಿಯನ್ನು ಕೊಡಮಾಡಿದ್ದಲ್ಲಿ, ಅದಕ್ಕೆ ಆ ಮಗು ಹಕ್ಕುದಾರರಾಗಿದ್ದಲ್ಲಿ, ಅದು ದತ್ತುವಿನ ನಂತರವೂ ಮುಂದುವರೆಯುವುದು ಹಾಗೂ ಜೈವಿಕ ಕುಟುಂಬದಲ್ಲಿ ಅದರ ಮಾಲೀಕತ್ವದ ಭಾಗಸ್ತ್ವವು ಇರುವುದು. |
| **Sec** | | | **Reporting of adoption.** | **ದತ್ತು ಕುರಿತು ವರದಿ** |
| **64** | | | Notwithstanding anything contained in any other law for the time being in force, information regarding all adoption orders issued by the concerned courts, shall be forwarded to Authority on monthly basis in the manner as provided in the adoption regulations framed by the Authority, so as to enable Authority to maintain the data on adoption. | ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಕಾಯ್ದೆಯಲ್ಲಿ ಏನೇ ಹೇಳಿದ್ದರೂ ಸಹ ದತ್ತು ಕುರಿತು ದತ್ತಾಂಶವನ್ನು ನಿರ್ವಹಿಸುವ ಸಲುವಾಗಿ ಸಂಬಂಧಪಟ್ಟ ನ್ಯಾಯಲಯಗಳು ದತ್ತು ಕುರಿತಂತೆ ನೀಡಿದ ಎಲ್ಲಾ ಆದೇಶಗಳ ಮಾಹಿತಿಯನ್ನು ಪ್ರತಿ ತಿಂಗಳಿಗೊಮ್ಮೆ ಪ್ರಾಧಿಕಾರವು ದತ್ತು ಕುರಿತಂತೆ ರೂಪಿಸಿದ ನಿಯಮಾವಳಿಗಳ ಪ್ರಕಾರ ಪ್ರಾಧಿಕಾರಕ್ಕೆ ನೀಡಬೇಕು. |
| **Sec** | | | **Specialised Adoption Agencies.** | **ವಿಶೇಷ ದತ್ತು ಸಂಸ್ಥೆಗಳು** |
| **65** | (*1*) | | The State Government shall recognise one or more institutions or organisations in each district as a Specialised Adoption Agency, in such manner as may be provided in the adoption regulations framed by the Authority, for the rehabilitation of orphan, abandoned or surrendered children, through adoption and non-institutional care. | ಅನಾಥ, ತ್ಯಜಿಸಿದ ಅಥವಾ ಒಪ್ಪಿಸಿದ ಮಕ್ಕಳಿಗೆ ದತ್ತು ಮತ್ತು ಅನಿವಾಸಿ ಪೋಷಣೆಯ ಮೂಲಕ ಪುನರ್ವಸತಿಗಾಗಿ ಪ್ರಾಧಿಕಾರವು ದತ್ತು ಕುರಿತು ರಚಿಸಿರುವ ನಿಯಮಾವಳಿಗಳ ಪ್ರಕಾರ ರಾಜ್ಯ ಸರ್ಕಾರವು ಪ್ರತಿಯೊಂದು ಜಿಲ್ಲೆಯಲ್ಲಿ ಒಂದು ಅಥವಾ ಹೆಚ್ಚಿನ ಸಂಸ್ಥೆ ಅಥವಾ ಸ್ವಯಂಸೇವಾ ಸಂಸ್ಥೆಗಳನ್ನು ವಿಶೇಷ ದತ್ತು ಸಂಸ್ಥೆಗಳನ್ನಾಗಿ ಗುರುತಿಸಬೇಕು. |
| | (*2*) | | The State Agency shall furnish the name, address and contact details of the Specialised Adoption Agencies along with copies of certificate or letter of recognition or renewal to Authority, as soon as the recognition or renewal is granted to such agencies. | ವಿಶೇಷ ದತ್ತು ಸಂಸ್ಥೆಗಳಿಗೆ ಮಾನ್ಯತೆ ಅಥವಾ ನವೀಕರಣ ನೀಡಿದ ತಕ್ಷಣ ರಾಜ್ಯ ಸಂಸ್ಥೆಯು ಅದರ ಹೆಸರು, ವಿಳಾಸ ಮತ್ತು ಸಂಪರ್ಕ ವಿವರಗಳನ್ನು ಮಾನ್ಯತೆಯ ಪತ್ರ ಅಥವಾ ನವೀಕರಣದ ಪತ್ರದ ಪ್ರತಿಯೊಂದಿಗೆ ಪ್ರಾಧಿಕಾರಕ್ಕೆ ನೀಡಬೇಕು. |
| | (*3*) | | The State Government shall get every Specialised Adoption Agency inspected at least once in a year and take necessary remedial measures, if required. | ರಾಜ್ಯ ಸರ್ಕಾರವು ಪ್ರತಿಯೊಂದು ವಿಶೇಷ ದತ್ತು ಸಂಸ್ಥೆಯನ್ನು ಪ್ರತಿ ತಿಂಗಳಿಗೊಮ್ಮೆ ತಪಾಸಣೆ ನಡೆಸಬೇಕು ಮತ್ತು ಅವಶ್ಯವಿದ್ದಲ್ಲಿ ಸೂಕ್ತ ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕು. |
| | (*4*) | | In case any Specialised Adoption Agency is in default in taking necessary steps on its part as provided in this Act or in the adoption regulations framed by the Authority, for getting an orphan or abandoned or surrendered child legally free for adoption from the Committee or in completing the home study report of the prospective adoptive parents or in obtaining adoption order from the court within the stipulated time, such Specialised Adoption Agency shall be punishable with a fine which may extend up to fifty thousand rupees and in case of repeated default, the recognition of the Specialised Adoption Agency shall be withdrawn by the State Government. | ಯಾವುದೇ ವಿಶೇಷ ದತ್ತು ಸಂಸ್ಥೆಯು ಅನಾಥ ಅಥವಾ ತ್ಯಜಿಸಿದ ಅಥವಾ ಒಪ್ಪಿಸಿದ ಮಕ್ಕಳನ್ನು ಸಮಿತಿಯಿಂದ ದತ್ತು ನೀಡಲು ಕಾನೂನಿನಂತೆ ಮುಕ್ತರನ್ನಾಗಿಸಲು ಈ ಕಾಯ್ದೆಯಲ್ಲಿ ಹೇಳಿರುವ ಕ್ರಮಗಳನ್ನು ಕೈಗೊಳ್ಳದಿದ್ದಲ್ಲಿ ಅಥವಾ ಪ್ರಾಧಿಕಾರವು ದತ್ತು ಕುರಿತು ರೂಪಿಸಿದ ನಿಯಮಾವಳಿಗಳನ್ನು ಪಾಲಿಸದಿದ್ದಲ್ಲಿ ಅಥವಾ ದತ್ತು ಅಪೇಕ್ಷಿಸುವ ಪೋಷಕರ ಗೃಹ ಅಧ್ಯಯನ ವರದಿಯನ್ನು ಪೂರ್ಣಗೊಳಿಸಿದಿದ್ದಲ್ಲಿ ಅಥವಾ ನಿಗದಿತ ಸಮಯದಲ್ಲಿ ನ್ಯಾಯಾಲಯದಿಂದ ದತ್ತು ಅದೇಶವನ್ನು ಪಡೆಯಲು ವಿಫಲರಾದಲ್ಲಿ ಅಂತಹ ವಿಶೇಷ ದತ್ತು ಸಂಸ್ಥೆಗಳಿಗೆ ರೂ. ಐವತ್ತು ಸಾವಿರದವರೆಗೂ ವಿಸ್ತರಿಸಬಹುದಾದ ದಂಡ ವಿಧಿಸಬಹುದಾಗಿದೆ ಮತ್ತು ಈ ತಪ್ಪುಗಳು ಮರುಕಳಿಸಿದರೆ ರಾಜ್ಯ ಸರ್ಕಾರವು ವಿಶೇಷ ದತ್ತು ಸಂಸ್ಥೆಗೆ ನೀಡಿದ ಮಾನ್ಯತೆಯನ್ನು ಹಿಂಪಡೆಯಬಹುದು. |

| | | | | |
|---|---|---|---|---|
| **Sec 66** | | | **Adoption of children residing in institutions not registered as adoption agencies.** | **ದತ್ತು ಸಂಸ್ಥೆಗಳಾಗಿ ದಾಖಲೆಯಾಗಿಲ್ಲದ ಸಂಸ್ಥೆಗಳಲ್ಲಿ ಇರುವ ಮಕ್ಕಳ ದತ್ತು** |
| | (*1*) | | All the institutions registered under this Act, which may not have been recognised as Specialised Adoption Agencies, shall also ensure that all orphan or abandoned or surrendered children under their care are reported, produced and declared legally free for adoption, by the Committee as per the provisions of section 38. | ಈ ಕಾಯ್ದೆಯಡಿ ನೋಂದಣಿಯಾಗಿ ವಿಶೇಷ ದತ್ತು ಸಂಸ್ಥೆಯೆಂದು ಮಾನ್ಯತೆ ಪಡೆಯದ ಸಂಸ್ಥೆಗಳೂ ಸಹ ತಮ್ಮ ಪೋಷಣೆಯಲ್ಲಿರುವ ಎಲ್ಲಾ ಅನಾಥ, ತ್ಯಜಿಸಿದ ಅಥವಾ ಒಪ್ಪಿಸಿದ ಮಕ್ಕಳ ವಿವರಗಳ ವರದಿಯನ್ನು ನೀಡುವುದನ್ನು ಮತ್ತು ಸೆಕ್ಷನ್ 38ರ ಪ್ರಕಾರ ದತ್ತು ನೀಡಲು ಕಾನೂನು ಮುಕ್ತ ಎಂದು ಘೋಷಿಸಲು ಸಮಿತಿಯ ಮುಂದೆ ಹಾಜರು ಪಡಿಸುವುದನ್ನು ಖಾತ್ರಿಪಡಿಸಬೇಕು. |
| | (*2*) | | All institutions referred to in sub-section (*1*) shall develop formal linkages with nearby Specialised Adoption Agency and shall furnish details of the children declared legally free for adoption to that Specialised Adoption Agency along with all relevant records in the manner as may be prescribed, for the placement of such children in adoption. | ಉಪ ಸೆಕ್ಷನ್ (1)ರಲ್ಲಿ ಹೇಳಿರುವ ಎಲ್ಲಾ ಸಂಸ್ಥೆಗಳು ಹತ್ತಿರದ ವಿಶೇಷ ದತ್ತು ಸಂಸ್ಥೆಯೊಂದಿಗೆ ಔಪಚಾರಿಕ ಸಂಬಂಧವನ್ನು ಇರಿಸಿಕೊಳ್ಳಬೇಕು ಮತ್ತು ದತ್ತು ನೀಡಲು ಕಾನೂನು ಮುಕ್ತ ಎಂದು ಘೋಷಿಸಿದ ಮಕ್ಕಳ ವಿವರಗಳನ್ನು ಪ್ರಾಧಿಕಾರವು ದತ್ತು ಕುರಿತು ರೂಪಿಸಿದ ನಿಯಮಾವಳಿಗಳ ಪ್ರಕಾರ ಎಲ್ಲಾ ಸಂಬಂಧಪಟ್ಟ ವಿವರಗಳ ದಾಖಲೆಯನ್ನು ದತ್ತು ನೀಡುವ ಸಲುವಾಗಿ ವಿಶೇಷ ದತ್ತು ಸಂಸ್ಥೆಗೆ ನೀಡಬೇಕು. |
| | (*3*) | | If any such institution contravenes the provisions of sub-section (*1*) or sub-section (*2*), it shall be liable to fine of fifty thousand rupees for each instance to be imposed by the registering authority and it may also attract de-recognition in the event of persistent flouting of such provisions. | ಉಪ ಸೆಕ್ಷನ್ (1) ಮತ್ತು ಉಪ ಸೆಕ್ಷನ್ (2)ರಡಿ ಸೂಚಿಸಿರುವುದನ್ನು ಪಾಲಿಸದ ಸಂಸ್ಥೆಗಳಿಗೆ ಪ್ರತಿಯೊಂದು ಪ್ರಕರಣಕ್ಕೂ ನೋಂದಣಿ ಪ್ರಾಧಿಕಾರವು ರೂ. ಐವತ್ತು ಸಾವಿರದವರೆಗೆ ವಿಸ್ತರಿಸಬಹುದಾದ ದಂಡವನ್ನು ವಿಧಿಸಬಹುದು ಮತ್ತು ಕಾಯ್ದೆಯ ಆಶಯವನ್ನು ಈಡೇರಿಸಿದಿದ್ದಲ್ಲಿ ಸಂಸ್ಥೆಯನ್ನು ಅನರ್ಹಗೊಳಿಸಲೂಬಹುದು. |
| | | | | |
| **Sec 67** | | | **State Adoption Resource Agency (SARA)** | **ರಾಜ್ಯ ದತ್ತು ಸಂಪನ್ಮೂಲ ಸಂಸ್ಥೆ** |
| | (*1*) | | The State Government shall set up a State Adoption Resource Agency for dealing with adoptions and related matters in the State under the guidance of Authority. | ರಾಜ್ಯ ಸರ್ಕಾರವು ಪ್ರಾಧಿಕಾರದ ಮಾರ್ಗದರ್ಶನದ ನೆರವಿನಿಂದ ರಾಜ್ಯದಲ್ಲಿ ದತ್ತು ಮತ್ತು ಅದಕ್ಕೆ ಸಂಬಂಧಿಸಿದ ವಿಚಾರಗಳನ್ನು ನಿರ್ವಹಿಸಲು ರಾಜ್ಯ ದತ್ತು ಸಂಪನ್ಮೂಲ ಕೇಂದ್ರವನ್ನು ಸ್ಥಾಪಿಸಬೇಕು. |
| | (*2*) | | The State Agency, wherever already exists, shall be deemed to be set up under this Act. | ಈಗಾಗಲೇ ರಾಜ್ಯ ಸಂಸ್ಥೆಗಳು ಅಸ್ತಿತ್ವವಿದ್ದೆಡೆಗಳಲ್ಲಿ ಈ ಕಾಯ್ದೆಯಡಿ ಅವುಗಳನ್ನು ಸ್ಥಾಪಿಸಲಾಗಿದೆ ಎಂದು ಪರಿಗಣಿಸಬೇಕು. |
| | | | | |
| **Sec 68** | | | **Central Adoption Resource Authority (CARA).** | **ಕೇಂದ್ರ ದತ್ತು ಸಂಪನ್ಮೂಲ ಸಂಸ್ಥೆ** |
| | | | The Central Adoption Resource Agency existing before the commencement of this Act, shall be deemed to have been constituted as the Central Adoption Resource Authority under this Act to perform the following functions, namely:—<br>a) to promote in-country adoptions and to facilitate inter-State adoptions in co-ordination with State Agency;<br>b) to regulate inter-country adoptions;<br>c) to frame regulations on adoption and related matters from time to time as may be necessary; | ಈ ಕಾಯ್ದೆಯು ಜಾರಿಗೆ ಬರುವುದಕ್ಕೆ ಮೊದಲಿನಿಂದಲೂ ಅಸ್ತಿತ್ವದಲ್ಲಿರುವ ಕೇಂದ್ರ ದತ್ತು ಸಂಪನ್ಮೂಲ ಸಂಸ್ಥೆಯನ್ನು, ಈ ಕಾಯ್ದೆಯಡಿ ಈ ಕೆಳಗಿನ ಕಾರ್ಯಗಳನ್ನು ನಿರ್ವಹಿಸಲು ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರವಾಗಿ ಸ್ಥಾಪಿಸಲಾಗಿದೆಯೆಂದು ಪರಿಗಣಿಸಬೇಕು.<br>a) ದೇಶಿಯ ದತ್ತು ಮತ್ತು ರಾಜ್ಯ ಸಂಸ್ಥೆಗಳೊಡನೆ ಸಂಯೋಜನೆ ಮೂಡಿಸಿಕೊಂಡು ಅಂತರರಾಜ್ಯ ದತ್ತುವನ್ನು ಉತ್ತೇಜಿಸಬೇಕು;<br>b) ಅಂತಾರಾಷ್ಟ್ರೀಯ ದತ್ತುವನ್ನು ನಿಯಂತ್ರಿಸಬೇಕು;<br>c) ಅವಶ್ಯವೆನಿಸಿದಲ್ಲಿ ಕಾಲಕಾಲಕ್ಕೆ ದತ್ತು ಮತ್ತು ಅದಕ್ಕೆ ಸಂಬಂಧಿಸಿದ ವಿಚಾರಗಳಿಗೆ ನಿಯಂತ್ರಣವನ್ನು ರೂಪಿಸಬೇಕು |

| | | | | |
|---|---|---|---|---|
| | | | d) to carry out the functions of the Central Authority under the Hague Convention on Protection of Children and Cooperation in respect of Inter-country Adoption;<br>e) any other function as may be prescribed. | d) ಅಂತಾರಾಷ್ಟ್ರೀಯ ದತ್ತು ವಿಚಾರದಲ್ಲಿ ಮಕ್ಕಳ ರಕ್ಷಣೆ ಮತ್ತು ಸಹಕಾರ ಕುರಿತಾದ ಹೇಗ್ ಒಡಂಬಡಿಕೆಯ ಅಡಿಯಲ್ಲಿ ಕೇಂದ್ರ ಪ್ರಾಧಿಕಾರದ ಕಾರ್ಯಗಳನ್ನು ನಿರ್ವಹಿಸಬೇಕು<br>e) ಇತರೆ ಯಾವುದೇ ನಿರ್ಧಿಷ್ಟಪಡಿಸಿದ ಕಾರ್ಯಗಳು |
| | | | | |
| **Sec** | | | **Steering Committee of Authority.** | **ಪ್ರಾಧಿಕಾರದ ನಿರ್ವಹಣಾ ಸಮಿತಿ** |
| **69** | (*1*) | | The Authority shall have a Steering Committee with following members :<br>a) Secretary, Ministry of Women and Child Development, Government of India, who shall be the Chairperson—*ex officio*;<br>b) Joint Secretary, Ministry of Women and Child Development, Government of India, dealing with Authority—*ex officio*;<br>c) Joint Secretary, Ministry of Women and Child Development, Government of India, dealing with Finance—*ex officio*;<br>d) one State Adoption Resource Agency and two Specialised Adoption Agencies;<br>e) one adoptive parent and one adoptee;<br>f) one advocate or a professor having at least ten years of experience in family law;<br>g) Member-Secretary, who shall also be Chief Executive Officer of the organisation. | ಪ್ರಾಧಿಕಾರವು ನಿರ್ವಹಣಾ ಸಮಿತಿಯಲ್ಲಿ ಈ ಕೆಳಗಿನ ಸದಸ್ಯರನ್ನು ಹೊಂದಿರಬೇಕು.<br>a) *ಪದನಿಮಿತ್ತ* ಅಧ್ಯಕ್ಷರಾಗಿ ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯದ, ಕಾರ್ಯದರ್ಶಿಗಳು;<br>b) ಪ್ರಾಧಿಕಾರದೊಡನೆ ವ್ಯವಹರಿಸಲು *ಪದನಿಮಿತ್ತ* ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯದ ಜಂಟಿ ಕಾರ್ಯದರ್ಶಿಗಳು;<br>c) ಆರ್ಥಿಕ ಉಸ್ತುವಾರಿಗೆ ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯದ *ಪದನಿಮಿತ್ತ* ಜಂಟಿ ಕಾರ್ಯದರ್ಶಿಗಳು;<br>d) ಒಂದು ರಾಜ್ಯ ದತ್ತು ಸಂಪನ್ಮೂಲ ಕೇಂದ್ರ ಮತ್ತು ಎರಡು ವಿಶೇಷ ದತ್ತು ಸಂಸ್ಥೆಗಳು;<br>e) ಒಬ್ಬ ದತ್ತು ಪಡೆದ ಪೋಷಕ ಮತ್ತು ಒಬ್ಬ ದತ್ತು ನೀಡಿದ ಪೋಷಕ;<br>f) ಕೌಟುಂಬಿಕ ಕಾಯ್ದೆಯಡಿ ಕನಿಷ್ಠ ಹತ್ತು ವರ್ಷಗಳ ಅನುಭವವಿರುವ ಒಬ್ಬ ವಕೀಲ ಆಥವಾ ಪ್ರೊಫೆಸರ್;<br>g) ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯೂ ಆಗಿರುವ ಸದಸ್ಯ ಕಾರ್ಯದರ್ಶಿ; |
| | (*2*) | | Criteria for the selection or nomination of the Members mentioned at (*d*) to (*f*), their tenure as well as the terms and conditions of their appointment shall be such as may be prescribed. | (*d*) ರಿಂದ (*f*)ರ ತನಕ ಸೂಚಿಸಿರುವ ಸದಸ್ಯರನ್ನು ಆಯ್ಕೆ ಮಾಡಲು ಅಥವಾ ನೇಮಿಸಲು, ಅವರ ಕಾರ್ಯಾವಧಿಯ ಜೊತೆಗೆ ಅವರ ನೇಮಕದ ವಿಧಿ ಮತ್ತು ಷರತ್ತುಗಳು ನಿರ್ದಿಷ್ಟಪಡಿಸಿದಂತಿರಬೇಕು. |
| | (*3*) | | The Steering Committee shall have the following functions, namely:—<br>a) to oversee the functioning of Authority and review its working from time totime so that it operates in most effective manner;<br>b) to approve the annual budget, annual accounts and audit reports as well as the action plan and annual report of Authority;<br>c) to adopt the recruitment rules, service rules, financial rules of Authority as well as the other regulations for the exercise of the administrative and programmatic powers within the organisation, with the prior approval of the Central Government;<br>d) any other function that may be vested with it by the Central Government from time to time. | ಪ್ರಾಧಿಕಾರದ ನಿರ್ವಹಣಾ ಸಮಿತಿಯು ಈ ಕೆಳಗಿನ ಕಾರ್ಯಗಳನ್ನು ನಿರ್ವಹಿಸಬೇಕು, ಅವುಗಳೆಂದರೆ –<br>a) ಪ್ರಾಧಿಕಾರದ ಕಾರ್ಯಗಳನ್ನು ಗಮನಿಸುವುದು ಮತ್ತು ಅದು ಪರಿಣಾಮಕಾರಿ ವಿಧಾನದಲ್ಲಿ ನಿರ್ವಹಿಸಲು ಕಾಲಕಾಲಕ್ಕೆ ಅದರ ಕಾರ್ಯಗಳನ್ನು ವಿಮರ್ಶಿಸುವುದು;<br>b) ವಾರ್ಷಿಕ ಅನುದಾನ, ವಾರ್ಷಿದ ಲೆಕ್ಕಪತ್ರ ಮತ್ತು ಆಡಿಟ್ ವರದಿಯ ಜೊತೆಗೆ ಪ್ರಾಧಿಕಾರದ ಕ್ರಿಯಾ ಯೋಜನೆ ಮತ್ತು ವಾರ್ಷಿದ ವರದಿಯನ್ನು ಅನುಮೋದಿಸುವುದು;<br>c) ಪ್ರಾಧಿಕಾರ ನೇಮಿಸಿಕೊಳ್ಳುವ ನಿಯಮಗಳು, ಸೇವಾ ನಿಯಮಗಳು, ಆರ್ಥಿಕ ನಿಯಮಗಳೂ ಸೇರಿದಂತೆ ಸಂಸ್ಥೆಯಲ್ಲಿ ಆಡಳಿತಾತ್ಮಕ ಮತ್ತು ಯೋಜನೆಗಳ ಜಾರಿಯ ಅಧಿಕಾರಕ್ಕೆ ನಿಯಂತ್ರಣವನ್ನು ಕೇಂದ್ರ ಸರ್ಕಾರದ ಪೂರ್ವಾನುಮತಿಯಿಂದ ಅಳವಡಿಸಿಕೊಳ್ಳುವುದು;<br>d) ಕೇಂದ್ರ ಸರ್ಕಾರ ಕಾಲಕಾಲಕ್ಕೆ ಸೂಚಿಸಬಹುದಾದ ಇತರೆ ಯಾವುದೇ ಕಾರ್ಯಗಳು. |

| | | | | |
|---|---|---|---|---|
| | (4) | | The Steering Committee shall meet once in a month in the manner as may be prescribed. | ನಿರ್ವಹಣಾ ಸಮಿತಿಯು ನಿರ್ಧಿಷ್ಟಪಡಿಸಿದ ವಿಧಿವಿಧಾನದಲ್ಲಿ ಪ್ರತಿ ತಿಂಗಳಿಗೊಮ್ಮೆ ಸಭೆ ಸೇರಬೇಕು. |
| | (5) | | The Authority shall function from its headquarter and through its regional offices as may be set up as per its functional necessity. | ಪ್ರಾಧಿಕಾರವು ತನ್ನ ಮುಖ್ಯ ಕಛೇರಿಯಿಂದ ಮತ್ತು ಕಾರ್ಯದ ಅವಶ್ಯಕತೆಗೆ ಅನುಗುಣವಾಗಿ ಸ್ಥಾಪಿಸಿದ ಪ್ರಾಂತೀಯ ಕಛೇರಿಗಳ ಮೂಲಕ ಕಾರ್ಯನಿರ್ವಹಿಸಬೇಕು. |
| **Sec** | | | **Powers of Authority.** | **ಪ್ರಾಧಿಕಾರದ ಅಧಿಕಾರಗಳು** |
| **70** | (1) | | For the efficient performance of its functions, Authority shall have the following powers, namely:—<br>a) to issue instructions to any Specialised Adoption Agency or a Children Home or any child care institution housing any orphan, abandoned or surrendered child, any State Agency or any authorised foreign adoption agency and such directions shall be complied by such agencies;<br>b) recommending to the concerned Government or Authority to take appropriate action against any official or functionary or institution under its administrative control, in case of persistent non-compliance of the instructions issued by it;<br>c) forwarding any case of persistent non-compliance of its instructions by any official or functionary or institution to a Magistrate having jurisdiction to try the same and the Magistrate to whom any such case is forwarded shall proceed to hear the same as if the case has been forwarded to him under sec.346 of the Code of Criminal Procedure, 1973;<br>d) any other power that may be vested with it by the Central Government. | ತನ್ನ ಕಾರ್ಯವನ್ನು ಪರಿಣಾಮಕಾರಿಯಾಗಿ ನೆರವೇರಿಸಲು ಪ್ರಾಧಿಕಾರಕ್ಕೆ ಈ ಕೆಳಗಿನ ಅಧಿಕಾರಗಳಿರುತ್ತದೆ–<br>a) ಅನಾಥ, ತ್ಯಜಿಸಿದ ಅಥವಾ ಒಪ್ಪಿಸಿದ ಮಗುವನ್ನಿರಿಸಿಕೊಂಡ ಯಾವುದೇ ವಿಶೇಷ ದತ್ತು ಸಂಸ್ಥೆ ಅಥವಾ ಮಕ್ಕಳ ಮಂದಿರಗಳು ಅಥವಾ ಯಾವುದೇ ಮಕ್ಕಳ ಪೋಷಣಾ ಸಂಸ್ಥೆಗಳು, ಯಾವುದೇ ರಾಜ್ಯ ಸಂಸ್ಥೆಗಳು ಅಥವಾ ಅಧಿಕೃತ ವಿದೇಶಿ ದತ್ತು ಸಂಸ್ಥೆಗಳಿಗೆ ಸೂಚನೆಗಳನ್ನು ನೀಡಬಹುದು ಮತ್ತು ಇಂತಹ ಸೂಚನೆಗಳನ್ನು ಎಲ್ಲಾ ಸಂಸ್ಥೆಗಳು ಪಾಲಿಸಬೇಕು.<br>b) ತನ್ನ ಸೂಚನೆಗಳನ್ನು ಮೇಲಿಂದ ಮೇಲೆ ಪಾಲಿಸದಿದ್ದ ತನ್ನ ಪರಿಮಿತಿಯೊಳಗಿನ ಯಾವುದೇ ಅಧಿಕಾರಿ ಅಥವಾ ನಿರ್ವಾಹಕ ಅಥವಾ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಸರ್ಕಾರಕ್ಕೆ ಅಥವಾ ಪ್ರಾಧಿಕಾರಕ್ಕೆ ಸೂಚಿಸುವುದು<br>c) ತನ್ನ ಸೂಚನೆಗಳನ್ನು ಮೇಲಿಂದ ಮೇಲೆ ಪಾಲಿಸದಿದ್ದ ತನ್ನ ಪರಿಮಿತಿಯೊಳಗಿನ ಯಾವುದೇ ಅಧಿಕಾರಿ ಅಥವಾ ನಿರ್ವಾಹಕ ಅಥವಾ ಸಂಸ್ಥೆಗಳ ವಿರುದ್ಧದ ಪ್ರಕರಣಗಳನ್ನು ಕಾರ್ಯಕ್ಷೇತ್ರವನ್ನು ಹೊಂದಿರುವ ನ್ಯಾಯಾಧೀಶರಿಗೆ ಒಪ್ಪಿಸಿ ಅವರು ಅಪರಾಧ ಪ್ರಕ್ರಿಯಾ ಸಂಹಿತೆ (CrPC) 1973ರ ಸೆ. 346ರಡಿಯಲ್ಲಿ ಪ್ರಕರಣ ದಾಖಲಾಗಿದೆ ಎನ್ನುವಂತೆ ವಿಚಾರಣೆ ನಡೆಸಲು ಕೋರುವುದು<br>d) ಕೇಂದ್ರ ಸರ್ಕಾರವು ಒಪ್ಪಿಸುವ ಇನ್ನಾವುದೇ ಕೆಲಸಗಳನ್ನು ನಿರ್ವಹಿಸುವುದು |
| | (2) | | In case of any difference of opinion in an adoption case, including the eligibility of prospective adoptive parents or of a child to be adopted, the decision of Authority shall prevail. | ದತ್ತು ಅಪೇಕ್ಷಿಸುವ ಪೋಷಕರ ಅರ್ಹತೆ ಮತ್ತು ದತ್ತು ನೀಡುವ ಮಗುವೂ ಸೇರಿದಂತೆ ದತ್ತು ನೀಡಲು ಯಾವುದೇ ಭಿನ್ನಾಭಿಪ್ರಾಯಗಳಿದ್ದಲ್ಲಿ ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗುತ್ತದೆ. |
| **Sec** | | | **Annual Report of Authority.** | **ಪ್ರಾಧಿಕಾರದ ವಾರ್ಷಿಕ ವರದಿ** |
| **71** | (1) | | The Authority shall submit an annual report to the Central Government in such manner as may be prescribed. | ಪ್ರಾಧಿಕಾರವು ತನ್ನ ವಾರ್ಷಿಕ ವರದಿಯನ್ನು ನಿರ್ಧಿಷ್ಟಪಡಿಸಬಹುದಾದ ವಿಧಾನದಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕು. |
| | (2) | | The Central Government shall cause the annual report of Authority to be laid before each House of Parliament. | ಕೇಂದ್ರ ಸರ್ಕಾರವು ಪ್ರಾಧಿಕಾರದ ವಾರ್ಷಿಕ ವರದಿಯನ್ನು ಸಂಸತ್ತಿನ ಉಭಯ ಸದನಗಳ ಮುಂದಿಡಲು ಸೂಚಿಸಬಹುದು |
| **Sec** | | | **Grants by Central Government.** | **ಕೇಂದ್ರ ಸರ್ಕಾರದಿಂದ ಅನುದಾನ** |
| **72** | (1) | | The Central Government shall, after due appropriation made by Parliament by law in this behalf, pay to the Authority by way of grants such sums of money as the Central Government may think fit for being utilised for performing the functions of Authority under this Act. | ಈ ಕುರಿತಂತೆ ಸಂಸತ್ತಿನಲ್ಲಿ ಕಾನೂನಿನ ಅನುಮೋದನೆ ದೊರೆತ ನಂತರ ಈ ಕಾಯ್ದೆಯಡಿ ಪ್ರಾಧಿಕಾರದ ಕಾರ್ಯನಿರ್ವಹಣೆಗಾಗಿ ಕೇಂದ್ರ ಸರ್ಕಾರವು ತನಗೆ ಸೂಕ್ತವೆನಿಸುವ ಅನುದಾನದ ಮೊತ್ತವನ್ನು ನೀಡಬಹುದು |

| | | | | |
|---|---|---|---|---|
| | (*2*) | | The Authority may spend such sums of money as it thinks fit for performing the functions, as prescribed under this Act, and such sums shall be treated as expenditure payable out of the grants referred to in sub-section (*1*). | ಪ್ರಾಧಿಕಾರವು ಈ ಕಾಯ್ದೆಯಡಿ ನಿರ್ದಿಷ್ಟಪಡಿಸಿದ ಕಾರ್ಯಗಳನ್ನು ನಿರ್ವಹಿಸಲು ತನಗೆ ಸೂಕ್ತವೆನಿಸಿದ ರೀತಿಯಲ್ಲಿ ಈ ಮೊತ್ತವನ್ನು ಬಳಸಬಹುದು ಮತ್ತು ಈ ಮೊತ್ತವನ್ನು ಉಪ ಸೆಕ್ಷನ್ (1)ರಲ್ಲಿ ಸೂಚಿಸಿರುವಂತೆ ಅನುದಾನದಲ್ಲಿ ಪಾವತಿಸಬಹುದಾದ ವೆಚ್ಚವೆಂದು ಪರಿಗಣಿಸಬೇಕು. |
| | | | | |
| **73** | | | **Accounts and audit of Authority.** | **ಪ್ರಾಧಿಕಾರ ಲೆಕ್ಕಪತ್ರ ಮತ್ತು ಪರಿಶೀಲನೆ** |
| | (*1*) | | The Authority shall maintain proper accounts and other relevant records and prepare an annual statement of accounts in such form as may be prescribed by the Central Government in consultation with the Comptroller and Auditor-General of India. | ಪ್ರಾಧಿಕಾರವು ಸೂಕ್ತ ಲೆಕ್ಕಪತ್ರವನ್ನು ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನಿರ್ವಹಿಸಬೇಕು ಮತ್ತು ಕೇಂದ್ರ ಸರ್ಕಾರ ನಿರ್ದಿಷ್ಟಪಡಿಸಿದಂತೆ ಭಾರತದ ಮುಖ್ಯ ಲೆಕ್ಕ ಪರಿಶೋಧಕರೊಡನೆ ಸಮಾಲೋಚಿಸಿ ತನ್ನ ವಾರ್ಷಿಕ ಆಯವ್ಯಯ ವರದಿಯನ್ನು ಸಿದ್ಧಪಡಿಸಬೇಕು. |
| | (*2*) | | The accounts of Authority shall be audited by the Comptroller and Auditor-General at such intervals as may be specified by him and any expenditure incurred in connection with such audit shall be payable by the Authority to the Comptroller and Auditor-General. | ಪ್ರಾಧಿಕಾರದ ಲೆಕ್ಕಪತ್ರಗಳನ್ನು ಸ್ಪಷ್ಟಪಡಿಸಬಹುದಾದ ನಿರ್ದಿಷ್ಟ ಅವಧಿಗೊಮ್ಮೆ ಲೆಕ್ಕ ಪರಿಶೋಧಕರಿಂದ ತಪಾಸಣೆ ಮಾಡಿಸಬೇಕು ಮತ್ತು ಇಂತಹ ತಪಾಸಣೆಗೆ ತಗುಲುವ ವೆಚ್ಚವನ್ನು ಪ್ರಾಧಿಕಾರವೇ ಲೆಕ್ಕ ಪರಿಶೋಧಕರಿಗೆ ನೀಡಬೇಕು. |
| | (*3*) | | The Comptroller and Auditor-General and any person appointed by him in connection with the audit of the accounts of the Authority under this Act shall, have the same rights and privileges and the Authority in connection with the audit of Government accounts and, in particular, shall have the right to demand the production of books, accounts, connected vouchers and other documents and papers and to inspect any of the offices of Authority. | ಈ ಕಾಯ್ದೆಯಡಿ ಪ್ರಾಧಿಕಾರದ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಲೆಕ್ಕ ಪರಿಶೋಧಕರಿಗೆ ಅಥವಾ ಅವರು ನೇಮಿಸಿದ ವ್ಯಕ್ತಿಗೆ ಎಲ್ಲಾ ಹಕ್ಕು ಮತ್ತು ಸ್ವಾತಂತ್ರ್ಯವಿರುತ್ತದೆ ಮತ್ತು ಲೆಕ್ಕ ಪತ್ರ ಪರಿಶೋಧನೆಗಾಗಿ ಎಲ್ಲ ರೀತಿಯ ಪುಸ್ತಕಗಳು, ಲೆಕ್ಕ, ಸಂಬಂಧಿಸಿದ ಪಾವತಿಗಳು, ಇತರ ದಾಖಲೆಗಳು ಮತ್ತು ಪ್ರಾಧಿಕಾರದ ಕಾಗದ ಪತ್ರಗಳನ್ನು ಪರಿಶೀಲನೆಗಾಗಿ ಪಡೆಯಬಹುದು. |
| | (*4*) | | The accounts of the Authority as certified by the Comptroller and Auditor-General or any other person appointed by him in this behalf, together with the audit report thereon shall be forwarded annually to the Central Government by the Authority. | ಪ್ರಾಧಿಕಾರದ ಲೆಕ್ಕಪತ್ರಗಳನ್ನು ಮಹಾಲೇಖಪಾಲರು ಅಥವಾ ಅವರಿಂದ ನೇಮಿಸಲ್ಪಟ್ಟವರಿಂದ ಪ್ರಮಾಣೀಕರಿಸಿದ ಮೇಲೆ, ಲೆಕ್ಕಪತ್ರ ಪರಿಶೋಧನೆ ವರದಿಯೊಂದಿಗೆ ಪ್ರತಿವರ್ಷವೂ ಕೇಂದ್ರ ಸರ್ಕಾರಕ್ಕೆ ಒಪ್ಪಿಸಬೇಕು. |
| | (*5*) | | The Central Government shall cause the audit report to be laid, as soon as may be after it is received, before each House of Parliament. | ವರದಿ ಬಂದ ಕೂಡಲೇ ಲೆಕ್ಕಪತ್ರದ ವರದಿಯನ್ನು ಕೇಂದ್ರ ಸರ್ಕಾರವು ಸಂಸತ್‌ನ ಉಭಯ ಸದನಗಳೆದುರು ಮಂಡಿಸುವುದಕ್ಕೆ ಅನುವುಮಾಡಿಕೊಡಬೇಕು. |
| | | | | |

## Chapter IX Other offences against children ಮಕ್ಕಳ ವಿರುದ್ಧ ಇತರ ಅಪರಾಧಗಳು

| | | | | |
|---|---|---|---|---|
| **Sec 74** | | | **Prohibition on disclosure of identity of children.** | **ಮಕ್ಕಳ ಗುರುತು/ಪತ್ತೆ ಬಹಿರಂಗಪಡಿಸುವುದಕ್ಕೆ ನಿಷೇಧ** |
| | (*1*) | | No report in any newspaper, magazine, news-sheet or audio-visual media or other forms of communication regarding any inquiry or investigation or judicial procedure, shall disclose the name, address or school or any other particular, which may lead to the identification of a child in conflict with law or a child in need of care and protection or a child victim or witness of a crime, involved in such matter, under any other law for the time being in force, nor shall the picture of any such child be published:<br><br>Provided that for reasons to be recorded in writing, the Board or Committee, as the case may be, holding the inquiry may permit such disclosure, if in its opinion such disclosure is in the best interest of the child. | ಕಾನೂನಿನೊಡನೆ ಸಂಘರ್ಷದಲ್ಲಿರುವ ಅಥವಾ ಪೋಷಣೆ ಮತ್ತು ರಕ್ಷಣೆ ಆವಶ್ಯಕತೆ ಇರುವ ಯಾವುದೇ ಮಗು ಅಥವಾ ಅಪರಾಧಕ್ಕೀಡಾದ ಮಕ್ಕಳು ಅಥವಾ ಸಾಕ್ಷಿಯಾಗಿರುವ ಮಕ್ಕಳು ಅಥವಾ ಈಗ ಚಾಲ್ತಿಯಲ್ಲಿರುವ ಇನ್ನಾವುದೇ ಕಾಯಿದೆಯನ್ವಯ ಇಂತಹ ಯಾವುದೇ ಪ್ರಕರಣಗಳಲ್ಲಿ ತೊಡಗಿರುವ ಮಕ್ಕಳನ್ನು ಕುರಿತು ನಡೆದಿರುವ ವಿಚಾರಣೆ, ತನಿಖೆ ಅಥವಾ ನ್ಯಾಯಕ ಪ್ರಕ್ರಿಯೆಗಳನ್ನು ಕುರಿತು ಮಕ್ಕಳ ಗುರುತು ನೀಡಬಹುದಾದ ಹೆಸರು, ವಿಳಾಸ ಅಥವಾ ಶಾಲೆ ಅಥವಾ ಇನ್ನಾವುದೇ ವಿವರಗಳನ್ನಾಗಲೀ, ವರದಿ, ಛಾಯಾಚಿತ್ರಗಳನ್ನಾಗಲೀ ಪತ್ರಿಕೆಗಳಲ್ಲಿ, ವಾರ್ತಾ ಸಂಚಿಕೆಗಳು ಅಥವಾ ಶ್ರವ್ಯ-ದೃಶ್ಯ ಮಾಧ್ಯಮಗಳಲ್ಲಾಗಲೀ ಅಥವಾ ಇನ್ನಾವುದೇ ರೀತಿಯ ಸಂವಹನ ಮಾಧ್ಯಮಗಳಲ್ಲಿ ಪ್ರಕಟಿಸುವಂತಿಲ್ಲ:<br><br>ಆದರೆ, ಬರಹ ರೂಪದಲ್ಲಿ ದಾಖಲಿಸಲಾದ ಕಾರಣಗಳಿಗಾಗಿ, ತನಿಖೆ/ವಿಚಾರಣೆ ಮಾಡುತ್ತಿರುವ ಮಂಡಳಿ ಅಥವಾ ಸಮಿತಿಯು ಅನುಮತಿ ನೀಡಿ, ಅಂತಹ ಪ್ರಕಟಣೆ ಮಗುವಿನ ಹಿತದೃಷ್ಟಿಯಿಂದ ಎಂದು ಭಾವಿಸಿದ್ದಲ್ಲಿ, ವಿವರಗಳನ್ನು ಪ್ರಕಟಿಸಬಹುದು. |
| | (*2*) | | The Police shall not disclose any record of the child for the purpose of character certificate or otherwise in cases where the case has been closed or disposed of. | ಮಕ್ಕಳಿಗೆ ಸಂಬಂಧಿಸಿದ ಯಾವುದೇ ಪ್ರಕರಣವು ಮುಕ್ತಾಯವಾಗಿದೆ ಎಂದು ಸೂಚಿಸಿದ ಮೇಲೆ ಯಾವುದೇ ಪೊಲೀಸ್ ಠಾಣೆಯು ಮಕ್ಕಳ ದಾಖಲೆಗಳನ್ನು, ವಿವರಗಳನ್ನು ಮಕ್ಕಳ ನಡವಳಿಕೆ ಪ್ರಮಾಣಪತ್ರಕ್ಕಾಗಿ ಆಗಲೀ ಮತ್ತೊಂದಕ್ಕಾಗಲೀ ಯಾವುದಕ್ಕೇ ಆಗಲಿ ನೀಡುವಂತಿಲ್ಲ |
| | (*3*) | | Any person contravening the provisions of sub-section (*1*) shall be punishable with imprisonment for a term which may extend to six months or fine which may extend to two lakh rupees or both. | ಈ ಮೇಲಿನ ಉಪ ಸೆ.(1)ಕ್ಕೆ ವಿರುದ್ಧವಾಗಿ ನಡೆದುಕೊಂಡಲ್ಲಿ ಅಂತಹವರಿಗೆ ಆರು ತಿಂಗಳವರೆಗಿನ ಕಾರಾಗೃಹ ವಾಸ ಅಥವಾ ಎರಡು ಲಕ್ಷ ರೂಪಾಯಿವರೆಗೆ ದಂಡ ಅಥವಾ ಈ ಎರಡನ್ನೂ ವಿಧಿಸಲಾಗುತ್ತದೆ |
| | | | | |
| **Sec 75** | | | **Punishment for cruelty to child.** | **ಮಕ್ಕಳ ಮೇಲೆ ಕ್ರೌರ್ಯ ತೋರಿದವರಿಗೆ ಶಿಕ್ಷೆ** |
| | | | Whoever, having the actual charge of, or control over, a child, assaults, abandons, abuses, exposes or wilfully neglects the child or causes or procures the child to be assaulted, abandoned, abused, exposed or neglected in a manner likely to cause such child unnecessary mental or physical suffering, shall be punishable with imprisonment for a term which may extend to three years or with fine of one lakh rupees or with both:<br><br>Provided that in case it is found that such abandonment of the child by the biological parents is due to circumstances beyond their control, it shall be presumed that such abandonment is not wilful and the penal provisions of this section shall not apply in such cases: | ತಮ್ಮ ವಶದಲ್ಲಿ / ಆರೈಕೆಯಲ್ಲಿ ಇರುವ ಯಾವುದೇ ಮಗುವಿನ ಮೇಲೆ ಯಾರೇ ಆಗಲಿ ಹಲ್ಲೆ ಮಾಡಿದಲ್ಲಿ, ಕಾನೂನಿಗೆ ವಿರುದ್ಧವಾಗಿ ಪರಿತ್ಯಜಿಸಿದಲ್ಲಿ, ಅರಿವಿದ್ದೂ ಮಗುವನ್ನು ತೊಂದರೆ ಹಿಂಸೆಗೆ ಒಡ್ಡಿದಲ್ಲಿ ಆ ಮೂಲಕ ಆ ಮಗು/ಮಕ್ಕಳಿಗೆ ಮಾನಸಿಕ, ದೈಹಿಕ ತೊಂದರೆ/ಹಿಂಸೆ ಕೊಟ್ಟಲ್ಲಿ ಅಂತಹ ವ್ಯಕ್ತಿ/ವ್ಯಕ್ತಿಗಳಿಗೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹ ವಾಸ ಅಥವಾ ಒಂದು ಲಕ್ಷ ರೂಪಾಯಿಗಳ ದಂಡ ಅಥವಾ ಈ ಎರಡನ್ನೂ ವಿಧಿಸಲಾಗುತ್ತದೆ<br><br>ಆದರೆ ಯಾವುದೇ ಮಗುವಿನ ಜೈವಿಕ ಪೋಷಕರು ತಮ್ಮ ಕೈಮೀರಿದ ಪರಿಸ್ಥಿತಿಯ ಕಾರಣದಿಂದ ಮಗುವನ್ನು ತ್ಯಜಿಸಿದ್ದು ಗೊತ್ತಾದ ಪ್ರಕರಣದಲ್ಲಿ ಅದನ್ನು ಉದ್ದೇಶಪೂರ್ವಕ ತ್ಯಜಿಸುವಿಕೆ ಎಂದು ಪರಿಗಣಿಸಬಾರದು ಮತ್ತು ಇಂತಹ ಪ್ರಕರಣಗಳಿಗೆ ಈ ಸೆಕ್ಷನ್‌ನಲ್ಲಿ ಸೂಚಿಸಿರುವ ಕಾನೂನು ಕ್ರಮ ಅನ್ವಯಿಸುವುದಿಲ್ಲ. |

| | | | | |
|---|---|---|---|---|
| | | | Provided further that if such offence is committed by any person employed by or managing an organisation, which is entrusted with the care and protection of the child, he shall be punished with rigorous imprisonment which may extend up to five years, and fine which may extend up to five lakhs rupees:<br><br>Provided also that on account of the aforesaid cruelty, if the child is physically incapacitated or develops a mental illness or is rendered mentally unfit to perform regular tasks or has risk to life or limb, such person shall be punishable with rigorous imprisonment, not less than three years but which may be extended up to ten years and shall also be liable to fine of five lakhs rupees. | ಆದರೆ ಮುಂದುವರೆದು ಮಗುವಿನ ಪೋಷಣೆ ಮತ್ತು ರಕ್ಷಣೆಯ ಹೊಣೆಯನ್ನು ಹೊತ್ತಿರುವ ಸಂಸ್ಥೆಯಲ್ಲಿ ಕೆಲಸ ಮಾಡುವ ಅಥವಾ ನಿರ್ವಹಿಸುವ ಯಾವುದೇ ವ್ಯಕ್ತಿ ಇಂತಹ ಅಪರಾಧದಲ್ಲಿ ಭಾಗಿಯಾಗಿದ್ದಲ್ಲಿ ಅವರಿಗೆ 5 ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾಗೃಹವಾಸ ಮತ್ತು ಐದು ಲಕ್ಷ ರೂಪಾಯಿಗಳ ತನಕ ದಂಡವನ್ನು ವಿಧಿಸಲಾಗುತ್ತದೆ.<br><br>ಆದರೆ ಮೇಲೆ ಹೇಳಿದ ಕ್ರೌರ್ಯದಿಂದ ಮಗು ದೈಹಿಕವಾಗಿ ಅಸಮರ್ಥವಾದಲ್ಲಿ ಅಥವಾ ಮಾನಸಿಕ ರೋಗಕ್ಕೆ ಒಳಗಾದಲ್ಲಿ ಅಥವಾ ತನ್ನ ದೈನಂದಿಕ ಕಾರ್ಯಗಳಲ್ಲಿ ನಿರ್ವಹಿಸಲು ಮಾನಸಿಕವಾಗಿ ಅಸಮರ್ಥರಾದಲ್ಲಿ ಅಥವಾ ಜೀವಕ್ಕೆ ಅಥವಾ ದೇಹದ ಯಾವುದೇ ಭಾಗಕ್ಕೆ ಅಪಾಯವಾದಲ್ಲಿ ಅಂತಹ ಕೃತ್ಯ ಮಾಡಿದ ವ್ಯಕ್ತಿಗೆ ಮೂರು ವರ್ಷಗಳಿಗೆ ಕಡಿಮೆ ಇಲ್ಲದಂತೆ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ವಾಸ ಮತ್ತು ಐದು ಲಕ್ಷ ರೂಪಾಯಿಗಳ ತನಕ ದಂಡವನ್ನು ವಿಧಿಸಲಾಗುತ್ತದೆ |
| | | | | |
| **Sec** | | | **Employment of child for begging.** | **ಮಕ್ಕಳನ್ನು ಭಿಕ್ಷೆಗಾಗಿ ನೇಮಿಸಿಕೊಳ್ಳುವುದು** |
| **76** | (*1*) | | Whoever employs or uses any child for the purpose of begging or causes any child to beg shall be punishable with imprisonment for a term which may extend to five years and shall also be liable to fine of one lakh rupees:<br><br>Provided that, if for the purpose of begging, the person amputates or maims the child, he shall be punishable with rigorous imprisonment for a term not less than seven years which may extend up to ten years, and shall also be liable to fine of five lakh rupees. | ಯಾರೇ ಆಗಲಿ ಮಕ್ಕಳನ್ನು ಭಿಕ್ಷೆ ಬೇಡಲು ಇಟ್ಟುಕೊಂಡಲ್ಲಿ ಅಥವಾ ಮಕ್ಕಳಿಂದ ಭಿಕ್ಷೆ ಬೇಡಿಸಿದ್ದೇ ಆದಲ್ಲಿ ಅಂತಹವರಿಗೆ ಐದು ವರ್ಷಗಳ ತನಕ ಕಾರಾಗೃಹ ಶಿಕ್ಷೆ ಮತ್ತು ಒಂದು ಲಕ್ಷ ರೂಪಾಯಿಗಳ ವರೆಗೆ ದಂಡವನ್ನು ವಿಧಿಸಲಾಗುತ್ತದೆ.<br><br>ಭಿಕ್ಷೆಯ ಉದ್ದೇಶಕ್ಕಾಗಿ ಮಗುವಿನ ಅಂಗವನ್ನು ಊನಗೊಳಿಸಿದ್ದಲ್ಲಿ, ಕತ್ತರಿಸಿದ್ದಲ್ಲಿ ಅಂತಹವರಿಗೆ ಏಳು ವರ್ಷಗಳಿಗೆ ಕಡಿಮೆ ಇಲ್ಲದಂತೆ ಹತ್ತು ವರ್ಷಗಳಿಗೆ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಐದು ಲಕ್ಷ ರೂಪಾಯಿಗಳ ವರೆಗೆ ದಂಡವನ್ನು ವಿಧಿಸಲಾಗುತ್ತದೆ |
| | (*2*) | | Whoever, having the actual charge of, or control over the child, abets the commission of an offence under sub-section (*1*), shall be punishable with the same punishment as provided for in sub-section (*1*) and such person shall be considered to be unfit under sub-clause (*v*) of clause (*14*) of section 2:<br><br>Provided that the said child, shall not be considered a child in conflict with law under any circumstances, and shall be removed from the charge or control of such guardian or custodian and produced before the Committee for appropriate rehabilitation. | ಮಗುವಿನ ಉಸ್ತುವಾರಿ ಅಥವಾ ನಿಯಂತ್ರಣ ಹೊಂದಿರುವ ಯಾರೇ ಆಗಲಿ, ಮೇಲಿನ ಉಪ ಸೆ (1)ರ ಅಪರಾಧ ಮಗುವಿನ ಮೇಲೆ ಆಗಲು ಸಹಕರಿಸುತ್ತಾರೋ, ಅವರಿಗೆ ಉಪ ಸೆ(1)ರಲ್ಲಿ ಸೂಚಿಸಿರುವ ಶಿಕ್ಷೆಯನ್ನು ವಿಧಿಸಿ ಅವರನ್ನು ಸೆ.2ರ ಉಪ ಸೆ(14)ರ ಸಬ್ ಕ್ಲಾಝ್ (*v*)ನಲ್ಲಿ ಸೂಚಿಸಿರುವಂತೆ ಪೋಷಕರಾಗಿರಲು ಅನರ್ಹರು ಎಂದು ಘೋಷಿಸಲಾಗುತ್ತದೆ.<br><br>ಆದರೆ, ಸಂಬಂಧಿತ ಮಗುವನ್ನು ಯಾವುದೇ ಸಂದರ್ಭದಲ್ಲೂ ಕಾನೂನಿನೊಡನನೆ ಸಂಘರ್ಷದಲ್ಲಿರುವ ಮಗು ಎಂದು ಪರಿಗಣಿಸಲಾಗುವುದಿಲ್ಲ ಮತ್ತು ಆ ಮಗುವನ್ನು ಸಂಬಂಧಿತ ಉಸ್ತುವಾರಿ ಅಥವಾ ನಿಯಂತ್ರಣ ಹೊಂದಿರುವ ವ್ಯಕ್ತಿಯಿಂದ ಬೇರ್ಪಡಿಸಿ ಮಗುವನ್ನು ಸಮಿತಿಯೆದುರು ಹಾಜರು ಪಡಿಸಿ ಸೂಕ್ತ ಪುನರ್ವಸತಿಗಾಗಿ ಕೋರಲಾಗುತ್ತದೆ. |
| | | | | |
| **Sec 77** | | | **Penalty for giving intoxicating liquor or narcotic drug or psychotropic substance to a child.** | **ಮಕ್ಕಳಿಗೆ ಅಮಲು ಬರಿಸುವ, ಮದ್ಯಸಾರ, ಮಾದಕ ವಸ್ತು ಅಥವಾ ಭ್ರಾಮಕಾರಕ ಮಾದಕ ದ್ರವ್ಯಗಳನ್ನು ನೀಡುವವರಿಗೆ ಶಿಕ್ಷೆ** |
| | | | Whoever gives, or causes to be given, to any child any intoxicating liquor or any narcotic drug or tobacco products or psychotropic substance, except on the order of a duly qualified medical Practitioner, shall be punishable with rigorous imprisonment for a term which may extend to seven years and | ಯಾರೇ ಆಗಲಿ ಮಕ್ಕಳಿಗೆ ವೈದ್ಯರ ಸಲಹೆಯ ಹೊರತು, ಅಮಲು ತರಿಸುವ ಹೆಂಡ/ಸಾರಾಯಿ ಅಥವಾ ಯಾವುದೇ ಭ್ರಾಮಕಾರಕ ಮಾದಕ ದ್ರವ್ಯ ಅಥವಾ ಹೊಗೆಸೊಪ್ಪಿನ ಪದಾರ್ಥಗಳನ್ನು ನೀಡಿದ್ದೇ ಆದಲ್ಲಿ ಅಥವಾ ಕೊಡಿಸಿದಲ್ಲಿ, ಅವರಿಗೆ ಏಳು ವರ್ಷಗಳ ತನಕ ಕಠಿಣ ಶಿಕ್ಷೆ ಮತ್ತು ಒಂದು ಲಕ್ಷ ರೂಪಾಯಿಯವರೆಗೆ ದಂಡವನ್ನು ವಿಧಿಸಲಾಗುತ್ತದೆ. |

| | | | | |
|---|---|---|---|---|
| | | | shall also be liable to a fine which may extend up to one lakh rupees. | |
| | | | | |
| **Sec 78** | | | **Using a child for vending, peddling, carrying, supplying or smuggling any intoxicating liquor, narcotic drug or psychotropic substance.** | **ಅಮಲು ಬರಿಸುವ, ಭ್ರಾಮಕಾರಕ ಅಥವಾ ಮಾದಕ ವಸ್ತುಗಳ ಮಾರಾಟ, ಸಾಗಣೆ, ಸರಬರಾಜು ಅಥವಾ ಕಳ್ಳಸಾಗಾಣಿಕೆಯಲ್ಲಿ ಮಕ್ಕಳನ್ನು ಬಳಸುವುದು** |
| | | | Whoever uses a child, for vending, peddling, carrying, supplying or smuggling any intoxicating liquor, narcotic drug or psychotropic substance, shall be liable for rigorous imprisonment for a term which may extend to seven years and shall also be liable to a fine up to one lakh rupees. | ಯಾರೇ ಆಗಲಿ, ಮಾದಕ ಪದಾರ್ಥಗಳು, ಹೆಂಡ/ಸಾರಾಯಿ, ಭ್ರಾಮಕಾರಕ ವಸ್ತುಗಳನ್ನು ಮಕ್ಕಳಿಂದ ಸಾಗಿಸುವುದು, ಮಾರಾಟ ಮಾಡಿಸುವುದು, ಸರಬರಾಜು ಮಾಡಿಸುವುದು ಅಥವಾ ಕಳ್ಳಸಾಗಾಣಿಕೆ ಮಾಡಿಸುವುದು ಮಾಡಿದಲ್ಲಿ ಅಂತಹವರಿಗೆ ಏಳು ವರ್ಷಗಳವರೆಗೆ ಕಠಿಣ ಕಾರಾಗೃಹ ವಾಸ ಮತ್ತು ಒಂದು ಲಕ್ಷ ರೂಪಾಯಿಯವರೆಗೆ ದಂಡವನ್ನು ವಿಧಿಸಲಾಗುತ್ತದೆ. |
| | | | | |
| **Sec 79** | | | **Exploitation of a child employee.** | **ಮಕ್ಕಳನ್ನು ದುಡಿಯುವುದಕ್ಕಿಟ್ಟುಕೊಂಡು ಶೋಷಿಸುವುದು** |
| | | | Notwithstanding anything contained in any law for the time being in force, whoever ostensibly engages a child and keeps him in bondage for the purpose of employment or withholds his earnings or uses such earning for his own purposes shall be punishable with rigorous imprisonment for a term which may extend to five years and shall also be liable to fine of one lakh rupees.<br>*Explanation.*— For the purposes of this section, the term "employment" shall also include <u>selling goods and services, and entertainment in public places for economic gain</u>. | ಈಗ ಚಾಲ್ತಿಯಲ್ಲಿರುವ ಯಾವುದೇ ಕಾಯಿದೆಯಲ್ಲಿ ಏನೇ ಹೇಳಿದ್ದರೂ, ಯಾರೇ ಆಗಲಿ ಮಕ್ಕಳನ್ನು ಕೆಲಸಕ್ಕಿಟ್ಟುಕೊಂಡು ಅಂತಹ ಮಗುವನ್ನು ಜೀತಕ್ಕಿಟ್ಟುಕೊಂಡಿದ್ದಲ್ಲಿ ಅಥವಾ ಆ ಮಗುವಿನ ಆದಾಯವನ್ನು ಹಿಡಿದಿಟ್ಟುಕೊಂಡಿದ್ದಲ್ಲಿ ಆತೌಅ ಅದನ್ನು ತಾನೇ ಬಳಸಿದ್ದಲ್ಲಿ ಅವರಿಗೆ ಐದು ವರ್ಷಗಳ ತನಕ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಒಂದು ಲಕ್ಷ ರೂಪಾಯಿಯವರೆಗೆ ದಂಡವನ್ನು ವಿಧಿಸಲಾಗುತ್ತದೆ.<br><br>ವಿವರಣೆ: ಈ ವಿಭಾಗದಲ್ಲಿ, 'ಉದ್ಯೋಗಕ್ಕೆ ನೇಮಿಸಿಕೊಳ್ಳುವುದು' ಎಂದರೆ, ವಸ್ತುಗಳು ಮತ್ತು ಸಏವೆಗಳನ್ನು ಮಾರುವುದು ಮತ್ತು ಸಾರ್ವಜನಿಕ ಪ್ರದೇಶಗಳಲ್ಲಿ ಹಣ ಸಂಪಾದನೆಗಾಗಿ ಮನೋರಂಜನೆ ನೀಡುವುದೂ ಸೇರುತ್ತದೆ. |
| | | | | |
| **Sec 80** | | | **Punitive measures for adoption without following prescribed procedures.** | **ನಿರ್ದಿಷ್ಟ ಪ್ರಕ್ರಿಯೆಗಳನ್ನು ಪಾಲಿಸದೆ ಮಕ್ಕಳನ್ನು ದತ್ತು ತೆಗೆದುಕೊಂಡವರಿಗೆ ಶಿಕ್ಷೆ** |
| | | | If any person or organisation offers or gives or receives, any orphan, abandoned or surrendered child, for the purpose of adoption without following the provisions or procedures as provided in this Act, such person or organisation shall be punishable with imprisonment of either description for a term which may extend upto three years, or with fine of one lakh rupees, or with both:<br><br>Provided in case where the offence is committed by a recognised adoption agency, in addition to the above punishment awarded to the persons in-charge of, and responsible for the conduct of the day-to-day affairs of the adoption agency, the registration of such agency under sec. 41 and its recognition under section 65 shall also be withdrawn for a minimum period of one year. | ಯಾರೇ ಆಗಲಿ ಅಥವಾ ಯಾವುದೇ ಸಂಸ್ಥೆ ಯಾವುದೇ ಅನಾಥ, ಅಥವಾ ತಿರಸ್ಕರಿಸಲ್ಪಟ್ಟ ಅಥವಾ ತ್ಯಜಿಸಲ್ಪಟ್ಟ ಅಥವಾ ಪರಿತ್ಯಜಿಸಲ್ಪಟ್ಟ ಮಗುವನ್ನು ಈ ಕಾಯಿದೆಯಲ್ಲಿ ಸೂಚಿಸಿರುವ ವಿಧಿವಿಧಾನಗಳನ್ನು ಅನುಸರಿಸದೆ ದತ್ತುವಿಗಾಗಿ ನೀಡಲು ಮುಂದೆ ಬಂದಿದ್ದೇ ಆದಲ್ಲಿ ಅಥವಾ ಹಾಗೆ ನೀಡಿದ್ದೇ ಆದಲ್ಲಿ ಅಂತಹ ವ್ಯಕ್ತಿ ಅಥವಾ ಸಂಸ್ಥೆಗೆ ಮೂರು ವರ್ಷಗಳ ತನಕದ ಕಾರಾಗೃಹ ಶಿಕ್ಷೆ ಮತ್ತು ಒಂದು ಲಕ್ಷ ರೂಪಾಯಿಯವರೆಗೆ ದಂಡ ಅಥವಾ ಎರಡನ್ನೂ ವಿಧಿಸಲಾಗುತ್ತದೆ:<br><br>ಇಂತಹದೊಂದು ಅಪರಾಧವನ್ನು ಪ್ರಾಮಾಣೀಕರಿಸಿದ ದತ್ತು ಸಂಸ್ಥೆಯು ಮಾಡಿದ್ದೇ ಆದಲ್ಲಿ, ಸಂಸ್ಥೆಯ ದೈನಂದಿನ ಕಾರ್ಯನಿರ್ವಹಣೆ ಮಾಡುವ ವ್ಯಕ್ತಿಗೆ ಈ ಮೇಲಿನ ಶಿಕ್ಷೆಯಲ್ಲದೆ, ಸಂಸ್ಥೆಗೆ ಸೆ. 41 ಮತ್ತು ಸಎ. 65ರಡಿಯಲ್ಲಿ ನೀಡಲಾಗಿರುವ ಪ್ರಮಾಣ ಪತ್ರ ಗುರುತಿಸುವಿಕೆಯನ್ನು ಕನಿಷ್ಟ ಒಂದು ವರ್ಷಗಳ ವರೆಗೆ ತಡೆಹಿಡಿಯಲಾಗುತ್ತದೆ. |
| | | | | |

| | | | | |
|---|---|---|---|---|
| **Sec 81** | | | **Sale and procurement of children for any purpose.** | **ಯಾವುದೇ ಉದ್ದೇಶಕ್ಕಾಗಿ ಮಕ್ಕಳನ್ನು ಮಾರುವುದು ಮತ್ತು ಪಡೆದುಕೊಳ್ಳುವುದು** |
| | | | Any person who sells or buys a child for any purpose shall be punishable with rigorous imprisonment for a term which may extend to five years and shall also be liable to fine of one lakh rupees:<br><br>Provided that where such offence is committed by a person having actual charge of the child, including employees of a hospital or nursing home or maternity home, the term of imprisonment shall not be less than three years and may extend up to seven years. | ಯಾವುದೇ ವ್ಯಕ್ತಿ ಎಂತಹದೇ ಉದ್ದೇಶಕ್ಕಾಗಿ ಮಕ್ಕಳನ್ನು ಮಾರುವುದು ಅಥವಾ ಕೊಳ್ಳುವ ಅಪರಾಧವನ್ನು ಮಾಡಿದ್ದೇ ಆದಲ್ಲಿ ಅಂತಹ ವ್ಯಕ್ತಿಗಳಿಗೆ ಐದು ವರ್ಷಗಳ ವರೆಗೆ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಒಂದು ಲಕ್ಷ ರೂಪಾಯಿಯ ವರೆಗೆ ದಂಡವನ್ನು ವಿಧಿಸಲಾಗುತ್ತದೆ.<br><br>ಆದರೆ, ಇಂತಹ ಅಪರಾಧವನ್ನು ಮಗುವಿನ ಸುಪರ್ದಿ ಹೊಂದಿರುವ ವ್ಯಕ್ತಿ, ಆಸ್ಪತ್ರೆ, ಹೆರಿಗೆ ಆಸ್ಪತ್ರೆ ಅಥವಾ ನರ್ಸಿಂಗ್ ಹೋಮಿನ ಸಿಬ್ಬಂದಿ ಮಾಡಿದ್ದೇ ಆದಲ್ಲಿ ಅಂತಹವರಿಗೆ ಮೂರು ವರ್ಷಗಳಿಗೆ ಕಡಿಮೆ ಇಲ್ಲದಂತೆ ಏಳು ವರ್ಷಗಳಿಗೆ ವಿಸ್ತರಿಸಬಹುದಾದ ಕಾರಾಗೃಹ ಶಿಕ್ಷೆಯನ್ನು ವಿಧಿಸಲಾಗುತ್ತದೆ. |
| | | | | |
| **Sec** | | | **Corporal punishment.** | **ದೈಹಿಕ ಶಿಕ್ಷೆ** |
| **82** | (*1*) | | Any person in-charge of or employed in a child care institution, who subjects a child to corporal punishment with the aim of disciplining the child, shall be liable, on the first conviction, to a fine of ten thousand rupees and for every subsequent offence, shall be liable for imprisonment which may extend to three months or fine or with both. | ಮಕ್ಕಳ ಪೋಷಣೆ ರಕ್ಷಣೆ ಸಂಸ್ಥೆಗಳಲ್ಲಿರುವ ಯಾವುದೇ ಸಿಬ್ಬಂದಿ ಅಥವಾ ಅದರ ಉಸ್ತುವಾರಿಯಲ್ಲಿರುವ ವ್ಯಕ್ತಿಗಳು ಮಕ್ಕಳಿಗೆ ಶಿಸ್ತಿನ ಹೆಸರಿನಲ್ಲೂ ದೈಹಿಕ ಶಿಕ್ಷೆಯನ್ನು ನೀಡಿದ್ದೇ ಆದಲ್ಲಿ, ಅಂತಹ ವ್ಯಕ್ತಿಗಳಿಗೆ ಮೊದಲ ಅಪರಾಧಕ್ಕೆ ಹತ್ತು ಸಾವಿರ ರೂಪಾಯಿ ದಂಡ ಮತ್ತು ಮುಂದಿನ ಪ್ರತಿ ಅಪರಾಧಕ್ಕೆ ಮೂರು ತಿಂಗಳ ಕಾರಾಗೃಹ ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲಾಗುತ್ತದೆ. |
| | (*2*) | | If a person employed in an institution referred to in sub-section (*1*), is convicted of an offence under that sub-sec. such person shall also be liable for dismissal from service, and shall also be debarred from working directly with children thereafter. | ಮೇಲಿನ ಉಪ ಸೆ. (1)ರಲ್ಲಿ ಸೂಚಿಸಲಾದ ಅಪರಾಧವನ್ನು ಸಂಸ್ಥೆಯ ಸಿಬ್ಬಂದಿ ನಡೆಸಿ ಶಿಕ್ಷೆಗೆ ಗುರಿಯಾಗಿದ್ದೇ ಆದಲ್ಲಿ, ಅಂತಹ ವ್ಯಕ್ತಿಯನ್ನು ಸಂಸ್ಥೆಯಿಂದ ಅಮಾನತ್ತುಗೊಳಿಸಲಾಗುತ್ತದೆ ಮತ್ತು ಇನ್ನು ಮುಂದೆ ಮಕ್ಕಳೊಂದಿಗೆ ನೇರವಾಗಿ ಕೆಲಸ ಮಾಡುವುದರಿಂದ ನಿರ್ಬಂಧಗೊಳಿಸಲಾಗುತ್ತದೆ. |
| | (*3*) | | In case, where any corporal punishment is reported in an institution referred to in sub-section (*1*) and the management of such institution does not cooperate with any inquiry or comply with the orders of the Committee or the Board or court or State Government, the person in-charge of the management of the institution shall be liable for punishment with imprisonment for a term not less than three years and shall also be liable to fine which may extend to one lakh rupees. | ಉಪ ಸೆ (1)ರಲ್ಲಿ ಸೂಚಿಸಿದ ದೈಹಿಕ ಶಿಕ್ಷೆಯ ಅಪರಾಧವು ಯಾವುದಾದರೂ ಸಂಸ್ಥೆಯಿಂದ ವರದಿಯಾಗಿದ್ದು, ಆ ಸಂಸ್ಥೆ ನಿರ್ವಹಣೆಗೆ ಸಂಬಂಧಿಸಿದ ವ್ಯಕ್ತಿಗಳು ತನಿಖೆಗೆ ಸಹಕರಿಸದಿದ್ದಲ್ಲಿ ಅಥವಾ ಸಮಿತಿ ಅಥವಾ ಮಂಡಳಿ ಅಥವಾ ನ್ಯಾಯಾಲಯ ಅಥವಾ ರಾಜ್ಯ ಸರ್ಕಾರವು ನೀಡುವ ಸಲಹೆ ಸೂಚನೆಗಳನ್ನು ಪಾಲಿಸದಿದ್ದಲ್ಲಿ ಅಂತಹ ಸಂಸ್ಥೆಯ ನಿರ್ವಹಣೆಗಾರರಿಗೆ ಮೂರು ವರ್ಷಗಳಿಗೆ ಕಡಿಮೆ ಇಲ್ಲದಂತೆ ಕಾರಾಗೃಹ ಶಿಕ್ಷೆ ಗುರಿಪಡಿಸಲಾಗುತ್ತದೆ ಮತ್ತು ಒಂದು ಲಕ್ಷ ರೂಪಾಯಿಯವರೆಗೆ ದಂಡವನ್ನು ವಿಧಿಸಲಾಗುತ್ತದೆ. |
| | | | | |
| **Sec 83** | | | **Use of child by militant groups or other adults.** | **ಮಕ್ಕಳನ್ನು ಉಗ್ರಗಾಮಿ ಗುಂಪುಗಳು ಮತ್ತು ಇತರ ವಯಸ್ಕರು ಬಳಸಿಕೊಳ್ಳುವುದು** |
| | (*1*) | | Any non-State, self-styled militant group or outfit declared as such by the Central Government, if recruits or uses any child for any purpose, shall be liable for rigorous imprisonment for a term which may extend to seven years and shall also be liable to fine of five lakh rupees. | ಯಾವುದೇ ಸರ್ಕಾರೇತರ, ಸ್ವಯಂಘೋಷಿತ ಉಗ್ರಗಾಮಿ ಗುಂಪು ಅಥವಾ ಕೇಂದ್ರ ಸರ್ಕಾರವು ನಿಷೇಧಿತವೆಂದು ಘೋಷಿಸಲಾದ ಗುಂಪು ಮಕ್ಕಳನ್ನು ಸೇರಿಸಿಕೊಳ್ಳುವುದು ಅಥವಾ ಯಾವುದೇ ಉದ್ದೇಶಕ್ಕಾಗಿ ಬಳಸುವುದನ್ನು ಮಾಡಿದ್ದೇ ಆದಲ್ಲಿ ಅಂತಹವರಿಗೆ ಏಳು ವರ್ಷಗಳವರೆಗೆ ಕಠಿಣ ಕಾರಾಗೃಹ ವಾಸ ಮತ್ತು ಐದು ಲಕ್ಷ ರೂಪಾಯಿಯವರೆಗೆ ದಂಡವನ್ನೂ ವಿಧಿಸಲಾಗುತ್ತದೆ. |
| | (*2*) | | Any adult or an adult group uses children for illegal activities either individually or as a gang shall be liable for rigorous | ಯಾವುದಾದರೂ ವಯಸ್ಕರು ಅಥವಾ ವಯಸ್ಕರ ಗುಂಪು ಮಕ್ಕಳನ್ನು ಯಾವುದೇ ರೀತಿಯ ಕಾನೂನು ಬಾಹಿರ |

| | | | | |
|---|---|---|---|---|
| | | | imprisonment for a term which may extend to seven years and shall also be liable to fine of five lakh rupees. | ಚಟುವಟಿಕೆಗಳಿಗೆ ವ್ಯಕ್ತಿಗತವಾಗಿ ಅಥವಾ ಒಂದು ತಂಡವಾಗಿ ಬಳಸಿದ್ದೇ ಆದಲ್ಲಿ, ಅಂತಹವರಿಗೆ ಏಳು ವರ್ಷಗಳವರೆಗೆ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಐದು ಲಕ್ಷ ರೂಪಾಯಿಯವರೆಗೆ ದಂಡವನ್ನು ವಿಧಿಸಲಾಗುತ್ತದೆ. |
| | | | | |
| **Sec** | | | **Kidnapping and abduction of child.** | **ಮಕ್ಕಳ ಅಪಹರಣ ಮತ್ತು ಒತ್ತೆ ಹಿಡಿದಿಡುವುದು** |
| **84** | | | For the purposes of this Act, the provisions of sections 359 to 369 of the Indian Penal Code, shall *mutatis mutandis* apply to a child or a minor who is under the age of eighteen years and all the provisions shall be construed accordingly. | ಈ ಕಾಯಿದೆ ಉದ್ದೇಶಕ್ಕಾಗಿ ಭಾರತೀಯ ದಂಡ ಸಂಹಿತೆ (IPC) 1860ಯ ಸೆ. 359ರಿಂದ 369ರವರೆಗಿನ ಅವಕಾಶಗಳನ್ನು ಅಲ್ಲಿರುವಂತೆಯೇ ಗಮನಿಸಿ ಮಗು ಅಥವಾ 18 ವರ್ಷದೊಳಗಿನ ಅಪ್ರಾಪ್ತ ವಯಸ್ಸಿನವರಿಗೆ ಅನ್ವಯಿಸಿ ಅದರಂತೆಯೇ ಬಳಸಿ ಜಾರಿಗೊಳಿಸಲಾಗುತ್ತದೆ. |
| | | | | |
| **Sec 85** | | | **Offences committed on disabled children.** | **ಅಂಗವಿಕಲತೆಯಿರುವ ಮಕ್ಕಳ ಮೇಲೆ ಆಗುವ ಆಪರಾಧಿಕ ಕೃತ್ಯಗಳು** |
| | | | Whoever commits any of the offences referred to in this Chapter on any child who is disabled as so certified by a medical practitioner, then, such person shall be liable to twice the penalty provided for such offence.<br><br>*Explanation*.— For the purposes of this Act, the term “disability” shall have the same meaning as assigned to it under clause (*i*) of section 2 of the Persons with Disabilities (Equal Opportunities, Protection of Rights and Full Participation) Act, 1995. | ಈ ವಿಭಾಗದಲ್ಲಿ ಸೂಚಿಸಲಾಗಿರುವ ಯಾವುದೇ ಅಪರಾಧವನ್ನು ವೈದ್ಯರು ಅಂಗವಿಲತೆಯಿರುವ ಮಗು ಎಂದು ಪ್ರಾಮಾಣಿಕರಿಸಿದ ಯಾವುದೇ ಮಕ್ಕಳ ಮೇಲೆ ನಡೆಸಿದ್ದಲ್ಲಿ ಅಂತಹ ವ್ಯಕ್ತಿಗಳಿಗೆ ಅಂತಹ ಅಪರಾಧಗಳಲ್ಲಿ ಸೂಚಿಸಲಾಗಿರುವ ಶಿಕ್ಷೆಯ ಎರಡು ಪ್ರಮಾಣವನ್ನು ವಿಧಿಸಲಾಗುತ್ತದೆ.<br><br>ವಿವರಣೆ: ಈ ಕಾಯಿದೆಯ ಉದ್ದೇಶಕ್ಕಾಗಿ ‘ಅಂಗವಿಕಲತೆ’ ಎಂಬುದಕ್ಕೆ ಅಂಗವಿಕಲತೆಯಿರುವ ವ್ಯಕ್ತಿಗಳ (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಮತ್ತು ಸಂಪೂರ್ಣ ಭಾಗವಹಿಸುವಿಕೆ) ಕಾಯಿದೆ 1995,ರ ಸೆ. 2ರ ಉಪ ಸೆ. (*i*) ನೀಡಿರುವ ವ್ಯಾಖ್ಯಾನವನ್ನೇ ಬಳಸಲಾಗುತ್ತದೆ. |
| | | | | |
| **Sec 86** | | | **Classification of offences and designated court.** | **ಆಪರಾಧಿಕ ಕೃತ್ಯಗಳ ವಿಂಗಡಣೆ ಮತ್ತು ಅವುಗಳನ್ನು ವಿಚಾರಣೆ ಮಾಡಲು ನಿರ್ದೇಶಿಸಿರುವ ನ್ಯಾಯಾಲಯಗಳು** |
| | (*1*) | | Where an offence under this Act is punishable with imprisonment for a term <u>more than seven years,</u> then, such offence shall be <u>cognizable, non-bailable and triable</u> by a Children’s Court. | ಈ ಕಾಯಿದೆಯಲ್ಲಿ ಸೂಚಿಸಿರುವ ಅಪರಾಧಗಳಿಗೆ ಯಾವುದಕ್ಕೆ ಏಳು ವರ್ಷಕ್ಕೂ ಹೆಚ್ಚಿನ ಕಾರಾಗೃಹ ಶಿಕ್ಷೆ ಎಂದು ಸೂಚಿಸಲಾಗಿದೆಯೋ ಅವುಗಳನ್ನು ಪೊಲೀಸರು ತಾವೇತಾವಾಗಿ (ದೂರು ರಹಿತವಾಗಿ) ಗಣನೆಗೆ ತೆಗೆದುಕೊಳ್ಳಬಹುದಾದ, ಜಾಮೀನು ರಹಿತವಾದ ಮತ್ತು ಮಕ್ಕಳ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಬಹುದಾದ ಅಪರಾಧಗಳೆಂದು ಪರಿಗಣಿಸಲಾಗುತ್ತದೆ. |
| | (*2*) | | Where an offence under this Act is punishable with imprisonment for a term of three years and above, but not more than seven years, then, such offence shall <u>be cognizable, non-bailable and triable</u> by a Magistrate of First Class. | ಈ ಕಾಯಿದೆಯಡಿ ಸೂಚಿಸಲಾದ ಯಾವ ಅಪರಾಧಗಳಿಗೆ ಮೂರು ಅಥವಾ ಹೆಚ್ಚಿನ ಆದರೆ ಏಳು ವರ್ಷಗಳಿಗೆ ಕಡಿಮೆ ಕಾರಾಗೃಹ ಶಿಕ್ಷೆ ಎಂದು ಸೂಚಿಸಲಾಗಿದೆಯೋ ಅಂತಹ ಅಪರಾಧಗಳನ್ನು ಪೊಲೀಸರು ತಾವೇತಾವಾಗಿ (ದೂರು ರಹಿತವಾಗಿ) ಗಣನೆಗೆ ತೆಗಗೆದುಕೊಳ್ಳಬಹುದಾದ, ಜಾಮೀನು ರಹಿತವಾದ ಮತ್ತು ಮೊದಲ ದರ್ಜೆಯ ನ್ಯಾಯಾಧೀಶರ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಲಾಗುತ್ತದೆ. |
| | (*3*) | | Where an offence, under this Act, is punishable with imprisonment for less than three years or with fine only, then, such offence shall be <u>non-cognizable, bailable and triable</u> by any Magistrate. | ಈ ಕಾಯಿದೆಯಡೆ ಸೂಚಿಸಲಾದ ಯಾವ ಅಪರಾಧಗಳಿಗೆ ಮೂರು ವರ್ಷಗಳಿಗೆ ಕಡಿಮೆ ಕಾರಾಗೃಹ ಶಿಕ್ಷೆ ಅಥವಾ ದಂಡ ಮಾತ್ರ ವಿಧಿಸಲಾಗುತ್ತದೋ ಅಂತಹ ಅಪರಾಧಗಳನ್ನು ದೂರಿನಿಂದ ಪರಿಗಣಿಸಬೇಕು ಮತ್ತು ಜಾಮೀನು ನೀಡಬಹುದು ಮತ್ತು ಯಾವುದೇ ನ್ಯಾಯಾಧೀಶರೆದುರು ವಿಚಾರಣೆ ನಡೆಸಬಹುದು. |

| | | | | |
|---|---|---|---|---|
| **Sec 87** | | | **Abetment.** | **ಪ್ರಚೋದನೆ (ಅಪರಾಧಿಕ ಕೃತ್ಯಕ್ಕೆ)** |
| | | | Whoever abets any offence under this Act, if the act abetted is committed in consequence of the abetment, shall be punished with the punishment provided for that offence.<br><br>*Explanation.*— An act or offence is said to be committed in consequence of abetment, when it is committed in consequence of the instigation, or in pursuance of the conspiracy or with the aid, which constitutes the abetment. | ಈ ಕಾಯಿದೆಯಲ್ಲಿ ಸೂಚಿಸಲಾಗಿರುವ ಯಾವುದೇ ಅಪರಾಧವನ್ನು ಮಾಡಲು ಯಾರೇ ಆಗಲಿ ಪ್ರಚೋದನೆ ನೀಡಿದ್ದೇ ಆದಲ್ಲಿ ಮತ್ತು ಅಂತಹ ಅಪರಾಧವನ್ನು ಮಾಡಿದ್ದೇ ಆದಲ್ಲಿ, ಆಯಾ ಅಪರಾಧಕ್ಕೆ ನಿರ್ದಿಷ್ಟಪಡಿಸಲಾದಷ್ಟೇ ಶಿಕ್ಷೆಯನ್ನು ವಿಧಿಸಲಾಗುತ್ತದೆ.<br><br>ವಿವರಣೆ– ಅಪರಾಧಿಕ ಕೃತ್ಯವನ್ನು ಪ್ರಚೋದನೆಯಿಂದ ಮಾಡಲಾಯಿತು ಎಂದರೆ, ಪ್ರಚೋದನೆ ನೀಡಿದ ಪರಿಣಾಮವಾಗಿ ಅಪರಾಧವನ್ನು ಮಾಡುವುದು ಅಥವಾ ಪಿತೂರಿ ಮಾಡಿ ಅಥವಾ ಸಹಾಯ ಮಾಡಿ ನಡೆಸಿದ ಅಪರಾಧಗಳು ಎಂದು. |
| | | | | |
| **Sec 88** | | | **Alternative punishment.** | **ಪರ್ಯಾಯ ಶಿಕ್ಷೆಗಳು** |
| | | | Where an act or omission constitutes an offence punishable under this Act and also under any other law for the time being in force, then, notwithstanding anything contained in any such law, the offender found guilty of such offence shall be liable for punishment under such law which provides for punishment which is greater in degree. | ಕೃತ್ಯ ಅಥವಾ ಕರ್ತವ್ಯಲೋಪದಿಂದಾಗಿ ಈ ಕಾಯಿದೆಯಲ್ಲಿ ಸೂಚಿಸಿರುವ ಶಿಕ್ಷಾರ್ಹ ಅಪರಾಧಗಳು ಅಥವಾ ಈಗ ಚಾಲ್ತಿಯಲ್ಲಿರುವ ಇನ್ನಾವುದೇ ಕಾಯಿದೆಯಲ್ಲಿ ಸೂಚಿಸಿರುವ ಅಪರಾಧಗಳಾದಾಗ, ಯಾವುದೇ ಕಾಯಿದೆಯಲ್ಲಿ ಏನೇ ಹೇಳಿದ್ದರೂ, ಅಪರಾಧಿಕ ಕೃತ್ಯ ಮಾಡಿದ ವ್ಯಕ್ತಿಗೆ ಸಂಬಂಧಿಸಿದ ಯಾವುದೇ ಕಾಯಿದೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷೆಯನ್ನು ನೀಡುವುದಾದಲ್ಲಿ ಆ ಶಿಕ್ಷೆಯನ್ನು ನೀಡಲಾಗುತ್ತದೆ. |
| | | | | |
| **Sec 89** | | | **Offence committed by child under this Chapter.** | **ಈ ವಿಭಾಗದಲ್ಲಿ ಸೂಚಿಸಿರುವ ಅಪರಾಧಿಕ ಕೃತ್ಯಗಳನ್ನು ಮಕ್ಕಳು ಮಾಡುವುದು** |
| | | | Any who commits any offence under this Chapter shall be considered as a child in conflict with law under this Act. | ಈ ವಿಭಾಗದಲ್ಲಿ ಸೂಚಿಸಲಾಗಿರುವ ಯಾವುದೇ ಅಪರಾಧಿಕ ಕೃತ್ಯವನ್ನು ಮಕ್ಕಳು ಮಾಡಿದ್ದೇ ಆದಲ್ಲಿ ಅಂತಹವರನ್ನು ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳು ಎಂದು ಪರಿಗಣಿಸಲಾಗುತ್ತದೆ. |

# Chapter X Miscellaneous ಇತರೆ

| | | | | |
|---|---|---|---|---|
| **Sec 90** | | | **Attendance of parent or guardian of child.** | **ಮಗುವಿನ ತಾಯಿ–ತಂದೆ ಅಥವಾ ಪೋಷಕರ ಹಾಜರಿ** |
| | | | The Committee or the Board, as the case may be, before which a child is brought under any of the provisions of this Act, may, whenever it so thinks fit, require any parent or guardian having the actual charge of the child to be present at any proceeding in respect of that child. | ಸಮಿತಿ ಅಥವಾ ಮಂಡಳಿಯು ಈ ಕಾಯಿದೆಯ ಯಾವುದೇ ಅವಕಾಶಗಳಿಗೆ ಅನುಗುಣವಾಗಿ ಮಕ್ಕಳನ್ನು ತನ್ನೆದುರು ತಂದಾಗ, ಆವಶ್ಯಕತೆ ಇದೆ ಎಂದೆನಿಸಿದರೆ, ಆಯಾ ಮಕ್ಕಳ ಪೋಷಕರು/ಹೆತ್ತವರನ್ನು ಅಥವಾ ಮಕ್ಕಳ ಜವಾಬ್ದಾರಿ ಹೊತ್ತವರನ್ನು ಪ್ರಕರಣದ ಪ್ರಕ್ರಿಯೆಗಳ ಸಂದರ್ಭದಲ್ಲಿ ತನ್ನೆದುರು ಹಾಜರಾಗಲು ಸೂಚಿಸಬಹುದು. |
| | | | | |
| **Sec** | | | **Dispensing with attendance of child.** | **ಮಗುವಿನ ಹಾಜರಿಗೆ ವಿನಾಯಿತಿ** |
| **91** | (*1*) | | If, at any stage during the course of an inquiry, the Committee or the Board is satisfied that the attendance of the child is not essential for the purpose of inquiry, the Committee or the Board, as the case may be, shall dispense with the attendance of a child and limit the same for the purpose of recording the statement and subsequently, the inquiry shall continue even in the absence of the child concerned, unless ordered otherwise by the Committee or the Board. | ಯಾವುದಾದರೂ ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ಮಂಡಳಿ ಅಥವಾ ಸಮಿತಿ, ಮಗುವನ್ನು ಹಾಜರು ಪಡಿಸುವುದು ಅವಶ್ಯವಿಲ್ಲವೆಂದು ಪರಿಗಣಿಸಿದಲ್ಲಿ, ಮಗು ಬರುವುದನ್ನು ಕೈಬಿಟ್ಟು, ಮಗುವನ್ನು ಕೇವಲ ಹೇಳಿಕೆ ನೀಡಲು ಮಾತ್ರ ಕರೆಕಳಿಸಬೇಕು, ಆದರೆ, ಮಗುವಿನ ಉಪಸ್ಥಿತಿ ಬೇಕೆಂದು ಸಮಿತಿ ಅಥವಾ ಮಂಡಳಿ ಸೂಚಿಸದಿದ್ದಲ್ಲಿ, ಉಳಿದಂತೆ ವಿಚಾರಣೆಯನ್ನು ಮಗುವಿನ ಅನುಪಸ್ಥಿತಿಯಲ್ಲಿ ನಡೆಸಬಹುದು. |
| | (*2*) | | Where the attendance of a child is required before the Board or the Committee, such child shall be entitled to travel reimbursement for self and one escort accompanying the child as per actual expenditure incurred, by the Board, or the Committee or the District Child Protection Unit, as the case may be. | ಮಗುವನ್ನು ತನ್ನೆದುರು ಹಾಜರುಪಡಿಸಬೇಕೆಂದು ಸಮಿತಿ ಅಥವಾ ಮಂಡಳಿಯು ಸೂಚಿಸಿದ್ದೇ ಆದಲ್ಲಿ, ಅಂತಹ ಸಂದರ್ಭಕ್ಕೆ ಮಗುವಿಗೆ ಮತ್ತು ಮಗುವಿನೊಂದಿಗೆ ಬರುವ ಒಬ್ಬ ವ್ಯಕ್ತಿಗೆ ತಗಲುವು ಪ್ರಯಾಣ ವೆಚ್ಚವನ್ನು ಮಂಡಳಿ ಅಥವಾ ಸಮಿತಿ ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕದವರಿಂದ ಪಡೆಯಲು ಅರ್ಹವಾಗಿರುತ್ತಾರೆ. |
| | | | | |
| **Sec 92** | | | **Placement of a child suffering from disease requiring prolonged medical treatment in an approved place.** | **ತೀವ್ರ ಸ್ವರೂಪದ ಅನಾರೋಗ್ಯದಲ್ಲಿರುವ ಮಕ್ಕಳನ್ನು ಅಥವಾ ಮಕ್ಕಳನ್ನು ಚಿಕಿತ್ಸೆಗಾಗಿ ಸೂಕ್ತ ಸಂಸ್ಥೆಗೆ ಸೇರಿಸುವುದು** |
| | | | When a child, who has been brought before the Committee or the Board, is found to be suffering from a disease requiring prolonged medical treatment or physical or mental complaint that will respond to treatment, the Committee or the Board, as the case may be, may send the child to any place recognised as a fit facility as prescribed for such period as it may think necessary for the required treatment. | ಮಂಡಳಿ ಅಥವಾ ಸಮಿತಿಯೆದುರು ಯಾವುದಾದರೂ ಮಗುವನ್ನು ಹಾಜರುಪಡಿಸಿದಾಗ, ಆ ಮಗು ಯಾವುದಾದರೂ ಖಾಯಿಲೆಯಿಂದ ಬಳಲುತ್ತಿದ್ದಲ್ಲಿ ಮತ್ತು ಅದಕ್ಕೆ ದೀರ್ಘ ಕಾಲದ ವೈದ್ಯಕೀಯ ಚಿಕಿತ್ಸೆ ಬೇಕಿದ್ದಲ್ಲಿ ಅಥವಾ ದೈಹಿಕ ಅಥವಾ ಮಾನಸಿಕ ತೊಂದರೆ ಇದ್ದು ಅದಕ್ಕೆ ಚಿಕಿತ್ಸೆಯ ಅಗತ್ಯವಿದ್ದಲ್ಲಿ, ಸಮಿತಿ ಅಥವಾ ಮಂಡಳಿಯು ಅಂತಹ ಮಕ್ಕಳನ್ನು ಪ್ರಾಮಾಣೀಕರಿಸಿದ ಅರ್ಹ ಸಂಸ್ಥೆ ಅಥವಾ ವ್ಯವಸ್ಥೆಗೆ ನಿರ್ದಿಷ್ಟ ಅವಧಿಯಲ್ಲಿ ಚಿಕಿತ್ಸೆಗಾಗಿ ಕಳುಹಿಸಬಹುದು. |
| | | | | |
| **Sec 93** | | | **Transfer of a child who is mentally ill or addicted to alcohol or other drugs.** | **ಮಾನಸಿಕ ಅಸ್ವಸ್ಥತೆಯಿರುವ ಅಥವಾ ಮದ್ಯಸಾರ ಅಥವಾ ಇನ್ನಿತರ ಮಾದಕ ದ್ರವ್ಯಗಳಿಗೆ ದಾಸರಾಗಿರುವ ಮಕ್ಕಳ ವರ್ಗಾವಣೆ** |
| | (*1*) | | Where it appears to the Committee or the Board that any child kept in a special home or an observation home or a Children's Home or in an institution | ಈ ಕಾಯಿದೆಯ ಜಾರಿಯಂತೆ ಯಾವುದಾದರೂ ಮಗುವನ್ನು ಸಮಿತಿ ಅಥವಾ ಮಂಡಳಿಯ ಸೂಚನೆಯಂತೆ ವಿಶೇಷ ನಿಲಯ ಅಥವಾ ಪರಿವೀಕ್ಷಣಾಲಯ ಅಥವಾ ಮಕ್ಕಳ ಮಂದಿರ ಅಥವಾ ಇನ್ನಾವುದೇ ಸಂಸ್ಥೆಯಲ್ಲಿ ಇರಿಸಿದ್ದು, ಆ ಮಗು ಮಾನಸಿಕ |

| | | | | |
|---|---|---|---|---|
| | | | in pursuance of the provisions of this Act, is a mentally ill person or addicted to alcohol or other drugs which lead to behavioural changes in a person, the Committee or the Board , may order removal of such child to a psychiatric hospital or psychiatric nursing home in accordance with the provisions of the Mental Health Act, 1987 or the rules made thereunder. | ಅಸ್ವಸ್ಥೆಯಿಂದ ಬಳಲುತ್ತಿದ್ದರೆ ಅಥವಾ ಮಾದಕ ವಸ್ತುಗಳಿಗೆ, ಮದ್ಯಸಾರಕ್ಕೆ ಅಥವಾ ಇನ್ನಿತರ ವಸ್ತುಗಳಿಗೆ ಬಲಿಯಾಗಿ ಅದರಿಂದಾಗಿ ಸ್ವಭಾವದಲ್ಲಿ ಬದಲಾವಣೆಯಾಗುತ್ತಿರುವ ವ್ಯಕ್ತಿಯಾಗಿದ್ದಲ್ಲಿ, ಮಂಡಳಿ ಅಥವಾ ಸಮಿತಿಯು ಅಂತಹ ಮಗುವನ್ನು ಆಯಾ ಸಂಸ್ಥೆಯಿಂದ ತೆಗೆದು, ಮಾನಸಿಕ ಆರೋಗ್ಯ ಕಾಯಿದೆ 1987 ಅಥವಾ ಅದರಡಿಯಲ್ಲಿ ರೂಪಿಸಲಾಗಿರುವ ನಿಯಮಗಳಂತೆ ಸ್ಥಾಪಿಸಲಾಗಿರುವ ಮಾನಸಿಕ ಚಿಕಿತ್ಸೆ ನೀಡುವ ಆಸ್ಪತ್ರೆ ಅಥವಾ ಮಾನಸಿಕ ಚಿಕಿತ್ಸೆ ನೀಡುವ ನರ್ಸಿಂಗ್ ಹೋಮ್‌ಗೆ ವರ್ಗಾಯಿಸಬಹುದು. |
| | *(2)* | | In case the child had been removed to a psychiatric hospital or psychiatric nursing home under sub-section (*1*), the Committee or the Board may, on the basis of the advice given in the certificate of discharge of the psychiatric hospital or psychiatric nursing home, order to remove such child to an Integrated Rehabilitation Centre for Addicts or similar centres maintained by the State Government for mentally ill persons (including the persons addicted to any narcotic drug or psychotropic substance) and such removal shall be only for the period required for the inpatient treatment of such child.<br><br>*Explanation*.—For the purposes of this sub-section,—<br>a) "Integrated Rehabilitation Centre for Addicts" shall have the meaning assigned to it under the scheme called "Central Sector Scheme of Assistance for Prevention of Alcoholism and Substance (Drugs) Abuse and for Social Defence Services" framed by the Central Government in the Ministry of Social Justice and Empowerment or any other corresponding scheme for the time being in force;<br>b) "mentally ill person" shall have the same meaning assigned to it in clause (*l*) of section 2 of the Mental Health Act, 1987;<br>c) "psychiatric hospital" or "psychiatric nursing home" shall have the same meaning assigned to it in clause (*q*) of section 2 of the Mental Health Act, 1987. | ಉಪ ಸೆ (1)ರಂತೆ ಸಮಿತಿ ಅಥವಾ ಮಂಡಳಿಯು ಮಗುವನ್ನು ಮಾನಸಿಕ ಚಿಕಿತ್ಸೆ ನೀಡುವ ಆಸ್ಪತ್ರೆ ಅಥವಾ ಮಾನಸಿಕ ಚಿಕಿತ್ಸೆ ನೀಡುವ ನರ್ಸಿಂಗ್ ಹೋಮ್‌ಗೆ ವರ್ಗಾಯಿಸಿದ್ದೇ ಆದಲ್ಲಿ, ಅಲ್ಲಿನ ವೈದ್ಯರು ಬಿಡುಗಡೆ ಮಾಡುವಾಗ ನೀಡುವ ಪ್ರಮಾಣ ಪತ್ರವನ್ನು ಆಧರಿಸಿ ಮಗುವನ್ನು ಸರ್ಕಾರವು ಮಾನಸಿಕ ಅಸ್ವಸ್ಥರ (ಮಾದಕ ಅಥವಾ ಭ್ರಾಮಕಾರಕ ವಸ್ತುಗಳ ಚಟಕ್ಕೆ ಬಿದ್ದವರನ್ನೂ ಒಳಗೊಂಡಂತೆ) ಸಮಗ್ರ ಚಿಕಿತ್ಸೆಗೆಂದು ನಡೆಸುವ ಕೇಂದ್ರಗಳಿಗೆ ವರ್ಗಾಯಿಸಲು ಹಾಗೂ ಹಾಗೆ ನೀಡುವ ವರ್ಗಾವಣೆ ಅಲ್ಲಿ ಒಳರೋಗಿಯಾಗಿ ನಿರ್ದಿಷ್ಟ ಅವಧಿಯವರೆಗೆ ಚಿಕಿತ್ಸೆ ಪಡೆಯಲು ನಿರ್ದೇಶಿಸಬೇಕು.<br><br>ವಿವರಣೆ: ಈ ಉಪ ಸೆಕ್ಷನ್ನಿನ ಉದ್ದೇಶಕ್ಕಾಗಿ–<br>a) "ಚಟಕ್ಕೆ ಬಿದ್ದವರ ಸಮಗ್ರ ಪುನರ್ವಸತಿ ಕೇಂದ್ರ"ಕ್ಕೆ ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಶಕ್ತತೆ ಮಂತ್ರಾಲಯ ನಿರ್ಮಿಸಿರುವ "ಮದ್ಯ ಮತ್ತು ಮಾದಕ ವಸ್ತುಗಳ ದುರುಪಯೋಗ ತಡೆ ಮತ್ತು ಸಾಮಾಜಿಕ ರಕ್ಷಣೆ ಸೇವೆಗಾಗಿ ಕೇಂದ್ರ ಯೋಜನೆಯ ಸಹಾಯ" ಯೋಜನೆ ಅಥವಾ ಸದ್ಯದಲ್ಲಿ ಚಾಲ್ತಿಯಲ್ಲಿರುವ ಅದರಂತೆ ಇರುವ ಇತರ ಯೋಜನೆಗಳಡಿ ನೀಡಲಾಗಿರುವ ಅರ್ಥವನ್ನು ಹೊಂದಿರುತ್ತದೆ.<br>b) "ಮಾನಸಿಕ ಅಸ್ವಸ್ಥ ವ್ಯಕ್ತಿ" ಎಂಬುದಕ್ಕೆ ಮಾನಸಿಕ ಆರೋಗ್ಯ ಕಾಯಿದೆ 1987ಯ ಸೆ. 2ರ ಕ್ಲಾಸ್ (*l*)ರಡಿ ನೀಡಲಾಗಿರುವ ಅರ್ಥವಿರುತ್ತದೆ.<br>c) "ಮಾನಸಿಕ ಅಸ್ವಸ್ಥರ ಆಸ್ಪತ್ರೆ" ಅಥವಾ "ಮಾನಸಿಕ ಅಸ್ವಸ್ಥರ ನಿಲಯ" ಎಂಬುದಕ್ಕೆ ಮಾನಸಿಕ ಆರೋಗ್ಯ ಕಾಯಿದೆ 1987ರ ಸೆ. 2 ಕ್ಲಾಸ್ (*q*)ರಲ್ಲಿ ನೀಡಲಾಗಿರುವ ಅರ್ಥಗಳಿರುತ್ತವೆ. |
| | | | | |
| **Sec 94** | | | **Presumption and determination of age.** | **ಮಕ್ಕಳ ವಯಸ್ಸಿನ ಅಂದಾಜು ಮತ್ತು ನಿರ್ಧಾರ** |
| | *(1)* | | Where, it is obvious to the Committee or the Board, based on the appearance of the person brought before it under any of the provisions of this Act (other than for the purpose of giving evidence) that the said person is a child, the Committee or the Board shall record such observation stating the age of the child as nearly as may be | ಮಂಡಳಿ ಅಥವಾ ಸಮಿತಿಯ ಎದುರು ಈ ಕಾಯಿದೆಗೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕೆ ಬಂದಂತಹ ವ್ಯಕ್ತಿ (ಸಾಕ್ಷಿಗೆ ಬಂದಂತಹವರನನ್ನು ಹೊರತುಪಡಿಸಿ) ಮೇಲ್ನೋಟಕ್ಕೆ ಮಗು ಎಂದು ಕಂಡುಬಂದಲ್ಲಿ, ಮಂಡಳಿ ಅಥವಾ ಸಮಿತಿಯು ಅದನ್ನು ದಾಖಲಿಸಿ, ಮಗುವಿನ ವಯಸ್ಸನ್ನು ಆದಷ್ಟೂ ವಾಸ್ತವತೆಯ ಹತ್ತಿರಕ್ಕೆ ನಿಗದಿ ಮಾಡಿ, ವಯಸ್ಸಿನ ನಿಗದಿಗೆ |

| | | | | |
|---|---|---|---|---|
| | | | and proceed with the inquiry under section 14 or section 36, as the case may be, without waiting for further confirmation of the age. | ಕಾಯುವ ವಿಳಂಬವನ್ನು ಮಾಡದೆ ವಿಚಾರಣೆಯನ್ನು ಸೆ 14 ಅಥವಾ ಸೆ. 36ರಂತೆ ಮುನ್ನಡೆಸಬೇಕು. |
| | (*2*) | | In case, the Committee or the Board has reasonable grounds for doubt regarding whether the person brought before it is a child or not, the Committee or the Board, as the case may be, shall undertake the process of age determination, by seeking evidence by obtaining — | ತಮ್ಮೆದುರು ಬಂದಿರುವ ವ್ಯಕ್ತಿ ಮಗು ಹೌದೋ ಅಲ್ಲವೋ ಎನ್ನುವ ಅನುಮಾನ ಸಮಿತಿ ಅಥವಾ ಮಂಡಳಿಗೆ ಸಕಾರಣವಾಗಿ ಬಂದದ್ದೇ ಆದಲ್ಲಿ, ಆಯಾ ಪ್ರಕರಣಗಳಿಗೆ ಸಂಬಂಧಿಸಿದಂತೆ, ಈ ಮುಂದಿನ ಪ್ರಕ್ರಿಯೆಗಳಿಗೆ ಒಳಪಡಿಸಿ ವ್ಯಕ್ತಿಯ ವಯಸ್ಸನ್ನು ನಿಗದಿಪಡಿಸಲು ಸೂಚಿಸಬಹುದು: |
| | | | (i) the date of birth certificate from the school, or the matriculation or equivalent certificate from the concerned examination Board, if available; and in the absence thereof;<br>(ii) the birth certificate given by a corporation or a municipal authority or a panchayat;<br>(iii) and only in the absence of (*i*) and (*ii*) above, age shall be determined by an ossification test or any other latest medical age determination test conducted on the orders of the Committee or the Board:<br><br>Provided such age determination test conducted on the order of the Committee or the Board shall be completed within fifteen days from the date of such order. | (i) ಶಾಲೆಯು ನೀಡುವ ಜನ್ಮ ದಾಖಲೆ ಪತ್ರ ಅಥವಾ ಸಂಬಂಧಿಸಿದ ಪರೀಕ್ಷಾ ಮಂಡಳಿಯು ನೀಡಿರುವ 10ನೇ ತರಗತಿ ಅಥವಾ ಅದಕ್ಕೆ ತತ್ಸಮವಾದ ಪ್ರಮಾಣಪತ್ರ; ಮತ್ತು ಅದಿಲ್ಲದಿದ್ದಲ್ಲಿ<br>(ii) ನಗರ ಪಾಲಿಕೆ ಅಥವಾ ಮುನಿಸಿಪಾಲಿಟಿ ಅಥವಾ ಪಂಚಾಯಿತಿ ಅಧಿಕಾರಿಗಳು ನೀಡಿರುವ ಜನ್ಮ ದಾಖಲೆ;<br>(iii) ಮತ್ತು ಈ ಮೇಲಿನೆರೆಡು ಇಲ್ಲದಿದ್ದಲ್ಲಿ ಮಾತ್ರ, ಮಂಡಳಿ ಅಥವಾ ಸಮಿತಿಯ ನಿರ್ದೇಶನದಂತೆ ಮೂಳೆಯ ಪರೀಕ್ಷಾ ವಿಧಾನದಿಂದ ಅಥವಾ ಇನ್ನಾವುದಾದರೂ ವೈದ್ಯಕೀಯ ವಿಧಾನದಿಂದ ವಯಸ್ಸನ್ನು ನಿಗದಿಪಡಿಸುವುದು<br><br>ಇಂತಹ ವಯಸ್ಸನ್ನು ದೃಢೀಕರಿಸುವ ವೈದ್ಯಕೀಯ ಪರೀಕ್ಷೆಯನ್ನು ಸಮಿತಿ ಅಥವಾ ಮಂಡಳಿಯು ನೀಡಿದ ನಿರ್ದೇಶನದ ದಿನದಿಂದ 15 ದಿನದೊಳಗೆ ನಡೆಸಲೇಬೇಕು. |
| | (*3*) | | The age recorded by the Committee or the Board to be the age of person so brought before it shall, for the purpose of this Act, be deemed to be the true age of that person. | ಈ ಕಾಯಿದೆಯ ಜಾರಿಗಾಗಿ ತಮ್ಮೆದುರು ಬಂದ ವ್ಯಕ್ತಿಯ ವಯಸ್ಸನ್ನು ಸಮಿತಿ ಅಥವಾ ಮಂಡಳಿ ನೀಡಿದ ನಿರ್ದೇಶನದಂತೆ ದಾಖಲಿಸಿದ ಮೇಲೆ, ಆ ವಯಸ್ಸನ್ನು ಆ ನಿರ್ದಿಷ್ಟ ವ್ಯಕ್ತಿಯ ವಯಸ್ಸೆಂದೇ ಭಾವಿಸಲಾಗುತ್ತದೆ. |
| | | | | |
| **Sec 95** | | | **Transfer of a child to place of residence.** | **ಮಕ್ಕಳನ್ನು ಅವರ ವಾಸಸ್ಥಳಕ್ಕೆ ವರ್ಗಾಯಿಸುವುದು** |
| | (*1*) | | If during the inquiry it is found that a child hails from a place outside the jurisdiction, the Board or Committee, as the case may be, shall, if satisfied after due inquiry that it is in the best interest of the child and after due consultation with the Committee or the Board of the child's home district, order the transfer of the child, as soon as possible, to the said Committee or the Board, along with relevant documents and following such procedure as may be prescribed: | ವಿಚಾರಣೆಯ ಸಮಯದಲ್ಲಿ ತಮ್ಮೆದುರು ಬಂದ ಮಗು ಬೇರೊಂದು ಸ್ಥಳದಿಂದ ಬಂದಿರುವುದು ಎಂದು ಸಮಿತಿ ಅಥವಾ ಮಂಡಳಿಗೆ ಗೊತ್ತಾದರೆ, ಆಯಾ ಪ್ರಕರಣಕ್ಕೆ ತಕ್ಕಂತೆ, ಆಯಾ ಮಗುವಿನ ಹಿತ ದೃಷ್ಟಿಯಿಂದ, ಆ ಮಗುವಿಗೆ ಸಂಬಂಧಿಸಿದ ಜಿಲ್ಲೆಯ ಮಂಡಳಿ ಅಥವಾ ಸಮಿತಿಯೊಡನೆ ಸಮಾಲೋಚಿಸಿ, ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಆ ಮಗುವಿಗೆ ವರ್ಗಾವಣೆಯನ್ನು ನೀಡಿ ಆ ಸಂಬಂಧಿತ ಸಮಿತಿ ಅಥವಾ ಮಂಡಳಿಗೆ ಸೂಕ್ತ ದಾಖಲೆಗಳೊಡನೆ ಸೂಕ್ತ ಪ್ರಕ್ರಿಯೆಗಳನ್ನು ಅನುಸರಿಸಿ ವರ್ಗಾಯಿಸುವುದು. |

| | | | | |
|---|---|---|---|---|
| | | | Provided that such transfer can be made in case of a child in conflict with law, only after the inquiry has been completed and final order passed by the Board:<br><br>Provided further that in case of inter-State transfer, the child shall be, if convenient, handed over to the Committee or the Board, as the case may be, of the home district of the child, or to the Committee or the Board in the capital city of the home State. | ಆದರೆ, ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವಿಗೆ ವರ್ಗಾವಣೆ ಮಾಡಬೇಕಾದಲ್ಲಿ, ಆ ಮಗುವನ್ನು ಕುರಿತು ಎಲ್ಲ ತನಿಖೆಗಳು ಮುಗಿದು ಅಂತಿಮ ಆದೇಶವನ್ನು ಹೊರಡಿಸಿದ ಮೇಲೆ ಮಾತ್ರ ವರ್ಗಾವಣೆಯನ್ನು ಮಾಡಬೇಕು.<br><br>ಮಗುವನ್ನು ಬೇರೆಯೇ ರಾಜ್ಯಕ್ಕೆ ವರ್ಗಾಯಿಸುವ ಪ್ರಸಂಗ ಬಂದಲ್ಲಿ, ಸಾಧ್ಯವಾದಷ್ಟೂ ಮಟ್ಟಿಗೆ ಮಗುವಿನ ಸಂಬಂಧಿತ ಜಿಲ್ಲೆಯ ಸಮಿತಿ ಅಥವಾ ಮಂಡಳಿಗೆ ತಲುಪಿಸಬೇಕು ಇಲ್ಲವಾದಲ್ಲಿ ಆಯಾ ರಾಜ್ಯದ ರಾಜಧಾನಿಯ ಸಮಿತಿ ಅಥವಾ ಮಂಡಳಿಗೆ ವರ್ಗಾಯಿಸಬೇಕು. |
| | (*2*) | | Once the decision to transfer is finalised, the Committee or Board, as the case may be, shall give an escort order to the Special Juvenile Police Unit to escort the child, within fifteen days of receiving such order:<br><br>Provided that a girl child shall be accompanied by a woman police officer:<br><br>Provided further that where a Special Juvenile Police Unit is not available, the Committee or Board, as the case may be, shall direct the institution where the child is temporarily staying or District Child Protection Unit, to provide an escort to accompany the child during travel. | ಮಗುವನ್ನು ಬೇರೆಡೆಗೆ ವರ್ಗಾಯಿಸುವುದನ್ನು ಖಚಿತಪಡಿಸಿದ ಮೇಲೆ, ಮಂಡಳಿ ಅಥವಾ ಸಮಿತಿಯ, ವರ್ಗಾವಣೆ ಸೂಚನೆ ಬಂದ 15 ದಿನದೊಳಗೆ ಮಕ್ಕಳ ವಿಶೇಷ ಪೊಲೀಸ್ ಘಟಕಕ್ಕೆ ವರ್ಗಾವಣೆ ನಿರ್ದೇಶನವನ್ನು ನೀಡಬೇಕು.<br><br>ಹಾಗೆ ವರ್ಗಾವಣೆಯಾಗುತ್ತಿರುವುದು ಬಾಲಕಿಯಾಗಿದ್ದಲ್ಲಿ ಮಹಿಳಾ ಪೊಲೀಸ್ ಅಧಿಕಾರಿಗಳೇ ಬೆಂಗಾವಲಿಗೆ ಹೋಗಬೇಕು.<br><br>ಎಲ್ಲಿ ಮಕ್ಕಳ ವಿಶೇಷ ಪೊಲೀಸ್ ಘಟಕಗಳು ಲಭ್ಯವಿಲ್ಲವೋ, ಅಲ್ಲಿ, ಮಂಡಳಿ ಅಥವಾ ಸಮಿತಿಯು, ಮಗುವನ್ನು ತಾತ್ಕಾಲಿಕವಾಗಿ ಇರಿಸಲು ಮಾಡಿದ್ದ ಸಂಸ್ಥೆ ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಮಗುವಿನ ಪ್ರಯಾಣದ ಸಮಯದಲ್ಲಿ ಬೆಂಗಾವಲನ್ನು ಒದಗಿಸಲು ಸೂಚಿಸಬೇಕು. |
| | (*3*) | | The State Government shall make rules to provide for travelling allowance to the escorting staff for the child, which shall be paid in advance. | ಮಗುವಿಗೆ ಹೀಗೆ ಬೆಂಗಾವಲು ಒದಗಿಸಲು ಬರುವ ಸಿಬ್ಬಂದಿಗೆ ರಾಜ್ಯ ಸರ್ಕಾರವು ಪ್ರಯಾಣ ಭತ್ಯೆಯನ್ನು ಮುಂಗಡವಾಗಿ ನೀಡುವ ಕುರಿತು ನಿಯಮಗಳನ್ನು ರೂಪಿಸಬೇಕು. |
| | (*4*) | | The Committee or the Board, as the case may be, receiving the transferred child will process for restoration or rehabilitation or social re-integration, as provided in this Act. | ವರ್ಗಾವಣೆಯಾಗಿ ಬಂದಂತಹ ಮಗುವನ್ನು ಸಂಬಂಧಿತ ಜಿಲ್ಲಾ ಮಂಡಳಿ ಅಥವಾ ಸಮಿತಿಯು ಸ್ವೀಕರಿಸಿ, ಆಯಾ ಮಗುವಿನ ಪುನರ್ವಸತಿ ಅಥವಾ ಪುನಃಸ್ಥಾಪನೆ ಅಥವಾ ಸಾಮಾಜಿಕ ಪುನರ್ಮಿಲನಕ್ಕೆ ಈ ಕಾಯಿದೆಯಲ್ಲಿ ಹೇಳಿರುವಂತೆ ನಡೆಸಬೇಕು. |
| | | | | |
| **Sec 96** | | | **Transfer of child between Children's Homes, or special homes or fit facility or fit person in different parts of India.** | **ಮಕ್ಕಳನ್ನು ಭಾರತದ ವಿವಿಧ ಭಾಗಗಳಲ್ಲಿರುವ ಮಕ್ಕಳ ನಿಲಯ ಅಥವಾ ವಿಶೇಷ ಗೃಹ ಅಥವಾ ಅರ್ಹ ವ್ಯವಸ್ಥೆ ಅಥವಾ ಅರ್ಹ ವ್ಯಕ್ತಿಗಳಿಗೆ ವರ್ಗಾಯಿಸುವುದು** |
| | (*1*) | | The State Government may at any time, on the recommendation of a Committee or Board, as the case may be, notwithstanding anything contained in this Act, and keeping the best interest of the child in mind, order the child's transfer from any Children's Home or special home or fit facility or fit person, to a home or facility, within the State with prior intimation to the concerned Committee or the Board:<br><br>Provided that for transfer of a child between similar home or facility or person within the same district, the Committee or Board, as the case may be, of the said district shall be competent to issue such an order. | ಈ ಕಾಯಿದೆಯಲ್ಲಿ ಏನೇ ಹೇಳಿದ್ದರೂ, ಮಕ್ಕಳ ಹಿತದೃಷ್ಟಿಯಿಂದ, ಸಮಿತಿ ಅಥವಾ ಮಂಡಳಿಯ ಸಲಹೆಯಂತೆ, ರಾಜ್ಯ ಸರ್ಕಾರವು ಯಾವುದೇ ಮಕ್ಕಳ ಮಂದಿರ ಅಥವಾ ವಿಶೇಷ ನಿಲಯ ಅಥವಾ ಅರ್ಹ ವ್ಯವಸ್ಥೆ ಅಥವಾ ಅರ್ಹ ವ್ಯಕ್ತಿಯ ಸುಪರ್ದಿಯಿಂದ ಮಕ್ಕಳನ್ನು ರಾಜ್ಯದೊಳಗಿನ ಬೇರಾವುದಾದರೂ ನಿಲಯ ಅಥವಾ ವ್ಯವಸ್ಥೆಗೆ ಸಂಬಂಧಿಸಿದ ಸಮಿತಿ ಅಥವಾ ಮಂಡಳಿಗೆ ಪೂರ್ವ ಮಾಹಿತಿಯನ್ನಿತ್ತು ವರ್ಗಾಯಿಸಬಹುದು.<br><br>ಹಾಗೆ ಒಂದೇ ರೀತಿಯ ವ್ಯವಸ್ಥೆ, ನಿಲಯ ಅಥವಾ ವ್ಯಕ್ತಿಯ ಸುಪರ್ದಿಯಿಂದ ಮಕ್ಕಳನ್ನು ಒಂದೇ ಜಿಲ್ಲೆಯಲ್ಲಿ ಒಂದೆಡೆಯಿಂದ ಇನ್ನೊಂದೆಡೆಗೆ ವರ್ಗಾಯಿಸುವ ನಿರ್ದೇಶನ ನೀಡಲು ಅಲ್ಲಿನ ಸಮಿತಿ ಅಥವಾ ಮಂಡಳಿಗೆ ಅಧಿಕಾರವಿರುತ್ತದೆ. |

| | | | | |
|---|---|---|---|---|
| | (*2*) | | If transfer is being ordered by a State Government to an institution outside the State, this shall be done only in consultation with the concerned State Government. | ಒಂದು ರಾಜ್ಯದ ಸಂಸ್ಥೆಯಿಂದ ಇನ್ನೊಂದು ರಾಜ್ಯದ ಸಂಸ್ಥೆಗೆ ಮಕ್ಕಳನ್ನು ವರ್ಗಾಯಿಸಲು ರಾಜ್ಯ ಸರ್ಕಾರವು ನಿರ್ದೇಶನ ನೀಡುವಾಗ, ಸಂಬಂಧಿತ ರಾಜ್ಯ ಸರ್ಕಾರದೊಡನೆ ಸಮಾಲೋಚನೆಯನ್ನು ನಡೆಸಿಯೇ ನೀಡಬೇಕು. |
| | (*3*) | | The total period of stay of the child in a Children's Home or a special home shall not be increased by such transfer. | ಹೀಗೆ ಒಂದು ಮಕ್ಕಳ ನಿಲಯ ಅಥವಾ ವಿಶೇಷ ನಿಲಯದಿಂದ ಮಕ್ಕಳನ್ನು ವರ್ಗಾಯಿಸುವಾಗ ಆಯಾ ಮಗುವಿನ ಸಂಸ್ಥೆಯಲ್ಲಿರಬೇಕಾದ ಒಟ್ಟು ಅವಧಿ ಹೀಗೆ ಆಗುವ ವರ್ಗಾವಣೆಯಿಂದ ಹೆಚ್ಚಾಗಬಾರದು. |
| | (*4*) | | Orders passed under sub-sections (*1*) and (*2*) shall be deemed to be operative for the Committee or the Board, as the case may be, of the area to which the child is sent. | ಈ ಮೇಲಿನ ಉಪ ಸೆ. (1) ಮತ್ತು (2)ರಂತೆ ಮಂಡಳಿ ಅಥವಾ ಸಮಿತಿಯಿಂದ ಹೊರಡಿಸಲ್ಪಡುವ ನಿರ್ದೇಶನಗಳು, ಮಗುವನ್ನು ಎಲ್ಲಿಗೆ (ಜಿಲ್ಲೆ/ರಾಜ್ಯ) ಕಳುಹಿಸಲಾಗುತ್ತದೋ ಅಲ್ಲಿಯೂ ಚಾಲ್ತಿಯಲ್ಲಿರುತ್ತದೆ. |
| | | | | |
| **Sec 97** | | | **Release of a child from an institution.** | **ನಿಲಯದಿಂದ ಮಕ್ಕಳ ಬಿಡುಗಡೆ** |
| | (*1*) | | When a child is kept in a Children's Home or special home, on a report of a probation officer or social worker or of Government or a voluntary or non-governmental organisation, as the case may be, the Committee or the Board may consider, the release of such child, either absolutely or on such conditions as it may think fit to impose, permitting the child to live with parents or guardian or under the supervision of any authorised person named in the order, willing to receive and take charge, educate and train the child, for some useful trade or calling or to look after the child for rehabilitation:<br><br>Provided that if a child who has been released conditionally under this section, or the person under whose supervision the child has been placed, fails to fulfil such conditions, the Board or Committee may, if necessary, cause the child to be taken charge of and to be placed back in the concerned home. | ಮಕ್ಕಳ ನಿಲಯ ಅಥವಾ ವಿಶೇಷ ನಿಲಯದಲ್ಲಿ ಇರಿಸಿದ್ದ ಯಾವುದಾದರೂ ಮಗುವನ್ನು ಕುರಿತು ಸಮಿತಿ ಅಥವಾ ಮಂಡಳಿಗೆ ಪರಿವೀಕ್ಷಣಾಧಿಕಾರಿಗಳು ಅಥವಾ ಸಮಾಜಕಾರ್ಯಕರ್ತರು ಅಥವಾ ಸರ್ಕಾರದಿಂದ ಅಥವಾ ಸ್ವಯಂಸೇವಾ ಸಂಘಟನೆಗಳಿಂದ ಬಂದಂತಹ ವರದಿಯನ್ನು ಆಧರಿಸಿ ಮಂಡಳಿ ಅಥವಾ ಸಮಿತಿಯು, ಮಗುವನ್ನು ಮುಕ್ತವಾಗಿ ಅಥವಾ ಸರಿಯೆನಿಸುವ ನಿರ್ದಿಷ್ಟ ಶರತ್ತುಗಳನ್ನು ವಿಧಿಸಿ, ಪೋಷಕರೊಡನೆ ಅಥವಾ ತಂದೆ–ತಾಯಿಯರೊಡನೆ ವಾಸಿಸಲು ಅಥವಾ ಮಗುವಿನ ಸುಪರ್ದಿ ತೆಗೆದುಕೊಂಡು ಮಗುವಿಗೆ ಶಿಕ್ಷಣ ನೀಡಿ, ಯಾವುದಾದರೂ ಪ್ರಯೋಜನಕಾರಿ ತರಬೇತಿಯನ್ನು ಕೊಡಿಸಿ ಅಥವಾ ಮಗುವಿನ ಪುನರ್ವಸತಿಯನ್ನು ಖಾತರಿ ಮಾಡಲು ಮುಂದೆ ಬಂದಿರುವ ಹಾಗೂ ನಿರ್ದೇಶನದಲ್ಲಿ ಹೆಸರಿಸಲಾದ ನಿರ್ದಿಷ್ಟ ವ್ಯಕ್ತಿಯ ಉಸ್ತುವಾರಿಯಲ್ಲಿ ಬಿಡುಗಡೆ ಮಾಡಬಹುದು.<br><br>ಆದರೆ, ಈ ಸೆಕ್ಷನ್ನಿನಲ್ಲಿ ವಿವರಿಸುವ ರೀತಿಯ ಶರತ್ತುಗಳನ್ನು ವಿಧಿಸಿ ಮಗುವನ್ನು ಯಾರ ವಶಕ್ಕೆ ಬಿಡುಗಡೆ ಮಾಡಿರಲಾಗಿರುತ್ತದೋ ಅಂತಹ ವ್ಯಕ್ತಿ ಅವುಗಳನ್ನು ನಿರ್ವಹಿಸಲು, ಪೂರೈಸಲು ವಿಫಲವಾದಲ್ಲಿ ಸಮಿತಿ ಅಥವಾ ಮಂಡಳಿಯು, ಮಗುವನ್ನು ಹಿಂದಕ್ಕೆ ಪಡೆದು ಸಂಬಂಧಿಸಿದ ನಿಲಯದಲ್ಲಿ ಮತ್ತೆ ಇರಿಸಬಹುದು. |
| | (*2*) | | If the child has been released on a temporary basis, the time during which the child is not present in the concerned home in pursuance of the permission granted under sub-section (*1*) shall be deemed to be part of the time for which the child is liable to be kept in the children or special home:<br><br>Provided that in case of a child in conflict with law fails to fulfil the | ಮಗುವನ್ನು ತಾತ್ಕಾಲಿಕವಾದ ಅವಧಿಗೆ ಉಪ ಸೆ. (1)ರಂತೆ ಬಿಡುಗಡೆ ಮಾಡಲಾಗಿದ್ದಲ್ಲಿ, ಆ ನಿರ್ದಿಷ್ಟ ಮಗುವಿನ ಅನುಪಸ್ಥಿತಿಯ ಅವಧಿಯನ್ನು ಯಾವ ನಿಲಯದಲ್ಲಿ ಮಗು ತನ್ನ ಅವಧಿಯನ್ನು ಪೂರೈಸಲು ಇರಿಸಲಾಗಿತ್ತೋ ಅದೇ ಮಕ್ಕಳ ನಿಲಯ ಅಥವಾ ವಿಶೇಷ ನಿಲಯದಲ್ಲಿಯೇ ಇದ್ದಂತೆಂದು ಪರಿಭಾವಿಸಬೇಕು.<br><br>ಆದರೆ, ಕಾನೂನಿನೊಡನೆ ಸಂಘರ್ಷದಲ್ಲಿರುವ ಯಾವುದಾದರೂ ಮಗು, ಉಪ ಸೆ. (1)ರಲ್ಲಿ ಮಂಡಳಿಯು ನಿರ್ದೇಶಿಸಿದ ಶರತ್ತುಗಳನ್ನು ಪೂರೈಸಲು ವಿಫಲವಾದಲ್ಲಿ, ಆಯಾ ಮಗುವಿಗೆ |

| | | | | |
|---|---|---|---|---|
| | | | conditions set by the Board as mentioned in sub-section (*1*), the time for which he is still liable to be kept in the institution shall be extended by the Board for a period equivalent to the time which lapses due to such failure. forfeited, the Board or Committee may, if necessary, cause him to be taken charge of and to be taken back to the concerned home:<br><br>Provided that when a child in conflict with law has failed to return to the special home on the leave period being exhausted or on permission being revoked or forfeited, the time for which he is still liable to be kept in the institution shall be extended by the Board for a period equivalent to the time which lapses due to such failure. | ಬಿಡುಗಡೆಯಾಗಿದ್ದ ಅವಧಿಯನ್ನು ಮುಟ್ಟುಗೋಲು ಹಾಕಿಕೊಂಡು ಮಕ್ಕಳ ಸಂಸ್ಥೆಯಲ್ಲಿ ಹೆಚ್ಚಿನ ಅವಧಿಗಾಗಿ ಇರುವಂತೆ ಮಂಡಳಿಯು ಸೂಚಿಸಬಹುದು. ಇಂತಹದಕ್ಕಾಗಿ ಮಂಡಳಿ ಅಥವಾ ಸಮಿತಿಯು ಮಗುವನ್ನು ಮತ್ತೆ ತನ್ನ ವಶಕ್ಕೆ ತೆಗೆದುಕೊಂಡು ಮತ್ತೆ ನಿರ್ದಿಷ್ಟ ಸಂಸ್ಥೆಗೆ ಒಯ್ಯುವಂತೆ ಆದೇಶಿಸಬಹುದು.<br><br>ಅಂತೆಯೇ ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗು ರಜಾ ಅವಧಿಯನ್ನು ಪೂರೈಸಿದ ಮೇಲೂ ವಿಶೇಷ ನಿಲಯಕ್ಕೆ ಹಿಂದಿರುಗದಿದ್ದಲ್ಲಿ ಅಥವಾ ಆ ಮಗುವಿಗೆ ಕೊಟ್ಟಿದ್ದ ಅನುಮತಿಯನ್ನು ಹಿಂದಕ್ಕೆ ಪಡೆದ ಮೇಲೆ ಅಥವಾ ಮುಟ್ಟುಗೋಲು ಹಾಕಿಕೊಂಡ ಮೇಲೂ ಬಾರದಿದ್ದಲ್ಲಿ, ಮಂಡಳಿಯು ಆಯಾ ಮಗು ಸಂಸ್ಥೆಯಲ್ಲಿ ಇರಬೇಕಾದ ಅವಧಿಯನ್ನು ಮಗು ನಿಲಯದಿಂದ ಅನುಪಸ್ಥಿತಿಯಲ್ಲಿದ್ದ ಅವಧಿಯನ್ನು ಸೇರಿಸಿ ಹೆಚ್ಚಿಸಬಹುದು. |
| | | | | |
| **Sec 98** | | | **Leave of absence to a child placed in an institution.** | **ಸಂಸ್ಥೆಯಲ್ಲಿ ಇರಿಸಿದ ಮಕ್ಕಳಿಗೆ ರಜೆ** |
| | (*1*) | | The Committee or the Board, as the case may be, may permit leave of absence to any child, to allow him, on special occasions like examination, marriage of relatives, death of kith or kin or accident or serious illness of parent or any emergency of like nature, under supervision, for a period generally not exceeding seven days in one instance, excluding the time taken in journey. | ಮಂಡಳಿ ಅಥವಾ ಸಮಿತಿಯ ವಶದಲ್ಲಿ ಇರುವ ಮಕ್ಕಳಿಗೆ ಆಯಾ ವಿಶೇಷ ಪ್ರಸಂಗಗಳಿಗೆ ಅನುಗುಣವಾಗಿ, ಪರೀಕ್ಷೆ, ಸಂಬಂಧಿಗಳ ಮದುವೆ, ಸಂಬಂಧಿಗಳ ಸಾವು, ಅಪಘಾತ, ಪೋಷಕರ ತೀವ್ರ ಅನಾರೋಗ್ಯ ಅಥವಾ ಇನ್ನಿತರ ತುರ್ತುಪರಿಸ್ಥಿತಿಗಳು ಇದ್ದಾಗ ಸೂಕ್ತ ವ್ಯಕ್ತಿ, ಸಂಸ್ಥೆಗಳ ಉಸ್ತುವಾರಿಯಲ್ಲಿ ಸಾಮಾನ್ಯವಾಗಿ ಪ್ರಯಾಣದ ಅವಧಿಯನ್ನು ಹೊರತುಪಡಿಸಿ ಒಂದು ವಾರಗಳಿಗೆ ಹೆಚ್ಚಿಲ್ಲದಂತೆ ರಜೆ ಅಥವಾ ಸಂಸ್ಥೆಯಲ್ಲಿ ಅನುಪಸ್ಥಿತಿಯಲ್ಲಿರಲು ಅನುಮತಿ ನೀಡಬಹುದು. |
| | (*2*) | | The time during which a child is absent from an institution where he is placed, in pursuance of such permission granted under this section, shall be deemed to be part of the time for which he is liable to be kept in the Children's Home or special home. | ಹೀಗೆ ಮಕ್ಕಳ ನಿಲಯ ಅಥವಾ ವಿಶೇಷ ನಿಲಯದಿಂದ ಸಮಿತಿ ಅಥವಾ ಮಂಡಳಿಯ ಅನುಮತಿಯಿಂದ ರಜೆಗೆಂದು ಹೋದ ಮಗು ಸಂಸ್ಥೆಯಲ್ಲಿ ಅನುಪಸ್ಥಿತಿಯ ಸಮಯ/ಅವಧಿಯನ್ನು ಮಗು ಸಂಸ್ಥೆಯಲ್ಲಿ ಇದ್ದ ಅವಧಿಯ ಭಾಗವೆಂದೇ ಪರಿಗಣಿಸಬೇಕು (ಹೆಚ್ಚಿನ ದಿನಗಳನ್ನು ಸೇರಿಸಬಾರದು) |
| | | (*3*) | If a child refuses, or has failed to return to the Children's Home or special home, as the case may be, on the leave period being exhausted or permission being revoked orforfeited, the Board or Committee may, if necessary, cause him to be taken charge of and to be taken back to the concerned home:<br><br>Provided that when a child in conflict with law has failed to return to the special home on the leave period being exhausted or on permission being | ಅನುಮತಿಯಿತ್ತ ರಜೆ ಅವಧಿ ಅಥವಾ ಅನುಪಸ್ಥಿತಿಯ ಅವಧಿಯು ಮುಗಿದ ಮೇಲೂ ಅಥವಾ ಸಮಿತಿ ಅಥವಾ ಮಂಡಳಿ ತಾನಿತ್ತ ರಜೆಯ ಅವಧಿಯನ್ನು ಮುಟ್ಟುಗೋಲು ಹಾಕಿಕೊಂಡ ಮೇಲೆ/ಹಿಂತೆಗೆದ ಮೇಲೂ ಮಗು ಸಂಸ್ಥೆಗೆ ಅಥವಾ ಮಕ್ಕಳ ನಿಲಯಕ್ಕೆ ಹಿಂದಿರುಗಲು ನಿರಾಕರಿಸಿದರೆ ಅಥವಾ ವಿಫಲವಾದಲ್ಲಿ, ಮಂಡಳಿ ಅಥವಾ ಸಮಿತಿಯು ಆವಶ್ಯಕತೆಯಿದ್ದಲ್ಲಿ ವಶಕ್ಕೆ ತೆಗೆದುಕೊಂಡು ಸಂಬಂಧಿತ ನಿಲಯಕ್ಕೆ ಒಯ್ಯಲು ಸೂಚಿಸಬಹುದು.<br><br>ಆದರೆ, ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗು ಹೀಗೆ ರಜೆಯ ಅವಧಿ ಮುಗಿದ ಮೇಲೂ ಅಥವಾ ರಜೆಯನ್ನು |

| | | | | |
|---|---|---|---|---|
| | | | revoked or forfeited, the time for which he is still liable to be kept in the institution shall be extended by the Board for a period equivalent to the time which lapses due to such failure. | ಮೊಟಕು ಗೊಳಿಸಿದ ಮೇಲೂ ಹಿಂದಿರುಗದಿದ್ದರೆ, ಎಷ್ಟು ಕಾಲ ಆ ಮಗು ಸಂಸ್ಥೆಗೆ ಹಿಂದಿರುಗಿರಲಿಲ್ಲವೋ ಅಷ್ಟು ಕಾಲವನ್ನು ಸಂಸ್ಥೆಯಲ್ಲಿ ಕಳೆಯಬೇಕೆಂದು ಮುಂದುವರೆಯಬೇಕೆಂದು ಮಂಡಳಿಯು ನಿದೇಶಿಸಬೇಕು. |
| | | | | |
| **Sec** | | | **Reports to be treated as confidential.** | **ವರದಿಗಳನ್ನು ಗೋಪ್ಯವೆಂದು ಪರಿಗಣಿಸುವುದು** |
| **99** | (*1*) | | All reports related to the child and considered by the Committee or the Board shall be treated as confidential:<br><br>Provided that the Committee or the Board, as the case may be, may, if it so thinks fit, communicate the substance thereof to another Committee or Board or to the child or to the child's parent or guardian, and may give such Committee or the Board or the child or parent or guardian, an opportunity of producing evidence as may be relevant to the matter stated in the report. | ಸಮತಿ ಅಥವಾ ಮಂಡಳಿಯೆದುರಿರುವ ಎಲ್ಲ ಮಕ್ಕಳಿಗೆ ಸಂಬಂಧಿಸಿದ ಎಲ್ಲ ದಾಖಲೆಗಳು/ವರದಿಗಳನ್ನು ಗೋಪ್ಯವೆಂದು ಪರಿಗಣಿಸಲಾಗುತ್ತದೆ.<br><br>ಆದರೆ, ಸಮಿತಿ ಅಥವಾ ಮಂಡಳಿಯು ಸೂಕ್ತವೆನಿಸಿದ್ದಲ್ಲಿ ಇನ್ನೊಂದು ಸಮಿತಿ ಅಥವಾ ಮಂಡಳಿಗೆ ಅಥವಾ ಮಗುವಿಗೆ ಅಥವಾ ಮಗುವಿನ ಪೋಷಕರು ಅಥವಾ ತಂದೆ–ತಾಯಿಯರಿಗೆ ಮಾಹಿತಿ ನೀಡುವುದು ಮತ್ತು ಸಂಬಂಧಿತ ಸಮಿತಿ ಅಥವಾ ಮಂಡಳಿ ಅಥವಾ ಮಗು ಅಥವಾ ಪೋಷಕರು ಅಥವಾ ತಂದೆ ತಾಯಿಯರಿಗೆ ಸಂಬಂಧಿಸಿದ ವರದಿಗೆ ಸಂಬಂಧಿಸಿದ ಸಾಕ್ಷಿಯನ್ನು ನೀಡಲು ಅವಕಾಶ ನೀಡಬಹುದು. |
| | (*2*) | | Notwithstanding anything contained in this Act, the victim shall not be denied access to their case record, orders and relevant papers. | ಈ ಕಾಯಿದೆಯಲ್ಲಿ ಎಲ್ಲಿ ಏನೇ ಹೇಳಿದ್ದರೂ, ಅಪರಾಧಕ್ಕೀಡಾದ ಮಗುವಿಗೆ ಸಂಬಂಧಿಸಿದ ಯಾವುದೇ ಪ್ರಕರಣದ ದಾಖಲೆಗಳು, ನಿರ್ದೇಶನಗಳು ಮತ್ತು ಸಂಬಂಧಿಸಿದ ಕಾಗದ ಪತ್ರಗಳನ್ನು ಮಗುವಿಗೆ ನಿರಾಕರಿಸಲಾಗುವುದಿಲ್ಲ. |
| | | | | |
| **Sec 100** | | | **Protection of action taken in good faith.** | **ಹಿತದೃಷ್ಟಿಯಿಂದ ತೆಗೆದುಕೊಂಡ ಕ್ರಮಗಳಿಗೆ ರಕ್ಷಣೆ** |
| NGO?! | | | No suit, prosecution or other legal proceeding shall lie against the Central Government, or the State Government or any person acting under the directions of the Central Government or State Government, as the case may be, in respect of anything which is done in good faith or intended to be done in pursuance of this Act or of any rules or regulations made thereunder. | ಈ ಕಾಯಿದೆ ಮತ್ತು ನಿಯಮಗಳ ಜಾರಿಗಾಗಿ ಅಥವಾ ಈ ಕಾಯಿದೆಯ ಅವಕಾಶಗಳಂತೆ ಮಕ್ಕಳ ಹಿತವನ್ನು ಕಾಪಾಡುವ ಉದ್ದೇಶದಿಂದ ಕೈಗೊಂಡ ಅಥವಾ ಈ ಕಾಯಿದೆಯ ನಿಯಮಗಳನ್ನು ಮತ್ತು ಈ ಕಾಯಿದೆಯಡಿಯಲ್ಲಿ ನೀಡಲಾದ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ನಿರ್ದೇಶನಗಳನ್ನು ಜಾರಿ ಮಾಡುವ ಸಂದರ್ಭದಲ್ಲಿ ರಾಜ್ಯ ಅಥವಾ ಕೇಂದ್ರ ಸರ್ಕಾರ, ಅಥವಾ ವ್ಯಕ್ತಿಯ ಮೇಲೆ ಯಾವುದೇ ರೀತಿಯ ಕಾನೂನು ಕ್ರಮಗಳು ಅಥವಾ ಮೊಕದ್ದಮ್ಮೆಯನ್ನು ಹೂಡುವಂತಿಲ್ಲ. |
| | | | | |
| **Sec** | | | **Appeals.** | **ಮೇಲ್ಮನವಿ** |
| **101** | (*1*) | | Subject to the provisions of this Act, any person aggrieved by an order made by the Committee or the Board under this Act may, within thirty days from the date of such order, prefer an appeal to the Children's Court, except for decisions by the Committee related to Foster Care and Sponsorship After Care for which the appeal shall lie with the District Magistrate:<br><br>Provided that the Court of Sessions, or the District Magistrate, as the case may be, | ಈ ಕಾಯಿದೆಯಡಿ ಅಧಿಕಾರವುಳ್ಳ ಮಂಡಳಿ ಮತ್ತು ಸಮಿತಿಯು ಹೊರಡಿಸಿರುವ ತೀರ್ಮಾನದ ಬಗ್ಗೆ ಯಾವುದೇ ಅಸಮಾಧಾನ/ತಕರಾರು ಇದ್ದಲ್ಲಿ, ತೀರ್ಮಾನ ಹೊರಬಿದ್ದ ಮುವತ್ತು ದಿನದೊಳಗೆ ಸಂಬಂಧಿಸಿದವರು ಮಕ್ಕಳ ನ್ಯಾಯಾಲಯದೆದುರು ಮೇಲ್ಮನವಿ ಸಲ್ಲಿಸಬಹುದು. ಫಾಸ್ಟರ್ ಕೇರ್ ಮತ್ತು ಮುಂದುವರೆದ ಪ್ರಾಯೋಜಕತ್ವವನ್ನು ಕುರಿತು ಮೇಲ್ಮನವಿಯನ್ನು ಜಿಲ್ಲಾ ನ್ಯಾಯಾಧೀಶರಲ್ಲಿಗೆ ಒಯ್ಯಬೇಕು.<br><br>ಆದರೆ, ಸೆಷನ್ಸ್ ನ್ಯಾಯಾಲಯ ಅಥವಾ ಜಿಲ್ಲಾ ನ್ಯಾಯಧೀಶರ ನ್ಯಾಯಾಲಯವೂ ಕೂಡಾ, ಮೇಲ್ಮನವಿಯನ್ನು ಸ್ವೀಕರಿಸಬಹುದಾಗಿದ್ದು, ನಿರ್ದಿಷ್ಟ ಮೂವತ್ತು ದಿನದೊಳಗೆ ಮೇಲ್ಮನವಿ ಸಲ್ಲಿಸಲು ಅವರನ್ನು ತಡೆಯಲಾಗಿತ್ತು ಎಂಬುದಕ್ಕೆ |

| | | | | |
|---|---|---|---|---|
| | | | may entertain the appeal after the expiry of the said period of thirty days, if it is satisfied that the appellant was prevented by sufficient cause from filing the appeal in time and such appeal shall be decided within a period of 30 days. | ಸಕಾರಣವಿದ್ದಲ್ಲಿ ಸ್ವೀಕರಿಸಿ, ಅಂತಹ ಮನವಿಯನ್ನು ಮುಂದಿನ 30 ದಿನದೊಳಗೆ ಸಂಬಂಧಿಸಿದ ನ್ಯಾಯಾಲಯವು ತೀರ್ಮಾನಿಸಬೇಕು. |
| | (*2*) | | An appeal shall lie against an order of the Board passed after making the preliminary assessment into a heinous offence under section 15 of the Act, before the Court of Sessions and the Court may, while deciding the appeal, take the assistance of experienced psychologists and medical specialists other than those whose assistance has been obtained by the Board in passing the order under the said section. | ಕಾಯಿದೆಯ ಸೆ. 15ರಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಯಾವುದನ್ನು ಘೋರ ಆಪರಾಧಿಕ ಕೃತ್ಯ ಎಂದು ಪರಿಶೀಲಿಸಿ ಪರಿಗಣಿಸಲಾಗಿದೆಯೋ ಅಂತಹವುಗಳನ್ನು ಕುರಿತು ಮಂಡಳಿಯು ನೀಡಿದ ತೀರ್ಪಿಗೆ ವಿರುದ್ಧವಾಗಿ ಮೇಲ್ಮನವಿಯನ್ನು ಸೆಷನ್ಸ್ ನ್ಯಾಯಾಲಯದೆದುರು ತಂದು, ಆಯಾ ನ್ಯಾಯಾಲಯವು, ಈ ಹಿಂದೆ ಮಂಡಳಿಯು ಯಾರ ಸಹಾಯವನ್ನು ಪಡೆದಿತ್ತೋ ಅಂತಹವರನ್ನು ಹೊರತುಪಡಿಸಿ ಬೇರೆ ಅನುಭವೀ ಮನಃಶ್ಶಾಸ್ತ್ರಜ್ಞರು ಮತ್ತು ವೈದ್ಯರ ಸಹಾಯವನ್ನು ಪಡೆದು ತೀರ್ಮಾನಿಸಬೇಕು. |
| | (*3*) | | No appeal shall lie from,—<br>a) any order of acquittal made by the Board in respect of a child alleged to have committed an offence other than the heinous offence by a child who has completed or is above the age of sixteen years; or<br>b) any order made by a Committee in respect of finding that a person is not a child in need of care and protection. | ಈ ಮುಂದಿನ ಸಂದರ್ಭಗಳಲ್ಲಿ ಯಾವುದೇ ಮೇಲ್ಮನವಿಯು ಇರುವುದಿಲ್ಲ:<br>a) ಮಂಡಳಿಯು 16 ವರ್ಷ ದಾಟಿದ ಮಗು ಮಾಡಿದೆ ಎಂದು ಆಪಾದಿಸಲಾದ ಹೀನವಲ್ಲದ ಆಪರಾಧಿಕ ಕೃತ್ಯದಿಂದ ಖುಲಾಸೆ ಮಾಡಿರುವುದು ಅಥವಾ<br>b) ತನ್ನೆದುರು ಬಂದಂತ ವ್ಯಕ್ತಿ ಪೋಷಣೆ ಮತ್ತು ರಕ್ಷಣೆಯ ಆವಶ್ಯಕತೆ ಇರುವ ಮಗುವಲ್ಲ ಎದು ಸಮಿತಿಯು ಕಂಡುಕೊಂಡು ಹೊರಡಿಸಿದ ನಿರ್ದೇಶನಗಳು |
| | (*4*) | | No second appeal shall lie from any order of the Court of Session, passed in appeal under this section. | ಈ ಸೆಕ್ಷನ್ನಿನಲ್ಲಿ ನಿರ್ದೇಶಿಸಿರುವಂತಹವುಗಳನ್ನು ಕುರಿತು ಸೆಷನ್ಸ್ ನ್ಯಾಯಾಲಯದೆದುರು ಯಾರೂ ಎರಡನೇ ಬಾರಿ ಮೇಲ್ಮನವಿಯನ್ನು ತೆಗೆದುಕೊಂಡು ಹೋಗುವಂತಿಲ್ಲ |
| | (*5*) | | Any person aggrieved by an order of the Children's Court may file an appeal before the High Court in accordance with the procedure specified in the Code of Criminal Procedure, 1973. | ಮಕ್ಕಳ ನ್ಯಾಯಾಲಯದಲ್ಲಿ ಹೊರಡಿಸಲಾದ ತೀರ್ಮಾನದಿಂದ ಬಾಧಿತರಾದವರೆಂದು ಭಾವಿಸಲಾದ ಯಾವುದೇ ವ್ಯಕ್ತಿಯು ಅಪರಾಧ ಪ್ರಕ್ರಿಯಾ ಸಂಹಿತೆ **(CrPC)** 1973ನ್ನು ಅನುಸರಿಸಿ ಉಚ್ಚ ನ್ಯಾಯಾಲಯದೆದುರು ಮೇಲ್ಮನವಿಯನ್ನು ಒಯ್ಯಬಹುದು. |
| | | | | |
| **Sec** | | | **Revision.** | **ತಿದ್ದುಪಡಿ** |
| **102** | | | The High Court may, at any time, either on its own motion or on an application received in this behalf, call for the record of any proceeding in which any Committee or Board or Children's Court, or Court has passed an order, for the purpose of satisfying itself as to the legality or propriety of any such order and may pass such order in relation thereto as it thinks fit:<br><br>Provided that the High Court shall not pass an order under this section prejudicial to any person without giving him a reasonable opportunity of being heard. | ಉಚ್ಚ ನ್ಯಾಯಾಲಯವು ಯಾವುದೇ ಸಮಯದಲ್ಲಿ ತಾನೇ ತಾನಾಗಿ ಅಥವಾ ತನ್ನೆದುರು ಇರುವ ಅರ್ಜಿಯಿಂದ ಪ್ರೇರೇಪಿತವಾಗಿ, ಯಾವುದೇ ಸಮಿತಿ ಅಥವಾ ಮಂಡಳಿ ಅಥವಾ ನ್ಯಾಯಾಲಯವು ಹೊರಡಿಸಿರುವ ನಿರ್ದೇಶನ/ಆಜ್ಞೆಗೆ ಅನುಗುಣವಾಗಿ ಸಂಬಂಧಿಸಿದ ಪ್ರಕರಣದ ಪ್ರಕ್ರಿಯೆಗಳ ದಾಖಲೆಗಳನ್ನು ಹಾಜರು ಪಡಿಸಲು ಸೂಚಿಸಿ, ಅದನ್ನು ಪರಿಶೀಲಿಸಿ ಅವು ಸೂಕ್ತ ವಿಧಿವಿಧಾನಗಳು, ಪ್ರಕ್ರಿಯೆಗಳಂತೆ ನಡೆಸಲಾಗಿದೆಯೋ ಇಲ್ಲವೋ ಮತ್ತು ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆಯೋ ಇಲ್ಲವೋ ಎಂದು ಪರಿಶೀಲಿಸಿ ತನಗೆ ತೋಚಿದಂತೆ ನಿರ್ದೇಶನಗಳನ್ನು ಹೊರಡಿಸಬಹುದು<br><br>ಆದರೆ, ಉಚ್ಚ ನ್ಯಾಯಾಲಯವು ಸಂಂಧಿಸಿದವರಿಗೆ ಸಾಕಷ್ಟು ಅವಕಾಶಗಳನ್ನು ನೀಡದೆ ಅವರ ಅಹವಾಲನ್ನು ಕೇಳದೆ ತನ್ನ ಅರಿವಿಗೆ ಬಂದದ್ದನ್ನು ಮಾತ್ರ ಅವಲಂಬಿಸಿ ನಿರ್ದೇಶನಗಳನ್ನು ಪೂರ್ವಗ್ರಹವಾಗಿ ನೀಡುವಂತಿಲ್ಲ. |

| | | | | |
|---|---|---|---|---|
| **Sec 103** | | | **Procedure in inquiries, appeals and revision proceedings.** | **ವಿಚಾರಣೆ, ಮೇಲ್ಮನವಿ ಮತ್ತು ಪರಿಶೀಲನೆಗಳಿಗೆ ವಿಧಿವಿಧಾನಗಳು** |
| | (*1*) | | Save as otherwise expressly provided by this Act, a Committee or a Board while holding any inquiry under any of the provisions of this Act, shall follow such procedure as may be prescribed and subject thereto, shall follow, as far as may be, the procedure laiddown in the Code of Criminal Procedure, 1973 for trial of summons cases. | ಈ ಕಾಯಿದೆಯ ಯಾವುದೇ ನಿಯಮವನ್ನು ಅವಲಂಬಿಸಿ ಸಮಿತಿ ಅಥವಾ ಮಂಡಳಿಯು ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳುವಾಗ, ಈ ಕಾಯಿದೆಯಲ್ಲಿ ಪ್ರತ್ಯೇಕವಾಗಿ ಮತ್ತು ಸ್ಪಷ್ಟವಾಗಿ ಹೇಳದ ಹೊರತು, ಅಪರಾಧ ಪ್ರಕ್ರಿಯಾ ಸಂಹಿತೆ 1973 (1974ರ 2)ರಲ್ಲಿ ವಿವರಿಸಿರುವಂತಹ ವಿಧಿ ವಿಧಾನಗಳನ್ನು ಸಮನ್ಸ್ ಪ್ರಕರಣಗಳನ್ನು ವಿಚಾರಣೆ ಮಾಡುವಾಗ ಪಾಲಿಸಬೇಕು. |
| | (*2*) | | Save as otherwise expressly provided by or under this Act, the procedure to be followed in hearing appeals or revision proceedings under this Act shall be, as far as practicable, in accordance with the provisions of the Code of Criminal Procedure, 1973. | ಈ ಕಾಯಿದೆಯ ಯಾವುದೇ ನಿಯಮವನ್ನು ಅವಲಂಬಿಸಿ ಸಮಿತಿ ಅಥವಾ ಮಂಡಳಿಯು ತೆಗೆದುಕೊಂಡ ಯಾವುದೇ ತೀರ್ಮಾನವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದೇ ಆದಲ್ಲಿ ಅಥವಾ ಮರು ವಿಚಾರಣೆಗೆ ತೆಗೆದುಕೊಳ್ಳುವಾಗ, ಈ ಕಾಯಿದೆಯಲ್ಲಿ ಪ್ರತ್ಯೇಕವಾಗಿ ಮತ್ತು ಸ್ಪಷ್ಟವಾಗಿ ಹೇಳದ ಹೊರತು, ಅಪರಾಧ ಪ್ರಕ್ರಿಯಾ ಸಂಹಿತೆ 1973 ರಲ್ಲಿ ವಿವರಿಸಿರುವಂತಹ ವಿಧಿ ವಿಧಾನಗಳನ್ನು ಪಾಲಿಸಬೇಕು. |
| | | | | |
| **Sec 104** | | | **Power of the Committee or the Board to amend its own orders.** | **ಸಮಿತಿ ಮತ್ತು ಮಂಡಳಿಗೆ ತಾವೇ ಕೈಗೊಂಡ ಆದೇಶಗಳಿಗೆ ತಿದ್ದುಪಡಿ ಮಾಡುವ ಅಧಿಕಾರ** |
| | (*1*) | | Without prejudice to the provisions for appeal and revision contained in this Act, the Committee or the Board may, on an application received in this behalf, amend any orders passed by itself, as to the institution to which a child is to be sent or as to the person under whose care or supervision a child is to be placed under this Act:<br><br>Provided that during the course of hearing for amending any such orders, there shall be at least two members of the Board of which one shall be the Principal Magistrate and at least three members of the Committee and all persons concerned, or their authorized representatives, whose views shall be heard by the Committee or the Board, as the case may be, before the said orders are amended. | ಈ ಕಾಯಿದೆಯಡಿ ಇರುವ ಅವಕಾಶಗಳಂತೆ ಮೇಲ್ಮನವಿ ಹಾಗೂ ತೀರ್ಮಾನಗಳ ತಿದ್ದುಪಡಿಯನ್ನು ಕುರಿತು ಯಾವುದೇ ಪೂರ್ವಗ್ರಹವಿಲ್ಲದೆ, ಈ ಕುರಿತು ಯಾವುದೇ ಸಮಿತಿ ಅಥವಾ ಮಂಡಳಿಯು ಅರ್ಜಿಗಳನ್ನು ಪಡೆದಾಗ, ತನ್ನೆದುರು ಬಂದಿದ್ದು ತೀರ್ಮಾನವನ್ನು ಕೈಗೊಳ್ಳಲಾಗಿದ್ದ ಮಗುವನ್ನು ಕುರಿತು ತೀರ್ಮಾನವನ್ನು ಬದಲಿಸುವ, ತಿದ್ದುಪಡಿ ಮಾಡಿ ಮಗುವಿನ ಉಸ್ತುವಾರಿಗೆ ಸೂಕ್ತವಾದ ಸಂಸ್ಥೆ ಅಥವಾ ಅರ್ಹವ್ಯಕ್ತಿಯ ಸುಪರ್ದಿಗೆ ನೀಡಬಹುದು.<br><br>ಯಾವುದೇ ಮಗುವನ್ನು ಕುರಿತು ತೆಗೆದುಕೊಳ್ಳಲಾಗುವ ತೀರ್ಮಾನವನ್ನು ತಿದ್ದುಪಡಿ ಮಾಡುವ ಸಂದರ್ಭದಲ್ಲಿ ಮಂಡಳಿ ಕನಿಷ್ಠ ಇಬ್ಬರು ಸದಸ್ಯರು ಇದ್ದು, ಅವರಲ್ಲಿ ಒಬ್ಬರು ಮುಖ್ಯ ನ್ಯಾಯಾಧೀಶರು ಇದ್ದು ಮತ್ತು ಸಮಿತಿಯಾಗಿದ್ದಲ್ಲಿ ಕನಿಷ್ಠ ಮೂವರು ಸದಸ್ಯರಿದ್ದು ಅಥವಾ ಅವರು ನೇಮಿಸಿದ್ದ ವ್ಯಕ್ತಿಗಳಿದ್ದು ಪ್ರಕರಣವನ್ನು ಕುರಿತು ನಡೆಯುವ ಚರ್ಚೆ ಹಾಗೂ ತೀರ್ಮಾನದ ಸಂದರ್ಭದಲ್ಲಿ ಎಲ್ಲರ ಅಭಿಪ್ರಾಯಗಳಿಗೆ ಅವಕಾಶವಿರಬೇಕು. |
| | | (*2*) | Clerical mistakes in orders passed by the Committee or the Board or errors arising therein from any accidental slip or omission may, at any time, be corrected by the Committee or the Board, as the case may be, either on its own motion or on an application received in this behalf. | ಮಂಡಳಿ ಅಥವಾ ಸಮಿತಿಯು ತೀರ್ಮಾನವನ್ನು ಬರೆಯುವ ಸಂದರ್ಭದಲ್ಲಿ ಅಥವಾ ಬರೆದ ಸಂದರ್ಭದಲ್ಲಿ ಆಗಿರಬಹುದಾದ ಅಚಾತುರ್ಯ, ಅಚಾನಕ್ ತಪ್ಪುಗಳು ಅಥವಾ ಕಣ್ತಪ್ಪಿನಿಂದಲೋ ಅಥವಾ ಇನ್ನಾವುದೇ ಕಾರಣದಿಂದ ಆಗಿರಬಹುದಾದ ತಪ್ಪುಗಳನ್ನು ತಾನೇ ಬದಲಿಸುವ ಅಥವಾ ಈ ಕುರಿತು ಯಾರಾದರೂ ಅರ್ಜಿ ಕೊಟ್ಟಿದ್ದಲ್ಲಿ ಸೂಕ್ತವಾದ ರೀತಿಯಲ್ಲಿ ಕ್ರಮ ಕೈಗೊಳ್ಳಲೇಬೇಕು. |
| | | | | |

| | | | | |
|---|---|---|---|---|
| **Sec** | | | **Juvenile justice fund.** | **ಮಕ್ಕಳ ನ್ಯಾಯ ನಿಧಿ** |
| **105** | (*1*) | | The State Government may create a fund in such name as it thinks fit for the welfare and rehabilitation of the children dealt with under this Act. | ಈ ಕಾಯಿದೆಯಡಿ ಬರುವ ಮಕ್ಕಳ ಕಲ್ಯಾಣ ಅಥವಾ ಪುನರ್ವಸತಿಗಾಗಿ ರಾಜ್ಯ ಸರ್ಕಾರಗಳು ನಿರ್ದಿಷ್ಟ ಹೆಸರಿನಡಿ ನಿಧಿಯನ್ನು ಸ್ಥಾಪಿಸಬಹುದು. |
| | (*2*) | | There shall be credited to the fund such voluntary donations, contributions or subscriptions as may be made by any individual or organisation. | ಯಾವುದೆ ವ್ಯಕ್ತಿ ಅಥವಾ ಸಂಸ್ಥೆಗಳು ನೀಡುವ ಹಣ/ದೇಣಿಗೆ, ವಂತಿಗೆಯನ್ನು ಈ ನಿಧಿಯಲ್ಲಿ ಜಮೆ ಮಾಡಬಹುದು. |
| | (*3*) | | The fund created under sub-section (*1*) shall be administered by the Department of the State Government implementing this Act in such manner and for such purposes as may be prescribed. | ಈ ಮೇಲಿನ (1) ಉಪ ವಿಧಿಯಲ್ಲಿ ಸೂಚಿಸಿರುವಂತಹ ನಿಧಿಯನ್ನು ಈ ಕಾಯಿದೆಯನ್ನು ಜಾರಿ ಮಾಡುವ ಜವಾಬ್ದಾರಿ ಇರುವ ರಾಜ್ಯ ಸರ್ಕಾರದ ನಿರ್ದಿಷ್ಟ ಇಲಾಖೆಯು ನಿರ್ಧರಿಸಲಾಗುವ ನಿರ್ದಿಷ್ಟ ವಿಧಾನಗಳು ಮತ್ತು ಉದ್ದೇಶಗಳಿಗಾಗಿ ಬಳಸಬೇಕು. |
| | | | | |
| **Sec 106** | | | **State Child Protection Society and District Child Protection Unit.** | **ರಾಜ್ಯ ಮಕ್ಕಳ ರಕ್ಷಣಾ ಸಂಸ್ಥೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕ** |
| | | | Every State Government shall constitute a Child Protection Society for the State and Child Protection Unit for every District, consisting of such officers and other employees as may be appointed by that Government, to take up matters relating to children with a view to ensure the implementation of this Act, including the establishment and maintenance of institutions under this Act, notification of competent authorities in relation to the children and their rehabilitation and co-ordination with various official and non-official agencies concerned and to discharge such other functions as may be prescribed. | ಪ್ರತಿ ರಾಜ್ಯ ಸರ್ಕಾರಗಳು ನಿರ್ದಿಷ್ಟ ಅಧಿಕಾರಿಗಳು ಮತ್ತು ಸರ್ಕಾರವು ನೇಮಿಸುವ ಸಿಬ್ಬಂದಿಗಳನ್ನೊಳಗೊಂಡ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ ಹಾಗೂ ಪ್ರತಿ ಜಿಲ್ಲೆಗಾಗಿ ಮಕ್ಕಳ ರಕ್ಷಣಾ ಘಟಕಗಳನ್ನು ರಚಿಸಬೇಕು ಮತ್ತು ಅವರು ಮಕ್ಕಳಿಗೆ ಸಂಬಂಧಿಸಿದ ವಿಷಯ ವಿಚಾರಗಳಿಗೆ ಈ ಕಾಯಿದೆಯನ್ನು ಜಾರಿಗೊಳಿಸುವ ದಿಶೆಯಲ್ಲಿ, ಅದಕ್ಕಾಗಿ ಸಂಬಂಧಿಸಿದ ಸಂಸ್ಥೆಗಳನ್ನು ಸ್ಥಾಪಿಸುವುದು ನಡೆಸುವುದನ್ನೂ ಸೇರಿ ಕಾರ್ಯೋನ್ಮುಖರಾಗಬೇಕು, ಹಾಗೂ ಮಕ್ಕಳಿಗೆ ಸಂಬಂಧಿಸಿದಂತೆ ಪ್ರಾಧಿಕಾರಗಳನ್ನು ಗುರುತಿಸುವುದು, ಮಕ್ಕಳ ಪುನರ್ವಸತಿಗಾಗಿ ಇತರ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು, ಅಧಿಕಾರಿಗಳೊಡನೆ ಸಂಯೋಜಿಸುವುದನ್ನೂ ಸೇರಿಸಿಕೊಂಡು, ಕಾಯಿದೆಯಂತೆ ನಿಗದಿಪಡಿಸುವ ಇತರ ಕೆಲಸಗಳನ್ನೂ ನಿರ್ವಹಿಸಬೇಕು. |
| | | | | |
| **Sec 107** | | | **Child Welfare Police Officer and Special Juvenile Police Unit.** | **ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿ ಮತ್ತು ಮಕ್ಕಳ ವಿಶೇಷ ಪೋಲಿಸ್ ಘಟಕ** |
| | (*1*) | | In every police station, at least one officer, not below the rank of assistant sub-inspector, with aptitude, appropriate training and orientation may be designated as the child welfare police officer to exclusively deal with children either as victims or perpetrators, in co-ordination with the police, voluntary and non-governmental organisations. | ಪ್ರತಿ ಪೊಲೀಸ್ ಠಾಣೆಯಲ್ಲಿ, ಕನಿಷ್ಟ ಒಬ್ಬ ಸಹಾಯಕ ಸಬ್–ಇನ್ಸ್‌ಪೆಕ್ಟರ್‌ಗಿಂತ ಕೆಳಗಿನ ಹುದ್ದೆಯವರಲ್ಲದ ಸೂಕ್ತವಾದ ತರಬೇತಿ ಹೊಂದಿದ್ದು, ಮಕ್ಕಳು ಮತ್ತು ಮಕ್ಕಳ ಹಕ್ಕುಗಳ ಬಗ್ಗೆ ಕಳಕಳಿ ತೋರಿಸುವ ಹಾಗು ಮಾಹಿತಿ ಹೊಂದಿರುವ ಪೊಲೀಸರನ್ನು 'ಮಕ್ಕಳ ಕಲ್ಯಾಣಾಧಿಕಾರಿ' ಎಂದು ಗುರುತಿಸಬೇಕು ಮತ್ತು ಅವರೇ ಅಪರಾಧಗಳಿಗೀಡಾದ ಮಕ್ಕಳು ಮತ್ತು ಅಪರಾಧಿಕ ಕೃತ್ಯಗಳನ್ನು ಮಾಡಿದ ಮಕ್ಕಳ ಪ್ರಕರಣಗಳನ್ನು ವಿಲೇ ಮಾಡಲು ಇತರ ಪೊಲೀಸರೊಂದಿಗೆ, ಸ್ವಯಂಸೇವಾ ಸಂಘಟನೆಗಳೊಡನೆ ಸಂಸರ್ಗ ಹೊಂದಿರಬೇಕು. |
| | (*2*) | | To co-ordinate all functions of police related to children, the State Government shall constitute Special Juvenile Police Units in each district | ಈ ಮೇಲೆ ಹೇಳಿರುವ ರೀತಿಯಲ್ಲಿ ಮಕ್ಕಳಿಗೆ ಸಂಬಂಧಿಸಿದಂತೆ ಪೊಲೀಸರ ಕೆಲಸಗಳನ್ನು ಸಂಯೋಜಿಸಲು, ರಾಜ್ಯ ಸರ್ಕಾರವು ಉಪ ಸೂಪರಿಂಡೆಂಟ್ ಪೊಲೀಸ್ ಅಥವಾ ಅದಕ್ಕಿಂತಲೂ |

| | | | | |
|---|---|---|---|---|
| | | | and city, headed by a police officer not below the rank of a Deputy Superintendent of Police or above and consisting of all police officers designated under sub-section (*1*) and two social workers having experience of working in the field of child welfare, of whom one shall be a woman. | ಮೇಲ್ಪಟ್ಟದ ಹುದ್ದೆಯ ಅಧಿಕಾರಿಗಳ ನಾಯಕತ್ವದಲ್ಲಿ, ಉಪ ಸೆ.(1)ರಂತೆ ಹೆಸರಿಸಲಾಗುವ ಎಲ್ಲ ಪೊಲೀಸ್ ಅಧಿಕಾರಿಗಳನ್ನು ಹೊಂದಿರುವ ಹಾಗೂ ಮಕ್ಕಳ ಕಲ್ಯಾಣ ಕಾರ್ಯಕ್ರಮಗಳಲ್ಲಿ ಅನುಭವ ಇರುವ ಒಬ್ಬ ಮಹಿಳೆಯನ್ನೂ ಹೊಂದಿರುವ ಇಬ್ಬರು ಸಮಾಜಕಾರ್ಯಕರ್ತರನ್ನೂ ಸೇರಿಸಿಕೊಂಡು ಮಕ್ಕಳ ವಿಶೇಷ ಪೊಲೀಸ್ ಘಟಕಗಳನ್ನು ಪ್ರತಿ ಜಿಲ್ಲೆಯಲ್ಲಿ ಸ್ಥಾಪಿಸಬೇಕು. |
| | (*3*) | | All police officers of the Special Juvenile Police Units shall be provided special training, especially at induction as child welfare police officer, to enable them to perform their functions more effectively. | ಈ ಮಕ್ಕಳ ವಿಶೇಷ ಪೊಲೀಸ್ ಘಟಕಕ್ಕೆ ವಿಶೇಷ ತರಬೇತಿಯನ್ನು, ಅದರಲ್ಲೂ ಮಕ್ಕಳ ಕಲ್ಯಾಣಾಧಿಕಾರಿ ಎಂದು ನೇಮಿಸಲ್ಪಟ್ಟ ಕೂಡಲೇ ಪ್ರವೇಶ ತರಬೇತಿಯನ್ನು ನೀಡಿ ಅವರ ಕೆಲಸಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ತಯಾರು ಮಾಡಬೇಕು. |
| | (*4*) | | Special Juvenile Police Unit also includes Railway police dealing with children. | ಮಕ್ಕಳ ವಿಶೇಷ ಪೊಲೀಸ್ ಘಟಕದಲ್ಲಿ ಮಕ್ಕಳನ್ನು ಕುರಿತು ಕೆಲಸ ಮಾಡುತ್ತಿರುವ ರೈಲ್ವೇ ಪೊಲೀಸರೂ ಸೇರುತ್ತಾರೆ. |
| | | | | |
| **Sec 108** | | | **Public awareness on provisions of Act.** | **ಕಾಯಿದೆಯಲ್ಲಿರುವ ಅವಕಾಶಗಳನ್ನು ಕುರಿತು ಸಾರ್ವಜನಿಕ ಅರಿವು** |
| | | | The Central Government and every State Government, shall take necessary measures to ensure that—<br>*(a)* the provisions of this Act are given wide publicity through media including television, radio and print media at regular intervals so as to make the general public, children and their parents or guardians aware of such provisions;<br>*(b)* the officers of the Central Government, State Government and other concerned, persons are imparted periodic training on the matters relating to the implementation of the provisions of this Act. | ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಈ ಮುಂದಿನವುಗಳನ್ನು ಖಾತರಿ ಪಡಿಸಿಕೊಳ್ಳಬೇಕು:<br>(a) ಮಕ್ಕಳು, ಅವರ ಪೋಷಕರು, ತಂದೆ–ತಾಯಿ, ಸಾರ್ವಜನಿಕರಿಗೆ ಈ ಕಾಯಿದೆಯಲ್ಲಿರುವ ಅವಕಾಶಗಳನ್ನು ಕುರಿತು ಕಾಲಕಾಲಕ್ಕೆ ದೂರದರ್ಶನ, ರೇಡಿಯೋ ಮತ್ತು ಮುದ್ರಣ ಮಾಧ್ಯಮದ ಮೂಲಕ ವಿಸ್ತೃತವಾದ ಮಾಹಿತಿಯನ್ನು, ಪ್ರಚಾರವನ್ನು ನೀಡುತ್ತಿರಬೇಕು.<br>(b) ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಂಬಂಧಪಟ್ಟ ಅಧಿಕಾರಿಗಳಿಗೆ, ವ್ಯಕ್ತಿಗಳಿಗೆ ಈ ಕಾಯಿದೆಯ ಸಮರ್ಪಕ ಜಾರಿಗಾಗಿ ಕಾಲಕಾಲಕ್ಕೆ ತರಬೇತಿಗಳನ್ನು ಏರ್ಪಡಿಸಬೇಕು. |
| | | | | |
| **Sec** | | | **Monitoring of implementation of Act.** | **ಕಾಯಿದೆಯ ಜಾರಿ ಉಸ್ತುವಾರಿ** |
| **109** | (*1*) | | The National Commission for Protection of Child Rights constituted under section 3, or as the case may be, the State Commission for Protection of Child Rights constituted under section 17 (herein referred to as the National Commission or the State Commission, as the case may be), of the Commissions for Protection of Child rights Act, 2005, shall, in addition to the functions assigned to them under the said Act, also monitor the implementation of the provisions of this Act, in such manner, as may be prescribed. | ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರಾಷ್ಟ್ರೀಯ ಆಯೋಗಗಳು ಕಾಯಿದೆ 2005ರ ಸೆ.3ರಂತೆ ರಚಿಸಲಾಗಿರುವ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಮತ್ತು ಸೆ.17ರಂತೆ ರಚಿಸಲಾಗಿರುವ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳು (ಇನ್ನು ಮುಂದೆ ರಾಷ್ಟ್ರೀಯ ಆಯೋಗ ಮತ್ತು ರಾಜ್ಯ ಆಯೋಗ ಎಂದು ಹೆಸರಿಸಲಾಗುತ್ತದೆ) ತಮಗೆ ಸಂಬಂಧಿಸಿದ ಕಾಯಿದೆಯಲ್ಲಿ ನೀಡಿರುವ ಜವಾಬ್ದಾರಿಗಳೊಡನೆ ಈ ಕಾಯಿದೆಯ ಜಾರಿಯನ್ನೂ ಉಸ್ತುವಾರಿ ಮಾಡಬೇಕು. |

| | | | | |
|---|---|---|---|---|
| | (*2*) | | The National Commission or, as the case may be, the State Commission, shall, while inquiring into any matter relating to any offence under this Act, have the same powers as are vested in the National Commission or the State Commission under the Commissions for Protection of Child Rights Act, 2005. | ರಾಷ್ಟ್ರೀಯ ಅಥವಾ ರಾಜ್ಯ ಆಯೋಗಗಳು, ಈ ಕಾಯಿದೆಯಡಿ ಹೆಸರಿಸಲಾಗಿರುವ ಯಾವುದೇ ವಿಚಾರ, ಯಾವುದೇ ಅಪರಾಧವನ್ನು ಕುರಿತು ವಿಚಾರಣೆ ನಡೆಸುವಾಗ, ರಾಷ್ಟ್ರೀಯ ಆಯೋಗ ಮತ್ತು ರಾಜ್ಯ ಆಯೋಗಗಳಿಗೆ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರಾಷ್ಟ್ರೀಯ ಆಯೋಗಗಳು ಕಾಯಿದೆ 2005ರಲ್ಲಿ ಯಾವ ಅಧಿಕಾರಗಳನ್ನು ನೀಡಲಾಗಿದೆಯೋ ಅದೇ ಅಧಿಕಾರವನ್ನು ಹೊಂದಿರುತ್ತವೆ. |
| | (*3*) | | The National Commission or, as the case may be, the State Commission, shall also include its activities under this section, in the annual report referred to in section 16 of the Commissions for Protection of Child Rights Act, 2005. | ರಾಷ್ಟ್ರೀಯ ಮತ್ತು ರಾಜ್ಯ ಆಯೋಗಗಳಿಗೆ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳು ಕಾಯಿದೆ 2005ರ ಸೆ. 16ರಲ್ಲಿ ನಿರ್ದೇಶಿಸಿರುವಂತೆ ನೀಡಲಾಗುವ ವಾರ್ಷಿಕ ವರದಿಯಲ್ಲಿ ಈ ಕಾಯಿದೆಯಡಿ ನಡೆಸುವ ಚಟುವಟಿಕೆಗಳನ್ನೂ ವರದಿ ಮಾಡಬೇಕು. |
| **Sec** | | | **Power to make rules.** | **ನಿಯಮಗಳ ರಚನೆಗೆ ಅಧಿಕಾರ** |
| **110** | (*1*) | | The State Government shall, by notification in the Official Gazette, make rules to carry out the purposes of this Act:<br><br>Provided that the Central Government may, frame model rules in respect of all or any of the matters with respect to which the State Government is required to make rules and where any such model rules have been framed in respect of any such matter, they shall apply to the State *mutatis mutandis* until the rules in respect of that matter are made by the State Government and while making any such rules, they conform to such model rules. | ರಾಜ್ಯ ಸರ್ಕಾರಗಳು ಈ ಕಾಯಿದೆಯನ್ನು ಜಾರಿಗೊಳಿಸಲೋಸುಗ ನಿಯಮಗಳನ್ನು ರೂಪಿಸಿ ಅದನ್ನು ಅಧಿಕೃತ ರಾಜ ಪತ್ರದಲ್ಲಿ ಪ್ರಕಟಿಸಬೇಕು:<br><br>ಈ ಕಾಯಿದೆಯ ಎಲ್ಲ ಅಥವಾ ಯಾವುದೇ ವಿಚಾರವನ್ನು ಕುರಿತು ಜಾರಿಗಾಗಿ ಕೇಂದ್ರ ಸರ್ಕಾರವು ನಿಯಮಗಳನ್ನು ರೂಪಿಸಬಹುದು. ಅದರಂತೆ ರಾಜ್ಯ ಸರ್ಕಾರಗಳೂ ಸಹ ನಿಯಮಗಳನ್ನು ರಚಿಸುವ ಅವಶ್ಯಕತೆ ಇದ್ದು, ಎಲ್ಲಿ ಮಾದರಿ ನಿಯಮಗಳನ್ನು ಈಗಾಗಲೇ ರಚಿಸಲಾಗಿದೆಯೋ, ಅವೆಲ್ಲವೂ ರಾಜ್ಯಗಳಲ್ಲಿ ಅದರಂತೆಯೇ (*mutatis mutandis*) ಇದ್ದು, ರಾಜ್ಯ ಸರ್ಕಾರಗಳು ತಮ್ಮದೇ ನಿಯಮಗಳನ್ನು ರಚಿಸುವ ತನಕ ಇದು ಜಾರಿಯಲ್ಲಿರುತ್ತದೆ ಮತ್ತು ರಾಜ್ಯ ಸರ್ಕಾರವು ರೂಪಿಸುವ ಇಂತಹ ನಿಯಮಗಳು ಮಾದರಿ ನಿಯಮಗಳಿಗೆ ಹೊಂದುವಂತಿರಬೇಕು. |
| | (*2*) | | In particular, and without prejudice to the generality of the foregoing powers, such rules may provide for all or any of the following matters, namely :— | ನಿರ್ದಿಷ್ಟವಾಗಿ, ಮತ್ತು ಅಧಿಕಾರಗಳನ್ನು ಬಿಟ್ಟುಕೊಡದಂತೆ ಯಾವುದೇ ಪೂರ್ವಗ್ರಹವಿಲ್ಲದೆ, ಈ ನಿಯಮಗಳು ಈ ಮುಂದಿನ ವಿಚಾರಗಳಿಗೆ ಅವಕಾಶಗಳನ್ನು ಮಾಡಿಕೊಡಲೇಬೇಕು. |
| **new** | | | (i) manner of inquiry in case of a missing or run away child or whose parents cannot be found under sub-clause (*vii*) of clause (*14*) of section 2; | (i) ಸೆ. 2ರ ಉಪ ಕ್ಲಾಸ್ (14)ರ ಉಪ ಕ್ಲಾಸ್ (*vii*) ಅಡಿಯಲ್ಲಿ ಕಳೆದು ಹೋದ ಅಥವಾ ಓಡಿ ಹೋದ ಅಥವಾ ಪೋಷಕರನ್ನು ಪತ್ತೆ ಮಾಡಲಾಗದಂತಹ ಮಕ್ಕಳನ್ನು ಕುರಿತು ನಡೆಸಬೇಕಾದ ತನಿಖೆಗಳು |
| **new** | | | (ii) responsibilities of the Child Welfare Officer attached to a Children's Home under clause (*18*) of section 2; | (ii) ಸೆ. 2ರಡಿಯಲ್ಲಿ ಕ್ಲಾಸ್ (18)ರಂತೆ ಮಕ್ಕಳ ಮಂದಿರಗಳಿಗೆ ಸೇರಿದ ಮಕ್ಕಳ ಕಲ್ಯಾಣಾಧಿಕಾರಿಗಳ ಜವಾಬ್ದಾರಿಗಳು |
| **new** | | | (iii) qualifications of the members of the Board under sub-section (*2*) of section 4; | (iii) ಸೆ.4ರಡಿಯಲ್ಲಿನ ಉಪ ಸೆ.(2)ರಂತೆ ಮಂಡಳಿಯ ಸದಸ್ಯರಾಗಲು ಇರಬೇಕಾದ ಅರ್ಹತೆಗಳು |
| **new** | | | (iv) induction training and sensitisation of all members of the Board under sub-section (*5*) of section 4; | (iv) ಸೆ. 4ರಡಿಯಲ್ಲಿನ ಉಪ ಸೆ. (5)ರಂತೆ ಮಂಡಳಿಯ ಎಲ್ಲ ಸದಸ್ಯರಿಗೆ ಪ್ರವೇಶ ತರಬೇತಿ ಮತ್ತು ಸೂಕ್ಷ್ಮಗೊಳಿಸುವುದು |
| | | | (v) term of office of the members of the Board and the manner in which such member may resign under sub-section (*6*) of section 4; | (v) ಕಾಯಿದೆಯ ಸೆಕ್ಷನ್ 4ರ ಉಪ ಸೆಕ್ಷನ್ (6)ರಂತೆ ಮಂಡಳಿಯ ಸದಸ್ಯರ ಅಧಿಕಾರಾವಧಿ ಮತ್ತು ಸದಸ್ಯರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವ ವಿಧಾನಗಳು. |
| | | | (vi) time of the meetings of the Board and the rules of procedure in regard to the transaction of business at its meeting under sub-section (*1*) of section 7; | (vi) ಸೆಕ್ಷನ್ 7ರ ಉಪ ಸೆಕ್ಷನ್ (*1*)ರಲ್ಲಿರುವಂತೆ ಮಂಡಳಿಯು ಸಭೆ ಸೇರುವ ಸಮಯ ಮತ್ತು ಮಂಡಳಿಯ ಕಾರ್ಯ ನಿರ್ವಹಣೆ ವಿಧಿವಿಧಾನಗಳು ಮತ್ತು ಕೆಲಸಗಳು |

| | | | | |
|---|---|---|---|---|
| **new** | | | (vii) qualifications, experience and payment of fees of an interpreter or translator under clause (*d*) of sub-section (*3*) of section 8; | (vii) ಸೆ. 8ರಡಿಯಲ್ಲಿನ ಉಪ ಸೆ. (3)ರ ಕ್ಲಾಸ್ (*d*) ರಂತೆ ಭಾಷಾಂತಕಾರರು/ತರ್ಜುಮೆದಾರರು ಅಥವಾ (ಸಂಜ್ಞಾ ಭಾಷಾ) ಅರ್ಥಧಾರಿಗಳ ಅರ್ಹತೆ, ಅನುಭವ ಮತ್ತು ಅವರಿಗೆ ನೀಡಬೇಕಾದ ಶುಲ್ಕ |
| **new** | | | (viii) any other function of the Board under clause (*n*) of sub-section (*3*) of sec. 8; | (viii) ಸೆ. 8ರಡಿಯಲ್ಲಿನ ಉಪ ಸೆ. (3)ರ ಕ್ಲಾಸ್ (*n*)ನಂತೆ ಮಂಡಳಿ ನಿರ್ವಹಿಸಬಹುದಾದ ಇನ್ನಾವುದೇ ಸಂಬಂಧಿತ ಕೆಲಸಗಳು |
| **new** | | | (ix) persons through whom any child alleged to be in conflict with law may be produced before the Board and the manner in which such a child may be sent to an observation home or place of safety under sub-sec.(*2*) of sec.10; | (ix) ಸೆ. 10ರಡಿಯಲ್ಲಿನ ಉಪ ಸೆ. (2)ರಂತೆ ಕಾನೂನಿನೊಡನೆ ಸಂಘರ್ಷದಲ್ಲಿರುವ ಯಾವುದೇ ಮಗುವನ್ನು ಮಂಡಳಿಯೆದುರು ಹಾಜರುಪಡಿಸಬಹುದಾದ ವ್ಯಕ್ತಿಗಳು ಮತ್ತು ಅಂತಹ ಮಕ್ಕಳನ್ನು ಪರಿವೀಕ್ಷಣಾಲಯಕ್ಕೆ ಅಥವಾ ಸುರಕ್ಷಿತ ಸ್ಥಳಕ್ಕೆ ಕಳುಹಿಸುವ ವಿಧಿವಿಧಾನಗಳು |
| **new** | | | (x) manner in which a person apprehended and not released on bail by the officer-in-charge of the police station may be kept in an observation home until such person is brought before a Board under sub-section (*2*) of sec. 12; | (x) ಸೆ. 12ರ ಉಪ ಸೆ. (2)ರಂತೆ ಪೊಲೀಸ್ ಠಾಣೆಯ ಉಸ್ತುವಾರಿ ಹೊಂದಿರುವ ಅಧಿಕಾರಿಯು ತಮ್ಮ ವಶಕ್ಕೆ ತೆಗೆದುಕೊಂಡ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿಲ್ಲದಿದ್ದಲ್ಲಿ, ಆ ವ್ಯಕ್ತಿಯನ್ನು ಮಂಡಳಿಯೆದುರು ಹಾಜರುಪಡಿಸುವ ತನಕ ಪರಿವೀಕ್ಷಣಾಲಯದಲ್ಲಿರಿಸುವುದು |
| **new** | | | (xi) format for information on pendency in the Board to the Chief Judicial Magistrate or the Chief Metropolitan Magistrate and District Magistrate on quarterly basis under sub-section (*3*) of section 16; | (xi) ಸೆ. 16ರ ಉಪ ಸೆ. (3)ರಂತೆ ಪ್ರತಿ ಮೂರು ತಿಂಗಳಿಗೊಮ್ಮೆ ಮುಖ್ಯ ನ್ಯಾಯಾಂಗ ನ್ಯಾಯಾಧೀಶರು ಅಥವಾ ಮುಖ್ಯ ಮೆಟ್ರೋಪಾಲಿಟನ್ ನ್ಯಾಯಾಧೀಶರು ಮತ್ತು ಜಿಲ್ಲಾ ನ್ಯಾಯಾಧೀಶರಿಗೆ ಮಂಡಳಿಯಲ್ಲಿ ಇನ್ನೂ ಉಳಿದಿರುವ ಪ್ರಕರಣಗಳನ್ನು ಕುರಿತು ವರದಿ ಮಾಡುವ ವಿಧಾನ; |
| **new** | | | (xii) monitoring procedures and list of monitoring authorities under sub-section (*2*) of section 20; | (xii) ಸೆ. 20ರ ಉಪ ಸೆ. (2)ರಂತೆ ಉಸ್ತುವಾರಿ ಮಾಡುವ ಪ್ರಕ್ರಿಯೆಗಳು ಮತ್ತು ಉಸ್ತುವಾರಿ ಮಾಡುವ ಅಧಿಕಾರ ಉಳ್ಳವರ ಪಟ್ಟಿ |
| **new** | | | (xiii) manner in which the relevant records of the child may be destroyed by the Board, police or the court under sub-section (*2*) of section 24; | (xiii) ಸೆ. 24ರಂ ಉಪ ಸೆ. (2)ರಂತೆ ಮಕ್ಕಳಿಗೆ ಸಂಬಂಧಿಸಿದ ದಾಖಲೆಗಳನ್ನು ಮಂಡಳಿ ಅಥವಾ ಪೊಲೀಸ್ ಅಥವಾ ನ್ಯಾಯಾಲಯವು ನಾಶ ಮಾಡುವ ವಿಧಾನ |
| | | | (xiv) qualifications of the members of the Child Welfare Committee under subsection (*5*) of section 27; | (xiv) ಸೆಕ್ಷನ್ 27ರ ಉಪ ಸೆಕ್ಷನ್ (5)ರಂತೆ ಮಕ್ಕಳ ಕಲ್ಯಾಣ ಸಮಿತಿಗಳಿಗೆ ನೇಮಿಸಲ್ಪಡುವ ಅಧ್ಯಕ್ಷರು ಮತ್ತು ಸದಸ್ಯರ ಅರ್ಹತೆ |
| | | | (xv) rules and procedures with regard to transaction of business at the meetings of the Child Welfare Committee under sub-section (*1*) of section 28 | (xv) ಸೆ. 28ರ ಉಪ ಸೆ (1)ರಂತೆ ಮಕ್ಕಳ ಕಲ್ಯಾಣ ಸಮಿತಿಯ ಕಾರ್ಯಕಲಾಪಗಳನ್ನು ಕುರಿತು ಪ್ರಕ್ರಿಯೆಗಳು ಮತ್ತು ನಿಯಮಗಳು |
| **new** | | | (xvi) process of restoration of abandoned or lost children to their families under clause (*x*) of section 30; | (xvi) ಸೆ. 30ರ ಕ್ಲಾಸ್ (*x*)ರಂತೆ ತೊರೆಯಲ್ಪಟ್ಟ ಅಥವಾ ಕಳೆದುಹೋದ ಮಗುವನ್ನು ಆಯಾ ಮಕ್ಕಳ ಕುಟುಂಬಕ್ಕೆ ಮತ್ತೆ ಸೇರಿಸುವ ಪ್ರಕ್ರಿಯೆ |
| **new** | | | (xvii) manner of submitting the report to the Committee and the manner of sending and entrusting the child to Children's Home or fit facility or fit person under sub-section (*2*) of section 31; | (xvii) ಸೆ. 31ರ ಉಪ ಸೆ (2)ರಂತೆ ಸಮಿತಿಗೆ ವರದಿಗಳನ್ನು ಒಪ್ಪಿಸುವುದು ಮತ್ತು ಮಕ್ಕಳನ್ನು ಮಕ್ಕಳ ಮಂದಿರಕ್ಕೆ ಅಥವಾ ಅರ್ಹ ವ್ಯವಸ್ಥೆ ಅಥವಾ ಅರ್ಹ ವ್ಯಕ್ತಿಯ ಸುಪರ್ದಿಗೆ ಕಳುಹಿಸುವ ವಿಧಾನ |
| **new** | | | (xviii) manner of holding an inquiry by the Child Welfare Committee under subsection (*1*) of section 36; | (xviii) ಸೆ. 36ರ ಉಪ ಸೆ. (1)ರಂತೆ ಮಕ್ಕಳ ಕಲ್ಯಾಣ ಸಮಿತಿಯಿಂದ ವಿಚಾರಣೆ ನಡೆಸುವ ವಿಧಾನ |

| | | | | |
|---|---|---|---|---|
| **new** | | | (xix) manner in which a child may be sent to a Specialised Adoption Agency if the child is below six years of age, Children's Home or to a fit facility or person or foster family, till suitable means of rehabilitation are found for the child including manner in which situation of the child placed in a Children's Home or with a fit facility or person or foster family, may be reviewed by the Committee under sub-section (*3*) of section 36; | (xix) ಸೆ. 36ರ ಉಪ ಸೆ. (3)ರಂತೆ ಆರು ವರ್ಷದೊಳಗಿನ ಮಕ್ಕಳಿಗೆ ಸೂಕ್ತ ಪುನರ್ವಸತಿ ವ್ಯವಸ್ಥೆಗಳನ್ನು ಮಾಡುವ ತನಕ ಅಥವಾ ಪ್ರಸಂಗಕ್ಕೆ ತಕ್ಕಂತೆ ವಿಶೇಷ ದತ್ತು ಕೇಂದ್ರಗಳು, ಮಕ್ಕಳ ನಿಲಯದಲ್ಲಿ ಅಥವಾ ಅರ್ಹ ವ್ಯವಸ್ಥೆ ಅಥವಾ ಅರ್ಹ ವ್ಯಕ್ತಿ ಅಥವಾ ಫಾಸ್ಟರ್ ಕುಟುಂಬಗಳಲ್ಲಿ ಇರಿಸುವುದು ಮತ್ತು ಇಂತಹ ಮಕ್ಕಳ ನಿಲಯ, ದತ್ತು ಕೇಂದ್ರ, ಫಾಸ್ಟರ್ ಕುಟುಂಬ, ಅರ್ಹ ವ್ಯವಸ್ಥೆ ಅಥವಾ ಅರ್ಹ ವ್ಯಕ್ತಿಗಳನ್ನು ಮಕ್ಕಳನ್ನಿರಿಸಿಕೊಂಡಿರುವ ಕುರಿತು ಉಸ್ತುವಾರಿ ಮಾಡುವುದು |
| **new** | | | (xx) manner in which a quarterly report may be submitted by the Committee to the District Magistrate for review of pendency of cases under sub-section (*4*) of section 36; | (xx) ಸೆ. 36ರ ಉಪ ಸೆ. (4)ರಂತೆ ಪ್ರತಿ ಮೂರು ತಿಂಗಳಿಗೊಮ್ಮೆ ಜಿಲ್ಲಾ ನ್ಯಾಯಾಧೀಶರಿಗೆ ಮಂಡಳಿಯಲ್ಲಿ ಇನ್ನೂ ಉಳಿದಿರುವ ಪ್ರಕರಣಗಳನ್ನು ಕುರಿತು ಪುನರ್ವಿಮರ್ಷೆ ಮಾಡಲು ವರದಿ ಮಾಡುವ ವಿಧಾನ; |
| **new** | | | (xxi) any other order related to any other function of the Committee under clause (*iii*) of sub-section (*2*) of section 37; | (xxi) ಸೆ. 37ರಡಿಯಲ್ಲಿನ ಉಪ ಸೆ. (2)ರ ಕ್ಲಾಸ್ (*iii*)ರಂತೆ ಸಮಿತಿಯು ನಿರ್ವಹಿಸಬಹುದಾದ ಇನ್ನಾವುದೇ ಸಂಬಂಧಿತ ಕೆಲಸಗಳು |
| **new** | | | (xxii) information to be given every month by the Committee to State Agency and Authority regarding number of children declared legally free for adoption and number of cases pending under sub-section (*5*) of section 38; | (xxii) ಸೆ. 38ರ ಉಪ ಸೆ. (5)ರಂತೆ ಪ್ರತಿ ತಿಂಗಳು ಸಮಿತಿಯು ಎಷ್ಟು ಮಕ್ಕಳನ್ನು ದತ್ತು ಹೋಗಲು ಅರ್ಹರು ಮತ್ತು ಇನ್ನೂ ಎಷ್ಟು ಪ್ರಕರಣಗಳ ವಿಲೇ ಆಗಿಲ್ಲ ಎಂದು ರಾಜ್ಯ ಪ್ರಾಧಿಕಾರಕ್ಕೆ ಮತ್ತು ಸಂಸ್ಥೆಗೆ ನೀಡಬೇಕಾದ ಮಾಹಿತಿ |
| **new** | | | (xxiii) manner in which all institutions under this Act shall be registered under sub-section (*1*) of section 41; | (xxiii) ಸೆ. 41ರ ಉಪ ಸೆ. (1)ರಂತೆ ಎಲ್ಲ ಸಂಸ್ಥೆಗಳು ದಾಖಲಾಗಬೇಕಾದ/ನೋಂದಣಿಯಾಗಬೇಕಾದ ವಿಧಾನ |
| **new** | | | (xxiv) procedure for cancelling or withholding registration of an institution that fails to provide rehabilitation and re-integration services under sub-section (*7*) of section 41; | (xxiv) ಸೆ. 41ರ ಉಪ ಸೆ. (7)ರಂತೆ ಪುನರ್ವಸತಿ ಮತ್ತು ಕುಟುಂಬಗಳೊಡನೆ ಪುನಃಸೇರ್ಪಡೆಯನ್ನು ಸಮರ್ಪಕವಾಗಿ ಮಾಡದಿರುವ ಸಂಸ್ಥೆಗಳ ನೋಂದಣಿಯನ್ನು ರದ್ದುಪಡಿಸುವುದು ಅಥವಾ ತಡೆ ಹಿಡಿಯುವ ವಿಧಿ ವಿಧಾನ |
| **new** | | | (xxv) manner in which information shall be sent every month by the open shelter to the District Child Protection Unit and Committee under sub-section (*3*) of section 43; | (xxv) ಸೆ. 43ರ ಉಪ ಸೆ. (3)ರಂತೆ ಎಲ್ಲ ಮುಕ್ತ ಆಶ್ರಯಗಳು (open shelter) ಪ್ರತಿ ತಿಂಗಳು ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಮತ್ತು ಸಮಿತಿಗೆ ಮಕ್ಕಳನ್ನು ಕುರಿತು ಕಳಿಸಬೇಕಾದ ವರದಿಯ ವಿಧಿವಿಧಾನ |
| **new** | | | (xxvi) procedure for placing children in foster care including group foster care under sub-section (*1*) of section 44; | (xxvi) ಸೆ. 44ರ ಉಪ ಸೆ. (1)ರಂತೆ ಮಕ್ಕಳನ್ನು ಫಾಸ್ಟರ್ ಕೇರ್ ಮತ್ತು ಗುಂಪು ಫಾಸ್ಟರ್ ಕೇರ್‌ಗೆ ಕಳುಹಿಸುವ ವಿಧಿವಿಧಾನಗಳು |
| **new** | | | (xxvii) procedure for inspection of children in foster care under sub-section (*4*) of section 44; | (xxvii) ಸೆ. 44ರ ಉಪ ಸೆ(4)ರಂತೆ ಫಾಸ್ಟರ್ ಕೇರ್‌ನಲ್ಲಿರುವ ಮಕ್ಕಳನ್ನು ಕುರಿತು ಪರಿವೀಕ್ಷಣೆ ನಡೆಸುವ ವಿಧಿವಿಧಾನ |
| **new** | | | (xxviii) manner in which foster family shall provide education, health and nutrition to the child under sub-section (*6*) of section 44; | (xxviii) ಸೆ. 44ರ ಉಪ ಸೆ (6)ರಂತೆ ಮಕ್ಕಳ ಫಾಸ್ಟರ್ ಕುಟುಂಬಗಳು ಮಕ್ಕಳಿಗೆ ಶಿಕ್ಷಣ, ಆರೋಗ್ಯ ಮತ್ತು ಪೌಷ್ಟಿಕಾಂಶವುಳ್ಳ ಆಹಾರವನ್ನು ಒದಗಿಸಲು ವಿಧಿವಿಧಾನ |
| **new** | | | (xxix) procedure and criteria in which foster care services shall be provided to children under sub-section (*7*) of section 44; | (xxix) ಸೆ. 44ರ ಉಪ ಸೆ. (7)ರಂತೆ ಮಕ್ಕಳಿಗೆ ಫಾಸ್ಟರ್ ಕೇರ್ ಸೇವೆಗಳನ್ನು ಒದಗಿಸಲು ವಿಧಿವಿಧಾನಗಳು ಮತ್ತು ಅರ್ಹತೆಗಳು |
| **new** | | | (xxx) format for inspection of foster families by the Committee to check the well being of children under sub-section (*8*) of section 44; | (xxx) ಸೆ. 44ರ ಉಪ ಸೆ(8)ರಂತೆ ಫಾಸ್ಟರ್ ಕೇರ್‌ನಲ್ಲಿರುವ ಮಕ್ಕಳ ಸೌಖ್ಯವನ್ನು ಕುರಿತು ಸಮಿತಿಯು ಪರಿಶೀಲಿಸಿ ವರದಿ ಮಾಡಲು ನಮೂನೆ |

| | | | | |
|---|---|---|---|---|
| **new** | | | (xxxi) purpose of undertaking various programmes of sponsorship of children, such as individual to individual sponsorship, group sponsorship or community sponsorship under sub-section (*1*) of section 45; | (xxxi)ಸೆ. 45ರ ಉಪ ಸೆ(1)ರಂತೆ ಮಕ್ಕಳಿಗೆ ಪ್ರಾಯೋಜನೆ ಒದಗಿಸಲು ವ್ಯಕ್ತಿಗತವಾಗಿ ವಿಧವಿಧವಾದ ಒಂದೊಂದು ಮಗುವಿಗೆ ಪ್ರಾಯೋಜನೆ ಮತ್ತು ಗುಂಪು ಪ್ರಾಯೋಜನೆ ಅಥವಾ ಸಮುದಾಯ ಆಧಾರಿತ ಪ್ರಾಯೋಜನೆಯನ್ನು ಕೈಗೊಳ್ಳುವುದು |
| **new** | | | (xxxii) duration of sponsorship under sub-section (*3*) of section 45; | (xxxii) ಸೆ. 45ರ ಉಪ ಸೆ. (3)ರಂತೆ ಪ್ರಾಯೋಜನೆಯ ಅವಧಿ |
| **new** | | | (xxxiii) manner of providing financial support to any child leaving institutional care on completing eighteen years of age under section 46; | (xxxiii) ಸೆ. 46ರಡಿಯಲ್ಲಿರುವಂತೆ ಯಾವುದಾದರೂ ಮಗು 18 ವರ್ಷ ಪೂರೈಸಿದ ಮೇಲೆ ಸಂಸ್ಥೆಯನ್ನು ಬಿಟ್ಟು ಹೋಗುವಾಗ ನೀಡಬೇಕಾದ ಆರ್ಥಿಕ ನೆರವಿನ ವಿಧಿವಿಧಾನಗಳು |
| **new** | | | (xxxiv) management and monitoring of observation homes, including the standards and various types of services to be provided by them for rehabilitation and social integration of a child alleged to be in conflict with law and the circumstances under which, and the manner in which, the registration of an observation home may be granted or withdrawn under sub-section (*3*) of section 47; | (xxxiv) ಸೆ. 47ರ ಉಪ ಸೆ. (3)ರಂತೆ ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳ ಸಾಮಾಜಿಕ ಪುನರ್ಮಿಲನ, ಪುನರ್ವಸತಿಗಾಗಿ ವಿವಿಧ ಸೇವೆಗಳನ್ನು ಒದಗಿಸಲು ಮಾಪಕಗಳು; ಪರಿವೀಕ್ಷಣಾಲಯಗಳ ನಿರ್ವಹಣೆ ಮತ್ತು ಉಸ್ತುವಾರಿ; ಹಾಗೂ ಪರಿವೀಕ್ಷಣಾಲಯಗಳಿಗೆ ನೋಂದಣಿ ಕೊಡುವ ಅಥವಾ ಅದನ್ನು ತಡೆಹಿಡಿಯುವ/ಹಿಂದಕ್ಕೆ ತೆಗೆದುಕೊಳ್ಳುವ ವಿಧಿವಿಧಾನಗಳು |
| **new** | | | (xxxv) management and monitoring of special homes including the standards and various types of services to be provided to them under sub-section (*2*) and sub-section (*3*) of section 48; | (xxxv) ಸೆ. 48ರ ಉಪ ಸೆ.(2) ಮತ್ತು (3)ರ ಅಡಿಯಲ್ಲಿ ವಿಶೇಷ ನಿಲಯಗಳು ಒದಗಿಸಬೇಕಾದ ಸೇವೆಗಳು ಮತ್ತು ಅವುಗಳ ಉಸ್ತುವಾರಿ ಮತ್ತು ನಿರ್ವಹಣೆ |
| **new** | | | (xxxvi) monitoring and management of children's homes including the standards and the nature of services to be provided by them, based on individual care plans for each child under sub-section (*3*) of section 50; | (xxxvi) ಸೆ. 50ರ ಉಪ ಸೆ(3)ರಂತೆ ಮಕ್ಕಳ ನಿಲಯಗಳ ಉಸ್ತುವಾರಿ ಮತ್ತು ನಿರ್ವಹಣೆ ಹಾಗೂ ಪ್ರತಿಯೊಂದು ಮಗುವನ್ನು ಕುರಿತು ಅವರು ಹೊಂದಿರಬೇಕಾದ ಪೋಷಣೆ ಯೋಜನೆ ಹಾಗೂ ಅವುಗಳು ಮಕ್ಕಳಿಗೆ ಒದಗಿಸಬೇಕಾದ ಸೇವೆಗಳ ಮಾಪಕಗಳು ಮತ್ತು ಗುಣಮಟ್ಟ. |
| **new** | | | (xxxvii) manner in which a Board or the Committee shall recognise, a facility being run by a Governmental organisation or a voluntary or non-governmental organisation registered under any law for the time being in force, fit to temporarily take the responsibility of a child for a specific purpose after due inquiry regarding the suitability of the facility and the organisation to take care of the child under sub-section (*1*) of section 51; | (xxxvii) ಸೆ. 51ರ ಉಪ ಸೆ(1)ರಂತೆ ಚಾಲ್ತಿಯಲ್ಲಿರುವ ಯಾವುದೇ ಕಾಯಿದೆಯಡಿ ನೋಂದಾಯಿತವಾಗಿರುವ ಸರ್ಕಾರ ಅಥವಾ ಸ್ವಯಂಸೇವಾ ಸಂಘಟನೆಗಳು ಮಕ್ಕಳನ್ನು ತಾತ್ಕಾಲಿಕವಾಗಿ ನಿರ್ದಿಷ್ಟ ಉದ್ದೇಶಕ್ಕಾಗಿ ಪೋಷಣೆ ಜವಾಬ್ದಾರಿ ತೆಗೆದುಕೊಳ್ಳಲಿಕ್ಕೆ ಅಲ್ಲಿನ ಸೌಲಭ್ಯಗಳು, ವ್ಯವಸ್ಥೆಗಳು ಮತ್ತು ಸಂಸ್ಥೆ ಅರ್ಹವೇ ಎಂದು ಮಂಡಳಿ ಅಥವಾ ಸಮಿತಿಯು ಗುರುತಿಸಲು ವಿಧಿವಿಧಾನಗಳು |
| **new** | | | (xxxviii) procedure of verification of credentials, for recognising any person fit to temporarily receive a child for care, protection and treatment of such child for a specified period by the Board or the Committee under sub-section (*1*) of section 52; | (xxxviii) ಸೆ. 52ರ ಉಪ ಸೆ. (1)ರಂತೆ ಯಾವುದಾದರೂ ಮಗುವನ್ನು ತನ್ನ ವಶದಲ್ಲಿ ತಾತ್ಕಾಲಿಕವಾಗಿ ನಿರ್ದಿಷ್ಟ ಅವಧಿಗಾಗಿ ಇಟ್ಟುಕೊಂಡು ರಕ್ಷಣೆ, ಪೋಷಣೆ ಮತ್ತು ಚಿಕಿತ್ಸೆ ಒದಗಿಸಲು ನಿರ್ದಿಷ್ಟ ವ್ಯಕ್ತಿ ಅರ್ಹರೇ ಅಲ್ಲವೇ ಎಂದು ಆ ವ್ಯಕ್ತಿಯ ಹಿನ್ನೆಲೆಯನ್ನು ಪರಿಶೀಲಿಸಿ ಮಂಡಳಿ ಅಥವಾ ಸಮಿತಿಯು ಅನುಸರಿಸಬೇಕಾದ ವಿಧಿವಿಧಾನಗಳು |

| | | | | |
|---|---|---|---|---|
| **new** | | | (xxxix) manner in which services shall be provided by an institution under this Act for rehabilitation and re-integration of children and standards for basic requirements such as food, shelter, clothing and medical attention under sub-section (*1*) of section 53; | (xxxix) ಸೆ. 53ರ ಉಪ ಸೆ(1)ರಂತೆ ಈ ಕಾಯಿದೆಯಲ್ಲಿ ಉಲ್ಲೇಖಿಸಿರುವಂತೆ ಸೇವೆಗಳನ್ನು ಮಕ್ಕಳಿಗೆ ಒದಗಿಸಲು ಸಂಸ್ಥೆಗಳು ಅನುಸರಿಸಬೇಕಾದ ವಿಧಾನಗಳು ಮತ್ತು ಮಕ್ಕಳ ಪುನಃರ್ಮಿಲನ ಮತ್ತು ಮೂಲ ಸೇವೆಗಳಾದ ಆಹಾರ, ಆಶ್ರಯ, ಬಟ್ಟೆ ಮತ್ತು ಆರೋಗ್ಯ ಸೇವೆಗಳನ್ನು ಒದಗಿಸಲು ಇರಬೇಕಾದ ಮಾಪಕಗಳು |
| **new** | | | (xl) manner in which Management Committee shall be set up by each institution for management of the institution and monitoring of the progress of every child under sub-section (*2*) of section 53; | (xl) ಸೆ. 53ರ ಉಪ ಸೆ (2)ರಂತೆ ಪ್ರತಿ ಸಂಸ್ಥೆಯಲ್ಲೂ ಪ್ರತಿ ಮಗುವಿನ ಅಭಿವೃದ್ಧಿ ಹಾಗೂ ಸಂಸ್ಥೆಗಳ ಉಸ್ತುವಾರಿ ಮತ್ತು ನಿರ್ವಹಣೆಗಾಗಿ ರಚಿತವಾಗುವ ನಿರ್ವಹಣೆ ಸಮಿತಿಯನ್ನು ಏರ್ಪಡಿಸುವ ವಿಧಿವಿಧನಗಳು |
| **new** | | | (xli) activities that may be taken up by children's committees under sub-section (*3*) of section 53; | (xli) ಸೆ. 53ರ ಉಪ ಸೆ(3)ರಂತೆ ಮಕ್ಕಳ ಸಮಿತಿಯು ಕೈಗೊಳ್ಳಬೇಕಾದ ಚಟುವಟಿಕಗಳು |
| **new** | | | (xlii) appointment of inspection committees for all institutions registered or recognised fit, for the State and district under sub-section (*1*) of section 54; | (xlii) ಸೆ. 54 ಉಪ ಸೆ(1)ರಂತೆ ನೋಂದಾಯಿತವಾದ ಅಥವಾ ಅರ್ಹವೆಂದು ಗುರುತಿಸಲ್ಪಟ್ಟ ಸಂಸ್ಥೆಗಳನ್ನು ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಉಸ್ತುವಾರಿ ಮಾಡಲು ನೇಮಿಸುವ ಸಮಿತಿಗಳು |
| **new** | | | (xliii) manner in which Central Government or State Government may independently evaluate the functioning of the Board, Committee, special juvenile police units, registered institutions, or recognised fit facilities and persons, including the period and through persons or institutions under sub-section (*1*) of section 55; | (xliii) ಸೆ. 55ರ ಉಪ ಸೆ(1)ರಂತೆ ಮಂಡಳಿಗಳು, ಸಮಿತಿಗಳು, ಮಕ್ಕಳ ವಿಶೇಷ ಪೊಲೀಸ್ ಘಟಕ, ನೋಂದಾಯಿತ ಸಂಸ್ಥೆಗಳು ಅಥವಾ ಅರ್ಹ ವ್ಯವಸ್ಥೆಗಳು ಮತ್ತು ವ್ಯಕ್ತಿಗಳ ಕೆಲಸ ಕಾರ್ಯಗಳನ್ನು ಹಾಗೂ ಅವುಗಳ ಅವಧಿ ಇತ್ಯಾದಿ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸ್ವತಂತ್ರ್ಯವಾಗಿ ಮೌಲ್ಯಮಾಪನ ಮಾಡಲು ವ್ಯಕ್ತಿಗಳು ಮತ್ತು ಸಂಸ್ಥೆಗಳನ್ನು ತೊಡಗಿಸಿಕೊಳ್ಳುವ ವಿಧಿವಿಧಾನಗಳು |
| **new** | | | (xliv) manner in which institutions shall furnish details of children declared legally free for adoption to the Specialised Adoption Agency under sub-section (*2*) of section 66; | (xliv) ಸೆ. 66ರ ಉಪ ಸೆ(2)ರಂತೆ ಸಂಸ್ಥೆಗಳು ತಮ್ಮಲಿ ಇರುವ ದತ್ತು ಹೋಗಲು ಅರ್ಹವಾದ ಎಷ್ಟು ಮಕ್ಕಳು ಇದ್ದಾರೆ ಎಂಬ ವಿವರಗಳನ್ನು ವಿಶೇಷ ದತ್ತು ಸಂಸ್ಥೆಗೆ ನೀಡುವ ವಿಧಿವಿಧಾನಗಳು |
| **new** | | | (xlv) any other function of the Authority under clause (*e*) of section 68; | (xlv) ಸೆ. 68ರ ಕ್ಲಾಸ್ (*e*)ರಂತೆ ಪ್ರಾಧಿಕಾರಕ್ಕೆ ವಿಧಿಸಲಾಗುವ ಇನ್ನೂ ಯಾವುದೇ ರೀತಿಯ ಜವಾಬ್ದಾರಿಗಳು |
| **new** | | | (xlvi) criteria for the selection or nomination of the Members of the Steering Committee of the Authority and their tenure as well as the terms and conditions of their appointment under sub-section (*2*) of section 69; | (xlvi) ಸೆ. 69ರ ಉಪ ಸೆ(2)ರಂತೆ ಪ್ರಾಧಿಕಾರದ ನಿರ್ವಹಣಾ ಸಮಿತಿಗೆ ಸದಸ್ಯರನ್ನು ನೇಮಿಸಲು ಅಥವಾ ಆಯ್ಕೆ ಮಾಡಲು ಅರ್ಹತೆಗಳು ಹಾಗೂ ಅವರ ಅವಧಿ, ಅವರಿಗೆ ನೇಮಕಕ್ಕಾಗಿ ವಿಧಿಸಲಾಗುವ ನಿಯಮಗಳು |
| **new** | | | (xlvii) manner in which Steering Committee of the Authority shall meet under sub-section (*4*) of section 69; | (xlvii) ಸೆ. 69ರ ಉಪ ಸೆ(4)ರಂತೆ ಈ ಪ್ರಾಧಿಕಾರದ ನಿರ್ವಹಣಾ ಸಮಿತಿಯು ಸಭೆ ನಡೆಸಲು ವಿಧಿವಿಧಾನಗಳು |
| **new** | | | (xlviii) manner in which the Authority shall submit an annual report to the Central Government under sub-section (*1*) of section 71; | (xlviii) ಸೆ. 71ರ ಉಪ ಸೆ(1)ರಂತೆ ಪ್ರಾಧಿಕಾರವು ವಾರ್ಷಿಕ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸುವ ವಿಧಿವಿಧಾನಗಳು |
| **new** | | | (xlix) functions of the Authority under sub-section (*2*) of section 72; | (xlix) ಸೆ. 72ರ ಉಪ ಸೆ(2)ರಂತೆ ಪ್ರಾಧಿಕಾರದ ಕರ್ತವ್ಯಗಳು: |
| **new** | | | (l) manner in which the Authority shall maintain proper accounts and other relevant records and prepare an annual statement of accounts under sub-section (*1*) of section 73; | (l) ಸೆ. 73ರ ಉಪ ಸೆ. (1) ಪ್ರಾಧಿಕಾರವು ಖರ್ಚುವೆಚ್ಚಗಳನ್ನು ಕುರಿತು ಸೂಕ್ತ ಲೆಕ್ಕಪತ್ರಗಳನ್ನು ಇಟ್ಟುಕೊಳ್ಳುವುದು ಮತ್ತು ವಾರ್ಷಿಕ ಲೆಕ್ಕಪತ್ರ ಪರಿಶೋಧನಾ ವರದಿ ಮತ್ತಿತರ ದಾಖಲೆಗಳನ್ನು ಸಿದ್ಧಪಡಿಸುವ ವಿಧಿವಿಧಾನಗಳು |

| | | | | |
|---|---|---|---|---|
| **new** | | | (li) period that the Committee or Board may think necessary for the treatment of children who are found to be suffering from a disease requiring prolonged medical treatment or physical or mental complaint that will respond to treatment to a fit facility under section 92; | (li) ಸೆ. 92ರಂತೆ ದೀರ್ಘಕಾಲದ ಚಿಕಿತ್ಸೆ ಅಥವಾ ಚಿಕಿತ್ಸೆಗೆ ಪ್ರತಿಸ್ಪಂದಿಸುವ ಸ್ಥಿತಿಯಲ್ಲಿರುವ ದೈಹಿಕ ಅಥವಾ ಮಾನಸಿಕ ಸಮಸ್ಯೆಗಳನ್ನು ಹೊಂದಿರುವ ಮಕ್ಕಳಿಗೆ ಸೂಕ್ತವೆನಿಸುವಷ್ಟು ಕಾಲ ಅರ್ಹ ವ್ಯವಸ್ಥೆಯಲ್ಲಿ ಇರಿಸುವ ಕುರಿತು ಸಮಿತಿ ಅಥವಾ ಮಂಡಳಿ ಕೈಗೊಳ್ಳುವ ನಿರ್ಧಾರಗಳು |
| **new** | | | (lii) procedure for transfer of child under sub-section (*1*) of section 95; | (lii) ಸೆ. 95ರ ಉಪ ಸೆ.(1)ರಂತೆ ಮಕ್ಕಳನ್ನು ವರ್ಗಾಯಿಸುವ ವಿಧಿವಿಧಾನಗಳು |
| **new** | | | (liii) provision for travelling allowance to the escorting staff for the child under sub-section (*3*) of section 95; | (liii) ಸೆ. 95ರ ಉಪ ಸೆ.(3)ರಂತೆ ವರ್ಗಾವಣೆಗೊಂಡ ಮಕ್ಕಳೊಡನೆ ತೆರಳುವ ಬೆಂಗಾವಲು ಸಿಬ್ಬಂದಿಗೆ ಕೊಡಮಾಡುವ ಪ್ರಯಾಣ ಭತ್ಯೆ |
| **new** | | | (liv) procedure to be followed by the Committee or a Board while holding any inquiry, appeal or revision under sub-section (*1*) of section 103; | (liv) ಸೆ. 103ರ ಉಪ ಸೆ. (1)ರಂತೆ ಸಮಿತಿ ಅಥವಾ ಮಂಡಳಿಯು ಕೈಗೊಳ್ಳುವ ವಿಚಾರಣೆ, ಮನವಿ ಅಥವಾ ತೀರ್ಮಾನಗಳ ಮರುವಿಮರ್ಷೆ ಕುರಿತು ವಿಧಿವಿಧಾನಗಳು |
| **new** | | | (lv) manner in which juvenile justice fund shall be administered under sub-section (*3*) of section 105; | (lv) ಸೆ. 105 ಉಪ ಸೆ.(3) ಮಕ್ಕಳ ನ್ಯಾಯ ನಿಧಿಯನ್ನು ಬಳಸುವ ವಿಧಿವಿಧಾನಗಳು |
| **new** | | | (lvi) functioning of the Child Protection Society for the State and Child Protection Units for every district under section 106; | (lvi) ಸೆ. 106ರಂತೆ ರಾಜ್ಯ ಮಟ್ಟದಲ್ಲಿ ಮಕ್ಕಳ ರಕ್ಷಣಾ ಸೊಸೈಟಿಯು ಮತ್ತು ಪ್ರತಿ ಜಿಲ್ಲೆಗೆ ಮಕ್ಕಳ ರಕ್ಷಣಾ ಘಟಕಗಳು ಕಾರ್ಯನಿರ್ವಹಿಸುವ ವಿಧಿವಿಧಾನಗಳು |
| **new** | | | (lvii) to enable the National Commission, or as the case may be, the State Commission to monitor implementation of the provisions of this Act under sub-section (*1*) of section 109; | (lvii) ಸೆ. 109ರ ಉಪ ಸೆ. (1)ರಂತೆ ಈ ಕಾಯಿದೆಯಲ್ಲಿನ ಅವಕಾಶಗಳ ಜಾರಿ ಉಸ್ತುವಾರಿಯನ್ನು ರಾಷ್ಟ್ರೀಯ ಆಯೋಗ ಮತ್ತು ರಾಜ್ಯ ಆಯೋಗಗಳು ನಡೆಸುವುದು |
| **new** | | | (lviii) any other matter which is required to be, or may be, prescribed. | (lviii) ಈ ಕಾಯಿದೆಯ ಜಾರಿಗಾಗಿ ಬೇಕಿರುವ ಇನ್ನು ಯಾವುದೇ ವಿಧಿವಿಧಾನಗಳು ಅಥವಾ ನಿರ್ದೇಶನಗಳು |
| | (*3*) | | Every rule and every regulation made under this Act shall be laid, as soon as may be after it is made, before each House of Parliament, while it is in session, for a total period of thirty days which may be comprised in one session or in two or more successive sessions, and if, before the expiry of the session immediately following the session or the successive sessions aforesaid, both Houses agree in making any modification in the rule or regulation or both Houses agree that the rule or regulation should not be made, the rule or regulation shall thereafter have effect only in such modified form or be of no effect, as the case may be, so, however, that any such modification or annulment shall be without prejudice to the validity of anything previously done under that rule or regulation. | ಈ ಕಾಯಿದೆಯಡಿ ಕೇಂದ್ರ ಸರ್ಕಾರವು ರೂಪಿಸಲಾಗುವ ಎಲ್ಲ ನಿಯಮ ಮತ್ತು ನಿಯಂತ್ರಣಗಳನ್ನು ಆದಷ್ಟೂ ಬೇಗನೆ ಸಂಸತ್‌ನ ರಾಜ್ಯ ಸಭೆ ಮತ್ತು ಲೋಕಸಭೆಯು ಒಟ್ಟು 30 ದಿನಗಳ ಸಭೆ ನಡೆಸುವಾಗ, ಒಂದು, ಎರಡು ಅಥವಾ ಹೆಚ್ಚಿನ ಸಮಯದ ನಿರಂತರವಾದ ಸಭೆಗಳಲ್ಲಿ ಅಥವಾ ನಿರ್ದಿಷ್ಟ ಲೋಕಸಭೆಯ ಅವಧಿ ಮುಗಿಯುತ್ತಿದ್ದು ಮತ್ತೊಂದು ಲೋಕಸಭೆಯು ರಚಿತವಾಗಿ ಅದರ ಸಭೆಯಲ್ಲಿ ತಕ್ಷಣವೇ ಮಂಡಿಸಿ ಎರಡೂ ಸಭೆಗಳು ಒಪ್ಪಿದ ಅಥವಾ ಒಪ್ಪದ ನಿರ್ದಿಷ್ಟ ರೀತಿಯಲ್ಲಿ ನಿಯಮಗಳನ್ನು, ಬದಲಾಯಿಸಿ ಜಾರಿಗೆ ತರುವುದು. ಹೀಗಿರುವಾಗ ಈ ಹಿಂದೆ ಈ ನಿಯಮಗಳನ್ನು ಆಧರಿಸಿ ಕೈಗೊಂಡ ಯಾವುದೇ ಕ್ರಮಗಳ ವಿರುದ್ಧ ಯಾವುದೇ ರೀತಿಯ ಪೂರ್ವಗ್ರಹಗಳಿರುವುದಿಲ್ಲ. |
| | (*4*) | | Every rule made by the State Government under this Act shall be laid, as soon as may be after it is made, before the State Legislature. | ಈ ಕಾನೂನಿನಂತೆ ರಾಜ್ಯಗಳು ಮಾಡುವ ಯಾವುದೇ ನಿಯಮಗಳನ್ನು ವಿಧಾನ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕು. |
| | | | | |

| | | | | |
|---|---|---|---|---|
| | | | | |
| **Sec** | | | **Repeal and savings.** | **ರದ್ದುಗೊಳಿಸುವುದು ತೆಗೆದಿರುವುದು ಮತ್ತು ಉಳಿಸಿಕೊಳ್ಳುವುದು** |
| **111** | (*1*) | | The Juvenile Justice (Care and Protection of Children) Act, 2000 is hereby repealed. | ಈ ಕಾಯಿದೆಯು ಜಾರಿಗೆ ಬರುವ ಮೂಲಕ ಈ ಹಿಂದೆ ಜಾರಿಯಲ್ಲಿದ್ದ ಮಕ್ಕಳ ನ್ಯಾಯ ಕಾಯಿದೆ 2000ಯನ್ನು ರದ್ದುಗೊಳಿಸಲಾಗಿದೆ. |
| | (*2*) | | Notwithstanding such repeal, anything done or any action taken under the said Acts shall be deemed to have been done or taken under the corresponding provisions of this Act. | ಹೀಗೆ ಈ ಹಿಂದಿನ ಕಾಯಿದೆಯನ್ನು ರದ್ದುಗೊಳಿಸಿದೆಯಾದರೂ, ಈ ಹಿಂದಿನ ಕಾಯಿದೆಯಂತೆ ತೆಗೆದುಕೊಳ್ಳಲಾಗಿದ್ದ ಎಲ್ಲ ನಿರ್ಧಾರಗಳನ್ನು ಈಗಿನ ಹೊಸ ಕಾಯಿದೆಯಲ್ಲಿನ ಅವಕಾಶಗಳಡಿಯಲ್ಲಿ ತೆಗೆದುಕೊಂಡಂತೆಯೇ ಎಂದು ಪರಿಗಣಿಸಬೇಕು. |
| | | | | |
| **Sec** | | | **Power to remove difficulties.** | **ತೊಂದರೆಗಳ ನಿವಾರಣೆಗೆ ಅಧಿಕಾರ** |
| **112** | (*1*) | | If any difficulty arises in giving effect to the provisions of this Act, the Central Government may, by order, not inconsistent with the provisions of this Act, remove the difficulty:<br><br>Provided that no such order shall be made after the expiry of the period of two years from the commencement of this Act. | ಈ ಕಾಯಿದೆಯು ನೀಡಿರುವ ನಿರ್ದೇಶನಗಳ ಜಾರಿಯಲ್ಲಿ ಯಾವುದೇ ತೊಂದರೆ, ಅಡಚಣೆಗಳು ಉದ್ಭವಿಸಿದಲ್ಲಿ, ಕೇಂದ್ರ ಸರ್ಕಾರವು ಸೂಕ್ತ ಆಜ್ಞೆಗಳನ್ನು ಹೊರಡಿಸುವ ಮೂಲಕ, ಈ ಕಾಯಿದೆಯಲ್ಲಿರುವ ಅವಕಾಶಗಳಿಗೆ ಅನುಗುಣವಾಗಿ ಅಂತಹ ಅಡಚಣೆಗಳನ್ನು ತೊಲಗಿಸಬಹುದು.<br><br>ಈ ಕಾಯಿದೆಯು ಜಾರಿಗೆ ಬಂದ ಎರಡು ವರ್ಷಗಳು ಕಳೆದ ನಂತರ ಇಂತಹ ಯಾವುದೇ ಆಜ್ಞೆಗಳು ಬರಬಾರದು |
| | (*2*) | | However, order made under this section shall be laid, as soon as may be after it is made, before each House of Parliament. | ಆದಾಗ್ಯೂ, ಇಂತಹ ಆಜ್ಞೆಗಳನ್ನು ಮಾಡಲೇಬೇಕಾದಲ್ಲಿ ಅದನ್ನು ಆದಷ್ಟೂ ಬೇಗ ಸಂಸತ್‌ನ ಉಭಯಸದನಗಳ ಮುಂದೆ ತರಬೇಕು. |

**DR. G. NARAYANA RAJU,**
*Secretary to the Govt. of India.*